ಪ್ರಜಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ





ಅದಿರು ಲಾರಿಗಳ ನಡುವೆ ಸಾರ್ವಜನಿಕರ ವಾಹನಗಳ ಓಡಾಟ (ಎಡ ಚಿತ್ರ). ಗಣಿ ಲಾರಿಗಳ ಸಂಚಾರದಿಂದ ಅಡಿಕೆ ಬೆಳೆ ಹಾಳಾಗಿದೆ

ಗಣಿ ದೂಳು... ಗ್ರಾಮಗಳ ಕೃಷಿ ಭೂಮಿ ಪೂರ್ಣ ಹಾಳು

ಅದಿರು ಸಾಗಣೆ ಲಾರಿಗಳ ಹಾವಳಿ ವಿನಾಶದತ್ತ ಕೃಷಿ– ಹೈನುಗಾರಿಕೆ

● ಎಂ.ಎನ್.ಯೋಗೇಶ್

ಚಿತ್ರದುರ್ಗ: ಕಬ್ಬಿಣದ ಅದಿರು ತುಂಬಿದ ಸಾವಿರಾರು ಲಾರಿಗಳು ಹಳ್ಳಿಗಳ ನಡುವಿನ ರಸ್ತೆಗಳಲ್ಲಿ ನುಗ್ಗುತ್ತಿರುವ ಕಾರಣ ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕಿನ 50ಕ್ಕೂ ಅಧಿಕ ಗ್ರಾಮಗಳ ಜನರಿಗೆ ನಿತ್ಯದ ಬದುಕು ನರಕಸದೃಶವಾಗಿದೆ.

ಅರೆಮಲೆನಾಡು ಪ್ರದೇಶವಾಗಿರುವ ಹೊಳಲ್ಕೆರೆ ತಾಲ್ಲೂಕಿನ ಗುಡ್ಡಗಳಲ್ಲಿ ಗುಣಮಟ್ಟದ ಕಬ್ಬಿಣದ ಅದಿರು ದೊರೆಯುತ್ತಿದೆ. ಇಲ್ಲಿ ಅಂದಾಜು 9 ಕಂಪನಿಗಳು ಗಣಿಗಾರಿಕೆ ನಡೆಸುತ್ತಿವೆ. ಅದಿರು ತುಂಬಿದ ಲಾರಿಗಳು ಸಾಲಾಗಿ ಹಳ್ಳಿಗಳ ಹಾದಿಯಲ್ಲಿ ಅದಿರು ಭರ್ತಿ ಕೇಂದ್ರದತ್ತ (ಡಂಪಿಂಗ್ ಯಾರ್ಡ್) ಸಾಗುತ್ತಿದ್ದು, ತೀವ್ರ ದೂಳಿನಿಂದಾಗಿ ಹಳ್ಳಿಗರು ಬಸವಳಿಯುವಂತಾಗಿದೆ.

ಭಾರಿ ಪ್ರಮಾಣದ ದೂಳಿನಿಂದಾಗಿ ಗ್ರಾಮೀಣರು ಅಸ್ತಮಾ, ಶ್ವಾಸನಾಳದ ಉರಿಯೂತ, ಕ್ಷಯ (ಟಿ.ಬಿ) ಮುಂತಾದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ರಸ್ತೆಯಿಂದ 1 ಕಿ.ಮೀ. ವರೆಗೆ ಕೃಷಿ ಚಟುವಟಿಕೆ ನಾಶವಾಗುತ್ತಿದೆ. ಭೂಮಿಯ ಮೇಲ್ಮೈನಲ್ಲಿ ಖನಿಜಯುಕ್ತ ಮಣ್ಣು ಮೆತ್ತಿಕೊಳ್ಳುತ್ತಿದ್ದು, ಬಿತ್ತಿದ ಬೀಜ ಮೊಳಕೆಯೊಡೆಯುತ್ತಿಲ್ಲ ಎಂದು ರೈತರು ನೋವು ತೋಡಿಕೊಳ್ಳುತ್ತಿದ್ದಾರೆ.

‘ನಮಗೆ ಪಶುಪಾಲನೆ, ಹೈನುಗಾರಿಕೆಯೇ ಪ್ರಧಾನವಾಗಿತ್ತು. ಗಟ್ಟಿ ಹಾಲು, ಮೊಸರಿಗೆ ನಮ್ಮ ಹಳ್ಳಿಗಳು ಹೆಸರುವಾಸಿಯಾಗಿದ್ದವು. ಆದರೆ, ಗಣಿ ಲಾರಿಗಳ ಹಾವಳಿಯಿಂದಾಗಿ ಹುಲ್ಲು ದೊರೆಯದಾಗಿದೆ. ಹೈನುಗಾರಿಕೆ ಕೊನೆ ಆಗುತ್ತಿದೆ’ ಎಂದು ಗಂಜಿಗಟ್ಟೆ ಗ್ರಾಮದ ಜಿ.ಸಿ. ಮಹೇಶ್ವರಪ್ಪ ‘ಪ್ರಜಾವಾಣಿ’ ಎದುರು ಅಳಲು ತೋಡಿಕೊಂಡರು.

ಕೆಲ ಲಾರಿಗಳು ಹೊಳಲ್ಕೆರೆ ತಾಲ್ಲೂಕಿನ ಸಾಸಲು ಗ್ರಾಮದ ರೈಲ್ವೆ ಸಾಗಾಣಿಕಾ ಕೇಂದ್ರಕ್ಕೆ ತೆರಳಿದರೆ, ಇನ್ನಷ್ಟು ಲಾರಿಗಳು ನಗರದ ಮೂಲಕ ಬಳ್ಳಾರಿಯತ್ತ ಸಾಗುತ್ತವೆ. ಎರಡೂ ಭಾಗದ ರಸ್ತೆಗಳಲ್ಲಿ ಗುಂಡಿಗಳು ನಿರ್ಮಾಣವಾಗಿ ಸ್ಥಳೀಯರಿಗೆ ನರಕ ತೋರಿಸುತ್ತಿವೆ. ಲಾರಿಗಳ ನಡುವೆ ಕಾರು, ಬೈಕ್, ಶಾಲಾ ವಾಹನಗಳ ಓಡಾಟ ಸವಾಲಾಗಿದೆ. ಅಪಘಾತದಿಂದ ಪ್ರಾಣ ಹಾನಿಯೂ ಹೆಚ್ಚಾಗುತ್ತಿದೆ.

ಗಣಿ ಕಂಪನಿ ಹಾಗೂ ಲಾರಿಗಳಿಗೆ ನೇರ ಸಂಬಂಧವಿಲ್ಲ, ಸಾಗಣೆದಾರರಿಗೆ (ಟ್ರಾನ್ಸ್‌ಪೋರ್ಟರ್ಸ್) ಗುತ್ತಿಗೆ ನೀಡಲಾಗಿದೆ. ಸಾಗಣೆದಾರರು ಪ್ರಭಾವಿಗಳಾಗಿದ್ದು, ಸ್ಥಳೀಯರಿಗೆ ಉಚಿತವಾಗಿ ಲಾರಿ ಕೊಡಿಸಿದ್ದಾರೆ. ಸ್ಥಳೀಯರೇ ಲಾರಿ ಮಾಲೀಕರಾಗುತ್ತಿದ್ದು, ಆಗಾಗ ದೂಳಿನ ವಿರುದ್ಧ ಪುಟಿದೇಳುವ ಹೋರಾಟವನ್ನು ಅವರು ತಣ್ಣಗಾಗಿಸುತ್ತಾರೆ ಎಂಬ ಆರೋಪವೂ ಇದೆ.

ಅಡಿಕೆ ಬೆಳೆಗಾರರಿಂದಾಗಿ ಜಿಲ್ಲೆಯಲ್ಲಿ ‘ಶ್ರೀಮಂತರ ಊರು’ ಎಂದು ಪ್ರಸಿದ್ಧಿ ಪಡೆದಿರುವ ಭೀಮಸಮುದ್ರ ಲಾರಿಗಳಿಂದ ತೀವ್ರ ಪರಿಣಾಮ ಎದುರಿಸುತ್ತಿದೆ. ಇಲ್ಲಿ ಮಾಜಿ ಸಂಸದರು, ಶಾಸಕರು, ಎಂಎಲ್‌ಸಿಗಳು, ವಿವಿಧ ಪಕ್ಷಗಳ ರಾಜಕಾರಣಿಗಳಿದ್ದಾರೆ. ಆದರೂ ಸಮಸ್ಯೆ ಬಗೆಹರಿದಿಲ್ಲ. ಅವರೇ ಗಣಿ ಚಟುವಟಿಕೆಯ ಭಾಗವೂ ಆಗಿರುವ ಕಾರಣ ಸಮಸ್ಯೆಯ ವಿರುದ್ಧ ಧ್ವನಿ ಎತ್ತುತ್ತಿಲ್ಲ ಎಂದು ಹೋರಾಟಗಾರರು ಆರೋಪಿಸುತ್ತಾರೆ.

‘ಲಾರಿಗಳಿಗೆ ಟಾರ್ಪಾಲಿನ್ ಹೊದಿಸುತ್ತಿಲ್ಲ. ಗಣಿ ಪ್ರದೇಶ ಬಿಡುವುದಕ್ಕೂ ಮೊದಲು ಲಾರಿಗಳನ್ನು ಸ್ವಚ್ಛಗೊಳಿಸಬೇಕು (ವಾಟರ್ ವಾಶ್). ಅದಾವುದೂ ನಡೆಯುತ್ತಿಲ್ಲ. ಜೊತೆಗೆ ತೂಕದಲ್ಲಿ ವ್ಯತ್ಯಾಸವಿದ್ದು, ನಿಗದಿಗಿಂತ ಹೆಚ್ಚು ಅದಿರು ತುಂಬಿಸಿ ಓಡಿಸಲಾಗುತ್ತಿದೆ. ಗಣಿಬಾಧಿತ ಹಳ್ಳಿಗಳ ಸಂರಕ್ಷಣೆಗೆ ರಾಜ್ಯ ಗಣಿ ಪುನಶ್ಚೇತನ ನಿಗಮದಿಂದ ಕೋಟ್ಯಂತರ ರೂಪಾಯಿ ಹಣ ಬಂದರೂ ಅದು ನಿಗದಿತ ಉದ್ದೇಶಕ್ಕೆ ಸದ್ಬಳಕೆಯಾಗುತ್ತಿಲ್ಲ’ ಎಂದು ಗಣಿಬಾಧಿತ ಹೋರಾಟ ಸಮಿತಿ ಅಧ್ಯಕ್ಷ ಎಚ್.ರಮೇಶ್ ಆರೋಪಿಸಿದರು.

‘ದೂಳಿನಿಂದ ಶಾಶ್ವತ ಪರಿಹಾರ ಬೇಕು. ಇಲ್ಲದಿದ್ದರೆ ದಯಾಮರಣಕ್ಕಾಗಿ ಒತ್ತಾಯಿಸಿ ರಾಷ್ಟ್ರಪತಿಗೆ ಪತ್ರ ಬರೆಯಲು ನಿರ್ಧರಿಸಿದ್ದೇವೆ’ ಎಂದು ಗಣಿ ಬಾಧಿತ ಹಳ್ಳಿಗಳ ಜನರು ಹೇಳಿದರು.

ಹೊಳಲ್ಕೆರೆ ತಾಲ್ಲೂಕು ನೀರ್ತಡಿ ಮೀಸಲು ಅರಣ್ಯದಲ್ಲಿ ಕಬ್ಬಿಣದ ಅದಿರು ಅನ್ವೇಷಣೆಗೆ ಅರಣ್ಯ ಇಲಾಖೆ ಅನುಮತಿ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.



ಹೊಳಲ್ಕೆರೆ ತಾಲ್ಲೂಕು ಸಾಸಲು ಗ್ರಾಮದಲ್ಲಿ ದೂಳಿನ ನಡುವೆ ತೆರಳುತ್ತಿರುವ ಕಬ್ಬಿಣದ ಅದಿರು ತುಂಬಿದ ಲಾರಿಗಳು ಚಿತ್ರಗಳು: ಚಂದ್ರಪ್ಪ ವಿ

ಮಠಗಳಿಗೆ ಕೊಡಬೇಕು ಕಪ್ಪ

‘ಗಣಿ ಲಾರಿಗಳಿಂದ ರೈತರನ್ನು ರಕ್ಷಿಸುವಂತೆ ಕೋರಿ ಜಿಲ್ಲೆಯ ಹಲವು ಮಠಾಧೀಶರನ್ನು ಕೋರಿಕೊಂಡಿದ್ದೆವು. ಗಣಿ ಅಧಿಕಾರಿಗಳು ಹಾಗೂ ಲಾರಿ ಮಾಲೀಕರನ್ನು ಕರೆಸಿ ಸ್ವಾಮೀಜಿಗಳು ಮಾತನಾಡಿದರು. ಸಮಸ್ಯೆ ಬಗೆಹರಿಯುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು, ಆದರೆ ಆಗಿದ್ದೇ ಬೇರೆ. ಸ್ವಾಮೀಜಿಗಳು ಮಠಕ್ಕೆ ಕಪ್ಪಕಾಣಿಕೆ ಪಡೆದು ಲಾರಿ ಓಡಾಡಲು ಬಿಟ್ಟಿದ್ದಾರೆ’ ಎಂದು ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಭೀಮಸಮುದ್ರ ಗ್ರಾಮಸ್ಥರೊಬ್ಬರು ಆರೋಪಿಸಿದರು.

ಗಣಿ ಲಾರಿಗಳ ಓಡಾಟದಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ತಡೆಗೆ ಲಾರಿಗಳು ರಸ್ತೆ ಓಡಾಟದ ಬದಲಿಗೆ ಪರ್ಯಾಯ ಮಾರ್ಗ ಅನುಸರಿಸಬೇಕಾದ ಅವಶ್ಯಕತೆ ಇದೆ. ಈ ಕುರಿತು ಕೇಂದ್ರ ಕಚೇರಿಗೆ ಶಿಫಾರಸು ಮಾಡಿದ್ದೇವೆ

ಆಸಿಫ್ ಖಾನ್, ಜಿಲ್ಲಾ ಪರಿಸರ ಅಧಿಕಾರಿ, ಮಾಲಿನ್ಯ ನಿಯಂತ್ರಣ ಮಂಡಳಿ

ಅದಿರಿನ ದೂಳಿನಿಂದ ಮಕ್ಕಳಿಗೆ ಗಂಟಲುಬೇನೆ ಸಾಮಾನ್ಯವಾಗಿದೆ. ನಿರಂತರವಾಗಿ ಕಾಡಿದರೆ ಅದು ಮುಂದೆ ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ಗಣಿಭಾದಿತ ಪ್ರದೇಶದಲ್ಲಿ ಟಿ.ಬಿ ಸಮಸ್ಯೆ ಹೆಚ್ಚುತ್ತಿದೆ

ಡಾ.ಸುಹೇಲ್, ವೈದ್ಯಾಧಿಕಾರಿ, ಪಿಎಚ್‌ಸಿ, ಮುತ್ತುಗದೂರು

7 ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರೇಗಾ ಯೋಜನೆ ನೆರವಿನಿಂದ ‘ಜಲ ಸಂಚಯ ಜನ ಭಾಗೀದಾರಿ’ ಅಭಿಯಾನದಡಿ ಜಲ ಸಂರಕ್ಷಣೆಯಲ್ಲಿ ತೊಡಗಿರುವ ರಾಜ್ಯದ ಏಳು ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಿಗೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಜಲ ಸಂರಕ್ಷಣೆಗಾಗಿ ಗದಗ ಜಿಲ್ಲೆಯಲ್ಲಿ 11,971, ವಿಜಯಪುರ–11,453, ಬೀದರ್- 10,297, ಕೋಲಾರ-8,470, ತುಮಕೂರು ಜಿಲ್ಲೆಯಲ್ಲಿ 9,885, ಮಂಡ್ಯ ಜಿಲ್ಲೆಯಲ್ಲಿ 7,192 ಮತ್ತು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ 7,815 ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕರೂರು ಕಾಲ್ತುಳಿತ 10ಕ್ಕೆ ಸುಪ್ರೀಂ ವಿಚಾರಣೆ

ನವದೆಹಲಿ (ಪಿಟಿಐ): ಕರೂರು ಕಾಲ್ತುಳಿತ ಪ್ರಕರಣದಲ್ಲಿ ಸಿಬಿಐ ತನಿಖೆ ನಡೆಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಅಕ್ಟೋಬರ್ 10ರಂದು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿದೆ.

ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ನಟ ವಿಜಯ್ ಸೆಪ್ಟೆಂಬರ್ 27ರಂದು ಕರೂರಿನಲ್ಲಿ ರ್‍ಯಾಲಿ ನಡೆಸಿದ್ದ ವೇಳೆ ಕಾಲ್ತುಳಿತ ಸಂಭವಿಸಿತ್ತು. ಘಟನೆಯಲ್ಲಿ 41 ಮಂದಿ ಮೃತಪಟ್ಟಿದ್ದರು.

ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಕೋರಿ ಬಿಜೆಪಿ ನಾಯಕಿ ಉಮಾ ಆನಂದನ್ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ನ್ಯಾಯಾಲಯವು ತನಿಖೆಯನ್ನು ಸಿಬಿಐಗೆ ವಹಿಸಲು ನಿರಾಕರಿಸಿತ್ತು.

‘ಕೈಬಿಡಲಾದ 3.66 ಲಕ್ಷ ಮತದಾರರ ವಿವರ ಸಲ್ಲಿಸಿ’

ಬಿಹಾರದಲ್ಲಿ ‘ಎಸ್‌ಐಆರ್’ ● ಚುನಾವಣಾ ಆಯೋಗಕ್ಕೆ ‘ಸುಪ್ರೀಂ’ ಸೂಚನೆ



ನವದೆಹಲಿ (ಪಿಟಿಐ): ಬಿಹಾರದಲ್ಲಿ ಕೈಗೊಂಡ ‘ವಿಶೇಷ ಸಮಗ್ರ ಪರಿಷ್ಕರಣೆ’ (ಎಸ್‌ಐಆರ್) ಬಳಿಕ ಸಿದ್ಧಪಡಿಸಲಾದ ಅಂತಿಮ ಮತದಾರರ ಪಟ್ಟಿಯಿಂದ ತೆಗೆದು ಹಾಕಲಾದ 3.66 ಲಕ್ಷದ ಮತದಾರರ ಕುರಿತ ವಿವರಗಳನ್ನು ಸಲ್ಲಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.


‘ಮುಂದಿನ ವಿಚಾರಣೆಯನ್ನು ಅ. 9ರಂದು ನಡೆಸಲಾಗುವುದು. ಇದರೊಳಗಾಗಿ, ತೆಗೆದು ಹಾಕಲಾದ ಮತದಾರರ ಕುರಿತು ಲಭ್ಯವಾಗುವ ಎಲ್ಲ ಮಾಹಿತಿ ಸಲ್ಲಿಸಬೇಕು’ ಎಂದೂ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠವು, ಎಸ್‌ಐಆರ್ ಪ್ರಕ್ರಿಯೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಈ ನಿರ್ದೇಶನ ನೀಡಿದೆ.

‘ಪ್ರತಿಯೊಬ್ಬರೂ ಕರಡು ಮತದಾರರ ಪಟ್ಟಿ ಹೊಂದಿದ್ದಾರೆ. ಸೆಪ್ಟೆಂಬರ್ 30ರಂದು ಅಂತಿಮ ಪಟ್ಟಿಯನ್ನು ಕೂಡ ಪ್ರಕಟಿಸಲಾಗಿದೆ. ಹೀಗಾಗಿ, ತುಲನಾತ್ಮಕ ವಿಶ್ಲೇಷಣೆಯೊಂದಿಗೆ ನ್ಯಾಯಾಲಯಕ್ಕೆ ಮಾಹಿತಿ ಸಲ್ಲಿಸಬೇಕು’ ಎಂದು ಪೀಠ ಹೇಳಿದೆ.

ವಿಚಾರಣೆ ವೇಳೆ, ‘ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿರುವ ಬಹುತೇಕ ಹೆಸರುಗಳು ಹೊಸ ಮತದಾರರವು. ಪರಿಷ್ಕರಣೆ ವೇಳೆ ಕೈಬಿಡಲಾದ ಹೆಸರುಗಳಿಗೆ ಸಂಬಂಧಿಸಿ ಮತದಾರರಿಂದ ಈ ವರೆಗೆ ಯಾವುದೇ ದೂರು ಅಥವಾ ಮೇಲ್ಮನವಿ ಸಲ್ಲಿಕೆ ಆಗಿಲ್ಲ’ ಎಂದು ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ ಅವರು ಪೀಠಕ್ಕೆ ತಿಳಿಸಿದರು.

ಅಂಕಿ ಅಂಶಗಳು



21.53 ಲಕ್ಷ
ಕರಡು ಪಟ್ಟಿಯಲ್ಲಿ ಸೇರಿಸಲಾದ ಮತದಾರರು

3.66 ಲಕ್ಷ
ಪರಿಶೀಲನೆ ಬಳಿಕ ಕೈಬಿಡಲಾದ ಮತದಾರರ ಸಂಖ್ಯೆ

17.87 ಲಕ್ಷ
ಮತದಾರರ ಸಂಖ್ಯೆಯಲ್ಲಾದ ಒಟ್ಟು ಹೆಚ್ಚಳ

‘ಸುಪ್ರೀಂ’ ಹೇಳಿದ್ದೇನು?

- ಕರಡು ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪರಿಶೀಲಿಸಿದಾಗ, ಮತದಾರರ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ಕಂಡುಬರುತ್ತದೆ. ಗೊಂದಲ ನಿವಾರಣೆ ಉದ್ದೇಶದಿಂದ ಹೊಸದಾಗಿ ಸೇರಿಸಲಾದ ಮತದಾರರ ಗುರುತನ್ನು ಬಹಿರಂಗಪಡಿಸಬೇಕು
- ಕರಡು ಪಟ್ಟಿಯಿಂದ 65 ಲಕ್ಷ ಮತದಾರರ ಹೆಸರುಗಳನ್ನು ತೆಗೆದು ಹಾಕಲಾಗಿದೆ. ಮೃತರ ಹಾಗೂ ವಲಸೆ ಹೋದವರ ಹೆಸರುಗಳನ್ನು ಕೈಬಿಟ್ಟಿರುವುದೂ ಸರಿ ಇದೆ. ಆದರೆ, ಯಾರದೋ ಒಬ್ಬ ಅರ್ಹ ಮತದಾರನ ಹೆಸರನ್ನು ನೀವು ಪಟ್ಟಿಯಿಂದ ತೆಗೆಯುತ್ತೀರಿ ಎಂದಾದಲ್ಲಿ ನಿಯಮ 21 ಹಾಗೂ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಅನುಸರಿಸಬೇಕು

ಮುಖ್ಯಾಂಶಗಳು

- ಆಗಸ್ಟ್ 1ರಂದು ಕರಡು ಮತದಾರರ ಪಟ್ಟಿ ಪ್ರಕಟ
- ಸೆಪ್ಟೆಂಬರ್ 30ರಂದು ಅಂತಿಮ ಪಟ್ಟಿ ಪ್ರಕಟಿಸಿದ ಆಯೋಗ

ಆನೆಗಳ ಸಂಖ್ಯೆ 3,170ಕ್ಕೆ

ತಮಿಳುನಾಡಿನಲ್ಲಿ ಸತತ ಎರಡನೇ ವರ್ಷವೂ ಹೆಚ್ಚಳ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಸತತ ಎರಡನೇ ವರ್ಷವೂ ಕಾಡಾನೆಗಳ ಸಂಖ್ಯೆ ಹೆಚ್ಚಳವಾಗಿದೆ.

ಕಳೆದ ವರ್ಷ ರಾಜ್ಯದಲ್ಲಿ 3,063 ಆನೆಗಳಿದ್ದವು, ಪ್ರಸಕ್ತ ವರ್ಷದಲ್ಲಿ ಆನೆಗಳ ಸಂಖ್ಯೆ 3,170ಕ್ಕೆ ಏರಿಕೆಯಾಗಿದೆ. ನೆರೆಯ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ನಡೆಸಿದ ಆನೆ ಸಮೀಕ್ಷೆಯಲ್ಲಿ ಈ ಅಂಕಿಅಂಶಗಳು ಹೊರಬಿದ್ದಿವೆ.

ಕರ್ನಾಟಕದ ಸಹಕಾರದೊಂದಿಗೆ ಮೇ 23ರಿಂದ 25ರವರೆಗೆ ಸಮೀಕ್ಷೆ ನಡೆಸಲಾಗಿತ್ತು. ರಾಜ್ಯದ ಒಟ್ಟು ಆನೆಗಳ



ಪೈಕಿ ವಯಸ್ಕ ಆನೆಗಳ ಸಂಖ್ಯೆ ಶೇ 44ರಷ್ಟಿದೆ.

ತಮಿಳುನಾಡಿನಲ್ಲಿ ಇರುವ ಗಂಡು ಮತ್ತು ಹೆಣ್ಣು ಆನೆಗಳ ಲಿಂಗಾನುಪಾತವು ಅಂದಾಜು 1:1.77ರಷ್ಟಿದೆ. ನೆರೆಯ ಕೇರಳ, ಕರ್ನಾಟಕದಲ್ಲಿಯೂ ಆನೆಗಳ ಲಿಂಗಾನುಪಾತ ಬಹುತೇಕ ಇದೇ ರೀತಿ ಇದೆ ಎಂದು ಸಮೀಕ್ಷೆ ವರದಿಯು ತಿಳಿಸಿದೆ.

ಹುಲಿ ಸಂರಕ್ಷಿತ ಪ್ರದೇಶಗಳು, ವನ್ಯಜೀವಿ ಸಂರಕ್ಷಣಾಲಯಗಳು, ರಾಷ್ಟ್ರೀಯ ಉದ್ಯಾನ ಸೇರಿದಂತೆ 26 ಅರಣ್ಯ ವಿಭಾಗಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. ಅರಣ್ಯ ಇಲಾಖೆಯ 2,043 ಸಿಬ್ಬಂದಿ ಮತ್ತು ಸ್ವಯಂ ಪ್ರೇರಿತರು ಸಮೀಕ್ಷೆಯಲ್ಲಿ ಭಾಗಿಯಾಗಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಶುಲ್ಕ ಹೆಚ್ಚಳ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು (ಕೆಎಸ್‌ಇಎಬಿ) ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಶುಲ್ಕವನ್ನು ಶೇಕಡ 5ರಷ್ಟು ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ.

2026ರ ಮಾರ್ಚ್/ ಏಪ್ರಿಲ್‌ನಲ್ಲಿ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಶುಲ್ಕ ಹೆಚ್ಚಳ ಅನ್ವಯವಾಗಲಿದೆ.

‘ಮೊದಲ ಬಾರಿಗೆ ಹಾಜರಾಗುವ, ಪುನರಾವರ್ತಿತ ಹಾಗೂ ಖಾಸಗಿ ಅಭ್ಯರ್ಥಿಗಳಿಂದ ಶೇ 5ರಷ್ಟು ಹೆಚ್ಚುವರಿ ಪರೀಕ್ಷಾ ಶುಲ್ಕವನ್ನು ಶಾಲೆಗಳು ಸಂಗ್ರಹಿಸಬೇಕು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪರೀಕ್ಷಾ ಶುಲ್ಕ	ಯಾರಿಗೆ ಎಷ್ಟು ಹೆಚ್ಚಳ?
ಹೊಸಬರು	₹676 - ₹710
ಖಾಸಗಿಯಾಗಿ ಪರೀಕ್ಷೆ ಬರೆಯುವ ಹೊಸಬರು	₹236- ₹248
ನೊಂದಾಯಿತ ಖಾಸಗಿ ಅಭ್ಯರ್ಥಿಗಳು	₹69-₹72
ಪುನರಾವರ್ತಿತ ಖಾಸಗಿ/ರೆಗ್ಯುಲರ್	
ಒಂದು ವಿಷಯಕ್ಕೆ	₹427- ₹448
ಎರಡು ವಿಷಯಕ್ಕೆ	₹532-₹559
ಮೂರು ವಿಷಯಕ್ಕೆ	₹716-₹752

ಐಪಿಎಸ್ ಅಧಿಕಾರಿ ಮೃತದೇಹ ಪತ್ತೆ: ಆತ್ಮಹತ್ಯೆ ಶಂಕೆ

ಚಂಡೀಗಢ (ಪಿಟಿಐ): ಐಪಿಎಸ್ ಅಧಿಕಾರಿ ವೈ.ಪೂರನ್ ಕುಮಾರ್ (52), ಚಂಡೀಗಢದ ತಮ್ಮ ನಿವಾಸದಲ್ಲಿ ಮಂಗಳವಾರ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಮೆ ಮಾಡಿಕೊಂಡಿದ್ದಾರೆ.

ಪೂರನ್ ಮೃತದೇಹದಲ್ಲಿ ಗುಂಡೇಟಿನಿಂದ ಆಗಿರುವ ಗಾಯ ಪತ್ತೆಯಾಗಿದೆ.

2001ನೇ ಬ್ಯಾಚಿನ ಐಪಿಎಸ್ ಅಧಿಕಾರಿಯಾಗಿದ್ದ ಅವರು, ರೋಹಟಕ್‌ನ ಸುನರಿಯಾದ ಪೊಲೀಸ್ ತರಬೇತಿ ಕೇಂದ್ರದ ‘ಐಜಿಪಿ’ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಇಲ್ಲಿಗೆ ವರ್ಗಾವಣೆ ಆಗಿ ಬರುವ ಮುನ್ನ ಅವರು ರೋಹಟಕ್ ವಲಯದ ಐಜಿಪಿ ಆಗಿದ್ದರು.

ಪೂರನ್ ಪತ್ನಿ ಅಮ್ನೀತ್ ಪಿ. ಕುಮಾರ್ ಐಎಎಸ್ ಅಧಿಕಾರಿಯಾಗಿದ್ದಾರೆ.

‘ಮಂಗಳವಾರ ಮಧ್ಯಾಹ್ನ ಪೊಲೀಸರು ಸೆಕ್ಟರ್ 11ರಲ್ಲಿರುವ ಪೂರನ್ ಅವರ ನಿವಾಸಕ್ಕೆ ಧಾವಿಸಿದರು. ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಸ್ಥಿತಿಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ’ ಎಂದು ಚಂಡೀಗಢದ ಪೊಲೀಸ್ ವರಿಷ್ಠಾಧಿಕಾರಿ ಕನ್ವರ್‌ದೀಪ್ ಕೌರ್ ಸುದ್ದಿಗಾರರಿಗೆ ತಿಳಿಸಿದರು.

‘ಯಾವ ಔಷಧ ಕೊಡಬೇಕೆಂದು ಹೈಕಮಾಂಡ್‌ಗೆ ಗೊತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವ ಬದಲಾವಣೆ ವಿಚಾರದಲ್ಲಿ ಯಾವ ಕಾಲಕ್ಕೆ ಯಾವ ರೀತಿಯ ‘ಔಷಧ’ ಕೊಡಬೇಕೆಂದು ಹೈಕಮಾಂಡ್‌ಗೆ ಗೊತ್ತಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ನಾಯಕತ್ವ ಬದಲಾವಣೆ ಇಲ್ಲ. ಸದ್ಯ ಸರ್ಕಾರದ ಆದ್ಯತೆ ಬೇರೆಯಾಗಿದೆ. ನೆರೆ ಪರಿಹಾರ, ಅಭಿವೃದ್ಧಿ ವಿಚಾರವಾಗಿ ಸರ್ಕಾರ ಗಮನಹರಿಸುತ್ತಿದೆ’ ಎಂದರು.

‘ನಾಯಕತ್ವ ಬದಲಾವಣೆ ಕುರಿತ ಗೊಂದಲವನ್ನು ಬಗೆಹರಿಸಬೇಕೆಂದು ಸಚಿವ ಸತೀಶ ಜಾರಕಿಹೊಳಿ ಹೇಳಿರುವುದು ಸರಿ ಇದೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದೆ’ ಎಂದರು.

ಪ್ರತ್ಯೇಕ ಲಿಂಗಾಯತ ಧರ್ಮದ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ಲಿಂಗಾಯತ ಹಾಗೂ ವೀರಶೈವ ಧರ್ಮ ಒಂದೆಯಾ, ಬೇರೆ ಬೇರೆಯಾ ಎಂಬುವುದನ್ನು ಆ ಸಮುದಾಯದವರು ಮೊದಲು ಸರಿಪಡಿಸಲಿ’ ಎಂದು ಹೇಳಿದರು.

‘ಲಿಂಗಾಯತ ಸ್ವಾಮೀಜಿಗಳ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಹೋಗಿರುವುದು ತಪ್ಪಲ್ಲ. ಅವರು ಅಲ್ಲಿ ಧಾರ್ಮಿಕ, ಧರ್ಮ ಪ್ರತ್ಯೇಕತೆಯ ಬಗ್ಗೆ ಮಾತನಾಡಿಲ್ಲ. ‘ನಮ್ಮ ಮೆಟ್ರೊ’ಗೆ ಬಸವಣ್ಣ ಅವರ ಹೆಸರು ಇಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ’ ಎಂದರು.

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ನಡೆಸಿದ ತಪಾಸಣೆಯಲ್ಲಿ ದೃಢ

ಮಕ್ಕಳಲ್ಲಿ ನಡವಳಿಕೆ–ಕಲಿಕಾ ನ್ಯೂನತೆ

● ವರುಣ ಹೆಗಡೆ

ಬೆಂಗಳೂರು: ಓದು–ಬರವಣಿಗೆಗೆ ತೊಡಕಾಗುವ ಕಲಿಕಾ ನ್ಯೂನತೆ, ಏಕಾಗ್ರತೆ ಕೊರತೆಗೆ ಕಾರಣವಾಗುವ ‘ಹೈಪರ್ ಆ್ಯಕ್ಟಿವಿಟಿ’ಯಂತಹ ಸಮಸ್ಯೆಗಳು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ಆರೋಗ್ಯ ಇಲಾಖೆಯು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ನಡೆಸಿದ ತಪಾಸಣೆಯಲ್ಲಿ ದೃಢಪಟ್ಟಿದೆ.

ಈ ಸಮಸ್ಯೆಗಳು ಮಕ್ಕಳ ಕಲಿಕೆ ಮತ್ತು ಬೆಳವಣಿಗೆ ಮೇಲೆ ಪರಿಣಾಮ ಬೀರುತ್ತಿರುವ ಕಾರಣ, ಸಮಸ್ಯೆಯ ತೀವ್ರತೆ ತಿಳಿದು ಚಿಕಿತ್ಸೆ ನೀಡಲು ಮಕ್ಕಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಕಲಿಕೆ ಹಾಗೂ ನಡವಳಿಕೆ ಆಧಾರಿತ ಸಮಸ್ಯೆಗಳನ್ನು ಎದುರಿಸುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಳವಾಗಲು, ದೈಹಿಕ ಚಟುವಟಿಕೆ ಕೊರತೆ, ಪಾಶ್ಚಾತ್ಯ ಆಹಾರ ಪದ್ಧತಿ ಹಾಗೂ ರೀಲ್ಸ್‌ಗಳ (ಕಿರು ವಿಡಿಯೊ) ಅತಿಯಾದ ವೀಕ್ಷಣೆಯೇ ಪ್ರಮುಖ ಕಾರಣವೆಂದು ಮನೋವೈದ್ಯರು ವಿಶ್ಲೇಷಿಸಿದ್ದಾರೆ.

ಆರ್‌ಬಿಎಸ್‌ಕೆ ಕಾರ್ಯಕ್ರಮದಡಿ 18 ವರ್ಷದೊಳಗಿನವರಿಗೆ ತಪಾಸಣೆ ನಡೆಸಲಾಗುತ್ತಿದೆ. ಹುಟ್ಟಿನ ದೋಷಗಳು, ರೋಗಗಳು ಮತ್ತು ಬೆಳವಣಿಗೆ ಕುಂಠಿತವನ್ನು ಗುರುತಿಸಿ, ಚಿಕಿತ್ಸೆ ನೀಡುವುದು ಕಾರ್ಯಕ್ರಮದ ಮುಖ್ಯ ಉದ್ದೇಶ. 2024–25ನೇ ಸಾಲಿನಲ್ಲಿ 1.23 ಕೋಟಿ ಮಕ್ಕಳನ್ನು ಆರ್‌ಬಿಎಸ್‌ಕೆ ತಂಡ ತಪಾಸಣೆ ನಡೆಸಿದೆ. ಈ ತಪಾಸಣೆಯಲ್ಲಿ ಕೋಪದಂತಹ ನಡವಳಿಕೆ ಆಧಾರಿತ ಸಮಸ್ಯೆ, ಓದುವಿಕೆ, ಬರೆಯುವಿಕೆ ಮತ್ತು ಅರ್ಥಗ್ರಹಣದಲ್ಲಿ ತೊಂದರೆಗಳನ್ನು ಎದುರಿಸುವ

2024–25ನೇ ಸಾಲಿನಲ್ಲಿ ಪತ್ತೆಯಾದ ಪ್ರಕರಣಗಳು

ಸಮಸ್ಯೆ	ಪ್ರಕರಣ
ಕಲಿಕಾ ನ್ಯೂನತೆ	13,536
ನಡವಳಿಕೆ ನ್ಯೂನತೆ	2,510
ಹೈಪರ್ ಆ್ಯಕ್ಟಿವಿಟಿ	668
ಆಟಿಸಂ	477
ಬುದ್ಧಿಮಾಂದ್ಯತೆ	6,559

ಕಲಿಕಾ ನ್ಯೂನತೆ, ಮಿದುಳಿನ ಸಾಮಾನ್ಯ ಬೆಳವಣಿಗೆಯನ್ನು ಕುಂಠಿತಗೊಳಿಸಿ, ಸಂವಹನ, ಸಾಮಾಜಿಕ ಒಡನಾಟ, ಗ್ರಹಿಕೆ ಮತ್ತು ವರ್ತನೆಗಳ ಮೇಲೆ ಪರಿಣಾಮ ಬೀರುವ ಆಟಿಸಂ, ಬುದ್ಧಿಮಾಂದ್ಯತೆಯಂತಹ ಸಮಸ್ಯೆಯು 23 ಸಾವಿರಕ್ಕೂ ಅಧಿಕ ಮಕ್ಕಳಲ್ಲಿ ದೃಢಪಟ್ಟಿದೆ.

ಗುರುತಿಸದಿದ್ದರೆ ಅಪಾಯ: ಹೈಪರ್ ಆ್ಯಕ್ಟಿವಿಟಿಯಂತಹ ಸಮಸ್ಯೆಗಳ ಚಿಕಿತ್ಸೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಹೊರರೋಗಿ ವಿಭಾಗಕ್ಕೆ ಪಾಲಕರು ಮಕ್ಕಳನ್ನು ಕರೆತರುತ್ತಿದ್ದು, ಅವರ ಸಮಸ್ಯೆ ಅನುಸಾರ ಸಮಾಲೋಚನೆ ಮತ್ತು ಥೆರಪಿ ಒದಗಿಸಲಾಗುತ್ತಿದೆ. ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಅತಿಯಾದ ಬಳಕೆ, ಕಿರು ವಿಡಿಯೊಗಳ ವೀಕ್ಷಣೆ, ಕಾರ್ಬೋಹೈಡ್ರೇಟ್ ಪ್ರಮಾಣ ಅಧಿಕ ಇರುವ ತಿನಿಸುಗಳು, ಚಾಕೊಲೇಟ್ ಹಾಗೂ ತಂಪು ಪಾನೀಯಗಳ ಅತಿಯಾದ ಸೇವನೆಯಿಂದಲೇ ಹೈಪರ್ ಆ್ಯಕ್ಟಿವಿಟಿಯಂತಹ ಸಮಸ್ಯೆಗಳು ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿದೆ ಎಂದು ಮನೋವೈದ್ಯರು ವಿಶ್ಲೇಷಿಸಿದ್ದಾರೆ.

7ರಿಂದ 14 ವರ್ಷದವರಲ್ಲಿ ಅಧಿಕ

‘ಹೈಪರ್ ಆ್ಯಕ್ಟಿವಿಟಿ ಸಮಸ್ಯೆಯು ವಿಶೇಷವಾಗಿ 7ರಿಂದ 14 ವರ್ಷದ ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಈ ಸಮಸ್ಯೆ ಎದುರಿಸುವ ಮಕ್ಕಳು ಸಾಮಾನ್ಯವಾಗಿ ಒಂದೇ ಕೆಲಸದಲ್ಲಿ ಹೆಚ್ಚು ಹೊತ್ತು ಗಮನ ಕೇಂದ್ರೀಕರಿಸಲು ಸಾಧ್ಯವಾಗದೆ, ಅತಿಯಾದ ಚಲನವಲನದ ಜತೆಗೆ ತಾಳ್ಮೆಯ ಕೊರತೆ ಎದುರಿಸುತ್ತಾರೆ. ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳು ಓದು, ಬರಹ ಸೇರಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಹೆಚ್ಚಿನ ಕಷ್ಟ ಅನುಭವಿಸುತ್ತಾರೆ. ಇದನ್ನು ಸಾಮಾನ್ಯ ಬೆಳವಣಿಗೆಯ ವರ್ತನೆ ಎಂದು ತಪ್ಪಾಗಿ ಭಾವಿಸಿದರೆ, ಮಗುವಿನ ಆತ್ಮವಿಶ್ವಾಸ ಮತ್ತು ವಿದ್ಯಾಭ್ಯಾಸದ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಈ ಸಮಸ್ಯೆ ಗುರುತಿಸಿ, ಚಿಕಿತ್ಸೆ ಮತ್ತು ಬೆಂಬಲ ನೀಡುವುದು ಮುಖ್ಯ’ ಎಂದು ಕಡಬಮ್ಸ್ ಆಸ್ಪತ್ರೆಯ ಹಿರಿಯ ಮನೋವೈದ್ಯೆ ಮತ್ತು ಕಾರ್ಯನಿರ್ವಾಹಕ ನಿರ್ದೇಶಕಿ ನೇಹಾ ಕಡಬಂ ತಿಳಿಸಿದರು.



ನಡವಳಿಕೆ ಆಧಾರಿತ ಹಾಗೂ ಕಲಿಕಾ ನ್ಯೂನತೆ ಗುರುತಿಸುವಲ್ಲಿ ಶಿಕ್ಷಕರು ಹಾಗೂ ಪಾಲಕರ ಪಾತ್ರ ಪ್ರಮುಖವಾಗುತ್ತದೆ. ಈ ಸಮಸ್ಯೆ ಹೊಂದಿದ್ದವರನ್ನು ವಿಶೇಷ ಮಕ್ಕಳೆಂದು ಪರಿಗಣಿಸಬೇಕು
ಡಾ. ಶಶಿಧರ್ ಎಚ್.ಎನ್., ನಿಮ್ಹಾನ್ಸ್ ಆರ್‌ಎಂಒ



ಕಲಿಕೆಯ ಸಮಸ್ಯೆ ಹೊಂದಿರುವ ಮಕ್ಕಳನ್ನು ಹೆಚ್ಚಿನ ಸಹನಶೀಲತೆಯಿಂದ ಸಂಭಾಳಿಸಬೇಕು. ಅವರನ್ನು ಟೀಕಿಸುವ ಬದಲು, ಆತ್ಮವಿಶ್ವಾಸ ತುಂಬಿ ಪ್ರೋತ್ಸಾಹಿಸಬೇಕು
ನೇಹಾ ಕಡಬಂ, ಕಡಬಮ್ಸ್ ಆಸ್ಪತ್ರೆಯ ಮನೋವೈದ್ಯೆ

‘ಇಂತಹ ಸಮಸ್ಯೆಗಳಿಂದ ಹೊರಬರಲು ಮಕ್ಕಳು ದೈಹಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳಬೇಕು. ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಅತಿಯಾದ ಬಳಕೆಗೆ ಕಡಿವಾಣ ಹಾಕಬೇಕು. ಸಿಹಿ ತಿನಿಸಿಗಳು, ಚಾಕೊಲೇಟ್‌ಗಳ ಸೇವನೆಯು ಮನಸ್ಸಿನ ಉದ್ವೇಗಕ್ಕೆ ಕಾರಣವಾಗಿ, ಹೈಪರ್ ಆ್ಯಕ್ಟಿವಿಟಿಯಂತಹ ಸಮಸ್ಯೆ ಕಾಣಿಸಿಕೊಳ್ಳಲಿದೆ. ಕಲಿಕಾ ನ್ಯೂನತೆ ಸಮಸ್ಯೆ ಎದುರಿಸುತ್ತಿರುವ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿ, ಅವರ ಆಸಕ್ತಿಯನ್ನು ಅರಿತು ಪ್ರೋತ್ಸಾಹಿಸಬೇಕು’ ಎಂದು ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ) ಡಾ. ಶಶಿಧರ್ ಎಚ್.ಎನ್. ತಿಳಿಸಿದರು.

ಬುಧವಾರ, ಅಕ್ಟೋಬರ್ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 278 | ಪುಟ 18
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಅಭಿನಂದನೆ
'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ ಪುರಸ್ಕೃತ ಮೋಹನ್‌ಲಾಲ್ ಅವರಿಗೆ ಭಾರತೀಯ ಸೇನೆಯಿಂದ ಮಂಗಳವಾರ ಅಭಿನಂದನೆ ಸಲ್ಲಿಸಲಾಯಿತು



ಕಲಾವೈಭವ
ವಾಲ್ಮೀಕಿ ಜಯಂತಿ ಅಂಗವಾಗಿ ದಾವಣಗೆರೆಯಲ್ಲಿ ನಡೆದ ಮೆರವಣಿಗೆಯಲ್ಲಿ ವೀರಗಾಸೆ ಕಲಾವಿದರೊಬ್ಬರ ಪ್ರದರ್ಶನ ಗಮನ ಸೆಳೆಯಿತು

ಸೆನ್ಸೆಕ್ಸ್ 81,926 | ನಿಫ್ಟಿ 25,108 | $/₹ 88.77 | ಚಿನ್ನ (Std. 10g) ₹1,25,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,58,800 (ಬೆಂಗಳೂರು)

ಜಾತಿವಾರು ಸಮೀಕ್ಷೆ: ಅ.18 ಗಡುವು

ಸರ್ಕಾರಿ, ಅನುದಾನಿತ ಶಾಲೆಗಳಿಗೆ ದಸರಾ ರಜೆ ವಿಸ್ತರಿಸಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿವಾರು ಸಮೀಕ್ಷೆ) ಅವಧಿಯನ್ನು ಅ. 18ರವರೆಗೆ ವಿಸ್ತರಿಸಲಾಗಿದೆ.

ಸಮೀಕ್ಷೆಯ ಸ್ಥಿತಿಗತಿ ಕುರಿತಂತೆ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ವಿಡಿಯೊ ಸಂವಾದ ನಡೆಸಿದರು.

ಬಳಿಕ ಮಾತನಾಡಿದ ಮುಖ್ಯಮಂತ್ರಿ, 'ಸಮೀಕ್ಷಕರಾಗಿರುವ ಶಿಕ್ಷಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ನೀಡಲಾಗಿದ್ದ ದಸರಾ ರಜೆಯನ್ನು ವಿಸ್ತರಿಸಲಾಗಿದೆ. ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಲು ಹಿಂದೇಟು ಹಾಕುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದರು.



'ಸಮೀಕ್ಷೆ ಕಾರ್ಯ ಸಮರ್ಪಕವಾಗಿ ಪೂರ್ಣಗೊಳ್ಳಲು ದಸರಾ ರಜೆಯನ್ನು 10 ದಿನ ವಿಸ್ತರಿಸುವಂತೆ ಶಿಕ್ಷಕರ ಸಂಘದ ಪದಾಧಿಕಾರಿಗಳು ಮತ್ತು ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರು ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಪುರಸ್ಕರಿಸಿ ಹೆಚ್ಚುವರಿಯಾಗಿ ಎಂಟು ಕೆಲಸದ ದಿನ, ಅಂದರೆ ಅ. 18ರವರೆಗೆ ರಜೆ ಘೋಷಿಸಲಾಗಿದೆ. ರಜೆ ಮುಗಿದ ನಂತರ ಪಠ್ಯಕ್ರಮವನ್ನು ಪೂರ್ಣಗೊಳಿಸಲು ಶಿಕ್ಷಕರು ವಿಶೇಷ ತರಗತಿಗಳನ್ನು ನಡೆಸಲಿದ್ದಾರೆ. ಅ. 19ರೊಳಗೆ ಸಮೀಕ್ಷೆ ಮುಗಿಯಲಿದೆ' ಎಂದು ಹೇಳಿದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿ ಬಿಟ್ಟು ರಾಜ್ಯದಾದ್ಯಂತ ಸೆ. 22ರಂದು ಆರಂಭಗೊಂಡಿರುವ ಈ ಸಮೀಕ್ಷೆಯು ಮಂಗಳವಾರ (ಅ.7) ಮುಗಿಯಬೇಕಿತ್ತು. ಆದರೆ, ನಿಗದಿಯಂತೆ ಪೂರ್ಣಗೊಂಡಿಲ್ಲ. ವಿವಿಧ ಜಿಲ್ಲೆಗಳಲ್ಲಿ ಸಮೀಕ್ಷೆಯ ಪ್ರಗತಿಯಲ್ಲಿ ವ್ಯತ್ಯಾಸವಿದೆ. ಕೊಪ್ಪಳ ಜಿಲ್ಲೆಯಲ್ಲಿ ಶೇ 97ರಷ್ಟು ಪೂರ್ಣಗೊಂಡಿದ್ದರೆ, ದಕ್ಷಿಣ ಕನ್ನಡದಲ್ಲಿ ಕೇವಲ ಶೇ 67ರಷ್ಟು ಪ್ರಗತಿ ಕಂಡಿದೆ' ಎಂದು ಹೇಳಿದರು.

5A

ಮುಖ್ಯಾಂಶಗಳು

- ಸಮೀಕ್ಷೆಯ ಸ್ಥಿತಿಗತಿ ಪರಿಶೀಲಿಸಿದ ಸಿ.ಎಂ, ಡಿಸಿಎಂ
- ಪಿಯು ಉಪನ್ಯಾಸಕರಿಗೆ ವಿನಾಯಿತಿ
- ಅ. 19ರ ಒಳಗೆ ಸಮೀಕ್ಷೆ ಮುಗಿಯುವ ಸಾಧ್ಯತೆ

₹20 ಲಕ್ಷ ಪರಿಹಾರ



ಸಮೀಕ್ಷೆ ಕಾರ್ಯದ ವೇಳೆ ಮೃತಪಟ್ಟ ಮೂವರು ಶಿಕ್ಷಕರ ಕುಟುಂಬಗಳಿಗೆ ತಲಾ ₹20 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಘೋಷಿಸಿದರು.

5A

ಅಂಕಿ ಅಂಶಗಳು

1.60 ಲಕ್ಷ
ಸಮೀಕ್ಷೆಯ ಒಟ್ಟು ಸಿಬ್ಬಂದಿ

1.20 ಲಕ್ಷ
ಸಮೀಕ್ಷೆ ನಡೆಸುತ್ತಿರುವ ಶಿಕ್ಷಕರು

6,700
ಬೆಂಗಳೂರು ನಗರದಲ್ಲಿ ಭಾಗಿಯಾಗಿರುವ ಶಿಕ್ಷಕರು

ಗ್ರಾಮೀಣ ಪ್ರದೇಶದಲ್ಲಿ ಶೇ 90ರಷ್ಟು ಸಹಕಾರ: ಡಿಕೆಶಿ



'ರಾಜ್ಯದಲ್ಲಿರುವ ಎಲ್ಲ ಜನರಿಗೆ ನ್ಯಾಯ ಒದಗಿಸಿಕೊಡಲು ಈ ಸಮೀಕ್ಷೆ ನಡೆಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ 90ರಷ್ಟು ಜನರು ಸಹಕಾರ ನೀಡಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಸಮೀಕ್ಷೆ ಮಂದಗತಿಯಲ್ಲಿದ್ದು, ಶೇ 25ರಷ್ಟು ಪೂರ್ಣಗೊಂಡಿದೆ. ಬೆಂಗಳೂರು ನಗರದಲ್ಲಿರುವ ಜನರು ಸಮೀಕ್ಷೆಗೆ ಸಂಪೂರ್ಣ ಸಹಕಾರ ನೀಡಬೇಕು. ಆನ್‌ಲೈನ್ ಮೂಲಕವೂ ಸಾರ್ವಜನಿಕರು ಮಾಹಿತಿ ಸಲ್ಲಿಸಬಹುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಮ್ಮ ಮನವಿಗೆ ಸ್ಪಂದನೆ– ನುಗ್ಗಲಿ

'ನಮ್ಮ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿ, ರಜೆ ನೀಡುವುದಾಗಿ ಘೋಷಿಸಿದ್ದಾರೆ. ಸಮೀಕ್ಷೆ ಮಾಡುವಾಗ ಮೃತಪಟ್ಟ ಸಮೀಕ್ಷಕರಿಗೆ ₹20 ಲಕ್ಷ ಪರಿಹಾರ ನೀಡಬೇಕೆಂಬ ಮನವಿಗೂ ಅವರು ಒಪ್ಪಿದ್ದಾರೆ' ಎಂದು ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

5A



ಕೊಪ್ಪಳ ತಾಲ್ಲೂಕಿನ ಹುಲಿಗಿಯ ಹುಲಿಗೆಮ್ಮ ದೇವಿ ದರ್ಶನ ಪಡೆಯಲು ಮಂಗಳವಾರ ಸೇರಿದ್ದ ಜನ ಚಿತ್ರ: ಭರತ್ ಕಂದಕೂರ

ನಾಲ್ವರು ಪಾದಯಾತ್ರಿಕರ ಬಲಿ

ಬಸ್ ಹರಿದು ಮೂವರು, ಬೈಕ್ ಡಿಕ್ಕಿ ಹೊಡೆದು ಒಬ್ಬ ಸಾವು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಮುನಿರಾಬಾದ್ ಸಮೀಪದ ಹುಲಿಗಿಯಲ್ಲಿರುವ ಹುಲಿಗೆಮ್ಮ ದೇವಿ ದರ್ಶನಕ್ಕೆ ವಿವಿಧೆಡೆಯಿಂದ ಪಾದಯಾತ್ರೆ ಹೊರಟಿದ್ದ ಭಕ್ತರ ಮೇಲೆ ಒಂದೆಡೆ ಖಾಸಗಿ ಬಸ್ ಹರಿದು ಮತ್ತು ಇನ್ನೊಂದೆಡೆ ಬೈಕ್ ಡಿಕ್ಕಿ ಹೊಡೆದು ಒಟ್ಟು ನಾಲ್ಕು ಜನ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಕೂಕನಪಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಪಾದಯಾತ್ರೆ ಹೋಗುತ್ತಿರುವವರ ಮೇಲೆ ಬಸ್ ಹರಿದಿದ್ದರಿಂದ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ತಳ್ಳಿಹಾಳ ಗ್ರಾಮದ ಅನ್ನಪೂರ್ಣ ಮ್ಯಾಗೇರಿ (40), ಪ್ರಕಾಶ ಮಾಡಲಗೇರಿ (25), ಶರಣಪ್ಪ ಮ್ಯಾಗೇರಿ (19) ಮೃತಪಟ್ಟಿದ್ದಾರೆ. ನಾಲ್ಕು ಜನರಿಗೆ ಗಾಯಗಳಾಗಿವೆ.

5A

ಇಡೀ ಕುಟುಂಬ ನೀರುಪಾಲು

ಕುಣಿಗಲ್ (ತುಮಕೂರು): ತಾಲ್ಲೂಕಿನ ಮಾರ್ಕೋನಹಳ್ಳಿ ಜಲಾಶಯದ ಹಿನ್ನೀರಿನ ಬೆಟ್ಟಗೊಂಡನಹಳ್ಳಿ ಬಳಿಯ ಕಾಲುವೆಯಲ್ಲಿ ಮಂಗಳವಾರ ಒಂದೇ ಕುಟುಂಬದ ಆರು ಮಂದಿ ಕೊಚ್ಚಿಕೊಂಡು ಹೋಗಿದ್ದು, ಆ ಪೈಕಿ ಇಬ್ಬರ ಶವ ಸಿಕ್ಕಿವೆ. ಕಾಣೆಯಾಗಿರುವ ಇನ್ನೂ ನಾಲ್ವರಿಗಾಗಿ ಹುಡುಕಾಟ ನಡೆದಿದೆ.

ತಾಲ್ಲೂಕಿನ ಮಾಗಡಿಪಾಳ್ಯದ ಸಾದಿಯಾ (28) ಮತ್ತು ತುಮಕೂರು ನಗರದ ಬಿ.ಜಿ.ಪಾಳ್ಯದ ಹರ್ಬಿನ್ (20) ಶವಗಳು ಸಿಕ್ಕಿವೆ. ಸಾದಿಯಾ ತಾಯಿ ಬಿ.ಜಿ.ಪಾಳ್ಯದ ತಬಸ್ಸಮ್ (46), ಸಾದಿಯಾ ಪುತ್ರಿ ನಿಪ್ರಾ (4), ತಬಸ್ಸಮ್ ತಂಗಿ ಶಬಾನ (44) ಹಾಗೂ ಮೋಹಿಬ್ (1) ಕಾಲುವೆಯಲ್ಲಿ ಕೊಚ್ಚಿ ಹೋಗಿದ್ದಾರೆ. ಅವರಿಗಾಗಿ ಅಗ್ನಿಶಾಮಕ ದಳ ಹಾಗೂ ಪೊಲೀಸರು ಸಂಜೆವರೆಗೂ ಹುಡುಕಾಟ ನಡೆಸಿದರೂ ಪತ್ತೆಯಾಗಿಲ್ಲ. ಕತ್ತಲಾಗಿದ್ದರಿಂದ ಶೋಧ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದು, ಬುಧವಾರ ಬೆಳಗ್ಗೆ ಮತ್ತೆ ಮುಂದುವರಿಯಲಿದೆ.

5A

ಅನಾರೋಗ್ಯ: ದೇವೇಗೌಡ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನು ಅನಾರೋಗ್ಯದ ಕಾರಣ, ನಗರದ ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಳಿ ಜ್ವರ ಮತ್ತು ಮೂತ್ರದ ಸೋಂಕಿನ ಕಾರಣ ಸೋಮವಾರ ಸಂಜೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಅವರನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಿದ್ದು, ತಜ್ಞ ವೈದ್ಯರ ತಂಡ ಚಿಕಿತ್ಸೆ ನೀಡುತ್ತಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರ ಆರೋಗ್ಯದಲ್ಲಿ ತುಸು ಚೇತರಿಕೆ ಕಂಡಿದ್ದು, ಚಿಕಿತ್ಸೆ ಮುಂದುವರಿಸಲಾಗಿದೆ. ಇನ್ನೂ ಒಂದು ದಿನ ತೀವ್ರ ನಿಗಾ ಘಟಕದಲ್ಲಿ ಇರಿಸಬೇಕಾಗಬಹುದು ಎಂದು ವೈದ್ಯರು ತಿಳಿಸಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಜಾಲಿವುಡ್‌ಗೆ ಬೀಗ, 'ಬಿಗ್ ಬಾಸ್' ಮನೆ ಖಾಲಿ

ಪ್ರಜಾವಾಣಿ ವಾರ್ತೆ

ರಾಮನಗರ: 'ಬಿಗ್‌ಬಾಸ್' ರಿಯಾಲಿಟಿ ಷೋ ನಡೆಯುತ್ತಿರುವ ಬಿಡದಿಯ ಜಾಲಿವುಡ್ ಸ್ಟುಡಿಯೋಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌ಗೆ ತಾಲ್ಲೂಕು ಆಡಳಿತ ಮಂಗಳವಾರ ಬೀಗಮುದ್ರೆ ಹಾಕಿದೆ. ಈ ದಿಢೀರ್ ಬೆಳವಣಿಗೆಯಿಂದಾಗಿ ಬಿಗ್‌ಬಾಸ್ ಷೋ ಅತಂತ್ರ ಸ್ಥಿತಿ ತಲುಪಿದೆ ಎನ್ನಲಾಗಿದೆ.

'ಬಿಗ್‌ಬಾಸ್' ಮನೆಯಲ್ಲಿದ್ದ ಸ್ಪರ್ಧಿಗಳು ಹಾಗೂ ಸಿಬ್ಬಂದಿಯನ್ನು ಆಯೋಜಕರು ಸಮೀಪದ ಈಗಲ್ಟನ್ ರೆಸಾರ್ಟ್‌ಗೆ ಸ್ಥಳಾಂತರಿಸಿದ್ದಾರೆ. ಪಾರ್ಕ್‌ಗೆ ಬಂದಿದ್ದ ಪ್ರವಾಸಿಗರನ್ನು ಸಹ ಸ್ಥಳದಿಂದ ಹೊರಕ್ಕೆ ಕಳುಹಿಸಲಾಗಿದೆ.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶದ ಮೇರೆಗೆ ತಹಶೀಲ್ದಾರ್ ತೇಜಸ್ವಿನಿ ಹಾಗೂ ಸಿಬ್ಬಂದಿ ಜಾಲಿವುಡ್ ಸ್ಟುಡಿಯೊಕ್ಕೆ ಬೀಗ ಜಡಿದರು.

5

ಮಂಡಳಿ ಆದೇಶದಂತೆ ಬೀಗ: ಜಿಲ್ಲಾಧಿಕಾರಿ

'ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಜಾಲಿವುಡ್ ಸಂಸ್ಥೆಯು ಮನರಂಜನೆ ಹಾಗೂ ಇತರ ಸಾಹಸ ಚಟುವಟಿಕೆ ನಡೆಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆದಿರಲಿಲ್ಲ. ಈ ಕುರಿತು, ಮಂಡಳಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಿದ್ದರು. ಆ ಮೇರೆಗೆ, ಮಂಡಳಿಯು ಜಾಲಿವುಡ್‌ನಲ್ಲಿ ನಡೆಯುತ್ತಿರುವ ಚಟುವಟಿಕೆ ಸ್ಥಗಿತಗೊಳಿಸಿ ಬೀಗಮುದ್ರೆ ಹಾಕುವಂತೆ ಆದೇಶ ಮಾಡಿತ್ತು. ಪೊಲೀಸ್ ಭದ್ರತೆಯಲ್ಲಿ ಜಾಲಿವುಡ್‌ಗೆ ಬೀಗ ಹಾಕಿ ಮೊಹರು ಮಾಡಿದ್ದೇವೆ. ಮುಂದೇನು ಮಾಡಬೇಕೆಂಬುದನ್ನು ಮಂಡಳಿ ನಿರ್ಧರಿಸಲಿದೆ' ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ತಿಳಿಸಿದರು.

ಹೈಕೋರ್ಟ್ ಮೊರೆ ಸಾಧ್ಯತೆ

ಬಿಗ್‌ಬಾಸ್ ಸ್ಪರ್ಧೆ ಶುರುವಾಗಿ 11 ದಿನವಾಗಿದೆ. ಈಗ ಜಿಲ್ಲಾಡಳಿತ ಬೀಗಮುದ್ರೆ ಹಾಕಿದ್ದು, ಅದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಲು ಜಾಲಿವುಡ್ ಸಿದ್ಧತೆ ನಡೆಸಿದೆ ಎನ್ನಲಾಗಿದೆ.

ಕೋರ್ಟ್‌ನಲ್ಲಿ ಮಂಡಳಿ ಆದೇಶಕ್ಕೆ ತಡೆಯಾಜ್ಞೆ ಸಿಗುವ ವಿಶ್ವಾಸ ಇರುವುದರಿಂದ, ಮತ್ತೆ ಬಿಗ್‌ಬಾಸ್ ಷೋ ಮುಂದುವರಿಸಲು ಸ್ಪರ್ಧಿಗಳನ್ನು ಸಮೀಪದ ಈಗಲ್ಟನ್ ರೆಸಾರ್ಟ್‌ನಲ್ಲಿ ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೀಪಾವಳಿ: ವಿಶೇಷ ರೈಲಿನ ವ್ಯವಸ್ಥೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ದೀಪಾವಳಿ ಹಬ್ಬದ ವೇಳೆ ಪ್ರಯಾಣಿಕರ ದಟ್ಟಣೆ ನಿವಾರಿಸುವ ಸಲುವಾಗಿ ಯಶವಂತಪುರ– ತಾಳಗುಪ್ಪ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಸೇವೆಯನ್ನು ವಿಸ್ತರಿಸಲಾಗಿದೆ. ಈ ರೈಲು ಪ್ರತಿ ದಿಕ್ಕಿನಲ್ಲಿ ಎರಡು ಟ್ರಿಪ್ ಸಂಚರಿಸಲಿದೆ.


ರೈಲು ಸಂಖ್ಯೆ 06587 ಯಶವಂತಪುರ–ತಾಳಗುಪ್ಪ ಎಕ್ಸ್‌ಪ್ರೆಸ್ ವಿಶೇಷ ರೈಲು ಅಕ್ಟೋಬರ್ 17 ಮತ್ತು 24ರಂದು ರಾತ್ರಿ 10.30ಕ್ಕೆ ಯಶವಂತಪುರ ನಿಲ್ದಾಣದಿಂದ ಹೊರಟು, ಮರುದಿನ ಮುಂಜಾನೆ 4.15ಕ್ಕೆ ತಾಳಗುಪ್ಪ ತಲುಪಲಿದೆ.

ಮತ್ತೊಂದು ಕಡೆಯಿಂದ ರೈಲು ಸಂಖ್ಯೆ 06588 ತಾಳಗುಪ್ಪ–ಯಶವಂತಪುರ ಎಕ್ಸ್‌ಪ್ರೆಸ್ ವಿಶೇಷ ರೈಲು ಅಕ್ಟೋಬರ್ 18 ಮತ್ತು 25ರಂದು ತಾಳಗುಪ್ಪದಿಂದ ಬೆಳಿಗ್ಗೆ 10 ಗಂಟೆಗೆ ಹೊರಟು, ಅದೇ ದಿನ ಸಂಜೆ 5.15ಕ್ಕೆ ಯಶವಂತಪುರ ತಲುಪಲಿದೆ.

ಈ ವಿಶೇಷ ರೈಲು, ಎರಡೂ ಮಾರ್ಗದಲ್ಲಿ ತುಮಕೂರು, ತಿಪಟೂರು, ಅರಸೀಕೆರೆ, ಬೀರೂರು, ತರೀಕೆರೆ, ಭದ್ರಾವತಿ, ಶಿವಮೊಗ್ಗ, ಆನಂದಪುರ ಹಾಗೂ ಸಾಗರ ಜಂಬಗಾರು ನಿಲ್ದಾಣಗಳಲ್ಲಿ ನಿಲ್ಲಲಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಪ್ರಕಟಣೆ ತಿಳಿಸಿದೆ.

ಜಾಣಗೆರೆ, ಬೆಲ್ಲದಗೆ 'ಕರ್ನಾಟಕ ಚೂಡಾಮಣಿ ಪ್ರಶಸ್ತಿ'


ಜಾಣಗೆರೆ ವೆಂಕಟರಾಮಯ್ಯ


ಚಂದ್ರಕಾಂತ ಬೆಲ್ಲದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿ ನೀಡುವ 2024 ಮತ್ತು 2025ನೇ ಸಾಲಿನ 'ಕರ್ನಾಟಕ ಚೂಡಾಮಣಿ ಪ್ರಶಸ್ತಿ'ಗೆ ಕನ್ನಡಪರ ಹೋರಾಟಗಾರರಾದ ಜಾಣಗೆರೆ ವೆಂಕಟರಾಮಯ್ಯ ಹಾಗೂ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ನವೆಂಬರ್ ತಿಂಗಳಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಮನು ಬಳಿಗಾರ್ ತಿಳಿಸಿದ್ದಾರೆ.

96 ಸಾವಿರ ಲೀಟರ್ ಸಮೃದ್ಧಿ ಹಾಲು ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಪ್ರತಿದಿನ 96 ಸಾವಿರ ಲೀಟರ್ ನಂದಿನಿ ಸಮೃದ್ಧಿ ಹಾಲನ್ನು (ಫುಲ್ ಕ್ರೀಮ್) ಗ್ರಾಹಕರಿಗೆ ಪೂರೈಕೆ ಮಾಡಲಾಗುತ್ತಿದೆ ಎಂದು ಕೆಎಂಎಫ್ ಮೂಲಗಳು ಹೇಳಿವೆ.

'ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಭಾಗಗಳಲ್ಲಿ ನಿತ್ಯ 40 ಸಾವಿರ ಲೀಟರ್ ನಂದಿನಿ ಸಮೃದ್ಧಿ ಹಾಲು ಮಾರಾಟ ಮಾಡಲಾಗುತ್ತಿದೆ. ತಾಂತ್ರಿಕ ಕಾರಣಗಳಿಂದ ನಗರದ ಕೆಲವು ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ಸಮಸ್ಯೆ ಎದುರಾಗಿದೆ. ಗ್ರಾಹಕರ ಬೇಡಿಕೆಗೆ ತಕ್ಕಂತೆ ಸಮೃದ್ಧಿ ಹಾಲನ್ನು ಪೂರೈಕೆ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಕೆಎಂಎಫ್ ಮೂಲಗಳು ತಿಳಿಸಿವೆ.

ರಾಜ್ಯದ ಇತರೆ ಹಾಲು ಒಕ್ಕೂಟಗಳಿಂದ (ಉತ್ತರ ಕರ್ನಾಟಕ ಸೇರಿದಂತೆ) ಪ್ರತಿದಿನ ಸುಮಾರು 56 ಸಾವಿರ ಲೀಟರ್‌ಗಳಷ್ಟು ಸಮೃದ್ಧಿ ಹಾಲು ಮಾರಾಟ ಮಾಡಲಾಗುತ್ತಿದೆ. ರಾಜ್ಯದಾದ್ಯಂತ ನಂದಿನಿ ಹಾಲು ಮತ್ತು ಮೊಸರಿನ ಮಾರಾಟವು ಸುಮಾರು 60 ಲಕ್ಷ ಲೀಟರ್ ಆಗಿದ್ದು, ಅದರಲ್ಲಿ ಸಮೃದ್ಧಿ ಹಾಲಿನ ಪಾಲು ಶೇಕಡ 1.6ರಷ್ಟು ಇದೆ ಎಂದು ತಿಳಿಸಲಾಗಿದೆ.

ಸಿಎಂಎನ್ ಫೌಂಡೇಶನ್ ಪ್ರಶಸ್ತಿ ಪ್ರದಾನ

ಸಿಎಂಎನ್ ಐಟಿ ಪ್ರಾರಂಭದ ಘೋಷಣೆ



ಬಿಐಟಿಎಸ್ ಪಿಲಾನಿಯ ಗ್ರೂಪ್ ವೈಸ್ ಚಾನ್ಸಲರ್ ಡಾ. ವಿ. ರಾಮಗೋಪಾಲ್ ರಾವ್ ಅವರಿಗೆ 2025ರ ಸಿಎಮ್‌ಎನ್ ಫೌಂಡೇಶನ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿಂತಿರುವವರು (ಎಡದಿಂದ ಬಲಕ್ಕೆ) ಸಿಎಮ್‌ಎನ್ ಫೌಂಡೇಶನ್ ಟ್ರಸ್ಟಿ ಸಿ.ಎನ್. ಶಶಿಕಿರಣ್, ಡಾ. ವಾಸುದೇವ್ ಕೆ. ಆತ್ರೆ, ಚಿತ್ರಕಲಾ ನಾಗರಾಜ್, ಪ್ರೊ. ಎಚ್.ಪಿ. ಖಿಂಚ, ಕೆ.ಎನ್. ಬಾಲಸುಬ್ರಹ್ಮಣ್ಯ ಮೂರ್ತಿ ಉಪಸ್ಥಿತರಿದ್ದರು.

ಬೆಂಗಳೂರು: ಸಿಎಂಎನ್ ಫೌಂಡೇಶನ್ ಟ್ರಸ್ಟ್ ತನ್ನ ನಿರಂತರ ಪ್ರಯತ್ನದ ಭಾಗವಾಗಿ ಶೈಕ್ಷಣಿಕ ಶಿಸ್ತಿನ ಬೆಳವಣಿಗೆಗೆ ಕೊಡುಗೆ ನೀಡಿದ ನಾಯಕರನ್ನು ಗುರುತಿಸುವ ಸಲುವಾಗಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಬಿಟ್ಸ್ ಪಿಲಾನಿಯ ಉಪಕುಲಪತಿ ಮತ್ತು ಮಾಜಿ ಐಐಟಿ ದೆಹಲಿ ನಿರ್ದೇಶಕ ಡಾ. ವಿ. ರಾಮಗೋಪಾಲ್ ರಾವ್ ಅವರಿಗೆ ಸಿಎಂಎನ್ ಫೌಂಡೇಶನ್ ಟ್ರಸ್ಟ್ 2025ರ 'ಸಿಎಂಎನ್ ಫೌಂಡೇಶನ್ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ನಗರದ ರಾಡಿಸನ್ ಬ್ಲೂ ಏಟ್ರಿಯಾ ಹೋಟೆಲ್‌ನಲ್ಲಿ ಅ.6 ರಂದು ನಡೆದ ಅದ್ದೂರಿ ಸಮಾರಂಭದಲ್ಲಿ ಅಕಾಡೆಮಿಕ್ ವಲಯದ ಗಣ್ಯರು, ಕೈಗಾರಿಕಾ ಕ್ಷೇತ್ರದ ಪ್ರತಿನಿಧಿಗಳು, ಹಿರಿಯ ಅಧ್ಯಾಪಕರು, ಪ್ರಾಂಶುಪಾಲರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ. ವಿ. ರಾಮಗೋಪಾಲ್ ರಾವ್ ಅವರ ವಿಶಿಷ್ಟ ಸಾಧನೆಗಳನ್ನು ಗೌರವಿಸುವ ಮೂಲಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಈ ಸಂದರ್ಭದಲ್ಲಿ ಡಾ. ರಾವ್ ಅವರು ಸಮಾಜ ಮತ್ತು ದೇಶದ ಅಗತ್ಯಗಳಿಗೆ ಅನುಗುಣವಾದ ಸಂಶೋಧನಾ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಅಗತ್ಯದ ಬಗ್ಗೆ ಒತ್ತಿ ಹೇಳಿದರು.

ಕೆಲ ಉತ್ಸಾಹಿ ವಿದ್ಯಾರ್ಥಿಗಳು ಜೆನ್ ಎಐ ಮತ್ತು ಚಾಟ್‌ಜಿಪಿಟಿ ಬಳಕೆ ಕುರಿತು ಕೇಳಿದ ಪ್ರಶ್ನೆಗಳಿಗೆ ಅವರು ಸೂಕ್ತ ಉತ್ತರ ನೀಡಿದರು. ಅವರ ಅಕಾಡೆಮಿಕ್ ಜ್ಞಾನದಿಂದ ಪ್ರೇರಿತವಾದ ಮಾತುಗಳಿಂದ ಪ್ರೇಕ್ಷಕರು, ವಿದ್ಯಾರ್ಥಿಗಳು ಉತ್ಸಾಹಿತರಾದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪದ್ಮವಿಭೂಷಣ ಡಾ. ವಾಸುದೇವ್ ಕೆ. ಆತ್ರೆ ಹಾಗೂ ಆ ಕ್ಷಣದ ವ್ಯಕ್ತಿ ಡಾ. ವಿ. ರಾಮಗೋಪಾಲ್ ರಾವ್ ಅವರು ತಮ್ಮ ಅಮೂಲ್ಯ ವಿಚಾರಗಳನ್ನು ಹಂಚಿಕೊಂಡರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮಾಜಿ ಕುಲಪತಿ ಡಾ. ಎಚ್. ಪಿ. ಖಿಂಚಾ ಅವರ ನೇತೃತ್ವದ ಶೋಧ-ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ 'ಸಿಎಂಎನ್ ಫೌಂಡೇಶನ್ ಪ್ರಶಸ್ತಿ' ಪುರಸ್ಕೃತರನ್ನು ಆಯ್ಕೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಪರಸ್ಪರ ಸಂಪರ್ಕ ಸಾಧಿಸಿ ಸಂಭ್ರಮಿಸಿದರು.

'ಎಲ್ಲರಿಗೂ ಶಿಕ್ಷಣ'ದ ಕನಸು

ತಿರುಪತಿ ಎಜುಕೇಶನ್ ಸೊಸೈಟಿಯ ಅಧ್ಯಕ್ಷೆ ಶ್ರೀಮತಿ ಚಿತ್ರಕಲಾ ನಾಗರಾಜ್ ಅವರು ಮಾತನಾಡಿ, ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾರ್ಯಕ್ರಮಗಳಿಗೆ ಮೀಸಲಾಗಿರುವ ಸಿಎಂಎನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಭವ್ಯ ಪ್ರಾರಂಭವನ್ನು ಈ ವೇಳೆ ಘೋಷಿಸಿದರು. ಈ ಸಂಸ್ಥೆಯು ಸಿ. ಎಂ. ನಾಗರಾಜ್ ಅವರ 'ಎಲ್ಲರಿಗೂ ಶಿಕ್ಷಣ' ಎಂಬ ಕನಸನ್ನು ನನಸಾಗಿಸುವತ್ತ ಮುಂದುವರಿಸುತ್ತಿದೆ. 2026–27ನೇ ಶೈಕ್ಷಣಿಕ ವರ್ಷದಿಂದ, ಸಂಬಂಧಿತ ನಿಯಂತ್ರಣ ಪ್ರಾಧಿಕಾರಗಳಿಂದ ಅನುಮೋದನೆ ದೊರೆತ ನಂತರ ಸಂಸ್ಥೆ ತನ್ನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಸಿದ್ಧವಾಗಿದೆ ಎಂದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

‘ಐ.ಆರ್.’: ವೈದ್ಯವಿಜ್ಞಾನದ ಬೆರಗು

• ಎಸ್.ಎನ್.ಹೆಗಡೆ

ಹಿಂದೆಲ್ಲ ಯಾರಾದರೂ ಪಾರ್ಶ್ವವಾಯುಪೀಡಿತರಾದರೆ ಮುಂದೆ ಅವರು ಸಾಯುವವರೆಗೆ ಅದರ ಪರಿಣಾಮಗಳನ್ನು ಅನುಭವಿಸಬೇಕಾಗುತ್ತಿತ್ತು. ಕೆಲವರಂತೂ ಹತ್ತು ಹದಿನೈದು ವರ್ಷಗಳವರೆಗೆ ಹಾಸಿಗೆಯಲ್ಲಿಯೇ ಮಲಗಿ ಜೀವನವನ್ನು ಕಳೆಯಬೇಕಾಗುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ರೋಗಪೀಡಿತರಾಗಿ ಐದೂವರೆ ಗಂಟೆಯ ಒಳಗೆ ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆಯಲು ಪ್ರಾರಂಭಿಸಿದರೆ ವಾರ ಕಳೆಯುವಷ್ಟರಲ್ಲಿ ಚೇತರಿಸಿಕೊಂಡು ಎಂದಿನಂತೆ ತಮ್ಮ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುವಂತೆ ಮಾಡುವಷ್ಟು ವೈದ್ಯವಿಜ್ಞಾನ ಇಂದು ಮುಂದುವರಿದಿದೆ. ಇದಕ್ಕೆ ಬಳಸುವ ವಿಧಾನವೇ ‘ಪಾರಿಹಾರಿಕ ವಿಕಿರಣವಿಜ್ಞಾನ’ ಅಥವಾ ‘ಇಂಟರ್‌ವೆನ್ಷನಲ್ ರೇಡಿಯಾಲಜಿ’ ಅಥವಾ ‘ಐ.ಆರ್.’. ಇದೊಂದು ವೈದ್ಯಕೀಯ ವಿಶೇಷ ತಂತ್ರಜ್ಞಾನ. ಶರೀರದ ಒಳಭಾಗದ ಅಂಗಗಳನ್ನು ಹೊರಭಾಗದಿಂದಲೇ ಚಿತ್ರೀಕರಣ ಮಾಡಿ ಒಳಭಾಗದಲ್ಲಿ ಉಂಟಾಗುವ ಅಂಗಗಳ ನ್ಯೂನತೆ ಅಥವಾ ಆಂತರಿಕ ಬದಲಾವಣೆಗಳನ್ನು ಕಂಡುಹಿಡಿದು ಚಿಕಿತ್ಸೆಯನ್ನು ನೀಡಲಾಗುತ್ತದೆ.

ಹೀಗೆಂದು ಇದು ಬಹಳ ಹೊಸ ತಂತ್ರವೇನೂ ಅಲ್ಲ. 1970-80ರ ದಶಕದಲ್ಲಿ ಕೆಲವು ಹೃದ್ರೋಗ ಚಿಕಿತ್ಸೆಗೆ ಈ ವಿಧಾನವನ್ನು ಅನುಸರಿಸಲಾಗುತ್ತಿತ್ತು. ಈಗ ಈ ತಂತ್ರದಲ್ಲಿ ಇತ್ತೀಚೆಗೆ ಅಭಿವೃದ್ಧಿಗೊಳಿಸಿದ ‘ಕ್ಷ-ಕಿರಣ ಪ್ರತಿದೀಪ್ತಿದರ್ಶಕ’ (ಎಕ್ಸ್-ರೇ ಫ್ಲೋರೋಸ್ಕೋಪಿ), ಕಂಪ್ಯೂಟೆಡ್ ಟೊಮೊಗ್ರಫಿ (ಸಿಟಿ), ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್ (ಎಂಆರ್‌ಐ) ಅಥವಾ ಅಲ್ಟ್ರಾ ಸೌಂಡ್‌ನಂತಹ ಹೊಸದಾಗಿ ಆವಿಷ್ಕರಣಗೊಂಡಿರುವ ವೈದ್ಯಕೀಯ ಚಿತ್ರೀಕರಣದ ಉಪಕರಣಗಳನ್ನ ರೋಗಪತ್ತೆ ಹಾಗೂ ಚಿಕಿತ್ಸೆಗಳಿಗೆ ಬಳಸಿಕೊಳ್ಳಲಾಗುತ್ತದೆ. ಪಾರ್ಶ್ವವಾಯು, ಹೃದಯ ಸಂಬಂಧಿತ ಹಲವು ಕಾಯಿಲೆಗಳು, ಕೆಲವು ಬಗೆಯ ಕಾನ್ಸರ್‌ಗಳನ್ನು ಈ ಐ.ಆರ್. ವಿಧಾನದಿಂದ ಸುಲಭವಾಗಿ ಪತ್ತೆ ಮಾಡಬಹುದು. ಈ ತಂತ್ರದಲ್ಲಿ ರಕ್ತನಾಳ ಅಥವಾ ಇತರ ನಾಳದಂತಹ ಟೊಳ್ಳಾದ ರಚನೆಗೆ ಇಮೇಜಿಂಗ್ ಉಪಕರಣವೊಂದನ್ನು ಚುಚ್ಚಲಾಗುತ್ತದೆ. ಇದರಿಂದ ವಿವಿಧ ಅಂಗ,



ಅಂಗಾಂಶ, ಜೀವಕೋಶ ಅಥವಾ ಜೀವಕೋಶದ ಭಾಗಗಳ ಚಿತ್ರೀಕರಣ ಸಾಧ್ಯವಾಗುತ್ತದೆ. ಆ ಚಿತ್ರಗಳ ವಿಶ್ಲೇಷಣೆಯ ಮೂಲಕ ರೋಗವನ್ನು ಪತ್ತೆ ಮಾಡಲಾಗುತ್ತದೆ. ಸಾಮಾನ್ಯ ವಿಧಾನಗಳ ಮೂಲಕ ಚಿಕಿತ್ಸೆ ನೀಡಲು ಸಾಧ್ಯವಾಗದ ರೋಗಗಳನ್ನು ‘ಐ.ಆರ್.’ ತಂತ್ರಗಳ ಮೂಲಕ ಪತ್ತೆ ಹಚ್ಚಿ ಚಿಕಿತ್ಸೆಯನ್ನು ನೀಡಬಹುದು. ಐ.ಆರ್. ನೇರವಾದ ಚಿಕಿತ್ಸೆಯನ್ನು ಒದಗಿಸುತ್ತದೆ. ತೂರುನಳಿಕೆಯ ಮೂಲಕ ಔಷಧಗಳ ಸೇಚನ, ವೈದ್ಯಕೀಯ ಸಾಧನಗಳ ಜೋಡಣೆ (ಉದಾ: ಸ್ಟೆಂಟ್ ಹಾಕುವುದು), ಅತ್ಯಂತ ಚಿಕ್ಕದಾದ ಭಾಗಗಳಿಗೆ ಚಿಕಿತ್ಸೆ (ಉದಾ: ಆಂಜಿಯೋಪ್ಲಾಸ್ಟಿ)- ಇಂಥ ಕ್ರಿಯೆಗಳೆಲ್ಲವನ್ನೂ ಐ.ಆರ್. ಸಾಧ್ಯವಾಗಿಸಿದೆ.

ಐ.ಆರ್.ತಂತ್ರದ ಪ್ರಮುಖ ಅಂಶಗಳು ಹೀಗಿವೆ: ಇದರಿಂದ ಆಗುವ ಅಡ್ಡಪರಿಣಾಮಗಳು ಕಡಿಮೆ; ಅಂದರೆ ಇದು ಶಸ್ತ್ರಚಿಕಿತ್ಸೆಯೇ ಇಲ್ಲದೆ, ಕಡಿಮೆ ನೋವು, ಕಡಿಮೆ ಚೇತರಿಕೆ ಸಮಯ ಮತ್ತು ಸೋಂಕಿನ ಸಾಧ್ಯತೆಯ ಪ್ರಮಾಣ ಕಡಿಮೆ. ಇದು ಕಡಿಮೆ ಅಪಾಯದ ಚಿಕಿತ್ಸಾಕ್ರಮ. ತೊಂದರೆಗೆ ಒಳಗಾಗಿರುವ ಶರೀರದ ಭಾಗವನ್ನು ನಿಖರವಾದ ಚಿತ್ರೀಕರಣದಿಂದಾಗಿ ಗುರುತಿಸಲು ಸಾಧ್ಯವಾಗುವುದರಿಂದ ಪರಿಹಾರದ ಸಾಧ್ಯತೆಯೂ ಹೆಚ್ಚು. ಆರೋಗ್ಯಕರ ಅಂಗಾಂಶಗಳಿಗೂ ಈ ಚಿಕಿತ್ಸಾಕ್ರಮದಲ್ಲಿ ಹಾನಿಯಾಗದು. ಚಿಕಿತ್ಸೆಯ ನಂತರ ವೇಗವಾದ ಚೇತರಿಕೆಯೂ ಸಾಧ್ಯ; ಇತರ ಶಸ್ತ್ರಚಿಕಿತ್ಸೆಯ ವಿಧಾನಗಳಿಗೆ ಹೋಲಿಸಿದರೆ ಕಡಿಮೆ ಅಪಾಯ, ಕಡಿಮೆ ತೊಡಕುಗಳು. ಚಿಕಿತ್ಸೆಯ ನಂತರದಲ್ಲಿ ರೋಗಿಯ ಜೀವನಮಟ್ಟದಲ್ಲಿಯೂ ಗಣನೀಯ ವ್ಯತ್ಯಾಸಗಳಾಗುವುದಿಲ್ಲ.

ಪಾರ್ಶ್ವವಾಯು, ಹೃದಯ ಸಂಬಂಧಿತ ಹಲವು ಕಾಯಿಲೆಗಳು, ಕೆಲವು ಬಗೆಯ ಕಾನ್ಸರ್‌ಗಳನ್ನು ಐ.ಆರ್. ವಿಧಾನದಿಂದ ಸುಲಭವಾಗಿ ಪತ್ತೆ ಮಾಡಬಹುದು. ಈ ತಂತ್ರದಲ್ಲಿ ರಕ್ತನಾಳ ಅಥವಾ ಇತರ ನಾಳದಂತಹ ಟೊಳ್ಳಾದ ರಚನೆಗೆ ಇಮೇಜಿಂಗ್ ಉಪಕರಣವೊಂದನ್ನು ಚುಚ್ಚಲಾಗುತ್ತದೆ. ಇದರಿಂದ ವಿವಿಧ ಅಂಗ, ಅಂಗಾಂಶ, ಜೀವಕೋಶ ಅಥವಾ ಜೀವಕೋಶದ ಭಾಗಗಳನ್ನು ಚಿತ್ರೀಕರಿಸಲಾಗುತ್ತದೆ. ಆ ಚಿತ್ರಗಳ ವಿಶ್ಲೇಷಣೆಯ ಮೂಲಕ ರೋಗವನ್ನು ಪತ್ತೆ ಮಾಡಲಾಗುತ್ತದೆ.

ಮೂಲವಿಧಾನ

ಇದು ಅಪಧಮನಿಗಳು ಮತ್ತು ಅಭಿಧಮನಿಗಳಿಗೆ ಸಂಬಂಧಿಸಿದ ರೋಗಗಳ ಚಿಕಿತ್ಸೆಗೆ ಹೆಚ್ಚು ಪ್ರಯೋಜನಕಾರಿ. ಉದಾಹರಣೆಗೆ ಆಂಜಿಯೊಗ್ರಾಮ್; ಅಸಹಜ ರಕ್ತನಾಳ ಅಥವಾ ನಾಳಗಳಲ್ಲಿ ರಕ್ತದ ಹೆಪ್ಪುಗಟ್ಟುವಿಕೆಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಯನ್ನು ನೀಡಲು ಇದು ನೆರವಾಗುತ್ತದೆ. ಸಾಮಾನ್ಯವಾಗಿ ಮಿದುಳು, ಶರೀರದ ವಿವಿಧ ಭಾಗಗಳಲ್ಲಿ ನಾಳೀಯ ವಿರೂಪಗಳನ್ನು, ಕಿಬ್ಬೊಟ್ಟೆಯ ನಾಳೀಯ (ವೆಸೆಲ್ಸ್‌ನಲ್ಲಿ) ಬದಲಾವಣೆಗಳನ್ನು ಗುರುತಿಸಲು ಬಳಸಲಾಗುತ್ತದೆ. ಕಿರಿದಾದ ಅಥವಾ ರಕ್ತಸಂಚಾರಕ್ಕೆ ತೊಂದರೆ ಒಡ್ಡುವ ರಕ್ತನಾಳಗಳಲ್ಲಿ ರಕ್ತಸಂಚಾರಕ್ಕೆ ಅವಕಾಶ ಕಲ್ಪಿಸಲು, ದೇಹದ ಬೇರೆ ಬೇರೆ ಅಂಗಗಳಿಗೆ ರಕ್ತಸಂಚಾರವನ್ನು ಸುಧಾರಿಸಲು



ಇದು ಉಪಯುಕ್ತವಾಗುತ್ತದೆ. ಕ್ಯಾರೋಟಿಡ್ ಸ್ಟೆನೋಸಿಸ್, ಬಾಹ್ಯ ಅಪಧಮನಿಯ ಕಾಯಿಲೆ, ಮೂತ್ರಪಿಂಡ – ಕಿಬ್ಬೊಟ್ಟೆಯ ಅಪಧಮನಿ ಸ್ಟೆನೋಸಿಸ್, ಮುಂತಾದವುಗಳ ಚಿಕಿತ್ಸೆಗೆ ಈ ವಿಧಾನ ವರದಾನವಾಗಬಲ್ಲದು. ಶರೀರದ ಒಳಭಾಗದಲ್ಲಿ ಯಾವುದೇ ಕಾರಣದಿಂದ ಉಂಟಾಗುವ ಅಸಹಜ ರಕ್ತಸ್ರಾವವನ್ನು ತಡೆಯಲು ಇದು ಉಪಯುಕ್ತವಾಗಿದೆ (ಎಂಬೊಲೈಸೇಶನ್).

ನರವಿರೂಪಗಳು, ನಾಳೀಯ ವಿರೂಪಗಳು, ಜಠರಗರುಳಿನ / ಶ್ವಾಸಕೋಶದ / ಜನನೇಂದ್ರಿಯ / ಮೂಗಿನ ರಕ್ತಸ್ರಾವ, ಗರ್ಭಾಶಯದ ನಾರುಗಳು, ವೆರಿಕೋಸ್ ಅಭಿಧಮನಿ, ಪ್ರಾಸ್ಟೇಟ್ ಅಪಧಮನಿ ರಕ್ತಸ್ರಾವ, ಅತಿನಾಳೀಯ ಗೆಡ್ಡೆಗಳ ಪೂರ್ವಶಸ್ತ್ರ ಚಿಕಿತ್ಸೆ ಮುಂತಾದವುಗಳನ್ನು ಶಸ್ತ್ರಚಿಕಿತ್ಸೆ ಇಲ್ಲದೆ ಮಾಡಬಹುದು. ರಕ್ತನಾಳಗಳು ಅಥವಾ ಅಪಧಮನಿಗಳಿಂದ ರಕ್ತ ಹೆಪ್ಪುಗಟ್ಟುವಿಕೆಯನ್ನು ತೂರುನಳಿಕೆಯ ಮೂಲಕ (ಥ್ರಾಂಬೆಕ್ಟಮಿ) ತೆಗೆಯಬಹುದು.

ಯಕೃತ್ತಿನ ಕ್ಯಾನ್ಸರ್, ಮೂತ್ರಪಿಂಡದ ಗೆಡ್ಡೆಗಳು ಮುಂತಾದವುಗಳಿಗೆ ಚಿಕಿತ್ಸೆ ನೀಡುವುದರ ಮೂಲಕ ಈ ರೋಗಗಳಿಗೆ ತುತ್ತಾದವರ ಬದುಕುಳಿಯುವಿಕೆಯ ಸಾಧ್ಯತೆ ಹೆಚ್ಚಿಸಬಹುದು. ಅಸಹಜವಾಗಿ ಹಿಗ್ಗಿ ಉಬ್ಬಿದ ರಕ್ತನಾಳಗಳಿಗೆ (ಅಬ್ಲೇಷನ್) ಚಿಕಿತ್ಸೆ ನೀಡಬಹುದು. ಐ.ಆರ್. ತಂತ್ರವು ನಾಳೀಯವಲ್ಲದ ರಕ್ತನಾಳಗಳ ಹೊರಗಿನ ಅಂಗಗಳ ನ್ಯೂನತೆಗಳನ್ನು ಕೂಡ ಗುರಿಯಾಗಿರಿಸಿಕೊಳ್ಳುತ್ತದೆ. ಇದರಿಂದ ಇಮೇಜ್-ಗೈಡೆಡ್ ಬಯಾಪ್ಸಿ-ಯಕೃತ್ತು, ಶ್ವಾಸಕೋಶ, ವಪೆ, ಥೈರಾಯ್ಡ್, ದುಗ್ಧರಸಗ್ರಂಥಿಗಳ ಸೋಂಕಿತ ಅಂಗಾಂಶಗಳ ಮಾದರಿಯನ್ನು ಶಸ್ತ್ರಚಿಕಿತ್ಸೆ ಇಲ್ಲದೆ ಸಂಗ್ರಹಿಸಲು ಸಾಧ್ಯವಾಗುತ್ತದೆ. ಶರೀರದ ಒಳಭಾಗದ ಹುಣ್ಣು ಅಥವಾ ಅಸಹಜ ದ್ರವಸಂಗ್ರಹಗಳನ್ನು ಹೊರಹಾಕಲು ಬಳಕೆಯಾಗುತ್ತದೆ. ಯಕೃತ್ತು, ಮೂಳೆ, ಥೈರಾಯ್ಡ್, ಮೂತ್ರಪಿಂಡ, ಶ್ವಾಸಕೋಶದ ಗೆಡ್ಡೆಗಳು ಮುಂತಾದ ಅಂಗಗಳಲ್ಲಿ ಉಂಟಾಗುವ ಗೆಡ್ಡೆಗಳನ್ನು ಹೊರಹಾಕಲು (ಅಬ್ಲೇಷನ್) ಬಳಸಲಾಗುತ್ತದೆ. ಸ್ಥಳೀಯ ಅರವಳಿಕೆಯ ಅಡಿಯಲ್ಲಿ ದೀರ್ಘಕಾಲದ ನೋವುಗಳ ಉಪಶಮನಗೊಳಿಸಬಹುದು.

ರೋಗಿಗಳಿಗೆ ಐಆರ್‌ಅನ್ನು ಏಕೆ ಅಳವಡಿಸಬೇಕು?: ಸಣ್ಣ ಛೇದನಗಳು, ಕಡಿಮೆ ಗುರುತುಗಳು, ಕಡಿಮೆ ಚೇತರಿಕೆ ಸಮಯ, ಕಡಿಮೆ ಆಸ್ಪತ್ರೆ ವಾಸ್ತವ್ಯ, ಕಡಿಮೆ ಅಪಾಯ, ಕಡಿಮೆ ಅರವಳಿಕೆಯ ಬಳಕೆ, ಕಡಿಮೆ ಖರ್ಚು ಹಾಗೂ ಸಂಪನ್ಮೂಲಗಳು ಮುಂತಾದವು ಐ.ಆರ್. ತಂತ್ರದ ಅನುಕೂಲಗಳು. ರೋಗಿಗಳಲ್ಲಿ ರೋಗತಾಳಿಕೆಯ ಗುಣ, ನಿಖರವಾದ ಚಿಕಿತ್ಸೆ ಹಾಗೂ ಸುಲಭದಲ್ಲಿ ಚಿಕಿತ್ಸೆಯ ಪರಿಣಾಮದ ಕುರಿತ ಅರಿವು ಮುಂತಾದವು ಕೂಡ ರೋಗಿಗೆ ಉಪಯುಕ್ತವಾಗುವಂಥ ಅಂಶಗಳು. ಚಿಕಿತ್ಸೆ ಪರಿಣಾಮಕಾರಿಯಾಗಿದೆಯೇ ಇಲ್ಲವೇ ಎಂದು ಸುಲಭವಾಗಿ ತಿಳಿದುಕೊಳ್ಳಬಹುದು. ❖

ಕೋಶವಿದಳನದಲ್ಲಿ ಹೊಸ ಹೊಳಹು

• ಕ್ಷಮಾ ವಿ. ಭಾನುಪ್ರಕಾಶ್

ಜೈವಿಕ ತಂತ್ರಜ್ಞಾನ ಮತ್ತು ತಳಿವಿಜ್ಞಾನದ ಭಾಗವಾಗಿ, ಎರಡು ಪ್ರಕ್ರಿಯೆಗಳನ್ನು ಸೇರಿಸಿ ಒಂದೇ ಪ್ರಕ್ರಿಯೆಯನ್ನಾಗಿ ಮಾಡುವ ಹೊಸದೊಂದು ಸಾಧ್ಯತೆಯನ್ನು ಒರೆಗಾನ್‌ನ ಸಂಶೋಧಕರು ಜಗದ ಮುಂದಿರಿಸಿದ್ದಾರೆ; ಅದೇ ‘ಮೈಟೋಮಿಯಾಸಿಸ್’!

ಶಾಲೆಯಲ್ಲಿ ಜೀವವಿಜ್ಞಾನದ ಪಾಠವನ್ನು ಕಲಿತ ಎಲ್ಲರಿಗೂ ‘ಮೈಟಾಸಿಸ್’ ಮತ್ತು ‘ಮಿಯಾಸಿಸ್’ ಎಂಬ ಎರಡು ಬಗೆಯ ಕೋಶವಿಭಜನೆಯ ಬಗ್ಗೆ ಕೊಂಚವಾದರೂ ಗೊತ್ತೇ ಇರುತ್ತದಲ್ಲವೇ? ‘ಮೈಟಾಸಿಸ್’ ಎಂಬುದು ಪ್ರತಿ ಜೀವಕೋಶವೂ ಎರಡಾಗಿ ವಿಭಜನೆಗೊಳ್ಳುವ ಪ್ರಕ್ರಿಯೆ; ಇಲ್ಲಿ ಪ್ರತಿ ಹೊಸ ಕೋಶದಲ್ಲೂ ವರ್ಣತಂತುಗಳ ಸಂಖ್ಯೆ ಸ್ಥಿರವಾಗಿರುತ್ತದೆ. ಈ ಪ್ರಕ್ರಿಯೆಯ ಮೂಲಕವೇ ಎಲ್ಲರ ಎತ್ತರ, ದೇಹತೂಕ, ಸುತ್ತಳತೆಯಲ್ಲಿ ಹೆಚ್ಚಳವಾಗುವುದು, ಹಳತಾದ ಅಥವಾ ಸತ್ತಕೋಶಗಳ ಬದಲಿಗೆ ಹೊಸ ಕೋಶ ಹುಟ್ಟುವುದು. ಇನ್ನು ‘ಮಿಯಾಸಿಸ್’ ಎಂಬ ಕೋಶವಿಭಜನೆಯಲ್ಲಿ, ಕೇವಲ ಲೈಂಗಿಕ ಪುನರುತ್ಪತ್ತಿಗಾಗಿ ಅಂಡಕೋಶ ಹಾಗೂ ವೀರ್ಯಾಣುವಿನ ಸೃಷ್ಟಿಯಾಗುತ್ತದೆ. ಈ ಎರಡೂ ಪ್ರಕ್ರಿಯೆಗಳ ಸಮ್ಮಿಲನವೇ ಮೈಟೋಮಿಯಾಸಿಸ್! ಒರೆಗಾನ್ ವಿಜ್ಞಾನ ವಿಶ್ವವಿದ್ಯಾಲಯದ ಸಂಶೋಧಕರು ಇಂತಹ ಪ್ರಕ್ರಿಯೆಯನ್ನು ಜಗತ್ತಿಗೆ ಪರಿಚಯಿಸುತ್ತಾ ಚರ್ಮದ ಜೀವಕೋಶಗಳಿಂದ ಅಂಡಾಣುವಿನಂತಹ ಜೀವಕೋಶವನ್ನು ಸೃಷ್ಟಿಸಿದ್ದಾರೆ! ಇದು ಅಂಡಾಣುಗಳಿಗೆ ಸಂಬಂಧಿಸಿದಂತೆ ಇರುವ ಅನೇಕ ಸಂತಾನೋತ್ಪತ್ತಿಯ ಸವಾಲುಗಳಿಗೆ ಸೂಕ್ತ ಜವಾಬು ಎನ್ನುತ್ತಾರೆ ವಿಜ್ಞಾನಿಗಳು.

ಇಂತಹ ಜೈವಿಕ ಪ್ರಕ್ರಿಯೆಯನ್ನು ಸಾಧ್ಯವಾಗಿಸೋಕೆ ಸಂಶೋಧಕರು ಪ್ರಯೋಗದ ಪ್ರತಿ ಹಂತದಲ್ಲೂ ಅನೇಕ ತಂತ್ರಜ್ಞಾನಗಳ ಬಳಕೆ ಮಾಡಿರುತ್ತಾರೆ; ಉದಾಹರಣೆಗೆ, ಎಸ್.ಸಿ.ಎನ್.ಟಿ. ತಂತ್ರಜ್ಞಾನ. ‘ಸೊಮಾಟಿಕ್ ಸೆಲ್ ನ್ಯೂಕ್ಲಿಯರ್ ಟ್ರಾನ್ಸ್‌ಫರ್’ ಎಂಬ ಈ ತಂತ್ರಜ್ಞಾನದ ಮೂಲಕ ಸಾಮಾನ್ಯ ಜೀವಕೋಶಗಳಿಂದ ಕೋಶಕೇಂದ್ರವನ್ನು ತೆಗೆದು, ಅಂಡಾಣುವಿಗೆ ವರ್ಗಾಯಿಸುವುದು; ಇಂತಹ ಪ್ರಕ್ರಿಯೆಯನ್ನು ಮುಂಚೆ ಕೂಡ ಬಳಸಲಾಗಿದೆ, ಡಾಲಿ ಎಂಬ ಜಗತ್ಪ್ರಸಿದ್ಧ ಕುರಿಯನ್ನು ಸೃಷ್ಟಿಸುವ ಪ್ರಯೋಗದಲ್ಲಿ; ಅಂದರೆ, ಅಲೈಂಗಿಕ ಸಂತಾನೋತ್ಪತ್ತಿಯ ಮೂಲಕ ತದ್ರೂಪುಸೃಷ್ಟಿಯನ್ನು ಮಾಡಲಾದ ಸಂದರ್ಭದಲ್ಲಿ. ಆದರೆ ತಂತ್ರಜ್ಞಾನ ಒಂದೇ ಆದರೂ ಈ ಹೊಸ ಸಂಶೋಧನೆಯ ಫಲವಾದ ಮೈಟೋಮಿಯಾಸಿಸ್‌ನಲ್ಲಿನ ಫಲಿತಾಂಶ ವಿಭಿನ್ನ. ಇಲ್ಲಿ ಚರ್ಮದ ಜೀವಕೋಶದೊಳಗಿನ ನ್ಯೂಕ್ಲಿಯಸ್ ಅನ್ನು, ಕೋಶಕೇಂದ್ರ ತೆಗೆದ ಅಂದರೆ ಖಾಲಿಮಾಡಲಾದ ಅಂಡಾಣುವಿನೊಳಗೆ ಸೇರಿಸಲಾಗುತ್ತದೆ. ಫಲೀಕರಣ ಸಂಭವಿಸುವ ಮೊದಲು, ಸಂಶೋಧಕರು ‘ಮೈಟೊಮಿಯಾಸಿಸ್’ ನಡೆಯುವಂತೆ ರಾಸಾಯನಿಕವಾಗಿ ಪ್ರಚೋದಿಸುತ್ತಾರೆ. ಇದರಿಂದಾಗಿ ಪುನರ್ನಿರ್ಮಾಣಗೊಂಡ ಮೊಟ್ಟೆಯು, ಅದರ ಅರ್ಧದಷ್ಟು ವರ್ಣತಂತುಗಳನ್ನು ತ್ಯಜಿಸಿ, ನೈಸರ್ಗಿಕ ಮೊಟ್ಟೆಯಂತಾಗುತ್ತದೆ; ಅಂದರೆ ಅರ್ಧ ಪ್ರಮಾಣದ ವರ್ಣತಂತುಗಳನ್ನು ಹೊಂದಿರುತ್ತದೆ. ಇದರ ಫಲಿತಾಂಶವೇ, ಪ್ರಯೋಗಾಲಯದಲ್ಲಿ ಸೃಜಿಸಲಾದ ‘ಹ್ಯಾಪ್ಲಾಯ್ಡ್ ಮೊಟ್ಟೆ’! ನಂತರ ಇದನ್ನು ತಂದೆಯ ಅಥವಾ ಡೋನರ್‌ನ ವೀರ್ಯದೊಂದಿಗೆ ಸೇರಿಸಿ ಫಲವತ್ತಾಗಿಸಬಹುದು. ಸಂತಾನೋತ್ಪತ್ತಿ ಸಮಸ್ಯೆಯಿಂದ ಬಳಲುತ್ತಿರುವ ದಂಪತಿಗಳು, ಈ ತಂತ್ರಜ್ಞಾನದಿಂದ, ತಮಗೆ ಆನುವಂಶಿಕವಾಗಿ ಸಂಬಂಧಿತ ಮಗುವನ್ನು ಪಡೆಯಲು ಸಾಧ್ಯವಾಗುತ್ತದೆ. ಜೀನ್ ಥೆರಪಿ ತಂತ್ರಜ್ಞಾನದಲ್ಲಿ ಪರಿಣತರಾದ ಸಂಶೋಧಕರು ನೂರಿಯಾ ಮಾರ್ಟಿ ಗುಟಾರೆಝ್, ಶೌಕ್ರಾಟ್ ಮಿತಾಲಿಪೋವ್, ಪೌಲಾ ಅಮಾಟೋರ ಮತ್ತವರ ತಂಡದ



ಮಹತ್ತರ ಕೊಡುಗೆಯಿದು; ಅನೇಕ ದಶಕಗಳಿಂದಲೂ ಕುತೂಹಲ ಕೆರಳಿಸಿದ್ದ ಈ ಸಂಶೋಧನೆಯು, ತನ್ನ ಧನಾತ್ಮಕ ಫಲಿತಾಂಶದಿಂದ ಪ್ರಯೋಗಾಲಯದಲ್ಲಿ ಅಂಡಾಣುಸೃಷ್ಟಿಯನ್ನು ಸಾಧ್ಯವಾಗಿಸಿದೆ.

ಇಲ್ಲಿ ಎಸ್.ಸಿ.ಎನ್.ಟಿ. ತಂತ್ರಜ್ಞಾನದ ಜೊತೆಗೆ, ‘ಮೈಕ್ರೋ-ಮ್ಯಾನಿಪುಲೇಟರ್ಗ’ಳನ್ನು ಬಳಸಲಾಗಿದೆ. ಕೋಶಕೇಂದ್ರವನ್ನು ತೆಗೆಯುವುದು, ಮತ್ತೊಂದು ಕೋಶದೊಳಗೆ ಇರಿಸುವುದು, ಬೇಡದ ಜೀನ್‌ಗಳನ್ನು ತೆಗೆದು ಮತ್ತೊಂದನ್ನು ಸೇರಿಸುವುದು - ಇಂತಹ ಸಂದರ್ಭಗಳಲ್ಲಿ ‘ಮೈಕ್ರೋಮ್ಯಾನಿಪುಲೇಟರ್’ಗಳ ಬಳಕೆ ಸಾಮಾನ್ಯ. ಇವು ರೋಬೋಟಿಕ್ ಸಾಧನಗಳಾಗಿದ್ದು, ಬರಿಗಣ್ಣಿಗೆ ಕಾಣದ ಜೀವಕೋಶಗಳನ್ನು ಸೂಕ್ಷ್ಮದರ್ಶಕವನ್ನೊಳಗೊಂಡ ಕಣ್ಣುಗಳಿಂದ ಗಮನಿಸಿ, ಸೂಕ್ಷ್ಮ ಕೈಗಳಿಂದ ಮಾರ್ಪಡಿಸುತ್ತದೆ. ಈ ಜೀವಕೋಶಗಳ ಬೆಳವಣಿಗೆಯನ್ನು ಹಂತಹಂತವಾಗಿ ವೀಕ್ಷಿಸಿ ಅರ್ಥೈಸಿಕೊಳ್ಳಲು , ‘ಟೈಮ್ ಲ್ಯಾಪ್ಸ್ ಮೈಕ್ರೋ ವಿಡಿಯೊಗ್ರಫಿ’ ತಂತ್ರಜ್ಞಾನವನ್ನೂ ಬಳಸಲಾಗುತ್ತದೆ. ಚರ್ಮದ ಕೋಶದೊಳಗಿನಿಂದ ಕೋಶಕೇಂದ್ರ (ನ್ಯೂಕ್ಲಿಯಸ್) ಹೊರತೆಗೆಯುವ ಮುನ್ನ ಮತ್ತು ನಂತರ, ಆ ಕೋಶಕೇಂದ್ರವನ್ನು ಖಾಲಿಮಾಡಿದ ಅಂಡಾಣುವೊಳಗೆ ಇರಿಸಿದ ನಂತರ, ಮೈಟೋಮಿಯಾಸಿಸ್ ಪ್ರಕ್ರಿಯೆ ಚಾಲೂ ಆಗುವ ಮುನ್ನ ಮತ್ತು ನಂತರದ ಕ್ಷಣಕ್ಷಣದ ಬದಲಾವಣೆಯನ್ನು ಇಲ್ಲಿ ವಿಶ್ಲೇಷಿಸಲು ಈ ತಂತ್ರಜ್ಞಾನ ಸಹಾಯಕ. ಸ್ಟೀರಿಯೋ ಝೂಮ್ ಸೂಕ್ಷ್ಮದರ್ಶಕಗಳು, ಪ್ರತಿಜೀವಕೋಶದ ಪ್ರತಿವರ್ಣತಂತುವಿನಲ್ಲಾಗುವ ಭೌತಿಕ ಬದಲಾವಣೆಗಳನ್ನು ಸ್ಪಷ್ಟವಾಗಿ ಗೋಚರಿಸುವಂತೆ ಮಾಡುತ್ತದೆ. ಪ್ರಯೋಗಾಲಯದಲ್ಲಿ ಮೈಟೋಮಿಯಾಸಿಸ್‌ನಿಂದ ಸೃಜಿಸಿದ ಅಂಡಾಣುವನ್ನು ಫಲವತ್ತಾಗಿಸಿದ ನಂತರ, ಭ್ರೂಣದ ಬೆಳವಣಿಗೆಯ ಎಲ್ಲಾ ಹಂತಗಳಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನು ಸ್ಟೀರಿಯೋ ಝೂಮ್ ಸೂಕ್ಷ್ಮದರ್ಶಕಗಳ ಮೂಲಕ ಮೂರು ಆಯಾಮಗಳಲ್ಲಿ ನೋಡಬಹುದು.

ಇಂತಹ ಪ್ರಯೋಗಗಳೇನು ಒಂದೆರಡು ಗಂಟೆಯಲ್ಲೋ, ದಿನಗಳಲ್ಲೋ ಮುಗಿದು ಬಿಡುತ್ತವೆಯೇ? ವಾರಗಳು, ತಿಂಗಳುಗಳು, ವರ್ಷಗಳೇ ಹಿಡಿದಾವು; ಅಲ್ಲಿಯವರೆಗೂ ಪ್ರಯೋಗದ ಭಾಗವಾಗಿರುವ ಜೀವಕೋಶಗಳು ಇದ್ದ ಹಾಗೇ ಇರಬೇಕಲ್ಲವೇ? ದ್ರವರೂಪದ ಸಾರಜನಕವನ್ನು ಬಳಸಲಾಗುವ ಶೀತಲೀಕರಣ ತಂತ್ರಜ್ಞಾನವನ್ನು, ಜೀವಕೋಶಗಳ ಯಥಾಸ್ಥಿತಿ ಕಾಪಾಡಲು ಉಪಯೋಗಿಸಲಾಗುತ್ತದೆ. ಆದರೆ, ಶೀತಲೀಕೃತ ಸ್ಥಿತಿಯಲ್ಲೇ ಇದ್ದರೆ, ಕೋಶವು ಬೆಳೆಯುವುದು ಹೇಗೆ? ಹಾಗಾಗಿ, ಈ ಪ್ರಯೋಗಕ್ಕೆ ಬೇಕಾದಂತಹ ತಾಪಮಾನ, ಆರ್ದ್ರತೆ, ಅನಿಲ ಸಾಂದ್ರತೆಯಂತಹ ಅಂಶಗಳನ್ನು ಸರಿದೂಗಿಸುವ ವಿಶೇಷ ‘ಇಂಕ್ಯುಬೇಟರ್‌ಗಳನ್ನು’ ವಿವಿಧ ಹಂತಗಳಲ್ಲಿ ಬಳಸಲಾಗುತ್ತದೆ. ಇಲ್ಲಿ ಲೈವ್ ಸೆಲ್ ಇಮೇಜಿಂಗ್ ವ್ಯವಸ್ಥೆ, ಸುಧಾರಿತ ತಾಪಮಾನ ನಿಯಂತ್ರಣ ವ್ಯವಸ್ಥೆ ಮತ್ತು ರಿಮೋಟ್ ಮಾನಿಟರಿಂಗ್ ತಂತ್ರಜ್ಞಾನ ಬಳಸಲಾಗುತ್ತದೆ; ಹೀಗೆ, ವಿಜ್ಞಾನದ ಅನೇಕ ಶಾಖೆಗಳ ಜ್ಞಾನದ, ಪ್ರಕ್ರಿಯೆಗಳ ಮತ್ತು ತಂತ್ರಜ್ಞಾನಗಳ ಸಮ್ಮಿಲನದ ಫಲಿತಾಂಶವಾಗಿ ಹೊಸ ಸಾಧ್ಯತೆಗಳು ಜಗತ್ತಿಗೆ ದಿನೇದಿನೇ ಅಚ್ಚರಿ, ಅನುಕೂಲ, ಭರವಸೆಗಳನ್ನು ನೀಡುತ್ತಿದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವರ್ಗ ಸಮೀಕರಣ

ಅಭ್ಯಾಸ 4..3

4) ಕೆಳಗೆ ಸೂಚಿಸಿರುವಂತಹ ಸನ್ನಿವೇಶವಿರಲು ಸಾಧ್ಯವೇ? ಹಾಗಿದ್ದರೆ ಅವರ ಈಗಿನ ವಯಸ್ಸುಗಳನ್ನು ನಿರ್ಧರಿಸಿ. ಇಬ್ಬರು ಸ್ನೇಹಿತರ ವಯಸ್ಸುಗಳ ಮೊತ್ತವು 20 ವರ್ಷಗಳಾಗಿವೆ. ನಾಲ್ಕು ವರ್ಷಗಳ ಹಿಂದೆ, ಅವರ ವಯಸ್ಸುಗಳ ಗುಣಲಬ್ಧವು 48 ವರ್ಷಗಳಾಗಿತ್ತು.

ಪರಿಹಾರ:– (...ಹಿಂದಿನ ಸಂಚಿಕೆಯಿಂದ)

ದ್ವಿತೀಯ ಸ್ನೇಹಿತನ ವಯಸ್ಸು $=(20-x-4)$ ವರ್ಷ

$= (x-4)(16-x)$

ಸಮಸ್ಯೆ ಪ್ರಕಾರ $(x-4)(16-x) = 48$

$16x - x^2 - 64 + 4x = 48$

$x^2 - 20x + 112 = 0$

ಇಲ್ಲಿ $a = 1$ $b = -20$ $c = 112$

$= b^2 - 4ac$

$= (-20)^2 - 4(1)112)$

$= 400 - 448 = -48$

ವರ್ಗ ಸಮೀಕರಣವು ವಾಸ್ತವ ಮೂಲಗಳನ್ನು ಹೊಂದಿಲ್ಲ ಸೂಚಿಸಿರುವಂತಹ ಸನ್ನಿವೇಶವಿರಲು ಸಾಧ್ಯವಿಲ್ಲ,

ಹಿಂದಿನ ಪ್ರಶ್ನೆಪತ್ರಿಕೆಯಿಂದ.......

ಮಾರ್ಚ್ 2025ರ ಪ್ರಶ್ನೆ ಪತ್ರಿಕೆಯಲ್ಲಿ ಬಂದ ಪ್ರಶ್ನೆಗಳು

1) ಈ ಕೆಳಗಿನವುಗಳಲ್ಲಿ ವರ್ಗಸಮೀಕರಣವು

(A) $x^3 - 6x$ (B) $p(x) = x^2 + 7x$

(C) $3x = 9$ (D) $x^2 + 3x + 4 = 0$

ಉತ್ತರ:– ಡಿ

2) ಈ ವರ್ಗಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ

ಉತ್ತರ:– 0 ಮತ್ತು 2

3) $x^2 + 8x - 12 = 0$ ಈ ವರ್ಗಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ

ಉತ್ತರ:–

$x^2 + 8x + 12 - 0$

$x^2 + 6x + 2x + 12 - 0$

$x(x+6) + 2(x+6) = 0$

$(x+6)(x+2) = 0$

$x + 6 = 0$ ಅಥವಾ $x + 2 = 0$

$\boxed{x = -6}$ ಅಥವಾ $\boxed{x = -2}$

4. $x^2 + 4x + 5 = 0$ ಈ ವರ್ಗಸಮೀಕರಣದ ಶೋಧಕವನ್ನು ಕಂಡುಹಿಡಿಯಿರಿ ಮತ್ತು ಮೂಲಗಳ ಸ್ವಭಾವವನ್ನು ಬರೆಯಿರಿ

ಉತ್ತರ:–

$x^2 + 4x + 5 = 0$

$ax^2 + bx + c = 0$

$a = 1, \quad b = 4, \quad c = 5$

ಶೋಧಕ $= b^2 - 4ac$

$= (4)^2 - 4(1)(5)$

$= 16 - 20$

$= -4 \quad < 0$

ಮೂಲಗಳ ಸ್ವಭಾವ : ವಾಸ್ತವ ಮೂಲಗಳನ್ನು ಹೊಂದಿರುವುದಿಲ್ಲ.

ಅಧ್ಯಾಯ–5 ಸಮಾಂತರ ಶ್ರೇಢಿ

ಗಮನಿಸಿ:– ಈ ಭಾಗದಲ್ಲಿ ಬರುವ ಸಮಸ್ಯೆಗಳನ್ನು ಬಿಡಿಸುವ ಮೊದಲು ಈ ಕೆಳಗಿನ ಅಂಶಗಳನ್ನು ತಿಳಿದುಕೊಂಡಿರಿ

* ನಿರ್ದಿಷ್ಟ ನಿಯಮಕ್ಕೆ ಅನುಸಾರವಾಗಿ ವ್ಯವಸ್ಥಿತಗೊಳಿಸಿರುವ ಸಂಖ್ಯೆಗಳ ಗಣವೇ ಶ್ರೇಢಿಯಾಗಿದೆ
* ಶ್ರೇಢಿಯ ಯಾವುದೇ ಒಂದು ಪದ ಮತ್ತು ಅದರ ಹಿಂದಿನ ಪದಗಳ ನಡುವಿನ ವ್ಯತ್ಯಾಸವು ಸ್ಥಿರಾಂಕವಾಗಿದ್ದರೆ ಆ ಶ್ರೇಢಿಯು ಸಮಾಂತರ ಶ್ರೇಢಿಯಾಗಿರುತ್ತದೆ.
* ಸಮಾಂತರ ಶ್ರೇಢಿಯ ಒಂದು ಪದ ಮತ್ತು ಅದರ ಹಿಂದಿನ ಪದಗಳ ನಡುವಿನ ವ್ಯತ್ಯಾಸವು ಸ್ಥಿರಾಂಕವಾಗಿದ್ದು ಅದನ್ನು ಸಾಮಾನ್ಯ ವ್ಯತ್ಯಾಸ (c.d) ಎನ್ನುತ್ತಾರೆ ಮತ್ತು ಅದನ್ನು dಯಿಂದ ಸೂಚಿಸುತ್ತಾರೆ.
* ಸಮಾಂತರ ಶ್ರೇಢಿಯ nನೇ ಪದ $T_n = a + (n-1)d$ ಆಗಿರುತ್ತದೆ.
* ಸಮಾಂತರ ಶ್ರೇಢಿಯಲ್ಲಿನ ಒಂದು ಪದಕ್ಕೆ ಸಾಮಾನ್ಯ ವ್ಯತ್ಯಾಸ dಯನ್ನು ಕೂಡಿದಾಗ ಅದರ ಮುಂದಿನ ಪದ ದೊರೆಯುತ್ತದೆ

$T_{n+1} = T_n + d$

* ಸಮಾಂತರ ಶ್ರೇಢಿಯಲ್ಲಿನ ಒಂದು ಪದಕ್ಕೆ ಸಾಮಾನ್ಯ ವ್ಯತ್ಯಾಸ dಯನ್ನು ಕಳೆದಾಗ ಅದರ ಹಿಂದಿನ ಪದ ದೊರೆಯುತ್ತದೆ

$T_{n-1} = T_n - d$

* ಸಮಾಂತರ ಶ್ರೇಢಿಯ ಸಾಮಾನ್ಯರೂಪ

$a, a + d, a + 2d.....a + (n-1)d$

* ಸಮಾಂತರ ಶ್ರೇಢಿಯ nನೇ ಪದಗಳ ಮೊತ್ತ ಮೊದಲ ಮತ್ತು ಕೊನೆಯ ಪದಗಳ ಸರಾಸರಿಯು nನಷ್ಟು ಇರುತ್ತದೆ.
* ಸ್ವಾಭಾವಿಕ ಸಂಖ್ಯೆಗಳ ಮೊದಲ n ಪದಗಳ ಮೊತ್ತ ಇದನ್ನು $\sum n$ ಎಂದು ಸಹ ಸೂಚಿಸುತ್ತಾರೆ.

$$\therefore \sum n = \frac{n(n+1)}{2}$$

* ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ

$$S_n = \frac{n}{2}\left[2a + (n-1)d\right]$$

ಈ ವರ್ಷ ನಡೆದ (ಮಾರ್ಚ್– 2025) ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳನ್ನು ನೋಡೋಣ.

1) 5, 9, 13.......ಈ ಸಮಾಂತರ ಶ್ರೇಢಿಯ ಮೊದಲ 20 ಪದಗಳ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ

ಉತ್ತರ:–

$a = 5$

$d = 9 - 5 = 4$

$n = 20$

$$S_n = \frac{n}{2}[2a + (n-1)d]$$

$$S_{20} = \frac{20}{2}[2(5) + (20-1)4]$$

$= 10[10 + 76]$

$= 10(86)$

$S_{20} = 860$

2) ಒಂದು ಸಮಾಂತರ ಶ್ರೇಢಿಯಲ್ಲಿ 16 ಪದಗಳಿವೆ, ಅದರ ಎಲ್ಲಾ ಪದಗಳ ಮೊತ್ತವು 768 ಆಗಿದೆ, ಶ್ರೇಢಿಯ ಕೊನೆಯ ಪದವು 93 ಆದರೆ, ಆ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ. ಹಾಗೂ ಈ ಶ್ರೇಢಿಯ ಎಲ್ಲಾ ಪದಗಳ ಮೊತ್ತವು, ಮೊದಲ 16 ಬೆಸ

(ಮುಂದುವರಿಯುವುದು)

DIFFERENTIABILITY

3. If $y = \frac{\log(x+\sqrt{x^2+1})}{\sqrt{x^2+1}}$, prove that $(x^2+1)\frac{dy}{dx} + xy = 1.$

Soln:-

$$\Rightarrow \left(\frac{1}{2}\right)(x^2+1)^{1/2}.\frac{d}{dx}(x^2+1) + \sqrt{x^2+1}\frac{dy}{dx}$$

$$= \frac{1}{x+\sqrt{x^2+1}}.$$

$$\frac{d}{dx}\left(x+\sqrt{x^2+1}\right)$$

$$\Rightarrow \frac{y}{(2)\sqrt{x^2+1}}(2x+0) + \sqrt{x^2+1}\frac{dy}{dx}$$

$$\Rightarrow \left\{\frac{1}{x+\sqrt{x^2+1}}\right\}\left\{1+\frac{1}{2\sqrt{x^2+1}}.2x\right\}$$

$$\Rightarrow \frac{xy}{\sqrt{x^2+1}} + \sqrt{x^2+1}\frac{dy}{dx}$$

$$= \left\{\frac{1}{x+\sqrt{x^2+1}}\right\}\left\{\frac{\sqrt{x^2+1}+x}{\sqrt{x^2+1}}\right\}$$

$$\Rightarrow \frac{xy}{\sqrt{x^2+1}} + \sqrt{x^2+1}\frac{dy}{dx} = \frac{1}{\sqrt{x^2+1}}$$

$$\Rightarrow xy + (x^2+1)\frac{dy}{dx} = 1$$

$$\Rightarrow (x^2+1)\frac{dy}{dx} + xy = 1.$$

Multiple Choice questions:-

1] $\frac{d}{dx}(10^{10^x}) =$

a) $10^{10^x} \log x$

b) $10^{10^x}(\log 10)^2$

c) $10^{10^x}.10^x(\log 10)^2$

d) $10^{10^x}.10^x \log 10.$

Soln : – (c)

2] $\frac{d}{dx}\left(e^{\log(x+\sqrt{x^2+a^2})}\right)$

a) $e^{\log(x+\sqrt{x^2+a^2})}$

b) $1 + \frac{x}{\sqrt{x^2+a^2}}$

c) $e^{\log(x+\sqrt{x^2+a^2})}\left(1+\frac{x}{\sqrt{x^2+a^2}}\right)$

d) none of these

Soln : – (b)

3] If $y = \sqrt{\frac{1-x}{1+x}}$, then

a) $\frac{dy}{dx} + y = 0$

b) $(1-x^2)\frac{dy}{dx} + y = 0$

c) $(1-x^2)\frac{dy}{dx} = y$

d) $(1-x^2)\frac{dy}{dx} + x = 0$

Soln : – (b)

4] $\frac{d}{dx}\left(\frac{1-\tan x}{1+\tan x}\right)$ at $x = 0$ is

a) 1 b) −1

c) 2 d) −2

Soln : – (b)

Answer the following:-

1) Prove that, $\frac{d}{dx}\sin^{-1} - x = \frac{1}{\sqrt{1-x^2}}$, $x \in (-1, 1)$ by definition.

Proof : – Let $y = \sin^{-1} x$,

$y \in \left[-\frac{\pi}{2}, \frac{\pi}{2}\right]$ and $x \in [-1, 1]$

$\Rightarrow x = \sin y$

$$\frac{dy}{dx} = \frac{1}{\left(\frac{dx}{dy}\right)} = \frac{1}{\frac{d}{dy}\sin y}$$

$$= \frac{1}{\underset{h\to 0}{\mathrm{Lt}}\left\{\frac{\sin(y+h)-\sin y}{h}\right\}}$$

$$= \frac{1}{\underset{h\to 0}{\mathrm{Lt}}\left\{\frac{2\cos\frac{2y+h}{2}\sin\frac{h}{2}}{h}\right\}}$$

$$= \frac{1}{\underset{h\to 0}{\mathrm{Lt}}\left\{\cos\left(\frac{2y+h}{2}\right)\right\}\left(\frac{\sin\frac{h}{2}}{\frac{h}{2}}\right)}$$

$$= \frac{1}{(\cos y)(1)}$$

$$= \frac{1}{\sqrt{1-\sin^2 y}}$$

$$= \frac{1}{\sqrt{1-x^2}}$$

{+ve sign is taken $\therefore \cos y > 0$ for $y \in \left[-\frac{\pi}{2}, \frac{\pi}{2}\right]$}

2. Prove that $\frac{d}{dx}\cos^{-1} x = -\frac{1}{\sqrt{1-x^2}}$ by definition.

Proof : – Let $y = \cos^{-1} x$,

$y \in [0, \pi]$ and $x \in [-1, 1]$

$\Rightarrow x = \cos y$

$$\frac{d}{dx}\cos^{-1} x = \frac{d}{dx}y = \frac{1}{\left(\frac{dx}{dy}\right)} = \frac{1}{\frac{d}{dy}(\cos y)}$$

$$= \frac{1}{\underset{h\to 0}{\mathrm{Lt}}\left\{\frac{\cos(y+h)-\cos y}{h}\right\}} \quad \text{[from def]}$$

$$= \frac{1}{\underset{h\to 0}{\mathrm{Lt}}\left\{\frac{-2\sin\frac{2y+h}{2}\sin\frac{h}{2}}{h}\right\}}$$

(Contd.......)

ಚಟಿಕೆ ಸುದ್ದಿ

ವಿಶ್ವಸಂಸ್ಥೆ ಸಭೆ ನಿಯೋಗದಲ್ಲಿ ಚೌಟ

ಮಂಗಳೂರು: ನ್ಯೂಯಾರ್ಕ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ಭಾಗವಹಿಸಲು ಬಿಜೆಪಿ ಸಂಸದ ಪಿಪಿ ಚೌಧರಿ ನೇತೃತ್ವದ ನಿಯೋಗದ ಜೊತೆ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅಮೆರಿಕಕ್ಕೆ ತೆರಳಿದ್ದಾರೆ.

ವಿವಿಧ ಪಕ್ಷಗಳ ಸಂಸದರನ್ನು ಒಳಗೊಂಡಿರುವ ಭಾರತದ ಎರಡು ನಿಯೋಗಗಳು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಈ ಅಧಿವೇಶನದಲ್ಲಿ ಭಾಗವಹಿಸಲಿವೆ. ಆ ಪೈಕಿ ಪಿಪಿ ಚೌಧರಿ ನೇತೃತ್ವದ ಮೊದಲ ನಿಯೋಗವು ಅ.8ರಿಂದ 14ರವರೆಗೆ ನಡೆಯುವ ಅಧಿವೇಶನದಲ್ಲಿ ಪಾಲ್ಗೊಳ್ಳಲಿದ್ದು, ಈ ತಂಡದಲ್ಲಿ ಸಂಸದ ಬ್ರಿಜೇಶ್ ಚೌಟ ಸ್ಥಾನ ಪಡೆದಿದ್ದಾರೆ.

ಕಿದ್ವಾಯಿ: ನಿರ್ದೇಶಕರಿಗೆ ಪೂರ್ಣಾಧಿಕಾರ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸಂಸ್ಥೆಗೆ ನಿಯೋಜಿಸಿದ್ದ ಆಡಳಿತಾಧಿಕಾರಿಯನ್ನು ಹಿಂಪಡೆದಿರುವ ವೈದ್ಯಕೀಯ ಶಿಕ್ಷಣ ಇಲಾಖೆ, ನಿರ್ದೇಶಕರಿಗೆ ಪೂರ್ಣ ಅಧಿಕಾರ ನೀಡಿ ಆದೇಶ ಹೊರಡಿಸಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನಿರ್ದೇಶಕ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರು ಆಡಳಿತಾಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಡಾ.ಟಿ.ನವೀನ್ ಅವರು ಪ್ರಭಾರ ನಿರ್ದೇಶಕ ಹುದ್ದೆಯಲ್ಲಿದ್ದರು. ಆಡಳಿತ ವಿಭಾಗವನ್ನು ಆಡಳಿತಾಧಿಕಾರಿ ನಿರ್ವಹಿಸಿದರೆ, ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ದೇಶಕರು ನಿಭಾಯಿಸುತ್ತಿದ್ದರು.

ವಾಹನ ಖರೀದಿಗೆ ಸಿಎಸ್‌ಆರ್ ನಿಧಿ

ಹುಲಿ, ವನ್ಯಜೀವಿ ಸಂರಕ್ಷಣೆ, ಕಾಡಿನ ಬೆಂಕಿ ತಡೆಗೆ ಅಲ್ಪ ಮೊತ್ತ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ, ವನ್ಯಜೀವಿ ಸಂರಕ್ಷಣೆ ಮತ್ತು ಕಾಡಿನ ಬೆಂಕಿ ತಡೆಯಲು ಬಳಸಬೇಕಾಗಿದ್ದ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯ ಹಣವನ್ನು ಅರಣ್ಯ ಅಧಿಕಾರಿಗಳ ಓಡಾಟಕ್ಕಾಗಿ ಐಷಾರಾಮಿ ವಾಹನಗಳ ಖರೀದಿಗೆ ಬಳಸಲಾಗಿದೆ.

ಅರಣ್ಯ ಸಂರಕ್ಷಣಾ ಕಾಯ್ದೆ 1980 ಅನ್ನು ಉಲ್ಲಂಘಿಸಿ ಕೇಂದ್ರ ಅರಣ್ಯ ಇಲಾಖೆಯಿಂದ ಛೀಮಾರಿ ಹಾಕಿಸಿಕೊಂಡು ದಂಡ ತೆತ್ತಿದ್ದ ಪವನ ವಿದ್ಯುತ್ ಕಂಪನಿಯೊಂದರ ಸಿಎಸ್‌ಆರ್ ನಿಧಿಯ ಹಣವನ್ನೇ ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ. ಇದರ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಈ ರೀತಿ ಖರೀದಿಸಿದ ಟೊಯೊಟಾ ಇನ್ನೊವಾ ಕ್ರಿಸ್ಟಾ ವಾಹನವನ್ನು ಬೆಳಗಾವಿ ವಿಭಾಗದ ಡಿಸಿಎಫ್ ಅವರಿಗೂ, ಮಹೀಂದ್ರಾ ಸ್ಕಾರ್ಪಿಯೊ ವಾಹನವನ್ನು ಎಸಿಎಫ್ ಅವರ ಬಳಕೆಗೂ ನೀಡಲಾಗಿದೆ. ಮಹೀಂದ್ರಾ ಬೊಲೆರೊವನ್ನೂ ಖರೀದಿಸಲಾಗಿದೆ. ಮೆಸರ್ಸ್ ವಿಂಡ್ ವರ್ಲ್ಡ್ (ಹಿಂದೆ ಈ ಕಂಪನಿಗೆ ಎನರ್ಕಾನ್ ಇಂಡಿಯಾ ಎಂಬ ಹೆಸರಿತ್ತು) ಕಂಪನಿಯ ಸಿಎಸ್‌ಆರ್ ನಿಧಿಯಿಂದ ವಾಹನಗಳನ್ನು ಖರೀದಿಸಲಾಗಿದೆ.

ವಿಂಡ್ ವರ್ಲ್ಡ್ ಕಂಪನಿಯು ಅರಣ್ಯ ರಕ್ಷಣೆ, ವನ್ಯಜೀವಿ ಸಂರಕ್ಷಣೆ ಮತ್ತು ಕಾಡಿನ ಬೆಂಕಿ ತಡೆಗೆಂದು ₹64.23 ಲಕ್ಷ ಮೊತ್ತವನ್ನು 'ದಾಂಡೇಲಿ ಅಣಶಿ ಹುಲಿ ಪ್ರತಿಷ್ಠಾನ'ದ ಖಾತೆಗೆ ಜಮೆ ಮಾಡಿತ್ತು. ಅಧಿಕಾರಿಗಳು ಈ ಮೊತ್ತದಲ್ಲಿ ಇನ್ನೊವಾ ಕ್ರಿಸ್ಟಾ ಖರೀದಿಗೆ ₹19 ಲಕ್ಷ, ಮಹೀಂದ್ರಾ ಸ್ಕಾರ್ಪಿಯೊಗೆ ₹15.5 ಲಕ್ಷ ಮತ್ತು ಮಹೀಂದ್ರಾ ಬೊಲೇರೊಗೆ ₹10 ಲಕ್ಷ ಬಳಸಿಕೊಂಡಿದ್ದಾರೆ. 2025–26ನೇ ಸಾಲಿನ ಹುಲಿ ಪ್ರತಿಷ್ಠಾನ ಆಡಳಿತ ಮಂಡಳಿಯ ಸಭೆಯಲ್ಲಿ (ಜನವರಿ 25) ಘಟನೋತ್ತರ ಮಂಜೂರಾತಿ ಪಡೆಯುವ ಷರತ್ತಿನಡಿ ವಾಹನಗಳ ಖರೀದಿಗೆ ಅನುಮತಿ ನೀಡಲಾಗಿತ್ತು. ಬೆಂಕಿ ತಡೆ ವಾಚರ್‌ಗಳಿಗಾಗಿ 10 ಕಾರ್ಮಿಕರಿಗೆ 4 ತಿಂಗಳಿಗೆ ₹6.97 ಲಕ್ಷ, ಫೈರ್ ಲೈನ್ ನಿರ್ವಹಣೆಗೆ ₹6.25 ಲಕ್ಷ ಮತ್ತು ಅಗ್ನಿ ಶಾಮಕ ಸಾಧನಗಳ ಖರೀದಿಗೆ ₹6.50 ಲಕ್ಷ ಬಳಸಲಾಗಿದೆ.

ಬೆಳಗಾವಿ ಡಿಸಿಎಫ್ ಅವರಿಗೆ ಎರಡು ವರ್ಷಗಳ ಹಿಂದೆ ಹೊಸ ಟಾಟಾ ಹ್ಯಾರಿಯರ್ ವಾಹನ ನೀಡಲಾಗಿತ್ತು. ಅದು ಇನ್ನೂ ಉತ್ತಮ ಸ್ಥಿತಿಯಲ್ಲಿದೆ. ಇನ್ನೊವಾ ಬಂದ ನಂತರವೂ ಹ್ಯಾರಿಯರ್ ವಾಹನವನ್ನೂ ಇಟ್ಟುಕೊಳ್ಳಲಾಗಿತ್ತು. ಇತ್ತೀಚೆಗಷ್ಟೇ ಹ್ಯಾರಿಯರ್ ವಾಹನವನ್ನು ಕಾರ್ಯಯೋಜನೆ ವಿಭಾಗಕ್ಕೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಾಂಡೇಲಿ ಅಣಶಿ ಹುಲಿ ಸಂರಕ್ಷಿತ ಪ್ರದೇಶದ ಹಿಂದಿನ ನಿರ್ದೇಶಕ ಶ್ರೀನಿವಾಸುಲು ಅವರು ₹50 ಲಕ್ಷ ಮೊತ್ತವನ್ನು ಸಿಎಸ್‌ಆರ್ ನಿಧಿಯಿಂದ ಪಡೆಯಲು ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆ ಜತೆ ಒಪ್ಪಂದ ಮಾಡಿಕೊಳ್ಳಲು ಮುಂದಾದಾಗ ಕೆನರಾ ವೃತ್ತದ ಅಂದಿನ ಸಿಸಿಎಫ್ ಎನ್.ಎಲ್.ಶಾಂತಕುಮಾರ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದರು. 'ಕಂಪನಿಯು ಕಾನೂನು ಉಲ್ಲಂಘನೆ ಮಾಡಿದ್ದು, ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವುದರಿಂದ ಒಪ್ಪಂದ ಸರಿಯಲ್ಲ ಎಂದು ಹೇಳಿದ್ದರು. ಆದರೆ, ಈಗ ಆ ಸತ್ಸಂಪ್ರದಾಯವನ್ನು ಉಲ್ಲಂಘಿಸಲಾಗಿದೆ' ಎಂಬ ಆಕ್ಷೇಪ ವ್ಯಕ್ತವಾಗಿದೆ.

> **ಸಿಎಸ್‌ಆರ್ ನಿಧಿ ಅನ್ಯ ಉದ್ದೇಶಕ್ಕೆ ಬಳಸಿದ ಬಗ್ಗೆ ಮಾಹಿತಿ ಇಲ್ಲ. ತಪ್ಪೆಸಗಿದ್ದರೆ, ವರದಿ ತರಿಸಿಕೊಂಡು ಸೂಕ್ತ ಕ್ರಮ ಜರುಗಿಸಲಾಗುವುದು**
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

'ವಾಹನ ಖರೀದಿ ತನಿಖೆ ನಡೆಯಲಿ'

'ಅರಣ್ಯ ರಕ್ಷಣೆ ಮತ್ತು ಸಮೃದ್ಧಿಗೆ ಬಳಸಬೇಕಾದ ಮೊತ್ತವನ್ನು ಅಧಿಕಾರಿಗಳು ತಮ್ಮ ವಿಲಾಸಿ ಜೀವನಕ್ಕೆ ಬಳಸಿಕೊಂಡಿದ್ದಾರೆ. ಹಿಂದಿನ ಡಿಸಿಎಫ್ ಮರಿಯಾ ಕ್ರಿಸ್ತು ರಾಜ ಅವಧಿಯಲ್ಲಿ ಈ ವಾಹನಗಳನ್ನು ಖರೀದಿಸಲಾಗಿದೆ. ಇಲಾಖೆಯಿಂದ ಎರಡು ವರ್ಷಗಳ ಹಿಂದಷ್ಟೆ ಖರೀದಿಸಿದ್ದ ವಾಹನಗಳು ಈಗಲೂ ಸುಸ್ಥಿತಿಯಲ್ಲಿವೆ. ಆದರೂ ಐಷಾರಾಮಿ ವಾಹನ ಖರೀದಿಸಲಾಗಿದೆ. ಇದೇ ಅಧಿಕಾರಿ ಅವಧಿಯಲ್ಲಿ ಕೋಟಿಗಟ್ಟಲೆ ಹಣ ಖರ್ಚು ಮಾಡಿ ತಮ್ಮ ಕಚೇರಿ ನವೀಕರಣ ಮಾಡಿಸಿಕೊಂಡಿದ್ದರು. ಆದ್ದರಿಂದ ಸಿಎಸ್‌ಆರ್ ನಿಧಿಯ ದುರ್ಬಳಕೆ ಕುರಿತು ತನಿಖೆ ನಡೆಸಬೇಕು' ಎಂದು ಆರ್‌ಟಿಐ ಕಾರ್ಯಕರ್ತ ರಾಘವೇಂದ್ರ ಒತ್ತಾಯಿಸಿದ್ದಾರೆ.


ಹೊಸ ಇನ್ನೊವಾ ಕ್ರಿಸ್ಟಾ ವಾಹನವನ್ನು ಸ್ವೀಕರಿಸಿದ ಅರಣ್ಯ ಇಲಾಖೆ ಅಧಿಕಾರಿಗಳು

ಪವನ ವಿದ್ಯುತ್ ಕಂಪನಿಯ ಲೋಪವೇನು?

ಮೆಸರ್ಸ್ ವಿಂಡ್ ವರ್ಲ್ಡ್ ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಮತ್ತು ಮಾರಿಕಣಿವೆ ಅರಣ್ಯ ಪ್ರದೇಶದಲ್ಲಿ ಪವನ ವಿದ್ಯುತ್ ಯೋಜನೆಗಳ ಪರವಾನಗಿ ನವೀಕರಣಕ್ಕಾಗಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಸ್ಥಳ ತಪಾಸಣೆ ನಡೆಸಿದ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯ ದಕ್ಷಿಣ ಪ್ರಾದೇಶಿಕ ಕಚೇರಿ ಡಿಐಜಿಯವರು, 'ಕಂಪನಿಯು ಗಂಭೀರ ಉಲ್ಲಂಘನೆಗಳನ್ನು ಮಾಡಿರುವುದು ದೃಢಪಟ್ಟಿದೆ. ಆದ್ದರಿಂದ ಕಂಪನಿ ಮತ್ತು ಉಲ್ಲಂಘನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಶಿಫಾರಸು ಮಾಡಿದ್ದರು.

ಇದೇ ಯೋಜನೆಗೆ ವನ್ಯಜೀವಿ ವಿಭಾಗದ ಅನುಮೋದನೆ ಕೋರಿ ಕಂಪನಿಯು ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವವು 2024ರ ಅಕ್ಟೋಬರ್‌ನಲ್ಲಿ ವನ್ಯಜೀವಿ ಮಂಡಳಿ ಸಭೆಯಲ್ಲಿ ಚರ್ಚೆಗೆ ಬಂದಾಗ, 'ಕಂಪನಿ ಮತ್ತು ಉಲ್ಲಂಘನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದರು.

ಬೆಳಗಾವಿಯಲ್ಲೂ ಈ ಕಂಪನಿ ಅರಣ್ಯ ಕಾಯ್ದೆಗಳನ್ನು ಉಲ್ಲಂಘಿಸಿತ್ತು. ಕಂಪನಿಯು 174 ಹೆಕ್ಟೇರ್ ಅರಣ್ಯ ಭೂಮಿಯನ್ನು ಪವನ ವಿದ್ಯುತ್ ಯೋಜನೆಗಾಗಿ ಪರಿವರ್ತನೆ ಮಾಡಲು 2010 ರಲ್ಲಿ ಅನುಮತಿ ಪಡೆದಿತ್ತು. ಅನುಮತಿ ಇಲ್ಲದೇ ಆರ್‌ಸಿಸಿ ಕಟ್ಟಡ ನಿರ್ಮಾಣ, ಅನುಮೋದನೆಗಿಂತ ಹೆಚ್ಚು ಅರಣ್ಯ ಭೂಮಿಯ ಬಳಕೆ, ಮರಗಳ ಅಕ್ರಮ ಕಡಿತ, ಅರಣ್ಯ ಅತಿಕ್ರಮಣ ಮುಂತಾದ ಉಲ್ಲಂಘನೆ ಮಾಡಿತ್ತು. ಈ ಕಾರಣದಿಂದ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್–82 ರ ಅಡಿ ಕಂಪನಿಗೆ ನೀಡಿದ್ದ ಗುತ್ತಿಗೆಯನ್ನು ರದ್ದುಗೊಳಿಸಲು ಪಿಸಿಸಿಎಫ್ ಹಾಗೂ ಅರಣ್ಯಪಡೆ ಮುಖ್ಯಸ್ಥರು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

'ಬಿಗ್ ಬಾಸ್' ಮನೆಯಿದ್ದ ಜಾಲಿವುಡ್‌ಗೆ ಬೀಗ

ಒಂದನೇ ಪುಟದಿಂದ...

ಮನರಂಜನೆ, ಸಾಹಸ ಚಟುವಟಿಕೆಗಳಿಗೆ ಜಾಲಿವುಡ್ ಪಾರ್ಕ್ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಪಡೆದಿರಲಿಲ್ಲ. ಪಾರ್ಕ್‌ನಿಂದ ಕೊಳಚೆ ನೀರನ್ನು ಸಂಸ್ಕರಿಸದೆಯೇ ಹೊರಕ್ಕೆ ಬಿಡಲಾಗುತ್ತಿತ್ತು. ತ್ಯಾಜ್ಯವನ್ನು ಸಹ ಸರಿಯಾಗಿ ವಿಲೇವಾರಿ ಮಾಡುತ್ತಿರಲಿಲ್ಲ ಎಂಬ ಆರೋಪ ಮಾಡಲಾಗಿದೆ.

ಮಾಲಿನ್ಯ ನಿಯಂತ್ರಣ ಕಾಯ್ದೆಗಳಲ್ಲಿ ಮುಖ್ಯವಾಗಿ ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆಯ ವಿವಿಧ ನಿಯಮಗಳನ್ನು ಜಾಲಿವುಡ್ ಉಲ್ಲಂಘಿಸಿದೆ ಎನ್ನಲಾಗಿತ್ತು. ಈ ಕುರಿತು ರಾಮನಗರ ಪರಿಸರ ಅಧಿಕಾರಿ ಸ್ಥಳ ಪರಿಶೀಲನೆ ನಡೆಸಿ ವರದಿ ಕೊಟ್ಟಿದ್ದರು. ಅದರ ಬೆನ್ನಲ್ಲೇ, ಜಾಲಿವುಡ್‌ಗೆ ನೀಡಿರುವ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಮಂಡಳಿಯು ನಿರ್ದೇಶನ ನೀಡಿ ನೋಟಿಸ್ ಜಾರಿ ಮಾಡಿತ್ತು.

ನೋಟಿಸ್‌ಗೆ ಜಾಲಿವುಡ್ ಆಡಳಿತ ಮಂಡಳಿ ಯಾವುದೇ ಪ್ರತಿಕ್ರಿಯೆ ನೀಡದ ಕಾರಣ ಪಾರ್ಕ್‌ಗೆ ಬೀಗಮುದ್ರೆ ಹಾಕುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಯು ಜಿಲ್ಲಾಧಿಕಾರಿಗೆ ಸೋಮವಾರ ಸೂಚನೆ ನೀಡಿತ್ತು.

ಹೀಗಾಗಿ ತಹಶೀಲ್ದಾರ್ ಅವರು ಪೊಲೀಸ್ ಭದ್ರತೆಯಲ್ಲಿ ಸಂಸ್ಥೆಗೆ ಬೀಗ ಮುದ್ರೆ ಹಾಕಿದರು. ಈ ವೇಳೆ, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಪಾರ್ಕ್ ಎದುರು ಜಮಾಯಿಸಿ ಜಿಲ್ಲಾಡಳಿತದ ಪರವಾಗಿ ಘೋಷಣೆ ಕೂಗಿ, ಅಭಿನಂದಿಸಿದರು.

ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿ ಪಡೆಯದ ಜಾಲಿವುಡ್‌ಗೆ ನೋಟಿಸ್ ನೀಡಲಾಗಿತ್ತು. ಜಿಲ್ಲಾಡಳಿತದ ಪರವಾಗಿ ನೋಟಿಸ್ ನೀಡಲು ಹೋದಾಗ ಸ್ವೀಕರಿಸದೆ ಜಾಲಿವುಡ್ ಅಧಿಕಾರಿಗಳು ಉದ್ಧಟತನ ತೋರಿದ್ದರು. ಇದೀಗ, ಮಂಡಳಿ ಸೂಚನೆ ಮೇರೆಗೆ ನೋಟಿಸ್ ನೀಡಿ ಸಂಸ್ಥೆಗೆ ಬೀಗ ಹಾಕಿದ್ದೇವೆ. ಬಿಗ್ ಬಾಸ್ ಸ್ಪರ್ಧಿಗಳನ್ನು ಹೊರಕ್ಕೆ ಕಳಿಸಿ, ಎಲ್ಲಾ ಚಟುವಟಿಕೆ ಸ್ಥಗಿತಗೊಳಿಸಿದ್ದೇವೆ ಎಂದು ರಾಮನಗರ ತಹಶೀಲ್ದಾರ್ ತೇಜಸ್ವಿನಿ ಮಾಧ್ಯಮದವರಿಗೆ ತಿಳಿಸಿದರು.

'ಭದ್ರತೆ ಒದಗಿಸಿದ್ದೇವೆ'

ಜಾಲಿವುಡ್ ಸ್ಟುಡಿಯೊಕ್ಕೆ ಬೀಗಮುದ್ರೆ ಹಾಕಬೇಕಿರುವುದರಿಂದ ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಗೆ ಅವಕಾಶವಿಲ್ಲದಂತೆ ಪೊಲೀಸ್ ಭದ್ರತೆ ಒದಗಿಸುವಂತೆ ಜಿಲ್ಲಾಡಳಿತ ಕೋರಿತ್ತು. ಅದರಂತೆ, ಬೀಗಮುದ್ರೆ ಕಾರ್ಯಾಚರಣೆಗೆ ಭದ್ರತೆ ಒದಗಿಸಿದ್ದೇವೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಹೇಳಿದರು.


ರಾಮನಗರ ತಾಲ್ಲೂಕಿನ ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಜಾಲಿವುಡ್ ಸ್ಟುಡಿಯೋಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌ಗೆ ತಹಶೀಲ್ದಾರ್ ತೇಜಸ್ವಿನಿ ನೇತೃತ್ವದಲ್ಲಿ ಮಂಗಳವಾರ ಬೀಗಮುದ್ರೆ ಹಾಕಲಾಯಿತು

ಗಾಂಧೀಜಿ ಅನುಯಾಯಿಗಳಲ್ಲಿ ಮೂಡಿದ ನಿರಾಸೆ

ಗಾಂಧಿ ಭಾರತ: ನೆರವೇರದ ನಿರೀಕ್ಷೆ

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಮಹಾತ್ಮ ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ನೆನಪಿಗಾಗಿ ವರ್ಷವಿಡೀ ಕಾರ್ಯಕ್ರಮ ನಡೆಸುವುದಾಗಿ ರಾಜ್ಯ ಸರ್ಕಾರ ಘೋಷಿಸಿತ್ತು. ಆದರೆ, ನಿರೀಕ್ಷೆಯಂತೆ ಚಟುವಟಿಕೆಗಳು ನಡೆದಿಲ್ಲ.

'ಎರಡು ದಿನವಷ್ಟೇ ಅಲ್ಲ, ವರ್ಷವಿಡೀ 'ಗಾಂಧಿ ಭಾರತ' ಕಾರ್ಯಕ್ರಮ ನಡೆಸುವುದಾಗಿ ಗಾಂಧಿ ಭಾರತ ಶತಮಾನೋತ್ಸವ ಸಮಿತಿ ಹೇಳಿತ್ತು. ಬೆಂಗಳೂರಿನಲ್ಲಿ ಸೆ.6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸಮಿತಿ ಸಭೆ ನಡೆದಿದೆ. ಅದು ಹೊರತುಪಡಿಸಿದರೆ ನಿರೀಕ್ಷೆಯಂತೆ ಯಾವ ಚಟುವಟಿಕೆ ನಡೆದಿಲ್ಲ' ಎಂಬುದು ಗಾಂಧೀಜಿ ಅನುಯಾಯಿಗಳ ಬೇಸರ.

'ಶತಮಾನೋತ್ಸವ ವರ್ಷಾಚರಣೆ ಅವಧಿ ಮುಗಿಯಲು ಮೂರು ತಿಂಗಳಿಗಿಂತ ಕಡಿಮೆ ಸಮಯವವಿದೆ. ಅಷ್ಟರೊಳಗೆ ಒಂದಿಷ್ಟಾದರೂ ಕಾರ್ಯಕ್ರಮ ಅಚ್ಚುಕಟ್ಟಾಗಿ ನೆರವೇರಿಸಬೇಕು. ಸಮಿತಿ ಯೋಜಿಸಿದ ಚಟುವಟಿಕೆಗಳಿಗೆ ವೇಗ ನೀಡಬೇಕು. ಬೆಳಗಾವಿಯಲ್ಲಿ ಗಾಂಧಿ ಹೆಸರು ಶಾಶ್ವತವಾಗಿ ಉಳಿಯುವಂಥ ಕಾಮಗಾರಿ ಕೈಗೊಳ್ಳಬೇಕು' ಎಂಬ ಆಗ್ರಹ ಅವರದ್ದು.

ಪ್ರತಿಕ್ರಿಯೆಗಾಗಿ ಗಾಂಧಿ ಭಾರತ ಶತಮಾನೋತ್ಸವ ಸಮಿತಿ ಅಧ್ಯಕ್ಷರೂ ಆಗಿರುವ ಸಚಿವ ಎಚ್.ಕೆ.ಪಾಟೀಲ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿದರೂ ಲಭ್ಯವಾಗಲಿಲ್ಲ.


2025ರ ಜನವರಿ 21ರಂದು 'ಜೈ ಬಾಪು, ಜೈ ಭೀಮ್ ಮತ್ತು ಜೈ ಸಂವಿಧಾನ' ಸಮಾವೇಶಕ್ಕೆ ಸಾಕ್ಷಿಯಾದ ಬೆಳಗಾವಿಯ ಸಿಪಿಇಡಿ ಮೈದಾನ (ಸಂಗ್ರಹ ಚಿತ್ರ)

> **ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆಗೆ ತೋರಿದ್ದ ಉತ್ಸಾಹ ಈಗ ರಾಜ್ಯ ಸರ್ಕಾರದಲ್ಲಿ ಕಾಣುತ್ತಿಲ್ಲ. ಗಾಂಧಿ ಹೆಸರು ಚಿರಸ್ಥಾಯಿಯಾಗಿಸುವ ಕೆಲಸ ಆಗಿಲ್ಲ**
> **ಸುಭಾಷ ಕುಲಕರ್ಣಿ,** ಸಾಮಾಜಿಕ ಕಾರ್ಯಕರ್ತ

> **ಶತಮಾನೋತ್ಸವ ನೆನಪಿಗೆ ಬೆಳಗಾವಿಯ ಕೋಟೆಕೆರೆ ಅಭಿವೃದ್ಧಿಪಡಿಸಿ, ಗಾಂಧಿ ಹೆಸರು ನಾಮಕರಣ ಮಾಡುವ ಚರ್ಚೆ ನಡೆದಿದೆ. ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ಕೊಟ್ಟಿದ್ದೇವೆ**
> **ಮೊಹಮ್ಮದ್ ರೋಷನ್,** ಜಿಲ್ಲಾಧಿಕಾರಿ, ಬೆಳಗಾವಿ

ಕಾರ್ಯಗತ ಆಗುವುದೇ?

ಸಿ.ಎಂ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯಲ್ಲಿ, ಗ್ರಾಮ ಸ್ವರಾಜ್ ಪರಿಕಲ್ಪನೆಯಡಿ ನ.14ರಂದು 'ಮಹಾ ಪಂಚಾಯತ್ ಸಮಾವೇಶ' ಆಯೋಜಿಸಲು ತೀರ್ಮಾನಿಸಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಬೆಳಗಾವಿ, ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಮಂಗಳೂರು ವಲಯಗಳಲ್ಲಿ ಗಾಂಧಿ ವಿಚಾರಧಾರೆಯ ಜ್ಯೋತಿಯಾತ್ರೆ ಆಯೋಜಿಸಬೇಕು. ಸಮಾವೇಶದ ದಿನ ಆ ಯಾತ್ರೆಗಳೆಲ್ಲ ಬಂದು ಸಂಗಮವಾಗಿ ಸಮಾರೋಪಗೊಳ್ಳಬೇಕು. ರಾಜ್ಯದ 120 ಸ್ಥಳಗಳಲ್ಲಿ ಗಾಂಧಿ ಭೇಟಿ ನೀಡಿದ ನೆನಪಿಗಾಗಿ ಸ್ತಂಭಗಳನ್ನು ನವೆಂಬರ್ ಅಂತ್ಯದೊಳಗೆ ನಿರ್ಮಿಸಬೇಕು. ಎಂದು ಸಿದ್ದರಾಮಯ್ಯ ಸೂಚಿಸಿದ್ದಾರೆ. ಆದರೆ, ಸಮಯದ ಲಭ್ಯತೆ ಕಡಿಮೆ ಇರುವುದರಿಂದ ನಿಗದಿತ ಅವಧಿಯಲ್ಲಿ ಇವು ಕಾರ್ಯಗತವಾಗಲಿವೆಯೇ ಎಂಬುದು ಗಾಂಧಿವಾದಿಗಳ ಪ್ರಶ್ನೆ.

ಬೆಳೆ ಪರಿಹಾರ ಅರ್ಜಿಗೆ ₹ 10 ಸಾವಿರ ಲಂಚ: ವಿಎ ಬಂಧನ

ಶಹಾಪುರ (ಯಾದಗಿರಿ ಜಿಲ್ಲೆ): ಬೆಳೆ ಪರಿಹಾರದ ಅರ್ಜಿ ಸ್ವೀಕರಿಸಲು ₹9,000 ಫೋನ್ ಪೇ ಮೂಲಕ ಲಂಚ ಪಡೆದ ಆರೋಪದಡಿ ಗ್ರಾಮ ಆಡಳಿತಗಾರ (ವಿಎ) ಒಬ್ಬರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಶಹಾಪುರ ತಾಲ್ಲೂಕಿನ ಹತ್ತಿಗೂಡೂರ ಗ್ರಾಮದ ಪ್ರಭಾರ ಗ್ರಾಮ ಆಡಳಿತಗಾರ ಸಿದ್ದಲಿಂಗ ಮಲ್ಲಣ್ಣ ಪಾಟೀಲ (45) ಲಂಚ ಪಡೆದ ಆರೋಪಿ. ಸುರಪುರದ ರಾಜಾ ರಾಮಪ್ಪ ನಾಯಕ ಅವರು ನೀಡಿದ ದೂರಿನ ಅನ್ವಯ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದಾರೆ.

'ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ'

ಚಾಮರಾಜನಗರ: 'ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ; ನವೆಂಬರ್ ಕ್ರಾಂತಿಯೂ ನಡೆಯುವುದಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ಮಂಗಳವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಉಳಿದ ಅವಧಿಗೂ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಮುಂದುವರಿಯಲಿದ್ದಾರೆ. ಸಿಎಂ ಬದಲಾವಣೆ ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟಿದ್ದು' ಎಂದರು.


ವಾರಾಣಸಿಯ ಆದಿಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡಿದ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಸನ್ಮಾನಿಸಿದರು

ಇಂಡಿಯನ್ ಆಯಿಲ್ ನಿರ್ದೇಶಕರಾಗಿ ಸೌಮಿತ್ರ ಪಿ. ಶ್ರೀವಾಸ್ತವ ಅಧಿಕಾರ ಸ್ವೀಕಾರ

ಚೆನ್ನೈ: ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿ. ನ ಮಾರುಕಟ್ಟೆ ನಿರ್ದೇಶಕರಾಗಿ ಸೌಮಿತ್ರ ಪಿ ಶ್ರೀವಾಸ್ತವ ಅವರು ಅ.6 ರಂದು ಅಧಿಕಾರ ಸ್ವೀಕರಿಸಿದ್ದಾರೆ ಎಂದು ಸಂಸ್ಥೆ ಮುಖ್ಯ ಮಹಾಪ್ರಬಂಧಕ (ಸಿಸಿ), ಎಸ್‌ಆರ್. ವಿ. ವೆಟ್ರಿಸೆಲ್ವಕ್‌ಕುಮಾರ್ ತಿಳಿಸಿದ್ದಾರೆ.

ನಿಗಮದಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲದ ವಿಶಿಷ್ಟ ವೃತ್ತಿಜೀವನ ಹೊಂದಿರುವ ಶ್ರೀವಾಸ್ತವ ಅವರು ಐಐಟಿ ರೂರ್ಕಿಯಿಂದ ಸಿವಿಲ್ ಎಂಜಿನಿಯರಿಂಗ್ ಪದವೀಧರರಾಗಿ, ಮುಂಬೈನ ಎಸ್‌ಪಿ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ರಿಸರ್ಚ್‌ನಲ್ಲಿ ಕಾರ್ಯನಿರ್ವಾಹಕ ಎಂಬಿಎ ಪದವಿ ಪಡೆದಿದ್ದಾರೆ. ವೃತ್ತಿಯ ಆರಂಭಿಕ ನಾಲ್ಕು ವರ್ಷ ಅವಧಿ ಎಲ್‌ಪಿಜಿ ವ್ಯವಹಾರದಲ್ಲಿ ಕಾರ್ಯ ನಿರ್ವಹಿಸಿದ ಅವರು, ನಂತರ ಮಾರಾಟ ವಿಭಾಗದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.



ವ್ಯಾಪಕ ಅನುಭವ ಹೊಂದಿರುವ ಶ್ರೀವಾಸ್ತವ ಅವರು ನಿಪುಣ ಕಾರ್ಯ ನಿರ್ವಾಹಕರಾಗಿದ್ದಲ್ಲದೆ, ಮಾರ್ಕೆಟಿಂಗ್ ಮತ್ತು ಕಾರ್ಯತಂತ್ರದಲ್ಲಿ ಉತ್ತಮ ನಾಯಕತ್ವ ಹೊಂದಿದ್ದಾರೆ. ವಹಿವಾಟು, ಲಾಭದಾಯಕತೆ ಹಾಗೂ ಗ್ರಾಹಕರ ಸೇವೆ ಹೆಚ್ಚಿಸುವಲ್ಲಿ ದಾಖಲೆ ನಿರ್ಮಿಸಿದ್ದಾರೆ. ತಂತ್ರಜ್ಞಾನ ಮತ್ತು ಡಿಜಿಟಲೀಕರಣ ಉಪಕ್ರಮಗಳು ಸೇರಿದಂತೆ ಪ್ರಮುಖ ರೂಪಾಂತರ ಯೋಜನೆಗಳನ್ನು ಯಶಸ್ವಿಯಾಗಿ ಮುನ್ನಡೆಸಿದ ಅವರು ರಿಟೈಲ್ ಕನ್ವರ್ಷನ್ ಗುಂಪಿನ ಮುಖ್ಯಸ್ಥರಾಗಿ ಮತ್ತು ಭಾರತದ ಉತ್ತರ ಮತ್ತು ಪೂರ್ವದ ರಿಟೈಲ್ ವ್ಯಾಪಾರ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿದ್ದಾರೆ.

ನವದೆಹಲಿ ಮತ್ತು ಮುಂಬೈನ ವಿಭಾಗೀಯ ಕಚೇರಿ ಮುಖ್ಯಸ್ಥರಾಗಿ ಮತ್ತು ಪಶ್ಚಿಮ ಉತ್ತರ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಮಾರಾಟ ವಿಸ್ತರಿಸುವ ಮೂಲಕ ವಿಸ್ತೃತ ಕಾರ್ಯಾಚರಣೆಯ ಪರಿಣತಿ ಪ್ರದರ್ಶಿಸಿದ್ದಾರೆ. ಮಹಾರಾಷ್ಟ್ರ ಮತ್ತು ಗೋವಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ಯಶಸ್ಸು ಕಂಡಿದ್ದಾರೆ.

ಪ್ರಸ್ತುತ ಮಾರುಕಟ್ಟೆ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀವಾಸ್ತವ ಅವರು ಐಒಸಿ ರಾಷ್ಟ್ರವ್ಯಾಪಿ ಮಾರುಕಟ್ಟೆ ಮೂಲಸೌಕರ್ಯ ಮತ್ತು ಕಾರ್ಯತಂತ್ರದ ನಿರ್ದೇಶನವನ್ನು ಮುನ್ನಡೆಸಲಿದ್ದಾರೆ. ಎಂದು ವೆಟ್ರಿಸೆಲ್ವಕ್‌ಕುಮಾರ್ ತಿಳಿಸಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

‘ಮೀಸಲು ಹೆಚ್ಚಳಕ್ಕೆ ಕೇಂದ್ರ ಮುಂದಾಗಲಿ’

ಪರಿಶಿಷ್ಟ ಪಂಗಡದಲ್ಲಿರುವ ಯಾರ ಅನ್ನದ ತಟ್ಟೆಗೂ ಕೈ ಹಾಕುವುದಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಪಟ್ಟಿಗೆ ಸೇರಿಸಿದರೆ ಜನಸಂಖ್ಯೆಗೆ ತಕ್ಕಂತೆ ಮೀಸಲಾತಿ ಪ್ರಮಾಣ ಹೆಚ್ಚಾಗಬೇಕು ಎನ್ನುವುದಕ್ಕೆ ಬೆಂಬಲ, ಸಹಮತ ಇದೆ. ಯಾರೂ ಮತ್ತೊಬ್ಬರ ಅನ್ನದ ತಟ್ಟೆಗೆ ಕೈ ಹಾಕಬಾರದು’ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಆಗ ಕುರುಬರನ್ನು ಎಸ್‌.ಟಿಗೆ ಸೇರಿಸಬೇಕೆಂದು ಪಾದಯಾತ್ರೆ ಮಾಡಿದ್ದ ಬಿಜೆಪಿಯ ಈಶ್ವರಪ್ಪ, ಕೇಂದ್ರಕ್ಕೆ ಶಿಫಾರಸು ಮಾಡಿದ್ದು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ. ಆ ಶಿಫಾರಸಿನ ಬಗ್ಗೆ ಕೆಲವು ಸ್ಪಷ್ಟನೆಗಳನ್ನು ಕೇಂದ್ರ ಕೇಳಿದೆ. ಕುಲಶಾಸ್ತ್ರೀಯ ಅಧ್ಯಯನ ನಡೆದು ಒಂದು ವೇಳೆ ಕುರುಬ ಸಮುದಾಯವನ್ನು ಎಸ್‌.ಟಿ ಪಟ್ಟಿಗೆ ಸೇರಿಸಿದರೆ, ಜನಸಂಖ್ಯೆಗೆ ತಕ್ಕಂತೆ ಮೀಸಲಾತಿ ನೀಡಬೇಕು. ಶೇಕಡ 7, ಶೇಕಡ 12, ಶೇ 20ರವರೆಗೂ ನೀಡಲಿ ಎಂದರು.

‘ವಾಲ್ಮೀಕಿ ಮತ್ತು ಕುರುಬ ಸಮುದಾಯವನ್ನು ಎಸ್‌.ಟಿ ಪಟ್ಟಿಗೆ ಸೇರಿಸಲು ನಾನು ಮತ್ತು ಉಗ್ರಪ್ಪ ಅವರು ರಾಮಕೃಷ್ಣ ಹೆಗಡೆ ಅವರಿಗೆ ಮನವಿ ಮಾಡಿದ್ದೆವು. ಹೆಗಡೆ ಕೇಂದ್ರಕ್ಕೆ ಶಿಫಾರಸು ಮಾಡಿದರೂ ಆಗ ಸೇರಿಸಲು ಆಗಲಿಲ್ಲ. ಆದರೆ, ಉಗ್ರಪ್ಪ ಅವರು ಸುಮ್ಮನೆ ಕೂರಲಿಲ್ಲ. ಉಗ್ರಪ್ಪ ಮತ್ತು ದೇವೇಗೌಡರ ನಡುವಿನ ಒಡನಾಟ ಆಗಲೂ ಚೆನ್ನಾಗಿತ್ತು, ಈಗಲೂ ಚೆನ್ನಾಗಿಯೇ ಇದೆ. ದೇವೇಗೌಡರು ಮತ್ತು ಅಂದಿನ ಪ್ರಧಾನಿ ಚಂದ್ರಶೇಖರ್ ಅವರ ಒಡನಾಟ ಚೆನ್ನಾಗಿತ್ತು, ಚಂದ್ರಶೇಖರ್ ಅವರನ್ನು ದೇವೇಗೌಡರು ಒಪ್ಪಿಸಿ ವಾಲ್ಮೀಕಿ ಸಮುದಾಯವನ್ನು ಎಸ್‌.ಟಿ ಪಟ್ಟಿಗೆ ಸೇರಿಸಿದರು. ವಾಲ್ಮೀಕಿ, ಬೇಡ ಮತ್ತು ನಾಯಕ ಸಮುದಾಯಕ್ಕೆ ಮೀಸಲಾತಿ ಸಿಗಲು ಉಗ್ರಪ್ಪನವರೇ ಕಾರಣ ಎನ್ನುವುದನ್ನು ಮರೆಯಬಾರದು’ ಎಂದು ತಿಳಿಸಿದರು.

‘ಅಧಿಕಾರದಲ್ಲಿದ್ದಾಗ ಯಾರು ನಿಮ್ಮ ಪರವಾಗಿ ಇದ್ದೀರಾ ಅವರ ಪರವಾಗಿ ವಾಲ್ಮೀಕಿ ಸಮುದಾಯ ನಿಲ್ಲಬೇಕು. ವಾಲ್ಮೀಕಿ ಅವರ ಬಗ್ಗೆ ಮತ್ತು ರಾಮಾಯಣವನ್ನು ಪಠ್ಯದಲ್ಲಿ ಸೇರಿಸಬೇಕು ಎನ್ನುವ ಉಗ್ರಪ್ಪ ಅವರ ಬೇಡಿಕೆಯನ್ನು ಸಕಾರಾತ್ಮಕವಾಗಿ ಪರಿಗಣಿಸಲಾಗುವುದು’ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ‘ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಪ್ರಯತ್ನ ನಡೆಯುತ್ತಿದೆ. ನಮ್ಮ ತಟ್ಟೆಯ ಅನ್ನ ಕಿತ್ತುಕೊಂಡರೆ ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ಜನಸಂಖ್ಯೆಗೆ ತಕ್ಕಂತೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿಯನ್ನು ಶೇಕಡ 18ಕ್ಕೆ ಹೆಚ್ಚಿಸಬೇಕು’ ಎಂದು ಮನವಿ ಮಾಡಿದರು.

ವಾಲ್ಮೀಕಿ ಪ್ರಶಸ್ತಿ ಪ್ರದಾನ: ವಿವಿಧ ಕ್ಷೇತ್ರದ ಸಾಧಕರಾದ ನಾಗರಾಜು ಗಾಣದಹುಣಸೆ, ಪಿ.ತಿಪ್ಪೇಸ್ವಾಮಿ, ಜೆ.ಕೆ. ಮುತ್ತಮ್ಮ, ಮಳಸಿದ್ದ ಲಕ್ಷ್ಮಣ ನಾಯಕೋಡಿ ಹಾಗೂ ಕೆ.ಉಟ್ಟಂಗಪ್ಪ ಅವರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಸಿದ್ದರಾಮಯ್ಯ ಪ್ರದಾನ ಮಾಡಿದರು.

ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ವಿಧಾನ ಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ, ಶಾಸಕಿ ಅನ್ನಪೂರ್ಣ, ಮಾಜಿ ಸಚಿವ ಎಚ್.ಆಂಜನೇಯ ಹಾಜರಿದ್ದರು.

ಹೊಸ ಕಾಲೊನಿ: ಪ್ರಾಯೋಗಿಕ ಯೋಜನೆ

ಎಸ್‌ಸಿ-ಎಸ್‌ಟಿ ಹೊಸ ಕಾಲೊನಿಗಳ ನಿರ್ಮಾಣಕ್ಕೆ ಪ್ರಾಯೋಗಿಕ ಯೋಜನೆ ರೂಪಿಸಲಾಗಿದೆ. ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಭೂಮಿ ಖರೀದಿ ಮಾಡಿ, ಕಾಲೊನಿಗಳನ್ನು ನಿರ್ಮಾಣ ಮಾಡಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಹೊಸ ಕಾಲೊನಿಗಳಿಗೆ ಅಂಬೇಡ್ಕರ್, ವಾಲ್ಮೀಕಿಯವರ ಹೆಸರಿಡಲಾಗುವುದು. ಈ ಪ್ರಾಯೋಗಿಕ ಯೋಜನೆ ಯಶಸ್ವಿಯಾದರೆ ರಾಜ್ಯದಾದ್ಯಂತ ವಿಸ್ತರಿಸಲು ಕ್ರಮವಹಿಸಲಾಗುವುದು ಎಂದು ಹೇಳಿದರು.

ಎಸ್‌ಸಿ, ಎಸ್‌ಟಿಯ 500ಕ್ಕೂ ಹೆಚ್ಚು ವಿದ್ಯಾರ್ಥಿಗಳ ದೆಹಲಿಯಲ್ಲಿ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಲು ಅನುಕೂಲ ಆಗುವಂತೆ ಕಟ್ಟಡ ನಿರ್ಮಿಸಲು ಯೋಚಿಸಲಾಗಿದೆ. ಅದಕ್ಕಾಗಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನದಲ್ಲಿ ₹40 ಕೋಟಿ ಮೀಸಲಿಡಲಾಗಿದೆ. ಶೀಘ್ರದಲ್ಲೇ ಜಾಗ ಖರೀದಿಸಿ, ಕಟ್ಟಡ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬೆಂಗಳೂರಿನ ಸಮನಹಳ್ಳಿಯಲ್ಲಿ ವಾಲ್ಮೀಕಿ ಸೌಧ ನಿರ್ಮಾಣಕ್ಕೆ ಸರ್ಕಾರ 2 ಎಕರೆ ಜಮೀನು ಮಂಜೂರು ಮಾಡಿದ್ದು, ಬಜೆಟ್‌ನಲ್ಲಿ ₹50 ಕೋಟಿ ಅನುದಾನ ಒದಗಿಸಬೇಕು ಎಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದರು.

ಮೆಟ್ರೊ ನಿಲ್ದಾಣಕ್ಕೆ ಮಹರ್ಷಿ ವಾಲ್ಮೀಕಿಯವರ ಹೆಸರಿಡುವ ಕುರಿತು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ



ವಿಧಾನಸೌಧದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ನಾಗರಾಜು ಗಾಣದಹುಣಸೆ, ಜೆ.ಕೆ. ಮುತ್ತಮ್ಮ ಪಿ. ತಿಪ್ಪೇಸ್ವಾಮಿ, ಮಳಸಿದ್ದ ಲಕ್ಷ್ಮಣ ನಾಯಕೋಡಿ ಹಾಗೂ ಕೆ. ಉಟ್ಟಂಗಪ್ಪ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಿದರು. ಬಸವನಗೌಡ ದದ್ದಲ್, ಎಚ್. ಆಂಜನೇಯ, ಸತೀಶ ಜಾರಕಿಹೊಳಿ, ರಿಜ್ವಾನ್ ಅರ್ಷದ್, ಉಗ್ರಪ್ಪ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಸಚಿವ ಸ್ಥಾನಕ್ಕೆ ಪರಿಗಣನೆ’

ನಾಯಕ ಸಮುದಾಯದ ಶಾಸಕರಿಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಮುಂದಿನ ದಿನಗಳಲ್ಲಿ ನಡೆಯುವ ಸಚಿವ ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ಪರಿಗಣಿಸಲಾಗುವುದು’ ಎಂದರು.

ಸುದ್ದಿ 2 ನಿಮಿಷ

ಸರ್ಕಾರಿ ಜಯಂತಿ: ವಾಲ್ಮೀಕಿ ಸಮಾಜದಿಂದ ಬಹಿಷ್ಕಾರ

ಹೊಸಪೇಟೆ (ವಿಜಯನಗರ): ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಕುರುಬ ಸಮಾಜವನ್ನು ಸೇರಿಸುವ ರಾಜ್ಯ ಸರ್ಕಾರದ ಕ್ರಮವನ್ನು ವಿರೋಧಿಸಿ ವಾಲ್ಮೀಕಿ ನಾಯಕ ಸಮಾಜದವರು ಮಂಗಳವಾರ ಸರ್ಕಾರದಿಂದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಆಚರಿಸಲಾದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಬಹಿಷ್ಕರಿಸಿದರು.

ಇಲ್ಲಿನ ಸಂಡೂರು ರಸ್ತೆ ಬಳಿ ಸಮಾಜದ ಮೂಲ ಸ್ಥಳದಲ್ಲಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಗೋಸಲ ಭರಮಪ್ಪ, ಪ್ರಧಾನ ಕಾರ್ಯದರ್ಶಿ ದೇವರಮನಿ ಶ್ರೀನಿವಾಸ್ ಸೇರಿ ಪ್ರಮುಖರು ವಾಲ್ಮೀಕಿ ಜಯಂತಿ ಕಾರ್ಯಕ್ರಮ ನಡೆಸಿದರು. ಅದೇ ರೀತಿ ಕೇರಿಗಳಲ್ಲಿ, ಸಮೀಪದ ಸ್ಥಳಗಳಲ್ಲಿ ಸಮಾಜದವರು ಸೇರಿ ವಾಲ್ಮೀಕಿ ಜಯಂತಿ ಆಚರಿಸಿದರು.

ಗುರುಗಳ ಬೆಂಬಲವಿಲ್ಲ: ‘ಸರ್ಕಾರದ ಕಾರ್ಯಕ್ರಮಕ್ಕೆ ಹೋಗದಂತೆ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಕೋರಿದ್ದೆವು. ಅವರು ಅಲ್ಲಿ ಹೋಗದಿರುವುದು ನಮ್ಮ ಹೋರಾಟಕ್ಕೆ ಬಹುದೊಡ್ಡ ಶಕ್ತಿ ಸಿಕ್ಕಿದಂತಾಗಿದೆ. ನಮ್ಮ ಹೋರಾಟ ಇನ್ನೂ ತೀವ್ರಗೊಳ್ಳುವುದು ನಿಶ್ಚಿತ’ ಎಂದು ಸಮಾಜದ ಮುಖಂಡ ದೇವರಮನಿ ಶ್ರೀನಿವಾಸ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸರ್ಕಾರಿ ಕಾರ್ಯಕ್ರಮ: ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಮತ್ತಿತರರು ಪಾಲ್ಗೊಂಡಿದ್ದರು.

ಭ್ರಮರಾಂಬ ದೇವಿ ರಥ ಎಳೆದ ಮಹಿಳೆಯರು



ಮಸ್ಕಿ (ರಾಯಚೂರು ಜಿಲ್ಲೆ): ಪಟ್ಟಣದ ಭ್ರಮರಾಂಬ ದೇವಿಯ ಪುರಾಣ ಮಂಗಲೋತ್ಸವದ ಅಂಗವಾಗಿ ಮಂಗಳವಾರ ಮಹಿಳೆಯರು ದೇವಿಯ ರಥ ಎಳೆದರು.

ಸಂಜೆ 5 ಗಂಟೆಗೆ ಭ್ರಮರಾಂಬ ದೇವಿಯ ಉತ್ಸವ ಮೂರ್ತಿಯನ್ನು ರಥದ ಸುತ್ತ 5 ಬಾರಿ ಪ್ರದಕ್ಷಿಣೆ ಹಾಕಿದ ನಂತರ ಗಚ್ಚಿನಮಠದ ವರರುದ್ರಮುನಿ ಸ್ವಾಮೀಜಿ ರಥಕ್ಕೆ ಪೂಜೆ ಸಲ್ಲಿಸಿದರು.

ಜಯಘೋಷಗಳ ನಡುವೆ ದೇವಿ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಲಾಯಿತು. ರಥಕ್ಕೆ ಚಾಲನೆ ನೀಡುತ್ತಿದ್ದಂತೆ ನೂರಾರು ಮಹಿಳೆಯರು ರಥದ ಮಿಣಿ ಹಿಡಿದು ಎಳೆಯತೊಡಗಿದರು. ಪಾದಗಟ್ಟೆಯವರೆಗೆ ರಥ ಎಳೆದು ವಾಪಸ್ ದೇವಸ್ಥಾನಕ್ಕೆ ತರಲಾಯಿತು.

ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೆಚ್ಚ

ಲೋಕಾಯುಕ್ತ ತನಿಖೆಗೆ ಕಸಾಪ ಒತ್ತಾಯ

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ): ‘ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಮಾಡಿದ ವೆಚ್ಚವೂ ಸೇರಿ ಲೋಕಾಯುಕ್ತದಿಂದ ತನಿಖೆ ಮಾಡಿಸುವಂತೆ ಕನ್ನಡ ಸಾಹಿತ್ಯ ಪರಿಷತ್ತು ಆಗ್ರಹಿಸಿದ್ದು, ಈ ಕುರಿತು ಕಾರ್ಯಕಾರಿಣಿ ಸರ್ವಾನುಮತದಿಂದ ತೀರ್ಮಾನಿಸಿದೆ.

ಜಮಖಂಡಿಯ ಅನ್ನಪೂರ್ಣೇಶ್ವರ ಹೋಟೆಲ್ ಸಭಾಂಗಣದಲ್ಲಿ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಪರಿಷತ್ತಿನ ಪ್ರಕಟಣೆ ತಿಳಿಸಿದೆ.

‘ಮಂಡ್ಯದ ಸಮ್ಮೇಳನಕ್ಕೆ ಸರ್ಕಾರದಿಂದ ಅಲ್ಲಿನ ಜಿಲ್ಲಾಡಳಿತಕ್ಕೆ ಬಿಡುಗಡೆಯಾದ ₹30 ಕೋಟಿ ಅನುದಾನದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ₹2.5 ಕೋಟಿ ಮಾತ್ರ ಪಡೆದಿದೆ. ವೇದಿಕೆ, ಆಹಾರದಿಂದ ಹಿಡಿದು ಪೊರಕೆ ಖರೀದಿಯವರೆಗೆ ಹಣ ದುರ್ಬಳಕೆಯಾದ ಬಗ್ಗೆ ಆರೋಪಗಳಿವೆ. ಪರಿಷತ್ತು ತನ್ನ ಸ್ವಚ್ಛ ಆಡಳಿತ, ರುಜುತ್ವ ಮತ್ತು ಪಾರದರ್ಶಕತೆ ಸಾಬೀತು ಮಾಡಲು ತನಿಖೆಗೆ ಕೋರಲು ನಿರ್ಧರಿಸಿದೆ’ ಎಂದು ಪರಿಷತ್ತಿನ ಮಾಧ್ಯಮ ಸಂಚಾಲಕ ಎನ್.ಎಸ್. ಶ್ರೀಧರ ಮೂರ್ತಿ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಲೇಖಕಿಯರ ಸಂಘದ ಆರ್ಥಿಕ ಅಶಿಸ್ತು ತನಿಖೆ ಆಗಲಿ
- ಪಾರದರ್ಶಕತೆ ಸಾಬೀತುಪಡಿಸಲು ವಿಚಾರಣೆ ಅವಶ್ಯ

‘ಪ್ರೊ.ಜಯಪ್ರಕಾಶ ಗೌಡ, ಮೀರಾ ಶಿವಲಿಂಗಯ್ಯ, ಕೆ.ಟಿ.ಶ್ರೀಕಂಠೇಗೌಡ ಮತ್ತಿತರರು ವಿವಿಧ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಸರ್ಕಾರದಿಂದ ಅನುದಾನ ಪಡೆಯುತ್ತಿದ್ದಾರೆ. ಅವರ ಸಂಸ್ಥೆಗಳ ಮೇಲೆ ಕೂಡ ಹಣಕಾಸು ದುರ್ಬಳಕೆ, ಆಡಳಿತದಲ್ಲಿ ಅಕ್ರಮ, ಸ್ವಜನ ಪಕ್ಷಪಾತದಂತಹ ಗಂಭೀರ ಆರೋಪಗಳಿವೆ. ಅವರೂ ಪರಿಷತ್ತಿನಂತೆ ಸ್ವಯಂ ಪ್ರೇರಣೆಯಿಂದ ಲೋಕಾಯುಕ್ತ ತನಿಖೆಗೆ ಒಳಪಟ್ಟು ಸ್ವಚ್ಛರಾಗಿ ಹೊರಬರುವ ಮೂಲಕ ಮಾದರಿಯಾಗುತ್ತಾರೆ ಎಂದು ಕಾರ್ಯಕಾರಿಣಿ ಅಪೇಕ್ಷಿಸಿದೆ’ ಎಂದಿದ್ದಾರೆ.

ಪರಿಷತ್ತಿನ ಬಗ್ಗೆ ನಿರಂತರ ಅಪಾದನೆ ಮಾಡುವವರಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಕೂಡ ಸೇರಿದ್ದಾರೆ. ಈಗ ಅವರ ಮೇಲೆ ಅವರ ಪದಾಧಿಕಾರಿಗಳೇ ಸರ್ವಾಧಿಕಾರ, ಆರ್ಥಿಕ ಅಶಿಸ್ತಿನಂತಹ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಈ ಕಾರಣದಿಂದ ಲೇಖಕಿಯರ ಸಂಘದ ಅವ್ಯವಹಾರ ಕುರಿತೂ ಸಂಘ ಸಂಸ್ಥೆಗಳ ನಿಬಂಧಕರು, ಕಸಾಪದಂತೆ ತನಿಖೆ ನಡೆಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಲು ನಿರ್ಧರಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಪರಿಷತ್ತಿನ ವಿರುದ್ಧ ನಿರಂತರ ಆರ್ಥಿಕ ಅಶಿಸ್ತಿನ ಅಪಾದನೆ ಮಾಡಿ ಆಡಳಿತಾಧಿಕಾರಿ ನೇಮಕಕ್ಕೆ ಒತ್ತಾಯಿಸುತ್ತಿರುವವರಲ್ಲಿ ವಸುಂಧರಾ ಭೂಪತಿ, ಪುಷ್ಪ ಅವರ ಪತಿ ಆರ್.ಜಿ. ಹಳ್ಳಿ ನಾಗರಾಜ್, ಲೇಖಕಿಯರ ಸಂಘದ ಮಂಡ್ಯ ಜಿಲ್ಲಾ ಪ್ರತಿನಿಧಿ ಮೀರಾ ಶಿವಲಿಂಗಯ್ಯ, ಎನ್.ಹನುಮೇಗೌಡ, ಬಿ. ಜಯಪ್ರಕಾಶ ಗೌಡ, ಪ್ರೊ.ಎಸ್. ಜಿ.ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಸಿ.ಕೆ.ರಾಮೇಗೌಡ ಮತ್ತಿತರರು ಇದ್ದಾರೆ. ಇವರೆಲ್ಲರೂ ಲೇಖಕಿಯರ ಸಂಘದ ಆರ್ಥಿಕ ಅವ್ಯವಹಾರಗಳ ತನಿಖೆಗೆ ಸರ್ಕಾರವನ್ನು ಒತ್ತಾಯಿಸಿ ಕನ್ನಡದ ಮೇಲಿನ ಬದ್ಧತೆ, ನಿಷ್ಪಕ್ಷಪಾತವನ್ನು ಸಾಬೀತು ಪಡಿಸಬೇಕು’ ಎಂದಿದ್ದಾರೆ.

‘ಪರಿಷತ್ತಿನ ಕುರಿತು ಅತೃಪ್ತರು, ಅಸಂತುಷ್ಟರು, ನಿರಂತರವಾಗಿ ನಡೆಸುತ್ತಿರುವ ಅಪಪ್ರಚಾರ ಮತ್ತು ಪರಿಷತ್ತಿನ ಆಡಳಿತದಲ್ಲಿ ಹಿಂಬಾಗಿಲ ಪ್ರವೇಶದ ಪ್ರಯತ್ನಗಳನ್ನು ಕಾನೂನು ಮೂಲಕ ಎದುರಿಸಲು ನಿರ್ಧರಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಗಣತಿ ವೇಳೆ ಎದುರಾದ ಆನೆ ಶಿಕ್ಷಕನಿಗೆ ಗಾಯ



ಕಾಡಾನೆ ದಾಳಿಯಿಂದ ಶಿಕ್ಷಕ ತಪ್ಪಿಸಿಕೊಳ್ಳಲು ಮುಂದಾದ ವೇಳೆ ಕೆಸರಿನಲ್ಲಿ ಜಾರಿ ಬಿದ್ದ ಬೈಕ್

ಸಿದ್ದಾಪುರ (ಕೊಡಗು): ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ತೆರಳುತ್ತಿದ್ದ ಗೋಣಿಕೊಪ್ಪಲು ಪ್ರೌಢಶಾಲಾ ಶಿಕ್ಷಕ ಶಿವಾರಂ ಅವರು ಎದುರಿಗೆ ಬಂದ ಆನೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಬೈಕ್‌ನಿಂದ ಬಿದ್ದು ಗಾಯಗೊಂಡರು. ಅವರ ಕಾಲಿಗೆ ಗಾಯವಾಗಿದ್ದು, ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಸಮೀಕ್ಷೆ ಸಲುವಾಗಿ ಮಾಲ್ದಾರೆ ಸಮೀಪದ ಅವರೆಗುಂದ ಹಾಡಿಗೆ ಅವರು ತೆರಳಿದ್ದರು. ಬಸವನಹಳ್ಳಿ ಮಾರ್ಗವಾಗಿ ದುಬಾರೆ ಹಾಡಿಗೆ ತೆರಳುವಾಗ ಕಾಡಾನೆ ಎದುರಾಗಿತ್ತು. ಗಾಬರಿಗೊಂಡು ಬೈಕ್‌ನಲ್ಲಿ ವೇಗವಾಗಿ ತೆರಳಲು ಯತ್ನಿಸಿದಾಗ ಕೆಸರಿನ ರಸ್ತೆಯಲ್ಲಿ ಜಾರಿ ಬಿದ್ದರು. ನಂತರ ಸ್ವಲ್ಪ ದೂರ ಓಡಿ ಪಾರಾದರು.

ಸ್ಕೂಟಿಯಿಂದ ಬಿದ್ದು ಶಿಕ್ಷಕಿಗೆ ಗಾಯ

ಬೇಲೂರು (ಹಾಸನ): ತಾಲ್ಲೂಕಿನ ಗೆಂಡೇಹಳ್ಳಿ, ಬಸ್ಕಲ್‌ನಲ್ಲಿ ಸಮೀಕ್ಷೆ ಮುಗಿಸಿಕೊಂಡು ಸ್ಕೂಟಿಯಲ್ಲಿ ಬರುತ್ತಿದ್ದ ಗೆಂಡೇಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆಯ ಶಿಕ್ಷಕಿ ಲುಬ್ನಾ ಅವರು, ತಮ್ಮನ್ನು ಅಟ್ಟಿಸಿಕೊಂಡು ಬಂದ ಬೀದಿ ನಾಯಿಗಳಿಂದ ಪಾರಾಗಲು ಪ್ರಯತ್ನಿಸುವ ವೇಳೆ ಬಿದ್ದು ಎಡಗೈ ಮೂಳೆ ಮುರಿದಿದೆ. ಬೀದಿ ನಾಯಿಗಳಿಗೆ ಹೆದರಿದ ಶಿಕ್ಷಕಿಯು ಸ್ಕೂಟಿಯನ್ನು ವೇಗವಾಗಿ ಓಡಿಸಲು ಯತ್ನಿಸಿ ಆಯತಪ್ಪಿ ಬಿದ್ದರು. ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಶಿಕ್ಷಕರ ಆಕ್ರೋಶ: ‘ಬೇಲೂರಿನಲ್ಲಿ ಶಿಕ್ಷಕಿ ಚಿಕ್ಕಮ್ಮ ಅವರ ಮೇಲೆ ನಾಯಿಗಳು ದಾಳಿ ನಡೆಸಿದ ಘಟನೆ ಮಾಸುವ ಮುನ್ನವೇ ನಾಗೇನಹಳ್ಳಿ ಹಾಗೂ ಗೆಂಡೇಹಳ್ಳಿ ಭಾಗದಲ್ಲಿ ಲುಬ್ನಾ ಹಾಗೂ ಲತಾ ಎಂಬುವರಿಗೆ ಕೈ ಹಾಗೂ ಕಾಲು ಮುರಿದಿವೆ’ ಎಂದು ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಆರ್. ಮಂಜುನಾಥ್ ಹೇಳಿದರು.

ಗಣತಿಯಿಂದ ವಿನಾಯ್ತಿಗೆ ಮನವಿ

ಬೆಂಗಳೂರು: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ 23 ಕ್ಷೇತ್ರ ಸಿಬ್ಬಂದಿಯನ್ನು ಜಾತಿವಾರು ಸಮೀಕ್ಷೆಗೆ ಬಳಸಿಕೊಂಡಿದ್ದು, ಇದರಿಂದ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಕಾರ್ಯಕ್ಕೆ ತೊಂದರೆ ಆಗಿದೆ. ಇವರಿಗೆ ಸಮೀಕ್ಷೆ ಕಾರ್ಯದಿಂದ ವಿನಾಯಿತಿ ನೀಡಬೇಕು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಪಿ.ಸಿ. ರೇ ಅವರು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರಿಗೆ ಪತ್ರ ಬರೆದಿದ್ದಾರೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ 260 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಇಲ್ಲಿ ನಿತ್ಯವೂ ಮಾನವ–ವನ್ಯಜೀವಿ ಸಂಘರ್ಷದ ಪ್ರಕರಣಗಳು ಹಾಗೂ ವನ್ಯಜೀವಿ ಕಳ್ಳಬೇಟೆ ಪ್ರಯತ್ನಗಳು ಹೆಚ್ಚಾಗಿ ನಡೆಯುತ್ತಿವೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ಸಮೀಕ್ಷಕರಿಗೆ ಅಸ್ಪೃಶ್ಯತೆ ಅನುಭವ

ಪ್ರಜಾವಾಣಿ ವಾರ್ತೆ

ಯಳಂದೂರು (ಚಾಮರಾಜನಗರ ಜಿಲ್ಲೆ): ಜಿಲ್ಲೆಯ ಕೆಲವೆಡೆ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಮಾಡುತ್ತಿರುವವರಿಗೆ ಅಸ್ಪೃಶ್ಯತೆಯ ಅನುಭವ ವಾಗುತ್ತಿದೆ. ಸಾರ್ವಜನಿಕರು ಸಮೀಕ್ಷಕರ ಜಾತಿ ಕೇಳಿ ಒಳಗೆ ಬಿಟ್ಟುಕೊಳ್ಳುತ್ತಿರುವ ಘಟನೆಗಳು ನಡೆಯುತ್ತಿವೆ. ಈ ಬಗ್ಗೆ ಸಮೀಕ್ಷಕರು ನೋವು ತೋಡಿಕೊಳ್ಳುತ್ತಿದ್ದಾರೆ.

‘ಈಚೆಗೆ ತಾಲ್ಲೂಕಿನಲ್ಲಿ ಮೇಲ್ವರ್ಗದವರ ಮನೆಗೆ ತೆರಳಿ ಸಮೀಕ್ಷೆಗೆ ಪೂರಕ ಮಾಹಿತಿ ಸಂಗ್ರಹಿಸಿದೆ. ಮನೆಯೊಳಗೆ ನೆಟ್‌ವರ್ಕ್ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಹೊರಗೆ ಬಂದು ಆ್ಯಪ್‌ನಲ್ಲಿ ಮಾಹಿತಿ ದಾಖಲಿಸಿ ಮತ್ತೆ ಮನೆಯೊಳಗೆ ಹೋದಾಗ ನಾವು ಕುಳಿತಿದ್ದ ಕುರ್ಚಿಗಳನ್ನು ನೀರಿನಿಂದ ತೊಳೆಯುತ್ತಿದ್ದ ದೃಶ್ಯ ಕಂಡು ಬೇಸರವಾಯಿತು’ ಎಂದು ಪರಿಶಿಷ್ಟ ಜಾತಿಯ ಶಿಕ್ಷಕರೊಬ್ಬರು ತಿಳಿಸಿದರು.

‘ಸಮೀಕ್ಷೆ ವೇಳೆ ಕೆಲವರು ಯಾವ ಜಾತಿ ಎಂದು ಕೇಳುತ್ತಾರೆ, ಪರಿಶಿಷ್ಟರೆಂದು ತಿಳಿದ ಕೂಡಲೇ ಜಗುಲಿಯಲ್ಲಿ ಕೂರಲು ಹೇಳುತ್ತಾರೆ. ಸಮೀಕ್ಷೆ ಮುಗಿದ ಬಳಿಕ ಜಗುಲಿ ಶುಚಿಗೊಳಿಸುತ್ತಾರೆ. ಇಂತಹ ಕಹಿ ಘಟನೆಗಳು ನೋವುಂಟು ಮಾಡುತ್ತಿವೆ. ಅಸ್ಪೃಶ್ಯತೆ ಎಂಬ ಕರಾಳತೆ ಇಂದಿಗೂ ಕೆಲವೆಡೆ ಜೀವಂತವಾಗಿದೆ’ ಎಂದು ಸಮೀಕ್ಷಕರು ಅಳಲು ತೋಡಿಕೊಂಡರು.

ಯಾರೂ ನಿರಾಕರಿಸಿಲ್ಲ: ‘ತಾಲ್ಲೂಕಿನಲ್ಲಿ ಸಮೀಕ್ಷೆ ಭರದಿಂದ ನಡೆದಿದೆ. ಹೊಂದಾಣಿಕೆಯಾಗದ 437 ಯುಜಿಐಡಿ ಸಂಖ್ಯೆಗಳ ಪರಿಶೀಲನೆ ನಂತರ ಪೂರ್ಣಗೊಳ್ಳಲಿದೆ. ಸಮೀಕ್ಷಕರ ಜಾತಿಯ ಕಾರಣದಿಂದ ಯಾರೂ ಮಾಹಿತಿ ನೀಡಲು ನಿರಾಕರಿಸಿಲ್ಲ’ ಎಂದು ತಹಶೀಲ್ದಾರ್ ಎಸ್. ಎಲ್.ನಯನ ಪ್ರತಿಕ್ರಿಯಿಸಿದರು.

ಅಪಾರ್ಟ್‌ಮೆಂಟ್‌ಗಳಲ್ಲಿ ನಿರಾಕರಣೆ

ಮೈಸೂರಿನ ಕೆಲ ಅಪಾರ್ಟ್‌ ಮೆಂಟ್‌ಗಳಲ್ಲಿ ಸಮೀಕ್ಷೆಗೆ ಮಾಹಿತಿ ನೀಡಲು ನಿರಾಕರಿಸುವ ಘಟನೆಗಳು ನಡೆದಿವೆ. ‘ಅಪಾರ್ಟ್‌ಮೆಂಟ್ ಒಳಗೆ ಪ್ರವೇಶ ದೊರಕದೇ ವಾಪಸು ಬಂದವರೂ ಇದ್ದಾರೆ’ ಎಂದು ಸಮೀಕ್ಷಕರೊಬ್ಬರು ತಿಳಿಸಿದರು. ‘110 ಮನೆಗಳಿರುವ ಅಪಾರ್ಟ್‌ಮೆಂಟ್‌ನ 90 ಮನೆ ಗಳಿಗೆ ಭೇಟಿ ನೀಡಿದಾಗ, 13 ಮನೆಗಳಲ್ಲಿ ಮಾತ್ರ ಮಾಹಿತಿ ನೀಡಿದರು. ಉಳಿದವರು ಮನೆ ಬಾಗಿಲನ್ನೇ ತೆಗೆಯಲಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಸಮೀಕ್ಷೆಗೆ ಸಿಬ್ಬಂದಿ; ‘ಕಡತ’ ವಿಲೇ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯಕ್ಕೆ ಎಲ್ಲ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್ ‘ಬಿ’ ಮತ್ತು ಗ್ರೂಪ್ ‘ಬಿ’ ವೃಂದದ ಅಧಿಕಾರಿ, ಸಿಬ್ಬಂದಿಯನ್ನು ನಿಯೋಜಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿದೆ. ಇದರಿಂದ ‘ಆಡಳಿತ ಶಕ್ತಿ ಕೇಂದ್ರ’ಗಳಾದ ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡದಲ್ಲಿರುವ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಕಡತಗಳ ವಿಲೇವಾರಿ ಸ್ಥಗಿತಗೊಂಡಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಅ. 4ರಿಂದ ಸಮೀಕ್ಷೆ ಆರಂಭಗೊಂಡಿದೆ. ಈ ಸಮೀಕ್ಷೆಗೆ ಸರ್ಕಾರದ ಸಚಿವಾಲಯಕ್ಕೆ ಸಂಬಂಧಿಸಿದಂತೆ ಡಿಪಿಎಆರ್‌ನ ಒಟ್ಟು 1,566 ಅಧಿಕಾರಿ, ಸಿಬ್ಬಂದಿಯನ್ನು ಒದಗಿಸುವಂತೆ ಪ್ರಾಧಿಕಾರದ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರು ಮನವಿ ಮಾಡಿದ್ದರು. ಅದರಂತೆ ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿದೆ ಎಂದು ಡಿಪಿಎಆರ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಜಿಬಿಎ ಸಮೀಕ್ಷೆ: ಅತೀ ಹೆಚ್ಚು ಸಿಬ್ಬಂದಿ ನಿಯೋಜಿಸಿದ ಇಲಾಖೆ

ಇಲಾಖೆ	ಸಮೀಕ್ಷಕರು
ಶಾಲಾ ಶಿಕ್ಷಣ	5,132
ಬಿಬಿಎಂಪಿ	1,684
ಡಿಪಿಎಆರ್	1,566
ಬಿಡಬ್ಲ್ಯುಎಸ್‌ಎಸ್‌ಬಿ	936
ಶಾಲಾ ಶಿಕ್ಷಣ (ಪದವಿಪೂರ್ವ)	860
ಕೆಪಿಟಿಸಿಎಲ್	810
ತಾಂತ್ರಿಕ ಶಿಕ್ಷಣ	806
ಬೆಸ್ಕಾಂ	657
ಅಬಕಾರಿ	635

‘ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ಆಗುವಂತೆ ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರು ಅಧಿಕಾರಿ, ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆ ಮಾಡಬೇಕು. ಒಂದೊಮ್ಮೆ ಸಮೀಕ್ಷಾ ಕರ್ತವ್ಯ ನಿರ್ವಹಿಸಲು ನಿರ್ಲಕ್ಷ್ಯ ತೋರಿದರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಜಿಬಿಎ ಮುಖ್ಯ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ’ ಎಂದೂ ಅವರು ತಿಳಿಸಿದರು.

22,672 ಸಿಬ್ಬಂದಿಯ ನಿಯೋಜನೆ: ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆಗೆ ವಿವಿಧ ಇಲಾಖೆ, ನಿಗಮ ಮಂಡಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್ ‘ಬಿ’ ಮತ್ತು ಗ್ರೂಪ್ ‘ಸಿ’ ವೃಂದದ ಒಟ್ಟು 22,672 ಸಿಬ್ಬಂದಿಯನ್ನು ನಿಯೋಜಿಸುವಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮಹೇಶ್ವರ ರಾವ್ ಅವರು ಸೆ. 19ರಂದು ಪತ್ರ ಬರೆದಿದ್ದರು.

ನಾವು ಯಾರನ್ನೂ ವಿಭಜಿಸುವುದಿಲ್ಲ: ಡಿಸಿಎಂ ಶಿವಕುಮಾರ್

ಬೆಂಗಳೂರು: ‘ನಾವು (ರಾಜ್ಯ ಸರ್ಕಾರ) ಯಾರನ್ನೂ ವಿಭಜಿಸುವುದಿಲ್ಲ’ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಲಿಂಗಾಯತ ಧರ್ಮದ ವಿಚಾರವಾಗಿ ಕಾಂಗ್ರೆಸ್ ಪಕ್ಷದಲ್ಲಿಯೇ ಭಿನ್ನಮತವಿದೆಯೆ’ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈ ವಿಚಾರವನ್ನು ಆ ಸಮಾಜಕ್ಕೆ ಹಾಗೂ ಜನರಿಗೆ ಬಿಡುತ್ತೇವೆ. ಆ ಬಗ್ಗೆ ನಾವು ಚಿಂತಿಸುವುದಿಲ್ಲ’ ಎಂದರು.

‘ಲಿಂಗಾಯತ ಸಮುದಾಯದ ವಿಚಾರದಲ್ಲಿ ನಾವು ಮಧ್ಯ ಪ್ರವೇಶಿಸುವುದಿಲ್ಲ. ನಾವು ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ವಿಚಾರವಾಗಿ ಮಾತ್ರ ಆ ಸಮುದಾಯದವರ ಗುರುತು ಕೇಳುತ್ತಿದ್ದೇವೆ’ ಎಂದೂ ಅವರು ಸ್ಪಷ್ಟಪಡಿಸಿದರು.

ಸೀಗೆ ಹುಣ್ಣಿಮೆ: ಹುಲಿಗಿಗೆ ಲಕ್ಷಾಂತರ ಜನರ ಭೇಟಿ, ಬಾಲಕಿ ಪ್ರಜ್ಞಾಹೀನ

ಜನಸಂದಣಿ: ಭಕ್ತರ ಪರದಾಟ, ನೂಕಾಟ

ಪ್ರಜಾವಾಣಿ ವಾರ್ತೆ

ಮುನಿರಾಬಾದ್ (ಕೊಪ್ಪಳ ಜಿಲ್ಲೆ): ಸೀಗೆ ಹುಣ್ಣಿಮೆ ಅಂಗವಾಗಿ ತಾಲ್ಲೂಕಿನ ಹುಲಿಗಿಯಲ್ಲಿರುವ ಹುಲಿಗೆಮ್ಮ ದೇವಿ ದರ್ಶನಕ್ಕೆ ಮಂಗಳವಾರ ಬಂದಿದ್ದ ಲಕ್ಷಾಂತರ ಭಕ್ತರು ದೇವಸ್ಥಾನದ ಸುತ್ತಲಿನ ಅವ್ಯವಸ್ಥೆಯಿಂದಾಗಿ ಪರದಾಡುವಂತಾಯಿತು.

ಪ್ರತಿ ಮಂಗಳವಾರ, ಶುಕ್ರವಾರ ಮತ್ತು ಹುಣ್ಣಿಮೆ ದಿನಗಳಂದು ಹುಲಿಗೆಮ್ಮ ದೇವಿ ದರ್ಶನಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಬರುವುದು ಸಾಮಾನ್ಯ. ಆದರೆ ಈ ಬಾರಿ ಹುಣ್ಣಿಮೆ ಮತ್ತು ಮಂಗಳವಾರ ಎರಡೂ ಒಂದೇ ದಿನ ಬಂದಿದ್ದರಿಂದ ಪ್ರತಿಸಲಕ್ಕಿಂತಲೂ ಹೆಚ್ಚಿನ ಜನದಟ್ಟಣೆಯಿತ್ತು. ಜನಸಂದಣಿಯಲ್ಲಿ ಸಿಲುಕಿ ಬಿದ್ದ ವಯಸ್ಸಾದವರು ಹಾಗೂ ಮಕ್ಕಳನ್ನು ಸುತ್ತಲಿದ್ದವರು ರಕ್ಷಣೆ ಮಾಡಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ ಎಂದು ಸ್ಥಳೀಯರು ಹೇಳಿದರು.



ಸೀಗೆ ಹುಣ್ಣಿಮೆ ಅಂಗವಾಗಿ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ನಡೆದ ಜೋಗತಿಯರ ಕುಣಿತದ ವೇಳೆ ಭಕ್ತರೊಬ್ಬರ ಹೆಗಲ ಮೇಲೆ ಕಾಲಿಟ್ಟು ಭಕ್ತಿಯ ಪರಾಕಾಷ್ಠೆ ಪ್ರದರ್ಶಿಸಿದ ಪರಿ

—ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಪ್ರವೇಶ ದ್ವಾರದಿಂದ ದೇವಸ್ಥಾನದ ತನಕ ಸಾಗುವ ಮಾರ್ಗದಲ್ಲಿ ಕೆಲವರು ರಸ್ತೆಯ ಮೇಲೆಯೇ ಪೂಜಾ ಸಾಮಗ್ರಿಗಳನ್ನು ಮಾರಾಟ ಮಾಡಿದ್ದರಿಂದ ದಟ್ಟಣೆ ಹೆಚ್ಚಾಗಿ ನಡೆದ ತಳ್ಳಾಟದಲ್ಲಿ ಕೆಲವು ಭಕ್ತರು ತೆಂಗಿನಕಾಯಿ ಮಾರುವ ವ್ಯಾಪಾರಿಗಳ ಮೇಲೆ ಬಿದ್ದರು. ಉಸಿರಾಡಲು ಕಷ್ಟವಾಗಿ ಪ್ರಜ್ಞಾಹೀನಳಾಗಿ ಬಿದ್ದ ಸಂಡೂರಿನ ಬಾಲಕಿಯನ್ನು ಸುತ್ತಲೂ ಇದ್ದವರೇ ಆಸ್ಪತ್ರೆಗೆ ಸೇರಿಸಿದರು. ಬಹುತೇಕರು ದೇವಿಯ ದರ್ಶನ ಪಡೆದ ಬಳಿಕವೇ ಊಟ ಮಾಡುವ ಸಂಪ್ರದಾಯ ಪಾಲಿಸಿಕೊಂಡು ಬಂದಿದ್ದು ಜನಸಂದಣಿಯಲ್ಲಿ ಉಸಿರಾಡಲೂ ಸಂಕಷ್ಟ ಎದುರಿಸಬೇಕಾದ ಸ್ಥಿತಿ ನಿರ್ಮಾಣವಾಗಿತ್ತು ಎಂದು ಭಕ್ತರು ಆಕ್ರೋಶ ಹೊರಹಾಕಿದರು.

ಮಂಗಳವಾರ ಹಾಗೂ ಹುಣ್ಣಿಮೆ ಎರಡೂ ಒಂದೇ ದಿನ ಬಂದಿರುವ ಕಾರಣ ಕನಿಷ್ಠ ಮೂರರಿಂದ ನಾಲ್ಕು ಲಕ್ಷ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರಿಂದ ಜನದಟ್ಟಣೆಯಾಗಿದೆ

ಯು.ಎಚ್. ಪ್ರಕಾಶರಾವ್
ಕಾರ್ಯದರ್ಶಿ, ಹುಲಿಗೆಮ್ಮದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಸೋಮವಾರ ರಾತ್ರಿಯಿಂದಲೇ ಭಕ್ತರು ಹುಲಿಗಿಗೆ ಬಂದಿದ್ದು, ದೇವಸ್ಥಾನದ ಹಿಂಭಾಗದಲ್ಲಿರುವ ತುಂಗಾಭದ್ರಾ ನದಿಯಲ್ಲಿ ಸ್ನಾನ ಮಾಡಿ ಬಂದವರು ಹಾಗೂ ಮುಂಭಾಗದ ಗೇಟ್‌ನಿಂದ ಬಂದ ಜನರನ್ನು ನಿಯಂತ್ರಿಸಲು ಪೊಲೀಸರು ಸಾಕಷ್ಟು ಪರದಾಟ ನಡೆಸಬೇಕಾಯಿತು. ಪೊಲೀಸರ ಸಂಖ್ಯೆಯೂ ಕಡಿಮೆಯಲ್ಲಿತ್ತು. ಪರಿಸ್ಥಿತಿ ಕೈ ಮೀರುತ್ತಿರುವ ಲಕ್ಷಣ ಕಂಡು ಬಂದ ಕಾರಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ ಸ್ಥಳಕ್ಕೆ ಬಂದು ಶಿಸ್ತುಬದ್ಧ ಸಂಚಾರಕ್ಕೆ ಕ್ರಮ ಕೈಗೊಂಡರು. ಈ ದೇವಸ್ಥಾನಕ್ಕೆ ರಾಜ್ಯದ ಜೊತೆಗೆ ಆಂಧ್ರ ಮತ್ತು ತೆಲಂಗಾಣದಿಂದಲೂ ಭಕ್ತರು ಬರುತ್ತಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.30	5,531	5,909
ಹಾರಂಗಿ	2,859	2,858.30	649	1,600
ಕಬಿನಿ	2,284.00	2,282.96	483	1,050
ಹೇಮಾವತಿ	2,922	2,917.30	2,748	6,610
ಲಿಂಗನಮಕ್ಕಿ	1,819	1,816.35	2,232	4,533
ಸೂಪಾ (ಮೀ)	564	559.49	1,909	4,683.16
ಮಾಣಿ	595	594.19	176	633
ತುಂಗಭದ್ರಾ	1,633	1,626.06	11,072	10,765
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.93	2,466	1,336
ಭದ್ರಾ *	186	184.2	3,603	3,904
ಆಲಮಟ್ಟಿ (ಮೀ)	519.6	519.60	25,269	20,385
ನಾರಾಯಣಪುರ (ಮೀ)	492.25	492.25	15,000	7030

* ನೆಲಮಟ್ಟದಿಂದ

ಜಾತಿವಾರು ಸಮೀಕ್ಷೆ: ಅ. 18 ಗಡುವು

ಒಂದನೇ ಪುಟದಿಂದ...

‘ಹೀಗಾಗಿ ಶಿಕ್ಷಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಆಯೋಗದ ಜೊತೆ ಚರ್ಚಿಸಿ, ಅವಧಿ ವಿಸ್ತರಿಸಲು ತೀರ್ಮಾನಿಸಲಾಗಿದೆ’ ಎಂದರು.

‘ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ ಅ. 12ರಿಂದ ಆರಂಭವಾಗಲಿದೆ. ಈ ಪರೀಕ್ಷಾ ಪ್ರಕ್ರಿಯೆಗೆ ಯಾವುದೇ ಅಡ್ಡಿ ಆಗಬಾರದೆಂಬ ಕಾರಣಕ್ಕೆ ಪಿಯು ಉಪನ್ಯಾಸಕರಿಗೆ ಸಮೀಕ್ಷಾ ಕಾರ್ಯದಿಂದ ಸಂಪೂರ್ಣವಾಗಿ ವಿನಾಯಿತಿ ನೀಡಲಾಗಿದೆ’ ಎಂದು ಸಿ.ಎಂ ತಿಳಿಸಿದರು.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 46 ಲಕ್ಷ ಮನೆಗಳಿವೆ. ದಿನಕ್ಕೆ 10-15 ಮನೆಗಳ ಸಮೀಕ್ಷೆ ನಡೆಸುವ ಗುರಿ ನೀಡಲಾಗಿದೆ. ಚುನಾವಣಾ ಆಯೋಗದ ಕೆಲಸ ಹಾಗೂ ಇತರೆ ತರಬೇತಿಗಳ ಕಾರಣದಿಂದ ಸಮೀಕ್ಷೆ ತಡವಾಗಿ ಆರಂಭವಾಗಿದೆ. ಹೀಗಾಗಿ, ಪ್ರಗತಿಯೂ ನಿಧಾನವಾಗಿದೆ. ಈ ವ್ಯಾಪ್ತಿಯಲ್ಲಿ ನರಕ ಚತುರ್ದಶಿ ಒಳಗೆ ಸಮೀಕ್ಷೆ ಮುಗಿಸಲು ಸೂಚಿಸಲಾಗಿದೆ. ಶಿಕ್ಷಕರು ಕೂಡ ಇಷ್ಟರೊಳಗೆ ಸಮೀಕ್ಷೆ ಮುಗಿಸುವ ಭರವಸೆ ನೀಡಿದ್ದಾರೆ’ ಎಂದರು.

ನಮ್ಮ ಮನವಿಗೆ ಸ್ಪಂದನೆ: ನುಗ್ಗಲಿ

ಒಂದನೇ ಪುಟದಿಂದ...

‘ದಸರಾ ರಜೆ ಕಳೆದು ಶಾಲೆಗಳು ಆರಂಭಗೊಂಡ ನಂತರ ಸಮೀಕ್ಷೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಶಿಕ್ಷಕರಿಗೆ ಸಮಸ್ಯೆಯಾಗಲಿದೆ. ಸಮೀಕ್ಷಕರ ಶಾಲೆ ಒಂದು ಕಡೆಯಾದರೆ, ಸಮೀಕ್ಷೆ ನಡೆಯುವ ಸ್ಥಳ ಮತ್ತೊಂದೆಡೆ ಇರುವುದರಿಂದ ಎರಡೂ ಕಾರ್ಯ ಒಟ್ಟಿಗೆ ಮಾಡಲು ಸಾಧ್ಯವಿಲ್ಲ. ಹೀಗಾಗಿ, ರಜಾ ಅವಧಿಯನ್ನು ಕನಿಷ್ಠ 10 ದಿನ ವಿಸ್ತರಿಸಬೇಕು’ ಎಂದು ಚಂದ್ರಶೇಖರ ನುಗ್ಗಲಿ, ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ನೇತೃತ್ವದಲ್ಲಿ ಸಂಘದ ಮುಖಂಡರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು.

₹20 ಲಕ್ಷ ಪರಿಹಾರ

ಒಂದನೇ ಪುಟದಿಂದ...

ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲ್ಲೂಕು ರಾಂಪೂರ ಬಳಿ ಸಮೀಕ್ಷೆಗೆ ತೆರಳಿದ ಶಿಕ್ಷಕಿಯೊಬ್ಬರು ಸೇರಿ ಮೂವರು ಮೃತಪಟ್ಟಿದ್ದರು.

ನಾಲ್ವರು ಪಾದಯಾತ್ರಿಗಳ ದುರ್ಮರಣ

ಒಂದನೇ ಪುಟದಿಂದ...

ಕುಕನೂರು ತಾಲ್ಲೂಕಿನ ಭಾನಾಪುರದ ಬಳಿ ನಡೆದ ಇನ್ನೊಂದು ಘಟನೆಯಲ್ಲಿ ಪಾದಯಾತ್ರೆ ಹೊರಟಿದ್ದ ಕುಕನೂರಿನ ವೀರೇಶ ಹಳ್ಳಿಕೇರಿ (26) ಬೈಕ್ ಡಿಕ್ಕಿ ಹೊಡೆದು ಮೃತಪಟ್ಟಿದ್ದಾನೆ.

ಇಡೀ ಕುಟುಂಬ ನೀರುಪಾಲು

ಒಂದನೇ ಪುಟದಿಂದ...

ತುಮಕೂರು ಬಿ.ಜಿ.ಪಾಳ್ಯದ ತಬಸ್ಸಮ್ ತಮ್ಮ ಕುಟುಂಬ ಸದಸ್ಯರೊಂದಿಗೆ ಕುಣಿಗಲ್ ತಾಲ್ಲೂಕಿನ ಮಾಗಡಿಪಾಳ್ಯ ಗ್ರಾಮದ ಮಗಳು ಸಾದಿಯಾ ಮನೆಗೆ ಹೋಗಿದ್ದರು. ಮಧ್ಯಾಹ್ನ ಊಟ ಮುಗಿಸಿಕೊಂಡು ಜಲಾಶಯ ನೋಡಲು ತೆರಳಿದ್ದರು.

ಎಲ್ಲರೂ ಜಲಾಶಯದ ಹಿನ್ನೀರಿನ ಕಾಲುವೆಗೆ ಇಳಿದಿದ್ದರು. ರಭಸವಾಗಿ ಹರಿಯುತ್ತಿದ್ದ ನೀರಿನಲ್ಲಿ ಆರು ಮಂದಿ ಕೊಚ್ಚಿ ಹೋಗಿದ್ದು, ಜತೆಗಿದ್ದ ಮೂವರು ಪಾರಾಗಿದ್ದಾರೆ.

ಹಳೆ ತಾಣಕ್ಕೆ ಹೊಸ ಹೊಳಪು

₹4.50 ಕೋಟಿ ವೆಚ್ಚದಲ್ಲಿ ಕೆ.ಆರ್ ಮಾರುಕಟ್ಟೆಯ ವಾಹನ ನಿಲುಗಡೆ ಸ್ಥಳದ ನವೀಕರಣ

• ಆದಿತ್ಯ ಕೆ.ಎ.

ಬೆಂಗಳೂರು: ಬಣ್ಣ ಕಳೆದುಕೊಂಡ ಗೋಡೆಗಳು, ವಾರಸುದಾರರಿಲ್ಲದೇ ತುಕ್ಕು ಹಿಡಿದು ನಿಂತಿದ್ದ ವಾಹನಗಳು, ರಾತ್ರಿ ವೇಳೆ ಮದ್ಯ ವ್ಯಸನಿಗಳ ಅಡ್ಡೆ, ಎಲ್ಲೆಂದರಲ್ಲಿ ಬಿದ್ದಿರುವ ಖಾಲಿ ಬಾಟಲಿಗಳು, ಕೊಳಚೆ ನೀರು ಸಂಗ್ರಹವಾಗಿ ದುರ್ವಾಸನೆ... ಕೃಷ್ಣರಾಜೇಂದ್ರ ಮಾರುಕಟ್ಟೆಯ ವಾಣಿಜ್ಯ ಕಟ್ಟಡದ ಕೆಳ ಅಂತಸ್ತಿನಲ್ಲಿರುವ ವಾಹನ ನಿಲುಗಡೆ ಪ್ರದೇಶವು ಹೀಗೆ ಗಬ್ಬೆದ್ದು ನಾರುತ್ತಿದೆ. ನಿರ್ವಹಣೆಯಿಲ್ಲದೆ ಸೊರಗಿದೆ.

ಇನ್ನು ಕೆಲವೇ ದಿನಗಳಲ್ಲಿ ಇದಕ್ಕೆ ಮುಕ್ತಿ ಸಿಗಲಿದ್ದು, ವಾಹನ ನಿಲುಗಡೆ ಪ್ರದೇಶದ ಚಹರೆಯೇ ಬದಲಾಗಲಿದೆ. ಸೊರಗಿದ್ದ ವಾಹನ ನಿಲುಗಡೆ(ಪಾರ್ಕಿಂಗ್ ಸ್ಥಳ) ಪ್ರದೇಶಕ್ಕೆ ಹೊಸ ಹೊಳಪು ಸಿಗಲಿದೆ.


ಈ ಹಿಂದೆ ಗುತ್ತಿಗೆ ಪಡೆದಿದ್ದ ಕಂಪನಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಹಿಂದಿನ ಬಿಬಿಎಂಪಿ) ಟೆಂಡರ್ ಹಣವನ್ನು ಪಾವತಿಸದಿರುವ ಕಾರಣಕ್ಕೆ ಹೊಸ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. 'ಪಿನ್ಸ್ ರಾಯಲ್ ಪಾರ್ಕಿಂಗ್ ಸಲ್ಯೂಷನ್ ಕಂಪನಿ'ಯು ಈಗ ಗುತ್ತಿಗೆ ಪಡೆದುಕೊಂಡಿದ್ದು, ನವೀಕರಣ ಕಾಮಗಾರಿ ಆರಂಭಿಸಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿರುವ 'ಬಹುಮಹಡಿ ಪಾರ್ಕಿಂಗ್ ಕಟ್ಟಡ'ದ ಗುತ್ತಿಗೆ ಪಡೆದಿರುವ 'ಪಿನ್ಸ್ ಕಂಪನಿ'ಯೇ ಈ ಸ್ಥಳವನ್ನೂ 10 ವರ್ಷಗಳ ಅವಧಿಗೆ ಗುತ್ತಿಗೆ ಪಡೆದಿದೆ. 'ಅಡ್ವಾನ್ಸ್ಡ್ ಪಾರ್ಕಿಂಗ್ ತಂತ್ರಜ್ಞಾನ'(ದುಬೈ ಮಾದರಿಯ ತಂತ್ರಜ್ಞಾನ) ಅಳವಡಿಸುವ ಕೆಲಸಗಳು ವೇಗದಿಂದ ಸಾಗುತ್ತಿವೆ. ಜಿಬಿಎ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಅನುಷ್ಠಾನಕ್ಕೆ ಬಂದಮೇಲೆ ಮತ್ತೊಂದು 'ಸ್ಮಾರ್ಟ್ ಪಾರ್ಕಿಂಗ್' ಸ್ಥಳವು ವಾಹನ ಚಾಲಕರ ಬಳಕೆಗೆ ಲಭಿಸುವ ಕಾಲ ಸನ್ನಿಹಿತವಾಗಿದೆ.

ಹಣ ಬಾಕಿ ಉಳಿಸಿಕೊಂಡಿದ್ದ ಕಂಪನಿ: ಈ ಹಿಂದೆ ಗುತ್ತಿಗೆ ಪಡೆದಿದ್ದ ಕಂಪನಿಯು 2023ರ ಫೆಬ್ರುವರಿ 28ರಿಂದ 2026ರ ಫೆಬ್ರುವರಿ 27ರವರೆಗೆ ಮೂರು ವರ್ಷಗಳ ಅವಧಿಗೆ ಪ್ರತಿ ತಿಂಗಳು ₹14 ಲಕ್ಷವನ್ನು ಬಿಬಿಎಂಪಿಗೆ ಪಾವತಿಸುವುದಾಗಿ ಟೆಂಡರ್ ಪಡೆದಿತ್ತು. ಆದರೆ, ಕಂಪನಿಯು ಪೂರ್ಣ ಮೊತ್ತವನ್ನು ಪಾವತಿ ಮಾಡಿರಲಿಲ್ಲ. ನಿಯಮಾವಳಿಯಂತೆ ಸ್ವಚ್ಛತೆಯನ್ನೂ ಕಾಪಾಡಿರಲಿಲ್ಲ. ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ನಿಗದಿ ಪಡಿಸಿರುವ ದರಪಟ್ಟಿಯನ್ನು ಆಗಮನ ಹಾಗೂ ನಿರ್ಗಮನ ದ್ವಾರದಲ್ಲಿ ಅಳವಡಿಸಿರಲಿಲ್ಲ. ಈ ಸಂಬಂಧ ಸಾರ್ವಜನಿಕರಿಂದಲೂ ದೂರುಗಳು ಬಂದಿದ್ದವು. ಅಧಿಕ ಮಳೆ ಬಂದು ಪಾರ್ಕಿಂಗ್ ಸ್ಥಳದಲ್ಲಿ ನೀರು ಸಂಗ್ರಹಗೊಂಡರೆ ಟೆಂಡರ್ ಪಡೆದವರೇ ಸ್ವಚ್ಛತೆ ಮಾಡಬೇಕು ಎಂಬ ಷರತ್ತಿದ್ದರೂ ಅದನ್ನು ಉಲ್ಲಂಘಿಸಲಾಗಿತ್ತು. ಹೀಗಾಗಿ, ಹೊಸದಾಗಿ ಟೆಂಡರ್ ಕರೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಪಿನ್ಸ್ ಕಂಪನಿಗೆ ಮೊದಲ ಐದು ವರ್ಷಕ್ಕೆ ತಲಾ ₹40.50 ಲಕ್ಷಕ್ಕೆ ಬಿಡ್ ಆಗಿದೆ. ನಂತರದ ವರ್ಷಗಳಲ್ಲಿ ಬಿಡ್ ಮೊತ್ತವು ಏರಿಕೆ ಆಗಲಿದೆ. ಅಂದಾಜು ₹4.50 ಕೋಟಿ ವೆಚ್ಚದಲ್ಲಿ ನವೀಕರಣ ಕಾಮಗಾರಿ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

'ಕೆ.ಆರ್ ಮಾರುಕಟ್ಟೆ ವ್ಯಾಪ್ತಿಯಲ್ಲಿ ವಾಹನಗಳ ನಿಲುಗಡೆಗೆ ಸ್ಥಳದ ಅಭಾವವಿದೆ. ಮುಂಜಾನೆಯೇ ಬಂದರೆ ಮಾತ್ರ ರಸ್ತೆಬದಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡಲು ಜಾಗ ದೊರೆಯಲಿದೆ. ಬೆಳಿಗ್ಗೆ ಎಂಟರ ನಂತರ ಬಂದರೆ ದೂರದಲ್ಲಿ ವಾಹನ ನಿಲುಗಡೆ ಮಾಡಿ ಮಾರುಕಟ್ಟೆಗೆ ಬರಬೇಕಾಗದ ಪರಿಸ್ಥಿತಿಯಿದೆ. ಈ ಸ್ಥಳವು ನವೀಕರಣಗೊಂಡು ಬಳಕೆಗೆ ಲಭ್ಯವಾದರೆ ಹೆಚ್ಚು ಅನುಕೂಲವಾಗಲಿದೆ' ಎಂದು ಸವಾರ ದಿಲೀಪ್ ಹೇಳಿದರು.



ವಾರಸುದಾರರು ಇಲ್ಲದೇ ನಿಂತಿದ್ದ ವಾಹನಗಳು


ಏನೇನು ಸೌಲಭ್ಯ?

- ದಿನದ 24 ಗಂಟೆಯೂ ವಾಹನ ಪಾರ್ಕಿಂಗ್‌ಗೆ ಅವಕಾಶ
- ಉಚಿತ ವೈ-ಫೈ ವ್ಯವಸ್ಥೆ
- ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ
- ಕಾಫಿ ಶಾಪ್
- ಆರ್‌ಒ ಕುಡಿಯುವ ನೀರಿನ ಘಟಕ ಅಳವಡಿಕೆ
- ವಾಲೆಟ್ ಪಾರ್ಕಿಂಗ್
- ಇ.ವಿ ಚಾರ್ಜಿಂಗ್ ಪಾಯಿಂಟ್
- ವ್ಹೀಲ್ ಚೇರ್ ವ್ಯವಸ್ಥೆ
- ಅಡ್ವಾನ್ಸ್ಡ್ ಸೆಕ್ಯೂರಿಟಿ ಸಿಸ್ಟಂ

ಪಾರ್ಕಿಂಗ್ ಶುಲ್ಕದ ವಿವರ

ಅವಧಿ	ದ್ವಿಚಕ್ರ ವಾಹನ	ನಾಲ್ಕು ಚಕ್ರದ ವಾಹನ
0ಯಿಂದ 1	₹15	₹25
1ರಿಂದ 2	₹25	₹45
2ರಿಂದ 4	₹45	₹85
4ರಿಂದ 6	₹65	₹125
6ರಿಂದ 8	₹85	₹165
8ರಿಂದ 10	₹105	₹205
10ರಿಂದ 12	₹125	₹245
12ರಿಂದ 24	₹175	₹275

(ಕಾರಿಗೆ ಪಾಸ್ ದರ ₹5 ಸಾವಿರ (30ಗಳಿಗೆ) ಹಾಗೂ ದ್ವಿಚಕ್ರ ವಾಹನಕ್ಕೆ ₹1,500 ನಿಗದಿಪಡಿಸಲಾಗಿದೆ)



ನವೀಕರಣದ ಬಳಿಕ ಪಾರ್ಕಿಂಗ್ ಸ್ಥಳ

ನವೀಕರಣದ ಬಳಿಕ ಪಾರ್ಕಿಂಗ್ ಸಾಮರ್ಥ್ಯ

ವಾಹನಗಳ ಮಾದರಿ	ಸಂಖ್ಯೆ
ಕಾರು ಹಾಗೂ ಜೀಪು	200
ದ್ವಿಚಕ್ರ ವಾಹನ	400

ಸೆ.2ರಿಂದಲೇ ನವೀಕರಣ ಕಾಮಗಾರಿ ಆರಂಭವಾಗಿದೆ. ಅಕ್ಟೋಬರ್ ಎರಡನೇ ವಾರದಲ್ಲಿ ವಾಹನ ನಿಲುಗಡೆಗೆ ಅವಕಾಶ ಸಿಗಲಿದೆ. ಪಾರ್ಕಿಂಗ್ ಸ್ಥಳವು ಸಿ.ಸಿ.ಟಿ.ವಿ ಕ್ಯಾಮೆರಾಗಳ ಕಣ್ಗಾವಲಿನಲ್ಲಿ ಇರಲಿದೆ

ಕುಮಾರ್, ವ್ಯವಸ್ಥಾಪಕ, ಪಿನ್ಸ್ ರಾಯಲ್ ಪಾರ್ಕಿಂಗ್ ಸಲ್ಯೂಷನ್ ಕಂಪನಿ

ಪೊಲೀಸ್ ಠಾಣೆಗೆ ಹಳೆಯ ವಾಹನ ಹಸ್ತಾಂತರ

ವಾರಸುದಾರರಿಲ್ಲದೇ ಪಾರ್ಕಿಂಗ್ ಸ್ಥಳದಲ್ಲಿ ನಿಂತಿದ್ದ ವಿವಿಧ ಮಾದರಿಯ ವಾಹನಗಳನ್ನು ಕೆ.ಆರ್. ಮಾರುಕಟ್ಟೆ ಠಾಣೆಯ ಪೊಲೀಸರಿಗೆ ಗುತ್ತಿಗೆ ಸಂಸ್ಥೆಯು ಹಸ್ತಾಂತರಿಸಿದೆ.

ವಾಹನಗಳನ್ನು ನಿಲುಗಡೆ ಮಾಡಿದ್ದ ಕೆಲವು ಮಾಲೀಕರು ಅವುಗಳನ್ನು ಕೊಂಡೊಯ್ಯಲು ಇದುವರೆಗೂ ಬಂದಿರಲಿಲ್ಲ. 169 ದ್ವಿಚಕ್ರ ವಾಹನ, 20 ಆಟೊ, 10 ಕಾರು ಸೇರಿ ಒಟ್ಟು 348 ವಾಹನಗಳನ್ನು ಪೊಲೀಸರ ಸುಪರ್ದಿಗೆ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ವ್ಯಾಪಾರಸ್ಥರ ವಿರೋಧ

ಕೆಲವು ವರ್ಷಗಳಿಂದ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ಈ ಸ್ಥಳದಲ್ಲಿ ಅನಧಿಕೃತವಾಗಿ ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದರು. ಜಿಬಿಎ ಟೆಂಡರ್ ನೀಡಿರುವುದಕ್ಕೆ ವ್ಯಾಪಾರಸ್ಥರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಕೆಂಪೇಗೌಡರ ಪ್ರತಿಮೆ ಸ್ಥಳಾಂತರಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ಪುರಸಭೆಯ ಮುಂಭಾಗದಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಯ ಸ್ಥಳಾಂತರ ಮಾಡುವುದು ಹಾಗೂ ಅದರ ಸುತ್ತಮುತ್ತ ಇರುವ 400ಕ್ಕೂ ಹೆಚ್ಚು ಮರಗಳ ಹನನ ಮಾಡಲು ಹೊರಟಿರುವ ಪುರಸಭೆ ಮತ್ತು ಸ್ಥಳೀಯ ಶಾಸಕರ ನಡೆ ಖಂಡನೀಯ ಎಂದು ಕೆಂಪೇಗೌಡ ಅಭಿವೃದ್ಧಿ ಸಮಿತಿ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಎಚ್.ಎಂ. ಕೃಷ್ಣಮೂರ್ತಿ, 'ಮಾಗಡಿ ಪುರಸಭೆ ಮುಂಭಾಗದಲ್ಲಿ ಇರುವ ಕೆಂಪೇಗೌಡರ ಪ್ರತಿಮೆಯನ್ನು ಸ್ಥಳಾಂತರ ಮಾಡಿದರೆ ಹೋರಾಟ ಮಾಡಲಾಗುವುದು. ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಬಾಲಕೃಷ್ಣ ಹಾಗೂ ಪುರಸಭೆಯ ಅಧಿಕಾರಿಗಳು ಕೆಂಪೇಗೌಡರ ಪರಂಪರೆಗೆ ಚ್ಯುತಿ ತರುವ ಕೆಲಸ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ನಾಡು ಕಟ್ಟಿದ ಕೆಂಪೇಗೌಡರಿಗೆ ಅವರ ನೆಲೆಯಲ್ಲೇ ಪ್ರತಿಮೆಗೆ ಸ್ಥಳಾವಕಾಶ ಇಲ್ಲದಂತಾಗಿದೆ. ಕೆಂಪೇಗೌಡರ ಪ್ರತಿಮೆ 22 ವರ್ಷಗಳ ಹಿಂದೆ ಪುರಸಭೆ ಮುಂಭಾಗದಲ್ಲಿ ಪ್ರತಿಷ್ಠಾಪಿಸಲಾಗಿದೆ. ಪ್ರತಿವರ್ಷ ಕೆಂಪೇಗೌಡ ಜನ್ಮ ದಿನಾಚರಣೆ ಅದ್ದೂರಿಯಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಳಾಂತರ ಮಾಡಲು ಬಿಡುವುದಿಲ್ಲ' ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾನಿಲಯ 60ನೇ ಘಟಿಕೋತ್ಸವ ಇಂದು

ಪದವಿ: ವಿದ್ಯಾರ್ಥಿನಿಯರೇ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವ ವಿದ್ಯಾಲಯದ 60ನೇ ಘಟಿಕೋತ್ಸವ ಇದೇ 8ರಂದು (ಬುಧವಾರ) ನಗರದ ಸೆಂಟ್ರಲ್ ಕಾಲೇಜು ಆವರಣದ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ನಡೆಯಲಿದ್ದು, 30,300 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ ಪಡೆಯಲಿದ್ದಾರೆ. ಪದವಿ, ಪಿಎಚ್.ಡಿ ಪಡೆಯುತ್ತಿರುವವರಲ್ಲಿ ವಿದ್ಯಾರ್ಥಿನಿಯರೇ ಹೆಚ್ಚಾಗಿದ್ದಾರೆ.

ಘಟಿಕೋತ್ಸವದಲ್ಲಿ 9,878 ವಿದ್ಯಾರ್ಥಿಗಳು, 13,510 ವಿದ್ಯಾರ್ಥಿನಿಯರು ಸೇರಿ 23,388 ಮಂದಿ ಪದವಿ, 64 ಪುರುಷ ಹಾಗೂ 76 ಮಹಿಳಾ ಅಭ್ಯರ್ಥಿಗಳು ಸೇರಿ 140 ಮಂದಿ ಪಿಎಚ್.ಡಿ ಪದವಿ ಪಡೆಯುವವರು ಎಂದು ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಎಂ.ಎಸ್.ಜಯಕರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

19,819 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 7,186 ವಿದ್ಯಾರ್ಥಿಗಳು ಪ್ರಥಮ, 763 ವಿದ್ಯಾರ್ಥಿಗಳು ದ್ವಿತೀಯ, 158 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಸ್ವಾಯತ್ತ ಕಾಲೇಜಿನ 2,312 ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ ಎಂದು ವಿವರಿಸಿದರು.

ಬುಧವಾರ 11.30ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಪದವಿ ಪ್ರದಾನ ಮಾಡಲಿದ್ದು, ವಿಜ್ಞಾನಿ ಪ್ರಹ್ಲಾದ್ ರಾಮರಾವ್ ಘಟಿಕೋತ್ಸವ ಭಾಷಣ ಮಾಡುವರು ಎಂದರು.



ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶೇ 55ರಷ್ಟು ಅಧ್ಯಾಪಕರ ಹುದ್ದೆಗಳು ಖಾಲಿಯಿವೆ. ಅವುಗಳನ್ನು ತುಂಬಲು ಸರ್ಕಾರದ ಅನುಮತಿ ಕೋರಲಾಗಿದೆ. ಅತಿಥಿ ಉಪನ್ಯಾಸಕರ ನೇಮಕದಲ್ಲಿ ಗೊಂದಲವಾಗಿಲ್ಲ

ಎಂ.ಎಸ್.ಜಯಕರ್, ಕುಲಪತಿ

ಪ್ರೇಮಾಗೆ 11 ಪದಕ: ಒಟ್ಟು 218 ವಿದ್ಯಾರ್ಥಿಗಳು ಚಿನ್ನದ ಪದಕ ಹಾಗೂ ನಗದು ಬಹುಮಾನ ಪಡೆಯುವರು. ಪದವಿಯಲ್ಲಿ 31 ವಿದ್ಯಾರ್ಥಿಗಳು ಹಾಗೂ 55 ವಿದ್ಯಾರ್ಥಿನಿಯರು ಚಿನ್ನದ ಪದಕ, 15 ವಿದ್ಯಾರ್ಥಿಗಳು ಹಾಗೂ 25 ವಿದ್ಯಾರ್ಥಿನಿಯರು ನಗದು ಬಹುಮಾನ ಪಡೆಯುವರು. ಸ್ನಾತಕೋತ್ತರ ವಿಭಾಗದಲ್ಲಿ 25 ವಿದ್ಯಾರ್ಥಿಗಳು, 46 ವಿದ್ಯಾರ್ಥಿನಿಯರು ಚಿನ್ನದ ಪದಕ, 21 ವಿದ್ಯಾರ್ಥಿಗಳು ಹಾಗೂ 40 ವಿದ್ಯಾರ್ಥಿನಿಯರು ನಗದು ಬಹುಮಾನ ಸ್ವೀಕರಿಸುವರು ಎಂದು ತಿಳಿಸಿದರು.

ಸ್ನಾತಕೋತ್ತರ ಪದವಿಯಲ್ಲಿ ಕನ್ನಡ ವಿಭಾಗದ ಎಸ್.ಪ್ರೇಮಾ ಅತ್ಯಧಿಕ 11 ಪದಕ ಪಡೆಯಲಿದ್ದಾರೆ. ಭೌತ ವಿಜ್ಞಾನ ವಿಭಾಗದ ಕೆ.ಎಂ.ರುಫಿಯ, ರಸಾಯನ ವಿಜ್ಞಾನ ವಿಭಾಗದ ಬಿ.ಎಸ್.ವಿದ್ಯಾಶ್ರೀ ತಲಾ ಏಳು ಪದಕ ಪಡೆಯುವರು. ಪ್ರಾಣಿ ಶಾಸ್ತ್ರ ವಿಭಾಗದ ಬಿ.ಎಂ.ಗೌತಮಿ, ಗಣಿತದಲ್ಲಿ ಆರ್.ಲಿಖಿತಕುಮಾರಿ ತಲಾ 6, ಅರ್ಥಶಾಸ್ತ್ರ ವಿಭಾಗದ ಎಂ.ವಿಕಾಸ್, ಇತಿಹಾಸ ವಿಭಾಗದ ಎ.ಎನ್.ಹರ್ಷ ತಲಾ 5 ಪದಕ ಪಡೆಯುವರು. ಸ್ನಾತಕ ವಿಭಾಗದಲ್ಲಿ ಸಿವಿಲ್ ಎಂಜಿನಿಯರ್ ವಿಭಾಗದ ಎಸ್.ಹೇಮಂತ 7, ಬಿಕಾಂನಲ್ಲಿ ಎಸ್.ದಿವ್ಯ 6, ಹಾಗೂ ಮೆಕಾನಿಕಲ್ ವಿಭಾಗದ ಎಂ.ರಜತ್ ಹಾಗೂ ಬಿಬಿಎದಲ್ಲಿ ಟಿ.ಸಹನಾ ಜಾಧವ್ ಅವರು ತಲಾ 5 ಚಿನ್ನದ ಪದಕ ಸ್ವೀಕರಿಸುವರು ಎಂದು ಹೇಳಿದರು.

ಅಂಬೇಡ್ಕರ್ ಚಿನ್ನದ ಪದಕ: ಎಸ್. ದಿವ್ಯಾ, ಕೆ.ಜಿ.ಮಾನಸ, ಡಿ.ಎಚ್. ನಂದಿನಿ, ಆರ್.ಚೇತನ್, ಎಸ್. ಭರತ್‌ಕುಮಾರ್ ಅವರು ಬಿ.ಆರ್. ಅಂಬೇಡ್ಕರ್ ಚಿನ್ನದ ಪದಕವನ್ನು ಸ್ವೀಕರಿಸುವರು. ಇದಲ್ಲದೇ ಎಸ್‌ಎಫ್ ಕಾಲೇಜಿನ ಎಸ್.ಸ್ವರೂಪ್, ಸೇಂಟ್ ಕ್ಲಾರೆಟ್ ಕಾಲೇಜಿನ ರಂಜಿತ ಜಾಧವ್ ಅವರಿಗೆ ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಹೇಳಿದರು..



ಬೆಂಗಳೂರು ವಿಶ್ವವಿದ್ಯಾಲಯ

ಮೂವರಿಗೆ ಗೌರವ ಡಾಕ್ಟರೇಟ್

'ವಿಧಾನ ಸಭೆಯ ಸ್ಪೀಕರ್ ಯು.ಟಿ.ಖಾದರ್, ವಿಧಾನ ಪರಿಷತ್‌ನ ಮಾಜಿ ಸದಸ್ಯ ಡಿ.ಮಾದೇಗೌಡ, ಉದ್ಯಮಿ ಟಿ.ಬಿ.ಪ್ರಸನ್ನ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತದೆ. ವಿವಿಧ ಕ್ಷೇತ್ರಗಳಲ್ಲಿನ ಸಾಧನೆ ಗುರುತಿಸಿ 14 ಮಂದಿ ಹೆಸರನ್ನು ಗೌರವ ಡಾಕ್ಟರೇಟ್‌ಗೆ ಸಿಂಡಿಕೇಟ್ ಶಿಫಾರಸು ಮಾಡಿತ್ತು. ಇದರಲ್ಲಿ ಮೂವರ ಹೆಸರಿಗೆ ರಾಜ್ಯಪಾಲರು ಸಮ್ಮತಿ ಸೂಚಿಸಿದ್ದಾರೆ' ಎಂದು ಕುಲಪತಿ ಜಯಕರ್ ತಿಳಿಸಿದರು.

ಶೇ 10ರಷ್ಟು ಸಮೀಕ್ಷೆ ಪೂರ್ಣ

18 ಸಾವಿರ ಸಮೀಕ್ಷಕರು ಭಾಗಿ, 3,000 ಮಂದಿ ಗೈರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಶೇ 10ರಷ್ಟು ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪೂರ್ಣಗೊಂಡಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಸಮೀಕ್ಷೆಗಾಗಿ ವಿವಿಧ ಇಲಾಖೆಗಳಿಂದ 26 ಸಾವಿರ ಜನರನ್ನು ಗುರುತಿಸಲಾಗಿತ್ತು. ಅನಾರೋಗ್ಯ ಸೇರಿದಂತೆ ಹಲವು ಕಾರಣಗಳಿಂದಾಗಿ 5,500 ಮಂದಿಗೆ ಸಮೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ. ಮಂಗಳವಾರ 18 ಸಾವಿರಕ್ಕೂ ಹೆಚ್ಚು ಸಮೀಕ್ಷಕರು ಸಮೀಕ್ಷೆ ನಡೆಸಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಕ್ಟೋಬರ್ 4ರಿಂದ ಸಮೀಕ್ಷೆ ಆರಂಭವಾಗಿದ್ದು, ಮೊದಲ ದಿನ ಹೊರತುಪಡಿಸಿದರೆ ನಂತರದ ಪ್ರತಿದಿನ 1.75 ಲಕ್ಷದಿಂದ ಎರಡು ಲಕ್ಷ ಮನೆಗಳ ಸಮೀಕ್ಷೆ ನಡೆಯುತ್ತಿದೆ. ಅಕ್ಟೋಬರ್ 19ರೊಳಗೆ ಸಮೀಕ್ಷೆ ಮುಗಿಸುವಂತೆ ಮುಖ್ಯಮಂತ್ರಿಯವರು ಗಡುವು ನೀಡಿದ್ದಾರೆ. ಬೆಸ್ಕಾಂ ಮೀಟರ್‌ಗಳ ಪ್ರಕಾರ, ಸುಮಾರು 46 ಲಕ್ಷ ಮನೆಗಳಿಗೆ ಯುಎಚ್‌ಐಡಿ ಅಂಟಿಸಲಾಗಿದ್ದು, ಇದರಲ್ಲಿ ಶೇ 10ರಷ್ಟು ಮನೆಗಳ ಸಮೀಕ್ಷೆ ಮಂಗಳವಾರದ ಅಂತ್ಯಕ್ಕೆ ಪೂರ್ಣಗೊಂಡಿದೆ ಎಂದು ಹೇಳಿದರು.

ಮಹದೇವಪುರ, ಬೊಮ್ಮನಹಳ್ಳಿಯಲ್ಲಿ ಶೇ 50ರಷ್ಟು ಸ್ಥಳೀಯ ಸರ್ಕಾರಿ ಅಧಿಕಾರಿ, ಸಿಬ್ಬಂದಿಯನ್ನು ಸಮೀಕ್ಷೆಗೆ ನಿಯೋಜನೆ ಮಾಡಲಾಗಿದೆ. ಬಾಕಿ ಇರುವ ಪ್ರದೇಶಕ್ಕೆ ನಗರದ ಇತರೆ ಭಾಗದ ಅಧಿಕಾರಿ ಸಿಬ್ಬಂದಿ ನಿಯೋಜಿಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ಮಾತುಕತೆ: ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ಸಮೀಕ್ಷೆಗೆ ಸಹಕಾರ ಸಿಗುತ್ತಿಲ್ಲ. ಹೀಗಾಗಿ, ನಗರ ಪಾಲಿಕೆಯ ಆಯುಕ್ತರು ಹಾಗೂ ಜಿಬಿಎ ಅಧಿಕಾರಿಗಳಿಗೆ ಅಪಾರ್ಟ್‌ಮೆಂಟ್‌ಗಳ ಸಂಘದವರೊಂದಿಗೆ ಮಾತುಕತೆ ನಡೆಸಿ, ಅವರ ಮೂಲಕವೇ ಸಮೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಸುಮಾರು ಒಂದು ಲಕ್ಷ ಕರಪತ್ರಗಳನ್ನು ಮುದ್ರಿಸಿ, ಹಂಚಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬೆಂಗಳೂರು ಒನ್: ಆನ್‌ಲೈನ್‌ನಲ್ಲಿ ಸಮೀಕ್ಷೆಯನ್ನು ನಾಗರಿಕರೇ ಪೂರ್ಣಗೊಳಿಸಬಹುದು. ಬೆಂಗಳೂರು ಒನ್ ಕೇಂದ್ರಗಳಲ್ಲಿಯೂ ಸಮೀಕ್ಷೆಯ ಅರ್ಜಿ ತುಂಬಲು, ಅಪ್‌ಲೋಡ್ ಮಾಡಲು ಅವಕಾಶ ನೀಡಲು ಚಿಂತಿಸಲಾಗುತ್ತಿದೆ ಎಂದು ಹೇಳಿದರು.

ಸಮೀಕ್ಷೆ ವಿವರ (ಮಂಗಳವಾರದವರೆಗೆ)

1,35,267	ಪಶ್ಚಿಮ ನಗರ ಪಾಲಿಕೆ
1,04,706	ಉತ್ತರ ನಗರ ಪಾಲಿಕೆ
63,819	ದಕ್ಷಿಣ ನಗರ ಪಾಲಿಕೆ
59,362	ಪೂರ್ವ ನಗರ ಪಾಲಿಕೆ
50,522	ಕೇಂದ್ರ ನಗರ ಪಾಲಿಕೆ
4,13,676	ಒಟ್ಟು ಮನೆಗಳು

ಕಾಳಿಂಗ ನಾವಡ ಪ್ರಶಸ್ತಿ ಪ್ರದಾನ 12ಕ್ಕೆ

ಬೆಂಗಳೂರು: ಕಲಾಕದಂಬ ಆರ್ಟ್ ಸೆಂಟರ್ ಸಂಸ್ಥೆಯು ಕಾಳಿಂಗ ನಾವಡರ ನೆನಪಿನಲ್ಲಿ 'ಕಲಾಕದಂಬ ಕಾಳಿಂಗ ನಾವಡ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅ.12ರಂದು ಸಂಜೆ 4ಕ್ಕೆ ಕತ್ರಿಗುಪ್ಪೆ ಸಮೀಪದ ಚನ್ನಮ್ಮನಕೆರೆ ಅಚ್ಚುಕಟ್ಟುವಿನಲ್ಲಿರುವ ಪರಂಪರಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸತತ 42 ವರ್ಷಗಳಿಂದ ಯಕ್ಷಗಾನದ ಭಾಗವತರಾಗಿ ಕಲಾ ಸೇವೆ ಮಾಡುತ್ತಿರುವ ರಾಘವೇಂದ್ರ ಮಯ್ಯ ಹಾಲಾಡಿ ಅವರಿಗೆ ಈ ಬಾರಿಯ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹25,000 ನಗದು, ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆಯನ್ನು ಒಳಗೊಂಡಿದೆ ಎಂದು ಕಲಾಕದಂಬ ಆರ್ಟ್ ಸೆಂಟರ್ ನಿರ್ದೇಶಕ ರಾಧಾಕೃಷ್ಣ ಉರಾಳ ತಿಳಿಸಿದ್ದಾರೆ.

ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ, ಸಾಹಿತಿ ರಾಧಾಕೃಷ್ಣ, ಯಕ್ಷಗಾನ ವಿದ್ವಾಂಸ ಆನಂದರಾಮ ಉಪಾಧ್ಯ, ವಿಪ್ರ ವೇದಿಕೆಯ ಕೃಷ್ಣಮೂರ್ತಿ ಅಡಿಗ, ಶಿವಳ್ಳಿ ಸ್ಮಾರ್ತ ಟ್ರಸ್ಟ್‌ನ ಪ್ರಕಾಶ್ ಭಟ್, ಕಲಾ ಪೋಷಕರಾದ ನರಸಿಂಹ ಸೋಮಯಾಜಿ, ಕಾಳಿಂಗ ನಾವಡರ ಸಹೋದರ ಗಣಪಯ್ಯ ನಾವಡ ಭಾಗವಹಿಸಲಿದ್ದಾರೆ.

ಸಂಕ್ಷಿಪ್ತ ಸುದ್ದಿ

10ಕ್ಕೆ ಸಚಿವ ಮಹದೇವಪ್ಪ ಮನೆಗೆ ಮುತ್ತಿಗೆ

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿಗೆ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅಡ್ಡಿಪಡಿಸುತ್ತಿದ್ದಾರೆಂದು ಆರೋಪಿಸಿ ಇದೇ 10ರಂದು ಅವರ ಮನೆಗೆ ಮುತ್ತಿಗೆ ಹಾಕಲಾಗುವುದು ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ ತಿಳಿಸಿದೆ.



ಎಚ್.ಸಿ. ಮಹದೇವಪ್ಪ

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ರಾಜ್ಯ ಸಂಚಾಲಕ ಬಸವರಾಜ ಕೌತಾಳ, 'ಎಚ್.ಎನ್. ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳನ್ನು ಐದು ಪ್ರವರ್ಗಗಳನ್ನಾಗಿ ಮಾಡಿ ಒಳ ಮೀಸಲಾತಿ ಸಂಬಂಧ ಏಳು ಶಿಫಾರಸುಗಳನ್ನು ಮಾಡಿತ್ತು. ಆದರೆ, ಸರ್ಕಾರ ಮೂರು ಪ್ರವರ್ಗಗಳನ್ನಾಗಿ ವಿಂಗಡಿಸಿ, ಪ್ರವರ್ಗ 'ಎ'ಗೆ ಶೇಕಡ 6, ಪ್ರವರ್ಗ 'ಬಿ'ಗೆ ಶೇ 6 ಹಾಗೂ ಪ್ರವರ್ಗ 'ಸಿ'ಗೆ ಶೇ 5ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡಿದೆ. ಆದರೆ, ಇದುವರೆಗೂ ಜಾರಿಗೊಳಿಸಿಲ್ಲ' ಎಂದು ಆರೋಪಿಸಿದರು.



'ಸಮಾಜ ಕಲ್ಯಾಣ ಸಚಿವ ಮಹದೇವಪ್ಪ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್, ಆಯುಕ್ತ ರಾಕೇಶ್ ಕುಮಾರ್ ಅವರು ಸರ್ಕಾರದಿಂದ ಬಂದ ಕಡತಕ್ಕೆ ಒಪ್ಪಿಗೆ ಸೂಚಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಒಳ ಮೀಸಲಾತಿ ನೇರ ನೇಮಕಾತಿಗೆ ಮಾತ್ರ ಅನ್ವಯಿಸುತ್ತದೆ. ಬಡ್ತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಅನ್ವಯಿಸುವುದಿಲ್ಲ ಎಂದು ದಾರಿ ತಪ್ಪಿಸುತ್ತಿದ್ದಾರೆ. ಮಹದೇವಪ್ಪ ಅವರು ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ 10ರಿಂದ

ಬೆಂಗಳೂರು: ನಗರದ ಸೌಂದರ್ಯ ಕಾನೂನು ಕಾಲೇಜಿನಲ್ಲಿ ಅಕ್ಟೋಬರ್ 10 ಮತ್ತು 11ರಂದು 'ಮೂರನೇ ಅಖಿಲ ಭಾರತೀಯ ಸೌಂದರ್ಯ ಕಾನೂನು ಕಾಲೇಜು ಅಣಕು ನ್ಯಾಯಾಲಯ (ಮೂಟ್ ಕೋರ್ಟ್) ಸ್ಪರ್ಧೆ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ದೇಶದ ನಾನಾ ಭಾಗಗಳಿಂದ 41 ಕಾನೂನು ಕಾಲೇಜುಗಳ ತಂಡಗಳು ಭಾಗವಹಿಸಲಿವೆ.

ಅಣಕು ನ್ಯಾಯಾಲಯ ಸ್ಪರ್ಧೆಯ ಅಂತಿಮ ಸುತ್ತು, ಬಹುಮಾನ ವಿತರಣೆ ಮತ್ತು ಸಮಾರೋಪ ಸಮಾರಂಭವು ಅ. 11ರಂದು ನಡೆಯಲಿದ್ದು, ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಸೌಂದರ್ಯ ಕಾನೂನು ಕಾಲೇಜಿನ ಆಡಳಿತ ಮಂಡಳಿಯ ಪ್ರಕಟಣೆ ತಿಳಿಸಿದೆ.

25ಕ್ಕೆ ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಇದೇ 25ರಂದು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಮಕ್ಕಳಿಗೆ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಹಮ್ಮಿಕೊಂಡಿದೆ.

ಈ ಸ್ಪರ್ಧೆಯು 8 ವರ್ಷದೊಳಗಿನ, 15 ವರ್ಷದೊಳಗಿನ ಹಾಗೂ 16 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ನಡೆಯಲಿದೆ. ಭಾಗವಹಿಸಿದ ಎಲ್ಲರಿಗೂ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ಕೊಡಲಾಗುತ್ತದೆ. ವಿಜೇತರಿಗೆ ಟ್ರೋಫಿಯ ಜತೆಗೆ ನಗದು ನೀಡಲಾಗುತ್ತದೆ.

ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ ಶಾಲಾ ತಂಡಗಳಿಗೆ ಸ್ಕೂಲ್ ಅವಾರ್ಡ್‌ಗಳನ್ನು ಕೊಡಲಾಗುತ್ತದೆ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ ತಿಳಿಸಿದ್ದಾರೆ.

ವಿವರಕ್ಕೆ: 93806 71947

ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಾಲಾ ಬ್ಲಾಕ್ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ಪುಷ್ಪಾರ್ಚನೆ ಸಲ್ಲಿಸಿದ ಕಾಂಗ್ರೆಸ್ ಕಾರ್ಯಕರ್ತರು, ಸಿಹಿ ಹಂಚಿ ಸಂಭ್ರಮಿಸಿದರು. ಬೆಟ್ಟ ಹಲಸೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್ ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯವನ್ನು ರಚಿಸಿದ್ದಾರೆ. ಆ ಮೂಲಕ ಹಿಂದೂಧರ್ಮ ಮತ್ತು ಸಂಸ್ಕೃತ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ ಎಂದು ಬಣ್ಣಿಸಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಬಿ.ಆರ್.ಪ್ರವೀಣ್, ಬೆಂಗಳೂರು ಉತ್ತರ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಪ್ರದೀಪ್, ಬ್ಯಾಟರಾಯನಪುರ ಕ್ಷೇತ್ರ ಯುವ ಕಾಂಗ್ರೆಸ್ ಉಪಾಧ್ಯಕ್ಷ ಶಿವರಾಜ್.ಸಿ.ಎ, ಕಾಂಗ್ರೆಸ್ ಮುಖಂಡರಾದ ಬಿಲ್ಲಮಾರನಹಳ್ಳಿ ಪ್ರಭಾಕರ್, ಕುದುರೆಗೆರೆ ಮಂಜು, ಮುರಳಿ, ವೆಂಕಟೇಶ್, ಲೋಕೇಶ್, ಸುಜಾತಮ್ಮ ಮತ್ತಿತರರು ಉಪಸ್ಥಿತರಿದ್ದರು.

10ರಿಂದ 'ಇಂಡಿಯನ್ ಆರ್ಟಿಸನ್ಸ್ ಹಾಟ್' ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಇದೇ 10ರಿಂದ 19ರವರೆಗೆ ಎಂ.ಜಿ.ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ 'ದಿ ಇಂಡಿಯನ್ ಆರ್ಟಿಸನ್ಸ್ ಹಾಟ್' ಶೀರ್ಷಿಕೆಯಡಿ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಹಮ್ಮಿಕೊಂಡಿದೆ.

ದೀಪಾವಳಿ ಪ್ರಯುಕ್ತ ಈ ಪ್ರದರ್ಶನವನ್ನು ಆಯೋಜಿಸಲಾಗಿದೆ. ಕೈಮಗ್ಗ, ಹಸ್ತಶಿಲ್ಪ ಮತ್ತು ಪರಂಪರಾತ್ಮಕ ಕಲೆಗಳನ್ನು ಈ ಪ್ರದರ್ಶನದಲ್ಲಿ ಪ್ರಸ್ತುತ ಪಡಿಸಲಾಗುತ್ತದೆ. ದೇಶದ ವಿವಿಧ ಭಾಗಗಳ ಕಲಾವಿದರು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದು, ತಾವು ತಯಾರಿಸಿದ ಕಲಾತ್ಮಕ ಉತ್ಪನ್ನಗಳನ್ನು ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ, ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲಿದ್ದಾರೆ. ದೇಶೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದು ಹಾಗೂ ಹೊಸ ಪೀಳಿಗೆಗೆ ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಪರಿಚಯಿಸುವುದು ಈ ಪ್ರದರ್ಶನದ ಆಶಯವಾಗಿದೆ.

ಪ್ರಮುಖವಾಗಿ ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಅಲಂಕಾರಿಕ ವಸ್ತುಗಳು, ಒಡಿಶಾದ ಡೋಕ್ರಾ ಕಲೆ ಹಾಗೂ ಮರದ ಆಟಿಕೆಗಳು, ವರ್ಣಚಿತ್ರಗಳು, ಆಭರಣಗಳು, ಮನೆ ಅಲಂಕಾರಿಕ ವಸ್ತುಗಳು ಸೇರಿದಂತೆ ಹಲವು ವೈವಿಧ್ಯ ಸಾಂಪ್ರದಾಯಿಕ ಉತ್ಪನ್ನಗಳು ಒಂದೇ ಸೂರಿನಡಿ ಲಭ್ಯವಾಗಲಿವೆ.

ತಮಿಳುನಾಡು, ಮಹಾರಾಷ್ಟ್ರ, ಮಣಿಪುರ, ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಸೇರಿ ದೇಶದ ವಿವಿಧ ರಾಜ್ಯಗಳಿಂದ ಕಲಾವಿದರು ತಾವು ತಯಾರಿಸಿದ ಉತ್ಪನ್ನಗಳನ್ನು ತರಲಿದ್ದಾರೆ. ವಿವಿಧ ಬಗೆಯ ಸೀರೆಗಳು, ಪಿಠೋಪಕರಣ, ಬ್ಯಾಗ್‌ಗಳು, ಖಾದಿ ಬಟ್ಟೆಗಳೂ ದೊರೆಯಲಿವೆ.

10 ದಿನಗಳ ಈ ಪ್ರದರ್ಶನದಲ್ಲಿ ವಾರಾಂತ್ಯ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಇಡೀ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್ ಅನ್ನು ದೀಪಾವಳಿ ವಿಷಯಾಧರಿಸಿ ಅಲಂಕಾರ ಮಾಡಲಾಗುತ್ತದೆ.



ಅಂಗವಿಕಲರಿಗೆ ಆಹಾರ ಕಿಟ್

ರಾಜರಾಜೇಶ್ವರಿ ನಗರ: ಲಗ್ಗೆರೆಯ ಅರ್ಪಿತಾ ಸೇವಾ ಟ್ರಸ್ಟ್ ವತಿಯಿಂದ ಅನ್ಯ ಧರ್ಮ ಹಾಗೂ ಜಾತಿಯ ಅಂಧರು, ಕಿವುಡರು ಮತ್ತು ಅಂಗವಿಕಲರಿಗೆ ಆಹಾರ ಕಿಟ್‌ಗಳನ್ನು ವಿತರಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ಲಗ್ಗೆರೆ ನಾರಾಯಣ ಸ್ವಾಮಿ ಮತ್ತು ಮಂಜುಳಾ ನಾರಾಯಣ ಸ್ವಾಮಿ ದಂಪತಿ ನೀಡಿದ ದವಸ, ಧಾನ್ಯಗಳನ್ನು ಕೂಡಲಸಂಗಮ ಪೀಠಾಧ್ಯಕ್ಷ ಬಸವ ಜಯಮೃತ್ಯುಂಜಯ ಸ್ವಾಮೀಜಿ ವಿತರಿಸಿದರು.

ಸುಮಾರು 150 ಕುಟುಂಬಗಳಿಗೆ ಪ್ರತಿ ತಿಂಗಳು ನೀಡುತ್ತಿರುವ ಆಹಾರ ಕಿಟ್, ಸೀರೆ, ರವಿಕೆ, ಶರ್ಟ್, ಪಂಚೆ ವಿತರಿಸಿ, ಗುರುವಂದನೆ ಸ್ವೀಕರಿಸಿದರು.

ಕಾಂಗ್ರೆಸ್ ಸಮಿತಿಗೆ ಕುಪ್ಪಿ ಮಂಜುನಾಥ್ ನೇಮಕ

ಕೆ.ಆರ್.ಪುರ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ಬೆಂಗಳೂರು ಪೂರ್ವ ಜಿಲ್ಲಾ ಅಧ್ಯಕ್ಷರಾಗಿ ವರ್ತೂರಿನ ಕುಪ್ಪಿ ಮಂಜುನಾಥ್ ಅವರನ್ನು ನೇಮಿಸಲಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗ ಅಧ್ಯಕ್ಷ ಎಸ್. ಮಧು ಬಂಗಾರಪ್ಪ ತಿಳಿಸಿದ್ದಾರೆ.



ಕುಪ್ಪಿ ಮಂಜುನಾಥ್

ರಾಜ್ಯ-ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನ ಮತ್ತು ಸ್ಥಳೀಯ ನಾಯಕರ ಸಹಯೋಗದಲ್ಲಿ ಹಿಂದುಳಿದ ವರ್ಗಗಳ ವಿಭಾಗದ ಪಕ್ಷದ ಸಂಘಟನೆ ಮತ್ತು ಬಲವರ್ಧನೆಗೆ ತಾವು ಕಾರ್ಯೋನ್ಮುಖರಾಗಬೇಕೆಂದು ಸೂಚಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ನಿಯಮಗಳನ್ನು ಗಾಳಿಗೆ ತೂರಿದ ಜಾಲಿವುಡ್; ನೋಟಿಸ್ ನಿರ್ಲಕ್ಷಿಸಿ ಬೆಲೆ ತೆತ್ತ ಸಂಸ್ಥೆ

ಅಡಕತ್ತರಿಯಲ್ಲಿ 'ಬಿಗ್ ಬಾಸ್' ಷೋ

• ಓದೇಶ ಸಕಲೇಶಪುರ

ರಾಮನಗರ: ಜಾಲಿವುಡ್ ನಿರ್ಲಕ್ಷ್ಯದಿಂದಾಗಿ ಜನಪ್ರಿಯ ಟಿ.ವಿ ರಿಯಾಲಿಟಿ ಷೋ 'ಬಿಗ್ ಬಾಸ್' ಇದೀಗ ಅಡಕತ್ತರಿಯಲ್ಲಿ ಸಿಲುಕಿದೆ. ಬುಧವಾರ ಈ ಬೆಳವಣಿಗೆ ಯಾವ ಆಯಾಮ ಪಡೆದುಕೊಳ್ಳಲಿದೆ? ಷೋ ಬೇರೆಡೆಗೆ ಸ್ಥಳಾಂತರವಾಗುವುದೇ? ಎಂಬ ಕುತೂಹಲ ಮನೆ ಮಾಡಿದೆ.

ಜಿಲ್ಲಾಡಳಿತದ ಬೀಗಮುದ್ರೆ ಕಾರ್ಯಾಚರಣೆಯಿಂದ ತಪ್ಪಿಸಿಕೊಳ್ಳಲು ಸಂಸ್ಥೆಯು ರಾತ್ರಿಯವರೆಗೆ ನಡೆಸಿದ ಸರ್ಕಸ್ ಫಲ ಕೊಡಲಿಲ್ಲ.

ಪೊಲೀಸರೊಂದಿಗೆ ಸಂಜೆ ಪಾರ್ಕ್‌ಗೆ ಬಂದ ತಹಶೀಲ್ದಾರ್ ತೇಜಸ್ವಿನಿ ಅವರು, ಸಂಸ್ಥೆಯ ನಾಲ್ಕೂ ದ್ವಾರಗಳಿಗೆ ಬೀಗ ಜಡಿದು ಸೀಲಿಂಗ್ ಮಾಡಿದರು.

ಉಲ್ಲಂಘನೆ ಏನು?

- ಕೈಗಾರಿಕಾ ಪ್ರದೇಶದಲ್ಲಿರುವ ಜಾಲಿವುಡ್ ಪಾರ್ಕ್‌ಗೆ ಬಳಸುವ ನೀರನ್ನು ಸಂಸ್ಕರಿಸದೆ ಹಾಗೆಯೇ ಹೊರಕ್ಕೆ ಬಿಡಲಾಗುತ್ತಿದೆ
- ಪಾರ್ಕ್ ಒಳಗೆ 250 ಕೆಎಲ್‌ಡಿ (ಕಿಲೋಲೀಟರ್) ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಿಸುವ ಎಸ್‌ಟಿಪಿ (ಕೊಳಚೆ ನೀರು ಸಂಸ್ಕರಣೆ ಘಟಕ) ಇದೆ ಎಂದು ಸಂಸ್ಥೆ ಹೇಳಿದರೂ ಘಟಕ ಕೆಲಸ ಮಾಡುತ್ತಿಲ್ಲ
- ಪಾರ್ಕ್‌ನಲ್ಲಿ 625 ಕೆವಿಎ ಮತ್ತು 500 ಕೆವಿಎ ಡಿ.ಜೆ ಸೆಟ್ ಅಳವಡಿಸಿರುವುದರಿಂದ ಶಬ್ದಮಾಲಿನ್ಯ ಉಂಟಾಗುತ್ತಿದೆ
- ತ್ಯಾಜ್ಯ ನಿರ್ವಹಣೆ ಸರಿಯಾಗಿಲ್ಲ. ಹಸಿ ಮತ್ತು ಒಣ ಕಸ ವಿಂಗಡಿಸದೆ ಹಾಗೆಯೇ ವಿಲೇವಾರಿ ಮಾಡಲಾಗುತ್ತಿದೆ

ಎಲ್ಲರಿಗೂ ಶಾಕ್: ಪಾರ್ಕ್‌ನ ಪ್ರವೇಶದ್ವಾರಕ್ಕೆ ಬೀಗ ಜಡಿದ ತಹಶೀಲ್ದಾರ್ ನೇರವಾಗಿ ಬಿಗ್ ಬಾಸ್ ಷೋ ಸ್ಥಳಕ್ಕೆ ತೆರಳಿ ಸ್ಪರ್ಧಿಗಳನ್ನು ಹೊರಕ್ಕೆ ಕಳಿಸುವಂತೆ ತಾಕೀತು ಮಾಡಿದರು. ಆಯೋಜಕರು ಸ್ಪರ್ಧಿಗಳನ್ನು ಕಾರುಗಳಲ್ಲಿ ಹಿಂದಿನ ದ್ವಾರಗಳ ಮೂಲಕ ಈಗಲ್ಟನ್ ರೆಸಾರ್ಟ್‌ಗೆ ಸ್ಥಳಾಂತರ ಮಾಡಿದರು.

ರಾತ್ರಿ 8 ಗಂಟೆಯವರೆಗೆ ಸ್ಥಳದಲ್ಲಿದ್ದ ತಹಶೀಲ್ದಾರ್ ಎಲ್ಲಾ ದ್ವಾರಗಳಿಗೆ ಬೀಗ ಸೀಲ್ ಮಾಡಿಸಿದ ಬಳಿಕವೇ ಅಲ್ಲಿಂದ ಹೊರಟರು. ಹೆಚ್ಚುವರಿ ಎಸ್‌ಪಿ ರಾಮಚಂದ್ರಪ್ಪ, ರಾಮನಗರ ಡಿವೈಎಸ್ಪಿ ಬಿ.ಎನ್. ಶ್ರೀನಿವಾಸ್, ಬಿಡದಿ ಠಾಣೆ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಸ್ಥಳದಲ್ಲಿದ್ದರು.

ನೋಟಿಸ್ ಸ್ವೀಕರಿಸಲು ಹಿಂದೇಟು: ನಿಯಮ ಉಲ್ಲಂಘನೆ ಕುರಿತು ಕಂದಾಯ ನಿರೀಕ್ಷಕ ಮತ್ತು ಗ್ರಾಮ ಆಡಳಿತಾಧಿಕಾರಿ ತೆರಳಿದ್ದಾಗ, ಸಂಸ್ಥೆಯವರು ನೋಟಿಸ್ ಪಡೆದಿರಲಿಲ್ಲ. ಹಾಗಾಗಿ, ಖುದ್ದು ನೋಟಿಸ್ ನೀಡಲು ತಹಶೀಲ್ದಾರ್ ಹೋಗಿದ್ದಾಗಲೂ, 'ನಾವು ಪಡೆಯುವುದಿಲ್ಲ' ಎಂದು ವಾಗ್ವಾದ ನಡೆಸಿದ್ದರು.

ಮಂಡಳಿ ಆದೇಶ ಜಾರಿಗೊಳಿಸುವಂತೆ ಜಿಲ್ಲಾಧಿಕಾರಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದರಿಂದ, ತಹಶೀಲ್ದಾರ್ ಅವರು ಪೊಲೀಸ್ ನೆರವಿನೊಂದಿಗೆ ಬೀಗಮುದ್ರೆ ಹಾಕಿದರು.

ಮಹಿಳೆಯರನ್ನು ಕಾಡುತ್ತಿದೆ ಸ್ತನ ಕ್ಯಾನ್ಸರ್

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ವಿಶ್ಲೇಷಣೆಯಿಂದ ದೃಢ

• ವರುಣ ಹೆಗಡೆ


ಮುಖ್ಯಾಂಶಗಳು

- ಕಳೆದ ವರ್ಷ 15 ಸಾವಿರಕ್ಕೂ ಅಧಿಕ ಪ್ರಕರಣಗಳು ಪತ್ತೆ
- ಪುರುಷರಗಿಂತಲೂ ಮಹಿಳೆಯರೇ ಹೆಚ್ಚು
- ಕ್ಯಾನ್ಸರ್ ಚಿಕಿತ್ಸೆ ಜತೆಗೆ ಜಾಗೃತಿಗೆ ಆದ್ಯತೆ

ಬೆಂಗಳೂರು: ಬದಲಾದ ಜೀವನಶೈಲಿ ಸೇರಿ ವಿವಿಧ ಕಾರಣಗಳಿಂದ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪ್ರಕಾರ ಕಳೆದ ವರ್ಷ ನೋಂದಣಿಯಾದ ಮಹಿಳಾ ಕ್ಯಾನ್ಸರ್ ಪೀಡಿತರಲ್ಲಿ, ಶೇ 22.5 ರಷ್ಟು ಮಂದಿಯಲ್ಲಿ ಸ್ತನ ಕ್ಯಾನ್ಸರ್ ದೃಢಪಟ್ಟಿದೆ.

ಅಕ್ಟೋಬರ್ ತಿಂಗಳು ಸ್ತನ ಕ್ಯಾನ್ಸರ್ ಜಾಗೃತಿ ಮಾಸವಾಗಿದ್ದು, ಸಂಸ್ಥೆಯು ಚಿಕಿತ್ಸೆ ಜತೆಗೆ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುತ್ತಿದೆ. ಸಂಸ್ಥೆಯ ಪ್ರಕಾರ ನಗರದಲ್ಲಿ ಕಳೆದ ವರ್ಷ 15 ಸಾವಿರಕ್ಕೂ ಅಧಿಕ ಕ್ಯಾನ್ಸರ್ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳಲ್ಲಿ 8 ಸಾವಿರಕ್ಕೂ ಅಧಿಕ ಮಂದಿ ಮಹಿಳೆಯರಾಗಿದ್ದಾರೆ. ಅವರಲ್ಲಿ 2,610 ಮಂದಿ ಸ್ತನ ಕ್ಯಾನ್ಸರ್ ಪೀಡಿತರಾಗಿದ್ದಾರೆ. ಸಂಸ್ಥೆ ಒಂದರಲ್ಲಿಯೇ ಕಳೆದ ವರ್ಷ 12 ಸಾವಿರಕ್ಕೂ ಅಧಿಕ ಹೊಸ ಪ್ರಕರಣಗಳು ನೋಂದಣಿಯಾಗಿದ್ದು, ಪುರುಷರಿಗಿಂತ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದಾರೆ. 1,544 ಮಹಿಳೆಯರು ಸ್ತನ ಕ್ಯಾನ್ಸರ್ ಪೀಡಿತರಾಗಿದ್ದಾರೆ.

ಮಹಿಳೆಯರಲ್ಲಿನ ಜೀವನಶೈಲಿ ಬದಲಾವಣೆಯೇ ಪ್ರಮುಖ ಕಾರಣವೆಂದು ವಿಶ್ಲೇಷಿಸಿರುವ ಸಂಸ್ಥೆಯ ಕ್ಯಾನ್ಸರ್ ತಜ್ಞರು, ಕೌಟುಂಬಿಕ ಇತಿಹಾಸದ ಜತೆಗೆ ತಡವಾಗಿ ವಿವಾಹ ಹಾಗೂ ಮಕ್ಕಳನ್ನು ಪಡೆಯುವಿಕೆ, ಸ್ಥೂಲಕಾಯ, ಮಕ್ಕಳಿಗೆ ಹಾಲು ನೀಡದಿರುವುದು, ಕೊಲೆಸ್ಟ್ರಾಲ್, ಹಾರ್ಮೋನ್ ಬದಲಾವಣೆ ಚಿಕಿತ್ಸೆ, ಹೆಚ್ಚು ಕೊಬ್ಬಿನ ಆಹಾರ ಸೇವನೆ ಹಾಗೂ ಮದ್ಯಪಾನವೂ ಸ್ತನ ಕ್ಯಾನ್ಸರ್ ಹೆಚ್ಚಳಕ್ಕೆ ಕಾರಣವಾಗಿದೆ.


ಸಾಂದರ್ಭಿಕ ಚಿತ್ರ

ಕಿದ್ವಾಯಿ: ಮಹಿಳೆಯರಲ್ಲಿನ ಪ್ರಮುಖ ಕ್ಯಾನ್ಸರ್ ಪ್ರಕರಣ (2024)		
ಸ್ತನ ಕ್ಯಾನ್ಸರ್	1,544	22.5%
ಗರ್ಭಕಂಠದ ಕ್ಯಾನ್ಸರ್	1,056	15.4%
ಬಾಯಿ ಕ್ಯಾನ್ಸರ್	663	9.7%
ಅಂಡಾಶಯ ಕ್ಯಾನ್ಸರ್	306	4.5%

ಅಂಕಿ ಅಂಶಗಳು

12,930 ಕಿದ್ವಾಯಿಯಲ್ಲಿ ಕಳೆದ ವರ್ಷ ನೋಂದಣಿಯಾದ ಪ್ರಕರಣ

6,075 ಸಂಸ್ಥೆಯಲ್ಲಿ ನೋಂದಣಿಯಾದ ಪುರುಷ ಕ್ಯಾನ್ಸರ್ ಪೀಡಿತರು

6,855 ಸಂಸ್ಥೆಯಲ್ಲಿ ನೋಂದಣಿಯಾದ ಮಹಿಳಾ ಕ್ಯಾನ್ಸರ್ ಪೀಡಿತರು

ತಡವಾಗಿ ದಾಖಲು: ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ರೋಗಿಗಳು ಭೇಟಿ ನೀಡುತ್ತಿದ್ದಾರೆ. ಸಂಸ್ಥೆಯು ಕ್ಯಾನ್ಸರ್ ಚಿಕಿತ್ಸೆಯ ಜತೆಗೆ ಶಿಕ್ಷಣ, ಸಂಶೋಧನೆ ಹಾಗೂ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಕೊಂಡಿದೆ. ಇದರಿಂದಾಗಿ ಚಿಕಿತ್ಸೆಗಾಗಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಏರುಗತಿ ಪಡೆದಿದೆ. ಸಂಸ್ಥೆಯ ಪ್ರಕಾರ ಶೇ 50ರಷ್ಟು ಮಹಿಳೆಯರು ಕ್ಯಾನ್ಸರ್ ಮೂರು ಅಥವಾ ನಾಲ್ಕನೆ ಹಂತದಲ್ಲಿ ಇರುವಾಗ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ.

‘ಬಹುತೇಕ ಮಹಿಳೆಯರು ಕ್ಯಾನ್ಸರ್ ಉಲ್ಬಣಗೊಂಡ ಬಳಿಕ ಚಿಕಿತ್ಸೆಗೆ ಬರುತ್ತಾರೆ. ಇದರಿಂದಾಗಿ ಸಮಸ್ಯೆ ಮತ್ತಷ್ಟು ಸಂಕೀರ್ಣವಾಗುತ್ತದೆ. ಮೂರು ಹಾಗೂ ನಾಲ್ಕನೇ ಹಂತದಲ್ಲಿ ಚೇತರಿಕೆ ಪ್ರಮಾಣ ಕಡಿಮೆ ಇರಲಿದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಯಾದಲ್ಲಿ ಶೇ 90 ರಷ್ಟು ಪ್ರಕರಣಗಳಲ್ಲಿ ಗುಣಪಡಿಸಲು ಸಾಧ್ಯ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ತಿಳಿಸಿದರು.



ಜೀವನಶೈಲಿ ಬದಲಾವಣೆಯೇ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚಳವಾಗಲು ಪ್ರಮುಖ ಕಾರಣ. ಆರಂಭಿಕ ಹಂತದಲ್ಲಿಯೇ ಪತ್ತೆಯಾದಲ್ಲಿ ಚಿಕಿತ್ಸೆ ಸುಲಭ. ಆದ್ದರಿಂದ ಚಿಕಿತ್ಸೆ ಜತೆಗೆ ಜಾಗೃತಿ ಮೂಡಿಸಲಾಗುತ್ತಿದೆ

ಡಾ.ಟಿ.ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸ್ತನ ಕ್ಯಾನ್ಸರ್ ತಡೆಗೆ ಪರಿಹಾರ ಏನು?

- 30 ವರ್ಷಗಳು ಮೇಲ್ಪಟ್ಟವರು ನಿಯಮಿತವಾಗಿ ಸ್ವಯಂ ಪರೀಕ್ಷೆ ಮತ್ತು ವೈದ್ಯಕೀಯ ಪರೀಕ್ಷೆಗೆ ಒಳಪಡುವುದು
- 40 ವರ್ಷಗಳು ಮೇಲ್ಪಟ್ಟ ಮಹಿಳೆಯರು ಎರಡು ವರ್ಷಗಳಿಗೊಮ್ಮೆ ಮ್ಯಾಮೋಗ್ರಫಿ ತಪಾಸಣೆ ಮಾಡಿಸಿಕೊಳ್ಳುವುದು
- ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಂಡು, ಆಹಾರದಲ್ಲಿ ಸಮತೋಲನ ಕಾಯ್ದುಕೊಳ್ಳುವುದು

ಸುದ್ದಿ 2 ನಿಮಿಷ

ಎಚ್‌ಒಡಿ ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ

ಬೆಂಗಳೂರು: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ನಗರದ ಖಾಸಗಿ ಕಾಲೇಜೊಂದರ ವಿಭಾಗದ ಮುಖ್ಯಸ್ಥರೊಬ್ಬರನ್ನು (ಎಚ್‌ಒಡಿ) ಬಂಧಿಸಿದ್ದ ತಿಲಕ್‌ನಗರ ಪೊಲೀಸರು, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

19 ವರ್ಷದ ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಕಾಲೇಜೊಂದರ ಎಚ್‌ಒಡಿ ಸಂಜೀವ್ ಕುಮಾರ್ ಮಂಡಲ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 75 ಅಡಿ ಎಫ್‌ಐಆರ್ ದಾಖಲಿಸಿಕೊಂಡು ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿತ್ತು. ವಿಚಾರಣೆಗೆ ಬಂದಾಗ ಆರೋಪಿಯನ್ನು ಬಂಧಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿ ನೀಡಿದ ದೂರಿನಲ್ಲಿ ಏನಿದೆ?: ‘ಕಾಲೇಜಿನಲ್ಲಿ ಮೂರನೇ ವರ್ಷದ ಬಿಸಿಎ ವಿದ್ಯಾರ್ಥಿನಿಯಾಗಿದ್ದು, ಸೆ.25ರಂದು ಸಂಜೀವ್ ಕುಮಾರ್ ಮಂಡಲ್ ಅವರು ಮನೆಯಲ್ಲಿ ಪತ್ನಿ ಹಾಗೂ ಮಕ್ಕಳು ಇರುವುದಾಗಿ ಹೇಳಿ ಊಟಕ್ಕೆ ಕರೆದುಕೊಂಡು ಹೋಗಿದ್ದರು. ಜಯನಗರದ 9ನೇ ಕಾಲೊನಿಯ ಕಾರ್ಪೊರೇಷನ್ ಕಾಲೊನಿಯಲ್ಲಿ ಅವರ ಮನೆ ಇದೆ. ಮನೆಗೆ ಹೋದ ಬಳಿಕ ಮನೆಯಲ್ಲಿ ಯಾರೂ ಇಲ್ಲ ಎಂಬುದಾಗಿ ತಿಳಿಸಿದ್ದರು. ಮೊದಲು ಸಹಜವಾಗಿಯೇ ಇದ್ದರು. ಕುಡಿಯಲು, ತಿನ್ನಲು ಏನಾದರೂ ಬೇಕಾ ಎಂದು ಕೇಳಿದ್ದರು. ಆಗ ನಾನು ಗಾಬರಿಯಿಂದ ಬೇಡವೆಂದು ಹೇಳಿದ್ದೆ’ ಎಂದು ವಿದ್ಯಾರ್ಥಿನಿ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಅವರ ಮನೆಯ ಸೋಫಾದಲ್ಲಿ ನಾನು ಕುಳಿತಿದ್ದೆ. ಆಗ ಸಂಜೀವ್ ಕುಮಾರ್ ಅವರು ನನ್ನ ಹತ್ತಿರ ಬಂದು, ಪಕ್ಕದಲ್ಲಿ ಕುಳಿತು ಹಾಜರಾತಿ ಕಡಿಮೆಯಿದೆ ಎಂದು ಹೇಳಿ ಭುಜದ ಮೇಲೆ ಕೈಹಾಕಿ ಅನುಚಿತವಾಗಿ ವರ್ತಿಸುತ್ತಾರೆ. ಅದಕ್ಕೆ ವಿರೋಧಿಸಿದಾಗ, ನಿನ್ನ ಹಾಜರಾತಿ ಕಡಿಮೆಯಿದ್ದು, ಹೆಚ್ಚು ಮಾಡುತ್ತೇನೆ. ಅಂಕಗಳನ್ನೂ ಹೆಚ್ಚಿಸುತ್ತೇನೆ ಎಂದು ಹೇಳಿ ಕೂದಲು ಸವರುತ್ತಾ ಲೈಂಗಿಕ ದೌರ್ಜನ್ಯ ಎಸಗಿದ್ದರು. ಅಷ್ಟರಲ್ಲಿ ಸ್ನೇಹಿತರು ಕರೆ ಮಾಡಿದ್ದರಿಂದ ಆಗ ತುರ್ತು ಕೆಲಸ ಇರುವುದಾಗಿ ಹೇಳಿ ಅಲ್ಲಿಂದ ಬಂದಿದ್ದೆ’ ಎಂದು ವಿದ್ಯಾರ್ಥಿನಿ ದೂರು ನೀಡಿದ್ದಾರೆ.



ಹೆಡ್‌ಫೋನ್ ಹಾಕಿಕೊಂಡು ಹಳಿ ದಾಟಿದ ವಿದ್ಯಾರ್ಥಿ: ಸಾವು

ಬೆಂಗಳೂರು: ಕಿವಿಯಲ್ಲಿ ಹೆಡ್‌ಫೋನ್ ಹಾಕಿಕೊಂಡು ರೈಲು ಹಳಿ ದಾಟುತ್ತಿದ್ದ ವೇಳೆ ರೈಲು ಡಿಕ್ಕಿಯಾಗಿ ವಿದ್ಯಾರ್ಥಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯ ನಾಗೇನಹಳ್ಳಿಯಲ್ಲಿ ನಡೆದಿದೆ.

ವೀರಣ್ಣಪಾಳ್ಯ ನಿವಾಸಿ ಶಶಿಕುಮಾರ್(20) ಮೃತ ವಿದ್ಯಾರ್ಥಿ.

ಮಂಗಳವಾರ ಬೆಳಿಗ್ಗೆ 8ರ ಸುಮಾರಿಗೆ ನಾಗೇನಹಳ್ಳಿ ರೈಲ್ವೆ ಟ್ರ್ಯಾಕ್ ಬಳಿ ಘಟನೆ ನಡೆದಿದೆ ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದರು.

ವೀರಣ್ಣಪಾಳ್ಯದ ನಿವಾಸಿ ವಾಸುದೇವ್ ಅವರ ಪುತ್ರ ಶಶಿಕುಮಾರ್, ಯಲಹಂಕದಲ್ಲಿ ಇರುವ ಖಾಸಗಿ ಕಾಲೇಜಿನಲ್ಲಿ ಬಿಬಿಎ ವ್ಯಾಸಂಗ ಮಾಡುತ್ತಿದ್ದ. ಮಂಗಳವಾರ ಬೆಳಿಗ್ಗೆ ಮನೆಯಿಂದ ಬಸ್ ನಿಲ್ದಾಣಕ್ಕೆ ಹೋಗುವಾಗ ಕಿವಿಗೆ ಹೆಡ್‌ಫೋನ್ ಹಾಕಿಕೊಂಡು ನಾಗೇನಹಳ್ಳಿ ರೈಲ್ವೆ ಹಳಿ ದಾಟುತ್ತಿದ್ದ. ಆ ಸಮಯದಲ್ಲಿ ಎಲೆಕ್ಟ್ರಿಕ್ ಎಂಜಿನ್‌ನ ಗೂಡ್ಸ್ ರೈಲು ಬಂದು ಡಿಕ್ಕಿ ಹೊಡೆದಿದ್ದು, ಸ್ಥಳದಲ್ಲೇ ಆತ ಮೃತಪಟ್ಟಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐದು ದಿನ ಪಟಾಕಿ ಮಾರಾಟಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೀಪಾವಳಿ ಹಬ್ಬ ಸಮೀಪಿಸಿದ್ದು, ಪಟಾಕಿ ಮಾರಾಟಗಾರರು ಎಚ್ಚರಿಕೆ ವಹಿಸಬೇಕು. ಮಾರಾಟಗಾರರು ಮುಂಗಡವಾಗಿ ಪಟಾಕಿ ಸಂಗ್ರಹ ಮಾಡಿಕೊಳ್ಳಲು ಅವಕಾಶ ಇಲ್ಲ’ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.


ಸೀಮಾಂತ್ ಕುಮಾರ್ ಸಿಂಗ್

ನಗರದಲ್ಲಿ ನಡೆದ ತಾತ್ಕಾಲಿಕ ಪಟಾಕಿ ಅಂಗಡಿಗಳ ಮಾಲೀಕರ ಸಭೆಯಲ್ಲಿ ಅವರು ಮಾತನಾಡಿದರು.

‘ಬೇಡಿಕೆ ಹೆಚ್ಚಿದೆ ಎನ್ನುವ ಕಾರಣಕ್ಕೆ ಪಟಾಕಿಯನ್ನು ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಮಾಡಿಕೊಂಡಿದ್ದರೆ, ಅಂತಹ ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ನಗರದ ಯಾವುದೇ ಭಾಗದಲ್ಲಿ ಪಟಾಕಿ ದುರಂತಗಳು ಸಂಭವಿಸದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು. ಎರಡು ವರ್ಷಗಳ ಹಿಂದೆ ಅತ್ತಿಬೆಲೆಯಲ್ಲಿ ಅವಘಡ ಸಂಭವಿಸಿತ್ತು. ಅಂತಹ ದುರಂತಗಳು ಆಗದಂತೆ ಕಟ್ಟೆಚರ ವಹಿಸಬೇಕು ಎಂದು ಹೇಳಿದರು.

‘ಹೆಚ್ಚಿನ ಪ್ರಮಾಣದಲ್ಲಿ ಪಟಾಕಿಯನ್ನು ದಾಸ್ತಾನು ಮಾಡಿಕೊಂಡರೆ ಅನಾಹುತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಅನಾಹುತಗಳಿಗೆ ಆಸ್ಪದ ಕೊಡಬಾರದು’ ಎಂದು ಹೇಳಿದರು.

‘ದೀಪಾವಳಿ ಹಬ್ಬಕ್ಕೆ ಐದು ದಿನ ಮುಂಚಿತವಾಗಿ ಪಟಾಕಿ ತಂದುಕೊಳ್ಳಬೇಕು. ಐದು ದಿನಗಳ ಒಳಗಾಗಿ ದಾಸ್ತಾನು ಖಾಲಿ ಮಾಡಬೇಕು. ಅ.18ರಿಂದ 22ರ ತನಕ ಪಟಾಕಿ ಮಾರಾಟ ಮಾಡುವುದಕ್ಕೆ ಅವಕಾಶ ನೀಡಲಾಗುವುದು’ ಎಂದು ಹೇಳಿದರು.

‘ಗೋದಾಮಿನಲ್ಲಿ ಅನಧಿಕೃತವಾಗಿ ಪಟಾಕಿ ಸಂಗ್ರಹಣೆ ಮಾಡಿಕೊಂಡರೆ ಗಸ್ತು ಪೊಲೀಸರು ಪರಿಶೀಲನೆ ನಡೆಸುತ್ತಾರೆ. ಪಟಾಕಿ ಮಾರಾಟಕ್ಕೆ ತಾತ್ಕಾಲಿಕ ಪರವಾನಗಿ ನೀಡುವ ಮುನ್ನ ಸುರಕ್ಷತಾ ಕ್ರಮಗಳನ್ನು ಪೊಲೀಸರು ಪರಿಶೀಲನೆ ನಡೆಸಲಿದ್ದಾರೆ’ ಎಂದು ಕಮಿಷನರ್ ಮಾಹಿತಿ ನೀಡಿದರು.

ಪಟಾಕಿ ಅಂಗಡಿಗಳನ್ನು ನಿರ್ಮಿಸಲು ಬಯಸುವ ಅರ್ಜಿದಾರರಿಗೆ ಪರವಾನಗಿ ನೀಡಲು ಲಾಟರಿ ವ್ಯವಸ್ಥೆ ಅನುಸರಿಸಲಾಗುತ್ತಿದೆ. ಲಾಟರಿಯಲ್ಲಿ ಗೆದ್ದವರಿಗೆ ಅಂಗಡಿ ತೆರೆಯಲು ಅನುಮತಿ ಸಿಗುತ್ತದೆ. 78 ಮೈದಾನಗಳಲ್ಲಿ 411 ಅಂಗಡಿಗಳಿಗೆ ಅನುಮತಿ ನೀಡಲಾಗಿದೆ ಎಂದು ಹೇಳಿದರು.

ಆನ್‌ಲೈನ್ ವಂಚನೆ: ಎಂಟು ಮಂದಿ ಸೆರೆ

19 ಲ್ಯಾಪ್‌ಟಾಪ್‌ಗಳು, 40 ಮೊಬೈಲ್, 42 ಸಿಮ್‌ಕಾರ್ಡ್, 11 ಪೆನ್‌ಡ್ರೈವ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್‌ನಲ್ಲಿ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿಸಿಕೊಂಡು ವಂಚನೆ ನಡೆಸುತ್ತಿದ್ದ ಜಾಲವನ್ನು ನೈರುತ್ಯ ವಿಭಾಗದ ಕೆಂಗೇರಿ ಠಾಣೆಯ ಪೊಲೀಸರು ಭೇದಿಸಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಒಟ್ಟು ಏಳು ಸ್ಥಳಗಳ ಮೇಲೆ ಸೋಮವಾರ ರಾತ್ರಿ ದಾಳಿ ನಡೆಸಿದ ಪೊಲೀಸರು, ಎಂಟು ಮಂದಿ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 318(4), 319(2), 3(5) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ 66(ಸಿ) ಹಾಗೂ 66(ಡಿ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದಾಳಿ ವೇಳೆ ಸಿಕ್ಕಿದ 19 ಲ್ಯಾಪ್‌ಟಾಪ್‌ಗಳು, 40 ಮೊಬೈಲ್ ಫೋನ್, 11 ಪೆನ್‌ಡ್ರೈವ್, 42 ಸಿಮ್‌ಕಾರ್ಡ್, 4 ಐ–ಪ್ಯಾಡ್, ಎರಡು ಹಾರ್ಡ್ ಡಿಸ್ಕ್, 5 ಸಿಪಿಯು, 13 ಮುದ್ರೆಗಳು, 10 ಮೆಮೊರಿ ಕಾರ್ಡ್, ವಿದೇಶಿ ಕರೆನ್ಸಿ, ಕರೆನ್ಸಿ ಕೌಂಟಿಂಗ್ ಮಷಿನ್, ₹6 ಕೋಟಿ ಮೌಲ್ಯದ ಸ್ಥಿರಾಸ್ತಿ ದಾಖಲೆಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಬಂಧಿತರನ್ನು ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳು, ವಾಟ್ಸ್‌ಆ್ಯಪ್, ಫೇಸ್‌ಬುಕ್, ಟೆಲಿಗ್ರಾಮ್ ಮೂಲಕ ವಿವಿಧ ರಾಜ್ಯಗಳಲ್ಲಿ ನೆಲಸಿರುವ ಜನರನ್ನು ಸಂಪರ್ಕಿಸುತ್ತಿದ್ದರು. ಆನ್‌ಲೈನ್ ಮೂಲಕ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರಲಿದೆ ಎಂಬುದಾಗಿ ಆಮಿಷ ಒಡ್ಡುತ್ತಿದ್ದರು. ನೂರಾರು ಜನರಿಂದ ಹಣ ಹೂಡಿಕೆ ಮಾಡಿಸಿಕೊಂಡು ವಂಚನೆ ಎಸಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಸಹಚರನೇ ನೀಡಿದ್ದ ಮಾಹಿತಿ: ‘ಪ್ರಕರಣದಲ್ಲಿ ಇನ್ನೂ ಕೆಲವು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಹೂಡಿಕೆಯಿಂದ ಬಂದ ಲಾಭವನ್ನು ಬಂಧಿತರು ತಮ್ಮ ಸಹಚರನಿಗೆ ನೀಡಿರಲಿಲ್ಲ. ಇದೇ ಕಾರಣಕ್ಕೆ ಎರಡು ತಂಡಗಳ ನಡುವೆ ವೈಷಮ್ಯ ಉಂಟಾಗಿತ್ತು. ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಮಾಡಿಸಿಕೊಂಡು ವಂಚನೆ ನಡೆಸುತ್ತಿದ್ದ ಬಗ್ಗೆ ಸಹಚರನೇ ಪೊಲೀಸರಿಗೆ ಮಾಹಿತಿ ನೀಡಿದ್ದ. ಮಾಹಿತಿ ಆಧರಿಸಿ ಏಳು ಸ್ಥಳಗಳ ಮೇಲೆ ಸೋಮವಾರ ರಾತ್ರಿ ಪೊಲೀಸರು ದಾಳಿ ನಡೆಸಿದ್ದರು’ ಎಂದು ಪೊಲೀಸರು ಹೇಳಿದರು.


ಆರೋಪಿಗಳನ್ನು ಕರೆದೊಯ್ದು ಸ್ಥಳ ಮಹಜರು ನಡೆಸಿದ ಪೊಲೀಸರು

ಅಪರಾಧ ಸುದ್ದಿ

ಸುತ್ತಿಗೆ ಹಿಡಿದು ಕಂಡ ಕಂಡವರ ಮೇಲೆ ಹಲ್ಲೆಗೆ ಯತ್ನ

ಬೆಂಗಳೂರು: ರಾಜಾಜಿನಗರದ ನವರಂಗ್ ವೃತ್ತದಲ್ಲಿ ಸುತ್ತಿಗೆ ಹಿಡಿದುಕೊಂಡು ಕಂಡ ಕಂಡವರ ಮೇಲೆ ಹಲ್ಲೆಗೆ ಯತ್ನಿಸುತ್ತಿದ್ದ ವ್ಯಕ್ತಿಯನ್ನು ಸ್ಥಳೀಯರೇ ಹಿಡಿದು ಸುಬ್ರಹ್ಮಣ್ಯ ನಗರ ಠಾಣೆಯ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಸೋಮವಾರ ರಾತ್ರಿ ಈ ಘಟನೆ ನಡೆದಿದೆ.

ಶಹಾಬುದ್ದೀನ್ ಎಂಬ ವ್ಯಕ್ತಿ ಮದ್ಯದ ಅಮಲಿನಲ್ಲಿ ಕೈಯಲ್ಲಿ ಸುತ್ತಿಗೆ ಹಿಡಿದು ರಸ್ತೆಯಲ್ಲಿ ಓಡಾಟ ನಡೆಸುತ್ತಿದ್ದ. ರಸ್ತೆಬದಿ ನಿಂತಿದ್ದ ಡೆಲಿವರಿ ಬಾಯ್ ಮೇಲೆ ಸುತ್ತಿಗೆ ಬೀಸಲು ಯತ್ನಿಸಿದ್ದ. ಅದೃಷ್ಟವಶಾತ್ ಡೆಲಿವರಿ ಬಾಯ್ ಅಪಾಯದಿಂದ ಪಾರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಸುತ್ತಿಗೆ ಹಿಡಿದುಕೊಂಡು ರಸ್ತೆಯಲ್ಲಿ ಓಡಾಟ ನಡೆಸುತ್ತ ಭಯ ಮೂಡಿಸಿದ್ದ. ಹೋಟೆಲ್‌ಗಳಲ್ಲಿ ಊಟ ಮಾಡುತ್ತಿದ್ದವರು ಭಯದಿಂದ ಹೊರಗೆ ಓಡಿಬಂದಿದ್ದರು. ವ್ಯಕ್ತಿ ಸುತ್ತಿಗೆ ಹಿಡಿದುಕೊಂಡು ಓಡಾಟ ನಡೆಸುತ್ತಿದ್ದ ದೃಶ್ಯವನ್ನು ಕೆಲವರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಬಳಿಕ, ಬಾರ್‌ವೊಂದರ ಪಕ್ಕದಲ್ಲಿ ಬಂದು, ಒಂದು ಕೈಯಲ್ಲಿ ಸುತ್ತಿಗೆ ಹಿಡಿದು, ಮತ್ತೊಂದು ಕೈಯಲ್ಲಿ ಸಿಗರೇಟ್ ಸೇದುತ್ತಲೇ ನಿಂತಿದ್ದ. ಆಗ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಸ್ಥಳಕ್ಕೆ ಬಂದ ಪೊಲೀಸರು ಆತನನ್ನು ವಶಕ್ಕೆ ಪಡೆದುಕೊಂಡರು’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

‘ವ್ಯಕ್ತಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗಿದೆ. ಇನ್ನು ಮುಂದೆ ಈ ರೀತಿಯ ಕೃತ್ಯ ಎಸಗದಂತೆ ಸೂಚನೆ ನೀಡಲಾಗಿದೆ. ಮದ್ಯದ ಅಮಲಿನಲ್ಲಿ ಕೃತ್ಯ ಎಸಗಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಮಾದಕ ವಸ್ತು ನಾಶ

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ: ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವ್ಯಾಪ್ತಿಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್.ಡಿ.ಪಿ.ಎಸ್ ಕಾಯ್ದೆಯಡಿ ವಶಪಡಿಸಿಕೊಂಡಿದ್ದ 34 ಕೆ.ಜಿ 750 ಗ್ರಾಂ ಮಾದಕವಸ್ತುವನ್ನು ಪಟ್ಟಣದ ಹೊರವಲಯದಲ್ಲಿರುವ ಕೈಗಾರಿಕಾ ಘಟಕದಲ್ಲಿ ಸೋಮವಾರ ನಾಶಪಡಿಸಲಾಯಿತು.

ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್.ಡಿ.ಪಿ.ಎಸ್ ಕಾಯ್ದೆಯಡಿ ದಾಖಲಾಗಿದ್ದ 14 ಪ್ರಕರಣಗಳ ತನಿಖೆ ಪೂರ್ಣಗೊಂಡ ಹಿನ್ನೆಲೆಯಲ್ಲಿ, ನ್ಯಾಯಾಲಯದ ಅನುಮತಿ ಪಡೆದು ಮಾದಕವಸ್ತು ವಿಲೇವಾರಿ ಸಮಿತಿ ಹಾಗೂ ಪಂಚರ ಸಮಕ್ಷಮ ನಿಯಮಾನುಸಾರ ನಾಶಪಡಿಸಲಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಇದ್ದರು.

ಪಾನಮತ್ತ ಕಾರ್ಮಿಕರ ನಡುವೆ ನಡೆದ ಜಗಳ ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತಹಳ್ಳಿ ಬಳಿಯ ವೀರಣ್ಣನಪಾಳ್ಯದಲ್ಲಿ ಸೋಮವಾರ ರಾತ್ರಿ ಪಾನಮತ್ತ ಕಾರ್ಮಿಕರ ನಡುವೆ ನಡೆದ ಜಗಳವು ಕೊಲೆಯಲ್ಲಿ ಅಂತ್ಯವಾಗಿದೆ. ರಾಜು (37) ಅವರನ್ನು ಕೊಲೆ ಮಾಡಿದ ಆರೋಪದ ಅಡಿ ಆರೋಪಿ ರಘು ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಜಾರ್ಖಂಡ್ ಮೂಲದ ರಾಜು ಮತ್ತು ರಘು, ವೀರಣ್ಣನಪಾಳ್ಯದ ನಿರ್ಮಾಣ ಹಂತದ ಕಟ್ಟಡದಲ್ಲಿ ಗ್ರಾನೈಟ್ ಹಾಕುವ ಕೆಲಸ ಮಾಡುತ್ತಿದ್ದರು. ಅವರಿಬ್ಬರೂ ಆ ಕಟ್ಟಡದ ಪಕ್ಕದ ತಾತ್ಕಾಲಿಕ ಶೆಡ್‌ನಲ್ಲಿ ವಾಸವಾಗಿದ್ದರು. ಸೋಮವಾರ ರಾತ್ರಿ ಇಬ್ಬರ ನಡುವೆ ಗಲಾಟೆ ನಡೆದು ಕೊಲೆಯಲ್ಲಿ ಅಂತ್ಯವಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿ ರಘು, ಮೃತ ರಾಜು ಅವರ ಪತ್ನಿಗೆ ಆಗಾಗ್ಗೆ ಕರೆ ಮಾಡಿ ಮಾತನಾಡುತ್ತಿದ್ದ. ಈ ವಿಚಾರಕ್ಕೆ ರಾಜು ಮತ್ತು ರಘು ನಡುವೆ ಜಗಳವಾಗಿದೆ. ಬಳಿಕ ಜಗಳ ವಿಕೋಪಕ್ಕೆ ತಿರುಗಿ ರಘು, ಚಾಕುವಿನಿಂದ ರಾಜು ಅವರ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಕೊಲೆ ಬಳಿಕ ಆರೋಪಿ ಜಾರ್ಖಂಡ್‌ಗೆ ಪರಾರಿಯಾಗಲು ರೈಲು ನಿಲ್ದಾಣಕ್ಕೆ ಹೋಗಿದ್ದ. ಈ ಬಗ್ಗೆ ಮಾಹಿತಿ ತಿಳಿದ ಪೊಲೀಸರು ರೈಲು ನಿಲ್ದಾಣಕ್ಕೆ ತೆರಳಿ ಆರೋಪಿಯನ್ನು ಬಂಧಿಸಿದ್ದಾರೆ.

ಅಮೃತಹಳ್ಳಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಗೃಹ ಕಾರ್ಮಿಕರ ಸಂಘಗಳಿಗೆ ಪ್ರಾತಿನಿಧ್ಯಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಗೃಹ ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆ ರಚಿಸುತ್ತಿರುವ ಜಿಲ್ಲಾ ಮಟ್ಟದ ದೂರು ನಿವಾರಣಾ ಸಮಿತಿ ಹಾಗೂ ರಾಜ್ಯಮಟ್ಟದ ಸಲಹಾ ಮಂಡಳಿಗಳಲ್ಲಿ ಗೃಹ ಕಾರ್ಮಿಕರ ಸಂಘಗಳಿಗೆ ಪ್ರಾತಿನಿಧ್ಯ ನೀಡಬೇಕು ಎಂದು ರಾಜ್ಯ ಮನೆಗೆಲಸ ಕಾರ್ಮಿಕರ ಯೂನಿಯನ್‌ಗಳ ಒಕ್ಕೂಟವು ಕಾರ್ಮಿಕ ಇಲಾಖೆಯ ಆಯುಕ್ತರಿಗೆ ಮನವಿ ಮಾಡಿದೆ.

ಕಾರ್ಮಿಕರು ಮತ್ತು ಉದ್ಯೋಗದಾತರ ನೋಂದಣಿ ಮತ್ತು ಮನೆಗೆಲಸ ಕಾರ್ಮಿಕರನ್ನು ನೇಮಿಸಿಕೊಳ್ಳುವ ಆನ್‌ಲೈನ್ ವೇದಿಕೆಗಳನ್ನು ನಿಯಂತ್ರಿಸಬೇಕು. ಇಎಸ್‌ಐ, ಭವಿಷ್ಯ ನಿಧಿ, ಗ್ರಾಚ್ಯುಟಿ ಮತ್ತು ಪಿಂಚಣಿ ನೀಡಬೇಕು. ಕನಿಷ್ಠ ವೇತನ, ವಾರ್ಷಿಕ ಬೋನಸ್, ನಿಯಮಿತವಾಗಿ ಸಂಬಳ ಹೆಚ್ಚಳ ಮಾಡಬೇಕು ಎಂದು ಒಕ್ಕೂಟದ ಪದಾಧಿಕಾರಿಗಳು ಆಗ್ರಹಿಸಿದರು.

ಕಡ್ಡಾಯವಾಗಿ ವಾರದ ರಜೆ, ವೇತನ ಸಹಿತ ರಜೆ, ವಜಾಗೊಳಿಸುವ ಮುನ್ನ ಸೂಚನೆ ನೀಡಬೇಕು. ಲೈಂಗಿಕ ಕಿರುಕುಳ ತಡೆಯಬೇಕು. ಬಾಲ ಕಾರ್ಮಿಕರ ಬಳಕೆ ನಿಷೇಧ ಪರಿಣಾಮಕಾರಿಯಾಗಬೇಕು. ಆರೋಗ್ಯ ಸೇವೆ ಮತ್ತು ಔದ್ಯೋಗಿಕ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ಜಾತಿ ಆಧಾರಿತ ತಾರತಮ್ಯದ ವಿರುದ್ಧ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಗುತ್ತಿಗೆದಾರರ ನಿಯಂತ್ರಣದೊಂದಿಗೆ ಕಳ್ಳಸಾಗಣೆ ಮತ್ತು ಶೋಷಣೆಯ ವಿರುದ್ಧ ರಕ್ಷಣೆ ನೀಡಬೇಕು ಎಂದು ಮನವಿಯಲ್ಲಿ ತಿಳಿಸಿದರು.

ನಿಯೋಗದಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಜಬೀನಾ ಖಾನಂ, ಕರಿಬಸಪ್ಪ ಎಂ, ರೇಖಾ, ಮೆಹೆರಾಜ್ ಬೇಗಂ, ಶರಣಮ್ಮ, ನರಸಮ್ಮ, ರೋಸ್ ಮೇರಿ, ಮಾಲನ್ ಮುಜಾವರ್, ಮಾಹದೇವಿ ಚಾಕರ್ರೆ, ಸಾಹೇರ ಬಾನು, ಸಿಂಥಿಯಾ, ಸಹಾಯ, ಮೀನಾಕ್ಷಿ ಶಿಂಫೆ ಉಪಸ್ಥಿತರಿದ್ದರು.


ಕಾರ್ಮಿಕ ಇಲಾಖೆಯ ಜಂಟಿ ಆಯುಕ್ತರಿಗೆ ರಾಜ್ಯ ಮನೆಗೆಲಸ ಕಾರ್ಮಿಕರ ಯೂನಿಯನ್‌ಗಳ ಒಕ್ಕೂಟದ ಪದಾಧಿಕಾರಿಗಳು ಮನವಿ ಸಲ್ಲಿಸಿದರು


ಎಫ್‌ಸಿ ಬೆಂಗಳೂರು ಯುನೈಟೆಡ್ ಹಾಗೂ ಬೆಂಗಳೂರು ಸಿಟಿ ಎಫ್‌ಸಿ ತಂಡಗಳ ಆಟಗಾರರ ಜಿದ್ದಾಜಿದ್ದಿ –ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ

ಕಿಕ್‌ಸ್ಟಾರ್ಟ್‌ಗೆ ಗೆಲುವು

ಬೆಂಗಳೂರು: ಎದುರಾಳಿ ತಂಡದ ಆರ್.ವಿನೋದ್ (53ನೇ ನಿಮಿಷ) ಅವರ ಉಡುಗೊರೆ ಗೋಲಿನಿಂದಾಗಿ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಮಂಗಳವಾರ 1–0ಯಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 3–0 ಅಂತರದಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡವನ್ನು ನಿರಾಯಾಸವಾಗಿ ಮಣಿಸಿತು. ಮೊಹಮ್ಮದ್ ಅತ್ತಾಬ್ ಹುಸೇನ್ (4ನೇ ನಿ.) ಆರಂಭಿಕ ಮುನ್ನಡೆ ತಂದುಕೊಟ್ಟರೆ, ಎಂ.ನಿಖಿಲ್‌ರಾಜ್ (34ನೇ ಹಾಗೂ 42ನೇ ನಿ.) ಅವಳಿ ಗೋಲು ಹೊಡೆದು ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ರಿಯಲ್ ಬೆಂಗಳೂರು ತಂಡವು 2–0ಯಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡದ ಎದುರು ಜಯ ದಾಖಲಿಸಿತು. ಆರ್.ಕಾರ್ತಿಕೇಯನ್ (12ನೇ ನಿ.) ಹಾಗೂ ಅಜಯ್ ಅಲೆಕ್ಸ್ ಆ್ಯಂಟನಿ (60ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಹಿಮಾಚಲ ಪ್ರದೇಶದ ಬಿಲಾಸಪುರ ಜಿಲ್ಲೆಯ ಬಾಲುಘಾಟ್‌ನಲ್ಲಿ ದುರಂತ

ಭೂಕುಸಿತ: ಬಸ್‌ನಲ್ಲಿದ್ದ 15 ಮಂದಿ ಸಾವು

ಶಿಮ್ಲಾ(ಪಿಟಿಐ): ಹಿಮಾಚಲ ಪ್ರದೇಶದ ಬಿಲಾಸಪುರ ಜಿಲ್ಲೆಯಲ್ಲಿ ಮಂಗಳವಾರ ಭಾರಿ ಭೂಕುಸಿತ ಸಂಭವಿಸಿ, ಖಾಸಗಿ ಬಸ್‌ವೊಂದು ಉರುಳಿ ಬಿದ್ದ ಪರಿಣಾಮ ಕನಿಷ್ಠ 15 ಮಂದಿ ಪ್ರಯಾಣಿಕರು ಮೃತಪಟ್ಟಿದ್ದಾರೆ.

ಜಿಲ್ಲೆಯ ಬಾಲುಘಾಟ್‌ನಲ್ಲಿ ಸಂಜೆ 6.30ರ ಹೊತ್ತಿಗೆ ಈ ಅವಘಢ ಸಂಭವಿಸಿದೆ. ಹರಿಯಾಣದ ರೋಹ್ಟಕ್‌ನಿಂದ ಘುಮಾರ್ವಿಗೆ ಹೊರಟಿದ್ದ ಈ ಬಸ್‌ನಲ್ಲಿ 30–35 ಪ್ರಯಾಣಿಕರಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಅವಶೇಷಗಳಡಿಯಿಂದ ಈವರೆಗೆ 15 ಮೃತದೇಹಗಳನ್ನು ಹೊರಗೆ ತೆಗೆಯಲಾಗಿದೆ. ಭೂಕುಸಿತದ ಪರಿಣಾಮ ಇಡೀ ಪರ್ವತವೊಂದು ಬಸ್‌ಗೆ ಅಪ್ಪಳಿಸಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತರಲ್ಲಿ ಚಾಲಕ, ನಿರ್ವಾಹಕ ಸೇರಿದ್ದಾರೆ. ಗಾಯಗೊಂಡ ಮೂವರನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತು ಎಂದು ಝಂಡೂತಾದ ಶಾಸಕ ಜೆ.ಆರ್. ಕಟವಾಲ್ ದೂರವಾಣಿ ಮೂಲಕ ತಿಳಿಸಿದ್ದಾರೆ. ಅವರು ಸ್ಥಳಕ್ಕೆ ತೆರಳಿದ ನಂತರ ಈ ಮಾಹಿತಿ ನೀಡಿದ್ದಾರೆ.

ಇದುವರೆಗೆ 15 ಶವಗಳನ್ನು ಹೊರತೆಗೆಯಲಾಗಿದೆ. ಅವಶೇಷಗಳಡಿ ಇನ್ನಷ್ಟು ಮಂದಿ ಸಿಲುಕಿದ್ದು, ಅವರ ಪತ್ತೆಗಾಗಿ ಕಾರ್ಯಾಚರಣೆ ನಡೆದಿದೆ ಎಂದು ಬಿಲಾಸಪುರದ ಎಸ್.ಪಿ ಸಂದೀಪ್ ಧವಳ್ ಹೇಳಿದ್ದಾರೆ.

ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು ಅವರು ತೀವ್ರವಾಗಿ ಶೋಧಕಾರ್ಯ ನಡೆಸುವಂತೆ ಸ್ಥಳದಲ್ಲಿರುವ ತಂಡಕ್ಕೆ ಆದೇಶ ನೀಡಿದ್ದಾರೆ.

ಮುಖ್ಯಾಂಶಗಳು

- ರೋಹ್ಟಕ್‌ನಿಂದ ಘುಮಾರ್ವಿಗೆ ಹೊರಟಿದ್ದ ಬಸ್‌ನಲ್ಲಿ 30–35 ಪ್ರಯಾಣಿಕರು
- ಬಸ್‌ನ ಮೇಲೆ ಉರುಳಿಬಿದ್ದ ಮಣ್ಣಿನ ರಾಶಿ
- ಚಾಲಕ, ನಿರ್ವಾಹಕರು ಮೃತಪಟ್ಟಿದ್ದಾರೆ

₹2 ಲಕ್ಷ ಪರಿಹಾರ


ಹಿಮಾಚಲ ಪ್ರದೇಶದ ಬಿಲಾಸಪುರ ಜಿಲ್ಲೆಯಲ್ಲಿ ಮಂಗಳವಾರ ಭೂಕುಸಿತದಿಂದಾಗಿ ಬಸ್ ಉರುಳಿ ಬಿದ್ದಿದ್ದು, ರಕ್ಷಣಾಕಾರ್ಯ ನಡೆಯಿತು ಪಿಟಿಐ ಚಿತ್ರ

ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರವನ್ನು ಪ್ರಧಾನ ಮಂತ್ರಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ (ಪಿಎಂಎನ್‌ಆರ್‌ಎಫ್) ನೀಡಲಾಗುವುದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಗಾಯಗೊಂಡವರ ಚಿಕಿತ್ಸೆ ನೆರವಿಗೆ ತಲಾ ₹50 ಸಾವಿರ ಬಿಡುಗಡೆ ಮಾಡುವುದಾಗಿಯೂ ತಿಳಿಸಿದ್ದಾರೆ.

‘ದುರಂತದಲ್ಲಿ ಮೃತಪಟ್ಟವರಿಗೆ ಸಂತಾಪಗಳು. ಹಿಮಾಚಲ ಪ್ರದೇಶದಲ್ಲಿ ಸಂಭವಿಸಿರುವ ಹೃದಯವಿದ್ರಾವಕ ಅವಘಡ ಇದಾಗಿದೆ. ಗಾಯಗೊಂಡವರು ಬೇಗ ಚೇತರಿಸಿಕೊಳ್ಳಲಿ ಎಂದು ಹಾರೈಸುತ್ತೇನೆ’ ಎಂದು ಪ್ರಧಾನಿ ಮೋದಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೂ ಘಟನೆಯ ಕುರಿತು ವಿಷಾದ ವ್ಯಕ್ತಪಡಿಸಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಬೆಂಗಳೂರು ಉತ್ತರ ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ಜಿಲ್ಲೆಯ ಬಾಲಕರ ಮತ್ತು ಬಾಲಕಿಯರ ತಂಡಗಳು ರಾಜ್ಯಮಟ್ಟದ 19 ವರ್ಷದೊಳಗಿನ ಬಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿವೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಪದವಿಪೂರ್ವ) ಬೆಂಗಳೂರು ಉತ್ತರ ಜಿಲ್ಲೆ ಸಹಯೋಗದೊಂದಿಗೆ ಜಾಲಹಳ್ಳಿ ಸೇಂಟ್ ಕ್ಲಾರೆಟ್ ಪಿಯು ಕಾಲೇಜು ಆವರಣದಲ್ಲಿ ಟೂರ್ನಿ ಆಯೋಜಿಸಲಾಯಿತು. ರಾಜ್ಯದ 33 ಜಿಲ್ಲೆಗಳಿಂದ 600 ಆಟಗಾರರು ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲಾ ತಂಡಗಳು ಸತತ ಎಂಟನೇ ವರ್ಷವೂ ಚಾಂಪಿಯನ್ ಆಗಿ ಹೊರಹೊಮ್ಮಿವೆ.

ಬೆಂಗಳೂರು ಉತ್ತರ ಜಿಲ್ಲೆಯ ಪಿಯು ಮಂಡಳಿಯ ಉಪ ನಿರ್ದೇಶಕ ಟಿ. ಪಾಲಾಕ್ಷ, ಸೇಂಟ್ ಕ್ಲಾರೆಟ್ ಪಿಯು ಕಾಲೇಜಿನ ಪ್ರಾಂಶುಪಾಲ ಮೈಕೆಲ್ ಡಿಸೋಜ ಮತ್ತು ಕರ್ನಾಟಕ ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆಯ ವೆಂಕಟೇಶ್ ವಿಜೇತರಿಗೆ ಟ್ರೋಫಿಗಳನ್ನು ಹಸ್ತಾಂತರಿಸಿದರು.


ರಾಜ್ಯಮಟ್ಟದ 19 ವರ್ಷದೊಳಗಿನ ಬಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಬೆಂಗಳೂರು ಉತ್ತರ ಜಿಲ್ಲೆಯ ಬಾಲಕರ ಮತ್ತು ಬಾಲಕಿಯರ ತಂಡಗಳು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ

ನಗರದಲ್ಲಿ ಇಂದು

ಮುಖ್ಯಮಂತ್ರಿಯವರ ಪದಕ ಪ್ರದಾನ, 71ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭ: ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಈಶ್ವರ ಬಿ. ಖಂಡ್ರೆ, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಪದವಿ ಪ್ರದಾನ ದಿನ: ಅತಿಥಿ: ಯು ದಿನೇಶ್ ಕುಮಾರ್, ಅಧ್ಯಕ್ಷತೆ: ಎಂ.ಆರ್. ಸೀತಾರಾಂ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಿಗ್ಗೆ 11

ಬಸವಾದಿ ಶರಣ ಹೂಗಾರ ಮಾದಯ್ಯನವರ ಜಯಂತಿ: ಸಾನ್ನಿಧ್ಯ: ಗುರುರಾಜೇಂದ್ರ ಶಿವಯೋಗಿ, ಚೇತನ್ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಬಿ.ವೈ. ವಿಜಯೇಂದ್ರ, ಬಸವರಾಜ್ ಹೂಗಾರ್, ಆಯೋಜನೆ: ಅಖಂಡ ಕರ್ನಾಟಕ ಹೂಗಾರ ಮಹಾಸಭಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

8 ಕಲಾವಿದರು, 8 ನಿರೂಪಣೆಗಳು ಪ್ರದರ್ಶನ: ಅತಿಥಿಗಳು: ಎಂ.ಜಿ. ದೊಡ್ಡಮನಿ, ಅಚ್ಯುತ್ ಗೌಡ, ಆಯೋಜನೆ: ಅನೇಕ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

‘ಕೃಷ್ಣ ಸಂಧಾನ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಕಾವ್ಯಶ್ರೀ ನಾಯಕ್ ಆಜೇರು, ಅಕ್ಷಯ ರಾವ್ ವಿಟ್ಲ, ಪೃಥ್ವಿ ಬಡೆಕ್ಕಿಲ, ಮುಮ್ಮೇಳ: ಉಜಿರೆ ಅಶೋಕ ಭಟ್, ಬೇಗಾರು ಶಿವಕುಮಾರ್, ಶಶಾಂಕ ಅರ್ನಾಡಿ, ಗಣೇಶ ಸುಂಕಸಾಳ, ವಿನಾಯಕ ಭಟ್, ಆಯೋಜನೆ: ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಗೌನಸೌರಭ ಯಕ್ಷಗಾನ ಶಾಲೆ, ಬಿಬಿಎಂಪಿ ಕಟ್ಟಡ, ನಂಜರಸಪ್ಪ ಬಡಾವಣೆ, ವೈಯ್ಯಾಲಿ ಕಾವಲ್, ವಿಜಯನಗರ, ಮಧ್ಯಾಹ್ನ 3

‘ತ್ಯಾಗಿ’ ನಾಟಕ ಪ್ರದರ್ಶನ: ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಪ್ರತಿಭಾ ಕಲಾನಿಕೇತನ, ಸ್ಥಳ: ನಯನ ರಂಗ ಮಂದಿರ, ಕನ್ನಡ ಭವನ ಜೆ.ಸಿ. ರಸ್ತೆ, ಸಂಜೆ 4

ಮದನ್ ಪಟೇಲ್ ಸಾಹಿತ್ಯ ಸಂಭ್ರಮ: ಉದ್ಘಾಟನೆ: ನಾಗೇಶ ವಿ. ಬೆಟ್ಟಕೋಟೆ, ವಿಚಾರ ಮಂಡನೆ: ಎನ್.ಎಸ್. ಸತೀಶ್, ಎಂ.ಬಿ. ಕಟ್ಟಿ, ಸತ್ಯಮಂಗಲ ಮಹದೇವ್, ಚಿತ್ತಯ್ಯ ಪೂಜಾರ್, ಮದನ್ ಪಟೇಲ್ ಅವರ ಜೊತೆ ಸಂವಾದ: ನಿಡಸಾಲೆ ಪುಟ್ಟಸ್ವಾಮಯ್ಯ, ಮುತ್ತುರಾಜ್, ಅಂಜಲಿ, ಗುರುರಾಜ್, ವತ್ಸಲಾ ಮೋಹನ್, ವಿ.ಟಿ. ಶ್ರೀನಿವಾಸ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಶಿವಾನಂದ ಕೆಳಗಿನಮನಿ, ಸನ್ಮಾನಿತರು: ಮದನ್ ಪಟೇಲ್, ಆಯೋಜನೆ: ಕನ್ನಡಾಂಬೆ ಸಾಮಾಜಿಕ, ಸಾಂಸ್ಕೃತಿಕ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30

‘ಮೃಚ್ಛಕಟಿಕ’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

‘ಶಿಕ್ಷಕರೇ ದೇಶದ ಭದ್ರ ಬುನಾದಿ’

ಪ್ರಜಾವಾಣಿ ವಾರ್ತೆ



ನಗರದ ಉದಯ ಭಾನು ಕಲಾಸಂಘದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಸನ್ಮಾನಿಸಲಾಯಿತು

ಬೆಂಗಳೂರು: ನಗರದ ಉದಯ ಭಾನು ಕಲಾಸಂಘದಲ್ಲಿ ಎಸ್ಸೆಸ್ಸೆಲ್ಸಿ ಶಿಕ್ಷಕರು ಮತ್ತು ಪಿಯುಸಿ ಉಪನ್ಯಾಸಕರಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿತ್ತು. 1981ನೇ ಸಾಲಿನ ಎಸ್ಸೆಸ್ಸೆಲ್ಸಿ ತರಗತಿಗಳ ಶಿಕ್ಷಕರು ಮತ್ತು 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಉಪನ್ಯಾಸಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಶಿಕ್ಷಣ ತಜ್ಞ ಎಂ.ಕೆ. ಶ್ರೀಧರ್ ಅಭಿನಂದನಾ ಮಾತುಗಳನ್ನಾಡಿ, ‘ನಾಲ್ಕು ತಲೆಮಾರಿನ ಶಿಕ್ಷಕರ ಅಪರೂಪದ ಸಮ್ಮಿಲನ ಇದಾಗಿದ್ದು, ಗುರು ಶಿಷ್ಯ ಪರಂಪರೆಯ ಭವ್ಯದ್ಯೋತಕಕ್ಕೆ ಸಾಕ್ಷಿಯಾಗಿದೆ. ಭವಿಷ್ಯದ ಪೀಳಿಗೆಗೆ ಶಿಕ್ಷಣ ನೀಡುವ ಜವಾಬ್ದಾರಿ ಶಿಕ್ಷಕರದ್ದು’ ಎಂದರು.

ಸಂಘದ ಅಧ್ಯಕ್ಷ ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು. ಚಿಂತಕ ನಾ. ಸೋಮೇಶ್ವರ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಎಚ್. ಎಸ್. ಗೋಪಿನಾಥ, ಶಿಕ್ಷಣ ತಜ್ಞ ಕೆ.ಎಸ್. ಸಮೀರ ಸಿಂಹ, ಶಿಕ್ಷಕ ಬಿ. ವಿ. ನಾಗರಾಜು, ಗೋಪಣ್ಣ, ಹೆಗಡೆ, ನಿವೃತ್ತ ಕನ್ನಡ ಅಧ್ಯಾಪಕ ಬಿ. ಶಂಕರಲಿಂಗೇಗೌಡ, ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕ ಕೆ. ವಿ. ರಾಮರಾವ್ ಹಾಜರಿದ್ದರು. ಸಂಘದ ಕಾರ್ಯದರ್ಶಿ ರಾಧಾಕೃಷ್ಣ ಕೌಂಡಿನ್ಯ ಮತ್ತು ಬಿ.ವಿ. ನಾಗೇಶ್ ನಿರೂಪಿಸಿದರು.

ಹಾಸನಾಂಬ ಜಾತ್ರೆಗೆ 25 ಲಕ್ಷ ಮಂದಿ ನಿರೀಕ್ಷೆ

ಹಾಸನ: ‘ಹಾಸನಾಂಬ ದರ್ಶನೋತ್ಸವಕ್ಕೆ ಪ್ರತಿ ವರ್ಷ ಭಕ್ತರ ಸಂಖ್ಯೆ ಏರಿಕೆಯಾಗುತ್ತಿದೆ. ಕಳೆದ ಬಾರಿ 20 ಲಕ್ಷಕ್ಕೂ ಹೆಚ್ಚು ಮಂದಿ ದೇವಿಯ ದರ್ಶನ ಪಡೆದಿದ್ದಾರೆ. ಈ ಬಾರಿ 25 ಲಕ್ಷಕ್ಕೂ ಹೆಚ್ಚು ಮಂದಿ ಬರುವ ನಿರೀಕ್ಷೆ ಇದ್ದು, ಅಗತ್ಯ ಕ್ರಮ ಕೈಗೊಳ್ಳಲಾಗಿದೆ’ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಅ. 15ರಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿ ಸಚಿವರು ದೇವಿಯ ದರ್ಶನಕ್ಕೆ ಬರಲಿದ್ದಾರೆ’ ಎಂದರು.

‘ದೇವಿ ದರ್ಶನಕ್ಕೆ 80 ವರ್ಷಕ್ಕಿಂತ ಮೇಲಿನವರು ಹಾಗೂ ಅಂಗವಿಕಲರಿಗೆ ನೇರದರ್ಶನ ವ್ಯವಸ್ಥೆ ಮಾಡಲಾಗಿದೆ. ಗಂಟೆಗೆ 6 ಸಾವಿರ ಮಂದಿಯಂತೆ ಪ್ರತಿದಿನ ಒಂದೂವರೆ ಲಕ್ಷಕ್ಕೂ ಹೆಚ್ಚು ಭಕ್ತರು ದೇವಿಯ ದರ್ಶನ ಪಡೆಯಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ವಿಐಪಿ, ವಿವಿಐಪಿ ಪಾಸ್ ರದ್ದುಪಡಿಸಿದ್ದು, ಶಿಷ್ಟಾಚಾರ ದರ್ಶನ ವ್ಯವಸ್ಥೆಯಲ್ಲಿಯೂ ಬದಲಾವಣೆ ಮಾಡಲಾಗಿದೆ’ ಎಂದರು.

ಹಾಸನಾಂಬ ಹಾಗೂ ಸಿದ್ದೇಶ್ವರ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಇದೇ ಮೊದಲ ಬಾರಿಗೆ ಜಾನಪದ ಜಾತ್ರಾ ಮಹೋತ್ಸವ, ವಸ್ತು ಪ್ರದರ್ಶನ, ಶ್ವಾನ ಪ್ರದರ್ಶನ, ಆಹಾರ ಮೇಳ ಏರ್ಪಡಿಸಲಾಗಿದೆ. ಜೊತೆಗೆ ಫಲಪುಷ್ಪ ಪ್ರದರ್ಶನ, ಪ್ರವಾಸೋದ್ಯಮ ಇಲಾಖೆಯಿಂದ ಟೂರ್ ಪ್ಯಾಕೇಜ್, ಹೆಲಿ ಟೂರಿಸಂ ಕೂಡ ಆಯೋಜಿಸಲಾಗಿದೆ.

ಸಮೀಕ್ಷೆ: ಶಾಲೆಗಳ ರಜೆ ವಿಸ್ತರಣೆ ರದ್ದುಪಡಿಸುವಂತೆ ಎಐಡಿಎಸ್‌ಒ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ- ಶೈಕ್ಷಣಿಕ ಸಮೀಕ್ಷೆ ನೆಪದಲ್ಲಿ ಶಾಲೆಗಳ ರಜೆ ವಿಸ್ತರಣೆಯ ಆದೇಶವನ್ನು ಹಿಂಪಡೆದು ಸಮೀಕ್ಷೆಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಿ’ ಎಂದು ಎಐಡಿಎಒ ರಾಜ್ಯ ಸಮಿತಿ ಆಗ್ರಹಿಸಿದೆ.

‘ಈಗಾಗಲೇ ಶಾಲಾ ಶಿಕ್ಷಕರು ಬೋಧನೆ ಮಾಡುವ ಜೊತೆಗೆ ಬೋಧಕೇತರ ಚಟುವಟಿಕೆಗಳನ್ನು ನಿರ್ವಹಿಸುವ ಸ್ಥಿತಿಯಿದೆ. ಸಮೀಕ್ಷೆಯ ಜವಾಬ್ದಾರಿಯು ಹೊರೆಯಾಗಲಿದೆ ಎಂದು ಶಿಕ್ಷಕರೇ ಹೇಳುತ್ತಿದ್ದಾರೆ. ಪಾಠಗಳನ್ನು ಪೂರ್ಣಗೊಳಿಸುವ ಒತ್ತಡಕ್ಕೆ ಶಿಕ್ಷಕರು ಸಿಲುಕಿರುವ ಜತೆಗೆ ಮಕ್ಕಳ ಶೈಕ್ಷಣಿಕ ಸ್ಥಿರತೆ ಹಾಳು ಮಾಡುವ ಸನ್ನಿವೇಶ ಸೃಷ್ಟಿಯಾಗಲಿದೆ’ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

‘ಬೋಧನೆ ಮತ್ತು ಕಲಿಕೆಯ ಕಾರ್ಯಕ್ಕೆ ತೊಂದರೆಯಾಗದಂತೆ ಪೂರಕ ಯೋಜನೆಯಿಲ್ಲದೆ, ಚರ್ಚೆಯನ್ನೂ ಮಾಡದೇ ಶಾಲೆಗಳಿಗೆ ಏಕಾಏಕಿ ರಜೆ ವಿಸ್ತರಿಸಿರುವುದರಿಂದ ಫಲಿತಾಂಶ ಕುಸಿಯುವ ಭೀತಿ ಉಂಟಾಗಿದೆ’ ಎಂದು ತಿಳಿಸಿದ್ದಾರೆ.

ಅಪರಿಚಿತ ಸಾವು

ದೊಡ್ಡಬಳ್ಳಾಪುರ: ಸುಮಾರು 35 ವರ್ಷದ ವ್ಯಕ್ತಿಯೊಬ್ಬರು ರೈಲಿಗೆ ತಲೆಕೊಟ್ಟು ನಗರದ ರೈಲು ನಿಲ್ದಾಣದ ಬಳಿ ಸೋಮವಾರ ಮೃತಪಟ್ಟಿದ್ದಾರೆ.

ಯಶವಂತಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ವಿಳಾಸ, ಗುರುತು ಪತ್ತೆಯಾಗಿಲ್ಲ.

170 ಸೆಂ.ಮೀ ಎತ್ತರ, ಎಣ್ಣೆ ಕೆಂಪು ಮೈಬಣ್ಣ, ಕೋಲು ಮುಖ, ಸುಮಾರು 2 ಇಂಚು ಉದ್ದದ ಕಪ್ಪು ತಲೆ ಕೂದಲು, ಕಪ್ಪನೆ ಮೀಸೆ, ಸಾಧಾರಣ ನೀಳ ಮೈ ಕಟ್ಟು ಹೊಂದಿದ್ದು, ಕಪ್ಪು ಬಣ್ಣದ ಟೀ ಶರ್ಟ್ ಮತ್ತು ಪ್ಯಾಂಟ್ ಧರಿಸಿದ್ದ. ಮೃತನ ವಾರಸುದಾರರು ದೊಡ್ಡಬಳ್ಳಾಪುರ ರೈಲ್ವೆ ಪೊಲೀಸ್ 9108630967, 9480802118 ಸಂಪರ್ಕಿಸಬಹುದು.

GRT ಜ್ಯುವೆಲ್ಲರ್ಸ್ ಗೋಲ್ಡನ್ ಸ್ಪಾರ್ಕಲ್ ಜತೆ ‘ಸ್ವರ್ಣ ದೀಪಾವಳಿ’ ಆಚರಿಸಿ



ಚೆನ್ನೈ: ಚಿನ್ನಾಭರಣ ಕ್ಷೇತ್ರದ ಖ್ಯಾತ GRT ಜ್ಯುವೆಲ್ಲರ್ಸ್ ಇಂದು ಭಾರತದ ಅತ್ಯಂತ ಗೌರವಾನ್ವಿತ ಆಭರಣ ಬ್ರಾಂಡ್‌ಗಳಲ್ಲಿ ಒಂದಾಗಿ ಬೆಳೆದು ನಿಂತಿದೆ. ಕಾಲಾತೀತ ವಿನ್ಯಾಸಗಳು ಮತ್ತು ಉತ್ಕೃಷ್ಟ ಕರಕುಶಲತೆಯಿಂದ ಗ್ರಾಹಕರ ವಿಶ್ವಾಸ ಗಳಿಸಿದೆ.

ಸುದೀರ್ಘ ಆರು ದಶಕಗಳ ಇತಿಹಾಸ ಹೊಂದಿರುವ ಸಂಸ್ಥೆ ಪ್ರತಿ ದೀಪಾವಳಿಯಂತೆ ಈ ದೀಪಾವಳಿಯಂದೂ GRT ತನ್ನ ಜನಪ್ರಿಯ ‘ಸಿಲ್ವರ್ ಫಾರ್ ಗೋಲ್ಡ್’ ಅಭಿಯಾನ ಆರಂಭಿಸಿದೆ. ಗ್ರಾಹಕರು ಖರೀದಿಸುವ ಪ್ರತಿ ಚಿನ್ನಾಭರಣದ ಜತೆ ಸಮಾನ ತೂಕದ ಬೆಳ್ಳಿಯನ್ನು ಸಂಪೂರ್ಣ ಉಚಿತವಾಗಿ ಪಡೆಯಲಿದ್ದಾರೆ.

ಜೊತೆಗೆ ಚಿನ್ನದ ಆಭರಣಗಳ ಮೇಲೆ ಪ್ರತಿ ಗ್ರಾಂಗೆ ₹100 ರಿಯಾಯಿತಿಯನ್ನೂ ಪಡೆಯಲಿದ್ದಾರೆ. ಈ ಎರಡು ಪ್ರಯೋಜನಗಳು ಹಬ್ಬದ ಖುಷಿಯನ್ನು ಹೆಚ್ಚು ವಿಶೇಷವಾಗಿಸುತ್ತವೆ. ಈ ಅಭಿಯಾನ ತಮಿಳುನಾಡಿನಲ್ಲಿ ‘ತಂಗ ದೀಪಾವಳಿ’ ಎಂದೂ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ‘ಸ್ವರ್ಣ ದೀಪಾವಳಿ’ ಎಂದು ಆಚರಿಸಲಾಗುತ್ತದೆ.

ಸ್ಪಾರ್ಕ್ಲಿಂಗ್ ಆಫರ್: ಇದಲ್ಲದೆ, GRTಯು ಹಬ್ಬದ ಸ್ಪಾರ್ಕ್ಲಿಂಗ್ ಆಫರ್‌ಗಳನ್ನೂ ಘೋಷಿಸಿದೆ. ಗ್ರಾಹಕರು ಖರೀದಿಸುವ ವಜ್ರಗಳ ಮೇಲೆ ಪ್ರತಿ ಕ್ಯಾರೆಟ್‌ಗೆ 25 ಗ್ರಾಂ ಬೆಳ್ಳಿ ಉಚಿತ, ಅನ್‌ಕಟ್ ವಜ್ರಗಳ ಮೇಲೆ ಪ್ರತಿ ಕ್ಯಾರೆಟ್‌ಗೆ 2 ಗ್ರಾಂ ಬೆಳ್ಳಿ ಉಚಿತ ಮತ್ತು ಪ್ಲಾಟಿನಂ ಆಭರಣ ತೂಕಕ್ಕೆ ಸಮಾನವಾದ ಬೆಳ್ಳಿ ಉಚಿತವಾಗಿ ಪಡೆಯಲಿದ್ದಾರೆ.

ಗ್ರಾಹಕರು ಬೆಳ್ಳಿ ವಸ್ತುಗಳ ಮೇಲೆ (ವಿಶೇಷ ವಸ್ತುಗಳನ್ನು ಹೊರತುಪಡಿಸಿ) ಮೇಕಿಂಗ್ ಶುಲ್ಕದಲ್ಲಿ 25% ರಿಯಾಯಿತಿ ಹಾಗೂ ಬೆಳ್ಳಿ ಆಭರಣ ಮತ್ತು ಉಡುಗೊರೆ ಸಾಮಗ್ರಿಗಳ ಎಂಆರ್‌ಪಿ ಮೇಲೆ 10% ರಿಯಾಯಿತಿ ಪ್ರಯೋಜನವನ್ನೂ ಪ್ರಕಟಿಸಿದೆ.

ಪ್ರಸ್ತುತ GRT ಜ್ಯುವೆಲ್ಲರ್ಸ್ ದಕ್ಷಿಣ ಭಾರತದಾದ್ಯಂತ 65 ಮತ್ತು ಸಿಂಗಾಪುರದಲ್ಲಿ ಒಂದು ಶೋರೂಮ್ ಹೊಂದಿದ್ದು, ಒಟ್ಟು 66 ಶೋರೂಮ್‌ಗಳ ಮೂಲಕ ಗ್ರಾಹಕರ ನೆಚ್ಚಿನ ತಾಣವಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಕೆಂಗಲ್‌ನಲ್ಲಿ ಚಿರತೆ

ದಾಬಸ್ ಪೇಟೆ: ಸೋಂಪುರ ಹೋಬಳಿ ಹೊನ್ನೇನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಕೆಂಗಲ್ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಸಮೃದ್ಧಿ ಫಾರ್ಮ್ ಹೌಸ್ ಸಮೀಪ ಚಿರತೆ ರಾತ್ರಿ ವೇಳೆ ಓಡಾಡಿರುವುದು ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕೆಂಗಲ್ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ರಾತ್ರಿ ವೇಳೆ ಮನೆಗಳ ಹತ್ತಿರ ಮೇಕೆ, ಕುರಿ ಹಾಗೂ ದನಕರುಗಳನ್ನು ಕಟ್ಟಲು ಹಾಗೂ ಒಬ್ಬರೇ ಓಡಾಡಲು ಹಿಂಜರಿಯುತ್ತಿದ್ದಾರೆ.

ಕೆಂಗಲ್ ಗ್ರಾಮದ ಬಳಿ ಬೆಟ್ಟಗುಡ್ಡ ಹಾಗೂ ಅರಣ್ಯ ಪ್ರದೇಶವಿದ್ದು, ಸ್ಥಳೀಯರು ದನ-ಕರು, ಮೇಕೆ ಕುರಿಗಳನ್ನು ಮೇಯಿಸಲು ಹೋಗುತ್ತಾರೆ. ಚಿರತೆ ಸೆರೆ ಹಿಡಿದು ದೂರದ ಕಾಡುಗಳಿಗೆ ಬಿಡಲಿ ಎಂದು ಸ್ಥಳೀಯರು ಅರಣ್ಯ ಇಲಾಖೆ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ.

ಹರ್ಷಿಕಾ ಪೂಣಚ್ಚ ಹೊಸ ಚಿತ್ರ



ನಟಿ ಹರ್ಷಿಕಾ ಪೂಣಚ್ಚ ಇತ್ತೀಚೆಗಷ್ಟೇ ಹೊಸ ಸಿನಿಮಾ ಘೋಷಿಸಿದ್ದಾರೆ. ಯೋಗರಾಜ್ ಭಟ್ ನಿರ್ದೇಶನದಲ್ಲಿ ಈ ಚಿತ್ರ ಸಿದ್ಧಗೊಳ್ಳಲಿದೆ.

ಇತ್ತೀಚೆಗಷ್ಟೇ ಹರ್ಷಿಕಾ ಪತಿ ಭುವನ್ ಪೊನ್ನಣ್ಣ 'ಹಲೋ 123' ಚಿತ್ರ ಘೋಷಿಸಿದ್ದರು. ಅದನ್ನು ಕೂಡ ಯೋಗರಾಜ್ ಭಟ್ ಅವರೇ ನಿರ್ದೇಶಿಸುತ್ತಿದ್ದಾರೆ. ಈ ಎರಡೂ ಸಿನಿಮಾಗಳನ್ನು ಅಮೃತಾ ಸಿನಿ ಕ್ರಾಫ್ಟ್ ನಿರ್ಮಿಸುತ್ತಿದೆ.

'ಎರಡೂ ಬೇರೆ ಬೇರೆ ಸಿನಿಮಾಗಳು. ಮಹಿಳಾ ಪ್ರಧಾನ ಕಥೆ ಹೊಂದಿರುವ ಚಿತ್ರವಿದು. ಸಿನಿಮಾ ಕುರಿತು ಉಳಿದ ವಿವರಗಳನ್ನು ಹಂತಹಂತವಾಗಿ ನೀಡುತ್ತೇವೆ. ಸದ್ಯ ಚಿತ್ರ ಪ್ರೀಪ್ರೊಡಕ್ಷನ್ ಹಂತದಲ್ಲಿದೆ' ಎಂದಿದೆ ಚಿತ್ರತಂಡ.

'ಸೈಕೊ ಸೈತಾನ್'ಗೆ ಸುದೀಪ್ ಹೆಜ್ಜೆ



ಸುದೀಪ್

ನಟ ಸುದೀಪ್ ಸದ್ಯ ತಮ್ಮ 47ನೇ ಸಿನಿಮಾ 'ಮಾರ್ಕ್'ನ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ. 'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದ ಮೊದಲ ಹಾಡು ರಿಲೀಸ್ ಆಗಿದೆ.

ಸಿನಿಮಾ ಇದೇ ಡಿ.25ರಂದು ರಿಲೀಸ್ ಆಗಲಿದೆ. 'ಸೈಕೊ ಸೈತಾನ್' ಹಾಡಿಗೆ ಕಿಚ್ಚ ಭರ್ಜರಿ ಡಾನ್ಸ್ ಮಾಡಿದ್ದು, ಅನೂಪ್ ಭಂಡಾರಿ ಸಾಹಿತ್ಯ ಈ ಹಾಡಿಗಿದೆ. ಅಜನೀಶ್ ಲೋಕನಾಥ್ ಹಾಗೂ ಅನಿರುದ್ಧ ಶಾಸ್ತ್ರಿ ದನಿಯಲ್ಲಿ ಹಾಡು ಮೂಡಿಬಂದಿದ್ದು, ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ಸುದೀಪ್ ಪಾತ್ರವನ್ನು ವಿವರಿಸುವ ಹಾಡು ಇದಾಗಿದ್ದು, ಚಿತ್ರತಂಡ ಹುಕ್‌ಸ್ಟೆಪ್ ಸವಾಲು ಹಾಕಿದೆ.

ಈ ಹಾಡಿನಲ್ಲಿ ಬರುವ ಹುಕ್ ಸ್ಟೆಪ್‌ಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಜನರು ಡಾನ್ಸ್ ಮಾಡಬೇಕು. ಬಳಿಕ ಅದನ್ನು ಇನ್‌ಸ್ಟಾಗ್ರಾಮ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿ, markthefilm ಅಕೌಂಟ್ ಅನ್ನು ಟ್ಯಾಗ್ ಮಾಡಬೇಕು. ಅತ್ಯುತ್ತಮ ರೀಲ್‌ಗೆ ಬಹುಮಾನ ನೀಡಲು ಚಿತ್ರತಂಡ ತೀರ್ಮಾನಿಸಿದೆ. ಸುದೀಪ್ ಮತ್ತು ವಿಜಯ್ ಕಾರ್ತಿಕೇಯ ಕಾಂಬಿನೇಷನ್‌ನಲ್ಲಿ ಬರುತ್ತಿರುವ ಎರಡನೇ ಸಿನಿಮಾ ಇದಾಗಿದ್ದು, 'ಸತ್ಯಜ್ಯೋತಿ ಫಿಲ್ಮ್ಸ್' ಮತ್ತು 'ಕಿಚ್ಚ ಕ್ರಿಯೇಷನ್ಸ್' ಬ್ಯಾನರ್‌ಗಳು ಜೊತೆಯಾಗಿ ಸಿನಿಮಾವನ್ನು ನಿರ್ಮಿಸುತ್ತಿವೆ. ಶೇಖರ್‌ಚಂದ್ರ ಛಾಯಾಚಿತ್ರಗ್ರಹಣ, ಗಣೇಶ್ ಬಾಬು ಸಂಕಲನ ಚಿತ್ರಕ್ಕಿದೆ. ಸ್ಟಂಟ್ ಸಿಲ್ವಾ, ಸುಪ್ರೀಂ ಸುಂದರ್, ವಿಕ್ರಮ್ ಮೋರ್, ಕೆವಿನ್ ಕುಮಾರ್ ಸಾಹಸ ದೃಶ್ಯಗಳನ್ನು ಸಂಯೋಜಿಸಿದ್ದಾರೆ.

ಜೀ 5ನಲ್ಲಿ 'ಏಳುಮಲೆ'



ರಾಣಾ, ಪ್ರಿಯಾಂಕ

'ಕಾಟೇರ' ಚಿತ್ರದ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ 'ಏಳುಮಲೆ' ಸಿನಿಮಾ ಒಟಿಟಿಯಲ್ಲಿ ರಿಲೀಸ್ ಆಗಲಿದೆ. ಕಳೆದ ಸೆ.5ರಂದು ತೆರೆಕಂಡಿದ್ದ ಈ ಸಿನಿಮಾ ಅ.17ರಿಂದ ಜೀ 5ನಲ್ಲಿ ಸ್ಟ್ರೀಮಿಂಗ್ ಆಗಲಿದೆ.

ಇತ್ತೀಚೆಗಷ್ಟೇ ಚಿತ್ರಮಂದಿರಗಳಲ್ಲಿ 25 ದಿನಗಳನ್ನು ಪೂರೈಸಿದ ಸಂಭ್ರಮವನ್ನು ಚಿತ್ರತಂಡ ಆಚರಿಸಿತ್ತು. ರೊಮ್ಯಾಂಟಿಕ್ ಥ್ರಿಲ್ಲರ್ ಜಾನರ್‌ನಲ್ಲಿರುವ ಈ ಸಿನಿಮಾದಲ್ಲಿ 'ಏಕ್ ಲವ್ ಯಾ' ಖ್ಯಾತಿಯ ನಟ ರಾಣಾ ನಾಯಕನಾಗಿ ಹಾಗೂ 'ಮಹಾನಟಿ' ರಿಯಾಲಿಟಿ ಶೋ ವಿಜೇತೆ ಪ್ರಿಯಾಂಕಾ ಆಚಾರ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಜಗಪತಿ ಬಾಬು, ಕಿಶೋರ್ ಮತ್ತು ಟಿ.ಎಸ್. ನಾಗಾಭರಣ ತಾರಾಬಳಗದಲ್ಲಿದ್ದಾರೆ.

ಕರ್ನಾಟಕ ಮತ್ತು ತಮಿಳುನಾಡು ಗಡಿಭಾಗದಲ್ಲಿ ನಡೆಯುವ ಪ್ರೇಮಕಥೆ ಚಿತ್ರದಲ್ಲಿದ್ದು, ಮೈಸೂರಿನ ಅನಾಥ ಹುಡುಗ 'ಹರೀಶ'ನಾಗಿ ಪಾತ್ರದಲ್ಲಿ ರಾಣಾ ನಟಿಸಿದ್ದಾರೆ. ಮೈಸೂರಿಗೆ ಓದಲು ಬಂದ ತಮಿಳುನಾಡಿನ ಶ್ರೀಮಂತ ಕುಟುಂಬದ ಹುಡುಗಿ 'ರೇವತಿ'ಯಾಗಿ ಪ್ರಿಯಾಂಕಾ ಅಭಿನಯಿಸಿದ್ದಾರೆ. ಇವರಿಬ್ಬರ ಪ್ರೇಮಕಥೆಯನ್ನು ಥ್ರಿಲ್ಲರ್ ಅಂಶಗಳನ್ನೊಳಗೂಡಿಸಿ ಪುನೀತ್ ಹೆಣೆದಿದ್ದಾರೆ.

ಸೆಟ್ಟೇರಿದ 'ನಗ್ನಸತ್ಯ'



ಚಿತ್ರತಂಡ

ರಮೇಶ್ ಕಾಮತ್ ನಿರ್ದೇಶನದ ಕೊಂಕಣಿ ಸಿನಿಮಾ 'ನಗ್ನಸತ್ಯ' ಇತ್ತೀಚೆಗಷ್ಟೇ ಸೆಟ್ಟೇರಿದೆ. ನಿರ್ದೇಶಕರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಹಿರಿಯ ನಟ ಸುರೇಶ್ ಹೆಬ್ಳಿಕರ್ ಚಿತ್ರದ ಮೊದಲ ದೃಶ್ಯಕ್ಕೆ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು.

'ಕೆಲವು ವರ್ಷಗಳ ಹಿಂದೆ ಭೂಪಾಲ್‌ನಲ್ಲಿ ಮಹಿಳೆ ಮೇಲೆ ಶೋಷಣೆ ಮಾಡಿದ ಸುದ್ದಿ ಪ್ರಕಟವಾಗಿತ್ತು, ಅದರ ಒಂದು ಎಳೆಯನ್ನು ತೆಗೆದುಕೊಂಡು ಚಿತ್ರಕಥೆ ಮಾಡಲಾಗಿದೆ. ಸಮಾಜದಲ್ಲಿ ಹೆಣ್ಣುಮಗಳು ಹಿಂಸೆಗೆ ಗುರಿಯಾಗುತ್ತಾಳೆ. ಆಕೆಗೆ ಎಲ್ಲಿಯೂ ನ್ಯಾಯ ಸಿಗುವುದಿಲ್ಲ. ಮುಂದೆ ಇದರ ವಿರುದ್ಧ ಹೋರಾಡಿ, ಸಮಾಜಕ್ಕೆ ಯಾವ ಎಚ್ಚರಿಕೆ ಕೊಡುತ್ತಾಳೆ ಎಂಬುದನ್ನು ಕುತೂಹಲದ ಮೂಲಕ ತೋರಿಸಲಾಗುತ್ತಿದೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗುವುದು. ಕರ್ನಾಟಕದಲ್ಲಿ ಇಲ್ಲಿಯವರೆಗೂ ಈ ಚಿತ್ರ ಸೇರಿ ಹತ್ತು ಕೊಂಕಣಿ ಚಿತ್ರಗಳು ಬಂದಿದ್ದು, ಅದರಲ್ಲಿ ಐದು ನಾನೇ ನಿರ್ದೇಶನ ಮಾಡಿದ್ದೇನೆ' ಎಂದರು ನಿರ್ದೇಶಕರು.

ಆದಿತ್ಯ ಸಿನಿ ಕ್ರಿಯೇಷನ್ಸ್ ಬಂಡವಾಳ ಹೂಡುತ್ತಿದೆ. ಆದ್ಯಾ ನಾಯಕ್ ಮುಖ್ಯಪಾತ್ರದಲ್ಲಿದ್ದಾರೆ. ಗಣೇಶ್ ಪ್ರಭು, ಗೋಪಿನಾಥ್ ಭಟ್, ಆನಂದ್ ನಗರಕರ್, ಗೋಪಿ ಭಟ್ ಮುಂತಾದವರು ಚಿತ್ರದಲ್ಲಿದ್ದಾರೆ. ಸುರೇಶ್ ಸಂಗೀತ, ಪಿ.ವಿ.ಆರ್.ಸ್ವಾಮಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಸಂಕ್ಷಿಪ್ತ ಸುದ್ದಿ

ಮೋದಿ ನೇತೃತ್ವ 25ನೇ ವರ್ಷಕ್ಕೆ

ನವದೆಹಲಿ(ಪಿಟಿಐ): ಆಡಳಿತ ಚುಕ್ಕಾಣಿ ಹಿಡಿದಿರುವುದಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ 25ನೇ ವರ್ಷಕ್ಕೆ ಪದಾರ್ಪಣೆ ಮಾಡಿದರು.

ಈ ವೇಳೆ, 'ಎಕ್ಸ್'ನಲ್ಲಿ ಸರಣಿ ಪೋಸ್ಟ್ ಮಾಡಿರುವ ಅವರು, 'ದೇಶದ ಪ್ರಗತಿಗೆ ಹಾಗೂ ಜನರ ಜೀವನ ಮಟ್ಟ ಸುಧಾರಿಸುವುದಕ್ಕೆ ನನ್ನ ನಿರಂತರ ಪ್ರಯತ್ನ ನಿಲ್ಲುವುದಿಲ್ಲ' ಎಂದಿದ್ದಾರೆ

'2001ರ ಅಕ್ಟೋಬರ್ 7ರಂದು ಮೊದಲ ಬಾರಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ನಾನು ಅಧಿಕಾರ ಸ್ವೀಕರಿಸಿದೆ. ಮೊದಲು ನನ್ನ ತವರು ರಾಜ್ಯದಲ್ಲಿ ಹಲವಾರು ಸುಧಾರಣೆಗಳನ್ನು ತಂದೆ ನಂತರ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿರುವೆ' ಎಂದು ಹೇಳಿದ್ದಾರೆ.

'ಸರ್ಕಾರವೊಂದರ ಮುಖ್ಯಸ್ಥನಾಗಿ ಸೇವೆ ಸಲ್ಲಿಸುವುತ್ತಿರುವುದಕ್ಕೆ ಸಂಬಂಧಿಸಿ 25ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದ್ದು, ಈ ವಿಚಾರವಾಗಿ ನನಗೆ ಸತತವಾಗಿ ಆಶೀರ್ವದಿಸುತ್ತಿರುವ ದೇಶದ ಜನತೆಗೆ ಧನ್ಯವಾದಗಳು' ಎಂದು ಹೇಳಿದ್ದಾರೆ.

ತೆಲಂಗಾಣ: 'ಕೋಣ' ಹೇಳಿಕೆ ವಿವಾದ

ಹೈದರಾಬಾದ್: ತೆಲಂಗಾಣದ ಸಾರಿಗೆ ಸಚಿವ ಪೊನ್ನಂ ಪ್ರಭಾಕರ್ ಅವರು ಪರಿಶಿಷ್ಟ ಜಾತಿ ಅಭಿವೃದ್ಧಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಅಡ್ಲೂರಿ ಲಕ್ಷ್ಮಣ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪ ಕೇಳಿಬಂದಿದ್ದು, ವಿವಾದ ಹುಟ್ಟುಹಾಕಿದೆ.

ಜುಬಿಲಿ ಹಿಲ್ಸ್ ಉಪ ಚುನಾವಣೆ ಅಂಗವಾಗಿ ರಹಮತ್ ನಗರದಲ್ಲಿ ಈಚೆಗೆ ನಡೆದ ಪ್ರಚಾರ ಸಭೆಯಲ್ಲಿ ಪ್ರಭಾಕರ್ ಅವರು ಲಕ್ಷ್ಮಣ್ ಅವರನ್ನು 'ದುನ್ನಪೋತು' (ಕೋಣ) ಎಂದು ಕರೆದಿದ್ದಾರೆ ಎನ್ನಲಾಗಿದೆ.

ಪ್ರಚಾರ ಸಭೆಗೆ ಲಕ್ಷ್ಮಣ್ ಅವರು ತಡವಾಗಿ ಬಂದಿದ್ದರು. ಪ್ರಭಾಕರ್ ಅವರು ಸಭೆಯಲ್ಲಿದ್ದ ಇನ್ನೊಬ್ಬ ಸಚಿವ ಜಿ.ವಿವೇಕ್ ಅವರಲ್ಲಿ ಲಕ್ಷ್ಮಣ್ ಅವರನ್ನು ಉದ್ದೇಶಿಸಿ 'ಅವನು ಕೋಣ, ಅವನಿಗೇನು ಗೊತ್ತು' ಎಂದು ಹೇಳಿದ್ದಾರೆ. ಮೈಕ್ ಆನ್ ಆಗಿದ್ದರಿಂದ ಅವರ ಹೇಳಿಕೆ ಸಭೆಯಲ್ಲಿದ್ದ ಎಲ್ಲರಿಗೂ ಕೇಳಿಸಿದೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ದಲಿತ ಸಮುದಾಯಕ್ಕೆ ಸೇರಿರುವ ಲಕ್ಷ್ಮಣ್ ಅವರು 'ಇದು ಜಾತಿ ನಿಂದನೆ' ಎಂದು ದೂರಿದ್ದಾರೆ. ಪ್ರಭಾಕರ್ ಕ್ಷಮೆಯಾಚಿಸದಿದ್ದರೆ ಪಕ್ಷದ ಹೈಕಮಾಂಡ್‌ಗೆ ದೂರು ನೀಡುವುದಾಗಿ ತಿಳಿಸಿದ್ದಾರೆ. ಕಾಂಗ್ರೆಸ್‌ನ ಹಲವು ಎಸ್.ಸಿ ಶಾಸಕರು ಲಕ್ಷ್ಮಣ್ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

'ಇಂಡಿಯಾ'ದಲ್ಲಿ ಸೀಟು ಹಂಚಿಕೆ ಬಿಕ್ಕಟ್ಟು

ಬಿಹಾರ ಚುನಾವಣೆ: 30 ಕ್ಷೇತ್ರಗಳಿಗೆ ಪಟ್ಟು ಹಿಡಿದ ಸಿಪಿಐ (ಎಂಎಲ್) ಎಲ್

ಪ್ರಜಾವಾಣಿ ವಾರ್ತೆ

ಬಿಹಾರ | ಪ್ರಜಾಮತ ಜನತಂತ್ರದ ಹಬ್ಬ | ವಿಧಾನಸಭಾ ಚುನಾವಣೆ - 2025

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಗೆ 'ಇಂಡಿಯಾ' ಕೂಟದಲ್ಲಿ ಸೀಟು ಹಂಚಿಕೆ ಬಿಕ್ಕಟ್ಟು ಸೃಷ್ಟಿಯಾಗಿದೆ. ಮೈತ್ರಿಕೂಟದಲ್ಲಿ ಎಡಪಕ್ಷಗಳಿಗೆ 19 ಸ್ಥಾನಗಳನ್ನು ನೀಡುವ ಆರ್‌ಜೆಡಿ ಪ್ರಸ್ತಾವವನ್ನು ಸಿಪಿಐ (ಎಂಎಲ್) ಎಲ್ ತಿರಸ್ಕರಿಸಿದೆ.

ಆರ್‌ಜೆಡಿ ಪ್ರಸ್ತಾವವನ್ನು 'ಪಕ್ಷದ ಘನತೆಯ ಮೇಲಿನ ದಾಳಿ' ಎಂದು ಸಿಪಿಐ (ಎಂಎಲ್) ಎಲ್ ನಾಯಕರು ಕರೆದಿದ್ದಾರೆ. ಪಕ್ಷವು ಎಲ್ಲ ಆಯ್ಕೆಗಳನ್ನು ಮುಕ್ತವಾಗಿರಿಸಿಕೊಂಡಿದೆ ಎಂದು ಅವರು ಎಚ್ಚರಿಸಿದ್ದಾರೆ. ಪಕ್ಷವು 2020ರಲ್ಲಿ 19 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 12ರಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ 40 ಕ್ಷೇತ್ರಗಳನ್ನು ಬಿಟ್ಟುಕೊಡಬೇಕು ಎಂದು ಪಕ್ಷವು ಆರಂಭದಲ್ಲಿ ಒತ್ತಾಯಿಸಿತ್ತು.

19 ಸ್ಥಾನಗಳ ಪ್ರಸ್ತಾಪವನ್ನು ತಿರಸ್ಕರಿಸುವ ಮೂಲಕ ಪಕ್ಷವು ಆರ್‌ಜೆಡಿ ಬಳಿ ತನ್ನ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ ಎಂದು ಮೂಲಗಳು ತಿಳಿಸಿವೆ. ಸಿಪಿಐ (ಎಂಎಲ್) ಎಲ್ ಹೊಸ ಪಟ್ಟಿ ಸಲ್ಲಿಸಲಿದ್ದು, ಸುಮಾರು 30 ಸ್ಥಾನಗಳಿಗೆ ತನ್ನ ಬೇಡಿಕೆ ಮುಂದಿಡಲಿದೆ.

'ಇದು ಪಕ್ಷದ ಘನತೆ ಪ್ರಶ್ನೆ. ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ನಮಗೆ ಸ್ಥಾನಗಳನ್ನು ಬಿಟ್ಟುಕೊಡುವುದೆಂದರೆ ಖಚಿತವಾಗಿ ಗೆಲುವು ಎಂದರ್ಥ. ಅಚ್ಚರಿಯ ಸಂಗತಿಯೆಂದರೆ ಆರ್‌ಜೆಡಿ ಅದನ್ನು ಅರ್ಥಮಾಡಿಕೊಳ್ಳುತ್ತಿಲ್ಲ ಅಥವಾ ಅರ್ಥಮಾಡಿಕೊಳ್ಳಲು ಸಿದ್ಧರಿಲ್ಲ. ಅವರು ಗೆಲ್ಲಲು ಬಯಸಿದರೆ, ಅವರು ಪರಿಷ್ಕೃತ ಪಟ್ಟಿಯನ್ನು ಸ್ವೀಕರಿಸಬೇಕು' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದರು.

ಇನ್ನೊಂದೆಡೆ, 70 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ 19ರಲ್ಲಷ್ಟೇ ಗೆದ್ದಿತ್ತು. ಎಡಪಕ್ಷಗಳ ಸ್ಟ್ರೈಕ್ ರೇಟ್ ಉತ್ತಮವಾಗಿತ್ತು. ಕಾಂಗ್ರೆಸ್‌ಗೆ ಸ್ವಲ್ಪ ಕಡಿಮೆ ಸ್ಥಾನ ನೀಡಿ ಎಡಪಕ್ಷಗಳಿಗೆ ಹೆಚ್ಚಿನ ಸ್ಥಾನಗಳನ್ನು ನೀಡಿದ್ದರೆ ಮಹಾಮೈತ್ರಿಕೂಟ ಅಧಿಕಾರ ಹಿಡಿಯಬಹುದಿತ್ತು ಎಂಬ ಚರ್ಚೆ ನಡೆದಿತ್ತು.



ಸೀಟು ಹಂಚಿಕೆ ಸಂಬಂಧ ಬಿಹಾರದ ಕಾನೂನು ಸಚಿವ ಮಂಗಲ್ ಪಾಂಡೆ, ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಎಲ್‌ಜೆಪಿ (ರಾಮ್ ವಿಲಾಸ್) ಮುಖ್ಯಸ್ಥ ಚಿರಾಗ್ ಪಾಸ್ವಾನ್ ಅವರನ್ನು ಭೇಟಿಯಾಗಿ ಚರ್ಚಿಸಿದರು

ಕಾಂಗ್ರೆಸ್ ಸಿಇಸಿ ಇಂದು

ಬಿಹಾರ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಅಖೈರುಗೊಳಿಸಲು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಬುಧವಾರ ಸಭೆ ಸೇರಲಿದೆ ಎಂದು ಮೂಲಗಳು ತಿಳಿಸಿವೆ.

ಸೀಟು ಹಂಚಿಕೆ ಸಂಬಂಧ ಆರ್‌ಜೆಡಿ ಹಾಗೂ ಎಡಪಕ್ಷಗಳ ಜತೆಗೆ ಪಕ್ಷದ ಉನ್ನತ ನಾಯಕತ್ವ ಮಾತುಕತೆಯಲ್ಲಿ ತೊಡಗಿದೆ. ಸೀಟು ಹಂಚಿಕೆ ಅಂತಿಮಗೊಳ್ಳುವ ಮುನ್ನವೇ ಚುನಾವಣಾ ಸಮಿತಿ ಸಭೆ ಸೇರುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ನಿಖರವಾಗಿ, ಪರಿಪೂರ್ಣತೆಯಿಂದ ಕೂಡಿದ ಹಾಗೂ ನಿಷ್ಪಕ್ಷಪಾತವಾಗಿ ಎಸ್‌ಐಆರ್ ನಡೆಸುವಲ್ಲಿನ ಚುನಾವಣಾ ಆಯೋಗದ ವೈಫಲ್ಯವನ್ನು ವಿಶ್ಲೇಷಣೆ ಚೆನ್ನಾಗಿ ವಿವರಿಸಿದೆ

ಜೈರಾಮ್ ರಮೇಶ್,
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಎಷ್ಟು ವಿದೇಶಿಯರ ಹೆಸರಿಗೆ ಕೊಕ್?'

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಡೆದ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ವಿಚಾರವಾಗಿ ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗದ ವಿರುದ್ಧ ಮಂಗಳವಾರ ಮತ್ತೊಮ್ಮೆ ಟೀಕಾಪ್ರಹಾರ ನಡೆಸಿದೆ.

'ಭಾರತೀಯ ಪೌರರಲ್ಲದವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವುದಕ್ಕಾಗಿ ಆಯೋಗವು ಬಹಳ ಮುತುವರ್ಜಿಯಿಂದ ಎಸ್‌ಐಆರ್ ನಡೆಸಿದೆ. ಆದರೆ, ಭಾರತೀಯ ಪೌರತ್ವ ಹೊಂದಿರದ ಎಷ್ಟು ಜನರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ ಎಂಬುದನ್ನು ದೇಶಕ್ಕೆ ತಿಳಿಸುವ ಧೈರ್ಯ ಅಥವಾ ನೈತಿಕತೆಯನ್ನು ಆಯೋಗ ಹೊಂದಿಲ್ಲ' ಎಂದು ವಾಗ್ದಾಳಿ ನಡೆಸಿದೆ.

'ಬಿಹಾರದಲ್ಲಿ ನಡೆದ ಎಸ್‌ಐಆರ್ ವೇಳೆ, ಎಷ್ಟು ಜನ ವಿದೇಶಿಯರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಗಿದೆ ಎಂಬ ಬಗ್ಗೆ ಆಯೋಗವು ಮಾಹಿತಿ ನೀಡಿದಲ್ಲಿ, ಅದರ ವೈಫಲ್ಯವು ಮತ್ತಷ್ಟು ಬಹಿರಂಗವಾಗಲಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ವೇದಿಕೆಯಲ್ಲಿ ಪೋಸ್ಟ್ ಮಾಡಿರುವ ಅವರು, ಎಸ್‌ಐಆರ್ ಕುರಿತಂತೆ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ವಿಶ್ಲೇಷಣೆಯನ್ನು ಹಂಚಿಕೊಂಡಿದ್ದಾರೆ.

40 ಕ್ಷೇತ್ರಗಳಿಗೆ ಚಿರಾಗ್ ಪಟ್ಟು

ನವದೆಹಲಿ: ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಆರಂಭಗೊಳ್ಳುವ ಮುನ್ನ ಎನ್‌ಡಿಎ ಮೈತ್ರಿಕೂಟವು ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಮಾತುಕತೆಯಲ್ಲಿ ತೊಡಗಿದೆ.

ಲೋಕಜನಶಕ್ತಿಯ ನಾಯಕ ಚಿರಾಗ್ ಪಾಸ್ವಾನ್, ಮಂಗಳವಾರ ಬಿಹಾರದ ಬಿಜೆಪಿ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿಯಾಗಿ ಸೀಟು ಹಂಚಿಕೆ ವಿಚಾರವಾಗಿ ಮಾತುಕತೆ ನಡೆಸಿದರು.

ಎನ್‌ಡಿಎ ಮೈತ್ರಿಕೂಟದ ಅಡಿಯಲ್ಲಿ ಸ್ಪರ್ಧಿಸಲು ಚಿರಾಗ್ ಸಿದ್ಧರಾಗಿದ್ದಾರೆ. 243 ವಿಧಾನಸಭಾ ಕ್ಷೇತ್ರಗಳ ಪೈಕಿ 40 ಕ್ಷೇತ್ರ ಬಿಟ್ಟುಕೊಡುವಂತೆ ಚಿರಾಗ್ ಪಟ್ಟು ಹಿಡಿದಿದ್ದು, ಬಿಜೆಪಿ ಕೇವಲ 15 ಕ್ಷೇತ್ರಗಳನ್ನು ಬಿಟ್ಟುಕೊಡಲು ಸಮ್ಮತಿಸಿದೆ. ಬಿಜೆಪಿ ಹಾಗೂ ಜೆಡಿಯು ತಲಾ 100 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮುಂದಾಗಿದೆ. ಉಳಿದ 43 ಸ್ಥಾನಗಳಲ್ಲಿ ಎಲ್‌ಜೆಪಿ ಜೊತೆಗೆ ವಿಕಾಸ್‌ಶೀಲ್ ಇನ್ಸಾನ್ ಪಕ್ಷ (ವಿಐಪಿ), ಹಿಂದೂಸ್ತಾನ್ ಅವಾಮಿ ಪಕ್ಷ(ಎಚ್‌ಎಎಂ), ರಾಷ್ಟ್ರೀಯ ಲೋಕ ಸಮತಾ ಪಕ್ಷ (ಆರ್‌ಎಲ್‌ಎಸ್‌ಪಿ) ಕಣಕ್ಕಿಳಿಸಲು ಚಿಂತನೆ ನಡೆಸಿದೆ. ಮೈತ್ರಿಪಕ್ಷಗಳಿಗೆ ಕಡಿಮೆ ಕ್ಷೇತ್ರ ಬಿಟ್ಟುಕೊಟ್ಟರೆ, ಎನ್‌ಡಿಎ ಒಕ್ಕೂಟಕ್ಕೆ ಅರ್ಥವಿಲ್ಲ ಎಂದು ಚಿರಾಗ್ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಧರ್ಮೇಂದ್ರ ಪ್ರಧಾನ್ ನಿರ್ಧಾರದ ಕುರಿತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮುಂದೆ ಚಿರಾಗ್ ಈಗಾಗಲೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 2020ರ ವಿಧಾನಸಭಾ ಚುನಾವಣೆಯಲ್ಲಿ ಎಲ್‌ಜೆಪಿಯು 143 ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿ, 1 ಕ್ಷೇತ್ರದಲ್ಲಿ ಗೆಲುವು ಪಡೆದಿತ್ತು. ಆದರೆ, ಹಲವು ಕ್ಷೇತ್ರಗಳಲ್ಲಿ ಜೆಡಿಯು ಅಭ್ಯರ್ಥಿಗಳ ಸೋಲಿಗೆ ಕಾರಣವಾಗಿತ್ತು. 2024ರ ಲೋಕಸಭಾ ಚುನಾವಣೆ ವೇಳೆ ಚಿರಾಗ್ ಅವರು ಪಕ್ಷವನ್ನು ವಿಭಜಿಸಿ, ಎಲ್‌ಜೆಪಿ (ರಾಮ್ ವಿಲಾಸ್) ಸ್ಥಾಪಿಸಿದ್ದರು. ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷವು 5 ಕ್ಷೇತ್ರಗಳಲ್ಲಿ ಗೆದಿತ್ತು. ಲೋಕಸಭಾ ಚುನಾವಣೆಯಲ್ಲಿ ಗೆದ್ದ ಕ್ಷೇತ್ರಗಳಲ್ಲಿ ತಲಾ 2 ವಿಧಾನಸಭಾ ಕ್ಷೇತ್ರಗಳನ್ನು ಬಿಟ್ಟುಕೊಡಬೇಕು ಎಂದು ಚಿರಾಗ್ ಬೇಡಿಕೆ ಇಟ್ಟಿದ್ದಾರೆ.

ಹೀಗಾಗಿ ಈ ವಾರಾಂತ್ಯದಲ್ಲಿ ಬಿಜೆಪಿ ಸೀಟು ಹಂಚಿಕೆ ಕುರಿತು ಮಾತುಕತೆ ನಡೆಸಲಿದೆ. ಎಚ್‌ಎಎಂ, ಆರ್‌ಎಲ್‌ಎಸ್‌ಪಿ ತಲಾ 15ರಿಂದ 20 ಕ್ಷೇತ್ರಗಳಿಗೆ ಪಟ್ಟು ಹಿಡಿದಿವೆ. ಆದರೆ, ಬಿಜೆಪಿ ಮಾತ್ರ ಎರಡು ಪಕ್ಷಗಳಿಗೆ 10ಕ್ಕಿಂತಲೂ ಕಡಿಮೆ ಸೀಟು ನೀಡಲು ನಿರ್ಧರಿಸಿದೆ. ಚಿರಾಗ್ ಅವರಿಗೆ ಎಚ್‌ಎಎಂ ಹಾಗೂ ಆರ್‌ಎಲ್‌ಎಸ್‌ಪಿಗಿಂತ ಹೆಚ್ಚಿನ ಸೀಟು ಬಿಟ್ಟು ಕೊಡಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಒಂದೊಮ್ಮೆ ಮಾತುಕತೆ ಯಶಸ್ವಿಯಾಗದಿದ್ದರೆ, ಪ್ರಶಾಂತ್ ಕಿಶೋರ್ ಅವರ ಜನ್ ಸುರಾಜ್ ಪಕ್ಷದ ಜೊತೆಗೂ ಕೈ ಜೋಡಿಸಲು ಹಿಂಜರಿಯುವುದಿಲ್ಲ ಎಂದು ಚಿರಾಗ್ ಸುಳಿವು ನೀಡಿದ್ದಾರೆ.

'ಸಿರಪ್: ನ್ಯಾಯಾಂಗ ತನಿಖೆ ನಡೆಸಿ'

ನವದೆಹಲಿ (ಪಿಟಿಐ): ಕೆಮ್ಮಿನ ಸಿರಪ್ ಸೇವನೆಯಿಂದ ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಮಕ್ಕಳು ಮೃತಪಟ್ಟ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಕಾಂಗ್ರೆಸ್ ಮಂಗಳವಾರ ಆಗ್ರಹಿಸಿದೆ.

ಮೃತ ಮಕ್ಕಳ ಕುಟುಂಬ ವರ್ಗಕ್ಕೆ ಪರಿಹಾರದ ಜೊತೆಗೆ ಸರ್ಕಾರಿ ಉದ್ಯೋಗ ನೀಡಬೇಕು. ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಕ್ಷಮೆಯಾಚಿಸಬೇಕು ಎಂದಿದೆ.

ಕೆಮ್ಮಿನ ಸಿರಪ್ ತಯಾರಿಸಿದ ಕಂಪನಿಗಳಿಗೆ ಮಧ್ಯಪ್ರದೇಶ ಮತ್ತು ರಾಜಸ್ಥಾನ ಸರ್ಕಾರಗಳು 'ಕ್ಲೀನ್ ಚಿಟ್' ನೀಡಿವೆ ಎಂದು ಆರೋಪಿಸಿದೆ.

'ಛಿಂದ್ವಾಡದ ಕಾಂಗ್ರೆಸ್ ಶಾಸಕರು ಸಿರಪ್ ಬಗ್ಗೆ ಆತಂಕ ವ್ಯಕ್ತಪಡಿಸಿ, 'ಸೂಕ್ತ ಕ್ರಮಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ವಿನಂತಿಸಿದ್ದರೂ, ಯಾವುದೇ ಕ್ರಮ ಜರುಗಿಸಿರಲಿಲ್ಲ' ಎಂದು ಮಧ್ಯಪ್ರದೇಶ ವಿಧಾನಸಭೆಯ ವಿಪಕ್ಷದ ನಾಯಕ ಉಮಂಗ್ ಸಿಂಘಾರ್ ಅವರು ರಾಜಸ್ಥಾನ ವಿಧಾನಸಭೆಯ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಟೀಕಾ ರಾಮ್ ಜೂಲಿ ಅವರೊಂದಿಗೆ ಇಲ್ಲಿ ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಮಧ್ಯಪ್ರದೇಶದ ಡಿಸಿಎಂ ರಾಜೇಂದ್ರ ಶುಕ್ಲಾ ಅವರು ಕೆಮ್ಮಿನ ಸಿರಪ್ ಸೇವನೆಯಿಂದ ಸಾವು ಸಂಭವಿಸಿಲ್ಲ ಎಂದಿದ್ದು, ಸಿರಪ್ ತಯಾರಿಸುವ ಕಂಪನಿಗೆ ಕ್ಲೀನ್ ಚಿಟ್ ನೀಡಿದ್ದರು. ಅವರಿಗೂ, ಔಷಧ ಕಂಪನಿಗೂ ಏನು ಸಂಬಂಧ? ಸಚಿವರು ಈ ಕಂಪನಿಯ ಪಾಲುದಾರರೇ?' ಎಂದು ಉಮಂಗ್ ವಾಗ್ದಾಳಿ ನಡೆಸಿದರು.

'ರಾಜಸ್ಥಾನ, ಮಧ್ಯ ಪ್ರದೇಶದ ಮುಖ್ಯಮಂತ್ರಿಗಳು ಸೂತ್ರದ ಬೊಂಬೆ' ಎಂದು ದೂರಿದ ಅವರು, 'ದೆಹಲಿಯಿಂದ ಬರುವ ಸೂಚನೆಗಳನ್ನಷ್ಟೇ ಪಾಲಿಸುತ್ತಾರೆ' ಎಂದು ಟೀಕಿಸಿದರು.

ಸಿಬಿಐ ತನಿಖೆಗೆ ಆಗ್ರಹಿಸಿ ಪಿಐಎಲ್

ಮಕ್ಕಳ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಹಾಗೂ ಔಷಧ ಸುರಕ್ಷತಾ ಕಾರ್ಯವಿಧಾನಗಳಲ್ಲಿ ಸುಧಾರಣೆ ಜಾರಿಗೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲಾಗಿದೆ.

ಈ ಪ್ರಕರಣವನ್ನು ನ್ಯಾಯಾಲಯದ ಮೇಲ್ವಿಚಾರಣೆಯಲ್ಲೇ ತನಿಖೆ ನಡೆಸಬೇಕು. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ರಾಷ್ಟ್ರೀಯ ನ್ಯಾಯಾಂಗ ಆಯೋಗ ಅಥವಾ ತಜ್ಞರ ಸಮಿತಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಒತ್ತಾಯಿಸಿ ವಕೀಲ ವಿಶಾಲ್ ತಿವಾರಿ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ಉತ್ಪಾದನೆ ನಿಲ್ಲಿಸಲು ಸೂಚನೆ



ಅಹಮದಾಬಾದ್: ತನಿಖೆಗೊಳಪಟ್ಟಿದ್ದ ಎರಡು ಔಷಧ ಕಂಪನಿಗಳಿಗೆ ತಕ್ಷಣದಿಂದಲೇ ಉತ್ಪಾದನೆ ಸ್ಥಗಿತಗೊಳಿಸುವಂತೆ ಗುಜರಾತ್ ಸರ್ಕಾರ ಮಂಗಳವಾರ ಆದೇಶಿಸಿದೆ.

ತೀವ್ರ ತಪಾಸಣೆಯ ನಂತರ ಸುರೇಂದ್ರ ನಗರ ಮೂಲದ ಶೇಪ್ ಫಾರ್ಮಾ ಪ್ರೈವೆಟ್ ಲಿಮಿಟೆಡ್ ಮತ್ತು ಅಹಮದಾಬಾದ್ ಮೂಲದ ರೆಡ್‌ನೆಕ್ಸ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ಸಂಸ್ಥೆಗಳಿಗೆ ಕಾರ್ಯಾಚರಣೆ ಸ್ಥಗಿತಗೊಳಿಸುವಂತೆ ಆದೇಶಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಈ ಎರಡು ಕಂಪನಿಗಳು ತಯಾರಿಸಿದ ಕೆಮ್ಮಿನ ಸಿರಪ್ ಸೇವಿಸಿದ ಮಕ್ಕಳು ಮೃತಪಟ್ಟ ನಂತರ ತಪಾಸಣೆ ನಡೆಸಲಾಗಿತ್ತು. ವರದಿಯಲ್ಲಿ ನ್ಯೂನತೆ ಕಂಡುಬಂದಿದ್ದರಿಂದ ಔಷಧ ತಯಾರಿಕೆ ಸ್ಥಗಿತಕ್ಕೆ ಆದೇಶಿಸಲಾಗಿದೆ.

ಗುಣಮಟ್ಟವಿಲ್ಲದ ಔಷಧಿಗಳ ಎಲ್ಲ ಬ್ಯಾಚ್‌ಗಳನ್ನು ಮಾರುಕಟ್ಟೆಯಿಂದ ವಾಪಸ್ ಪಡೆಯುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ ಎಂದು ಆರೋಗ್ಯ ಸಚಿವ ಹೃಷಿಕೇಶ್ ಪಟೇಲ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಎರಡೂ ಕಂಪನಿಗಳು ಸರ್ಕಾರಿ ಸ್ವಾಮ್ಯದ ಔಷಧ ಖರೀದಿ ಸಂಸ್ಥೆ ಗುಜರಾತ್ ಮೆಡಿಕಲ್ ಸರ್ವೀಸಸ್ ಕಾರ್ಪೊರೇಷನ್ ಲಿಮಿಟೆಡ್‌ನ ಖರೀದಿದಾರರ ಪಟ್ಟಿಯಲ್ಲಿ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಮತ್ತಿಬ್ಬರು ಮಕ್ಕಳ ಸಾವು

ಛಿಂದ್ವಾಡ (ಪಿಟಿಐ): ಕಲಬೆರಕೆ ಕೆಮ್ಮಿನ ಸಿರಪ್ ಸೇವಿಸಿದ್ದರಿಂದ ಮೂತ್ರಪಿಂಡದ ಸೋಂಕಿಗೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದ ಮಧ್ಯಪ್ರದೇಶದ ಛಿಂದ್ವಾಡದ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಇದರಿಂದಾಗಿ ಮೃತ ಮಕ್ಕಳ ಸಂಖ್ಯೆ 16ಕ್ಕೆ ಏರಿಕೆಯಾಗಿದೆ.

ಜಿಲ್ಲೆಯ ಜುನ್ನಾರ್‌ದೇವ್ ನಿವಾಸಿ ಜಯುಷಾ ಯದುವಂಶಿ (2) ಮಂಗಳವಾರ ನಾಗ್ಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಧೀರೇಂದ್ರ ಸಿಂಗ್ ತಿಳಿಸಿದ್ದಾರೆ.

ಭರಿಯಾಧನ ಗ್ರಾಮದ ತಮಿಯಾ ಬ್ಲಾಕ್‌ನ ಎರಡೂವರೆ ವರ್ಷದ ಧನಿ ಡೆಹರಿಯಾ ಅವರು ನಾಗ್ಪುರದಲ್ಲಿ ಸೋಮವಾರ ಮೃತಪಟ್ಟಿದ್ದರು. ವೈದ್ಯರ ಶಿಫಾರಸಿನ ಮೇರೆಗೆ ಸಿರಪ್ ಕುಡಿದಿದ್ದರಿಂದಲೇ ಆಕೆಯ ಮೂತ್ರಪಿಂಡಗಳು ವಿಫಲವಾಗಿದ್ದವು ಎಂದು ಕುಟುಂಬ ಆರೋಪಿಸಿದೆ. ಛಿಂದ್ವಾಡದ ಆರು ಮಕ್ಕಳು ನಾಗ್ಪುರದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರಲ್ಲಿ ಐವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಸಿಂಗ್ ಹೇಳಿದ್ದಾರೆ.

ಚಿಕಿತ್ಸಾ ವೆಚ್ಚ ಭರಿಸಲಿರುವ ಸರ್ಕಾರ: ಮೂತ್ರಪಿಂಡದ ಸೋಂಕಿನಿಂದ ಬಳಲುತ್ತಿರುವ ಮಕ್ಕಳ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಮಧ್ಯಪ್ರದೇಶ ಸರ್ಕಾರ ಭರಿಸಲಿದೆ.

ನಿಷೇಧ (ಚಂಡೀಗಢ ವರದಿ): ರಾಜ್ಯದಲ್ಲಿ ಕೋಲ್ಡ್‌ರಿಫ್ ಕೆಮ್ಮಿನ ಸಿರಪ್ ಮಾರಾಟ, ವಿತರಣೆ ಮತ್ತು ಬಳಕೆಯನ್ನು ನಿಷೇಧಿಸಿ ಪಂಜಾಬ್ ಸರ್ಕಾರ ಆದೇಶ ಹೊರಡಿಸಿದೆ.

ಕೇರಳ: ಕೆಲವು ಔಷಧಗಳ ವಿತರಣೆಗೆ ನಿಷೇಧ

ತಿರುವನಂತಪುರ (ಪಿಟಿಐ): ತಮಿಳುನಾಡು ಮೂಲದ ಶ್ರೀಸನ್ ಫಾರ್ಮಾ ಕಂಪನಿ ತಯಾರಿಸುವ ಔಷಧಗಳ ವಿತರಣೆಯನ್ನು ಕೇರಳ ಸರ್ಕಾರ ಮಂಗಳವಾರ ನಿಷೇಧಿಸಿದೆ.

ಶ್ರೀಸನ್ ಕಂಪನಿಯ ಪರವಾನಗಿಯನ್ನು ರದ್ದುಗೊಳಿಸುವ ತಮಿಳುನಾಡು ಡ್ರಗ್ಸ್ ಕಂಟ್ರೋಲರ್ ಅವರ ಕ್ರಮಗಳನ್ನು ಅನುಸರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ಗುಜರಾತ್ ಮೂಲದ ಕಂಪನಿ ತಯಾರಿಸುವ 'ರೆಸ್ಪಿಫ್ರೆಶ್ ಟಿಆರ್' ಔಷಧಿಯ ಗುಣಮಟ್ಟ ಕಳಪೆಯಾಗಿರುವುದು ಕಂಡುಬಂದಿದ್ದು, ಅದರ ವಿತರಣೆಯನ್ನು ತಕ್ಷಣವೇ ನಿಲ್ಲಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಐವರು ವಿತರಕರು ಈ ಔಷಧಗಳನ್ನು ಪೂರೈಸುತ್ತಿದ್ದು, ವಿತರಣೆ ನಿಲ್ಲಿಸಲು ಸೂಚಿಸಲಾಗಿದೆ ಎಂದಿದ್ದಾರೆ. 'ಈ ಔಷಧ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸರ್ಕಾರಿ ಆಸ್ಪತ್ರೆಗಳ ಮೂಲಕ ಈ ಔಷಧಗಳನ್ನು ವಿತರಿಸಲಾಗುವುದಿಲ್ಲ' ಎಂದು ಹೇಳಿದ್ದಾರೆ.

‘ಅಭಿಪ್ರಾಯ ತಿರುಚಿ ಹಂಚಿಕೆ’

ಅರ್ಜಿಯೊಂದರ ವಿಚಾರಣೆ ವೇಳೆ ಹಿಂದಿನ ಘಟನೆ ನೆನಪಿಸಿಕೊಂಡ ಸಿಜೆಐ ಗವಾಯಿ

ನವದೆಹಲಿ (ಪಿಟಿಐ): ‘ಪ್ರಕರಣವೊಂದರ ವಿಚಾರಣೆ ವೇಳೆ ನ್ಯಾಯಮೂರ್ತಿಗಳ ಮಾತುಗಳನ್ನು ತಪ್ಪು ಅರ್ಥ ಬರುವಂತೆ ಸಾಮಾಜಿಕ ಜಾಲ ತಾಣಗಳಲ್ಲಿ ಹಂಚಿ-ಕೊಳ್ಳಲಾಗುತ್ತಿದೆ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರು ಮಂಗಳವಾರ ಕಳವಳ ವ್ಯಕ್ತಪಡಿಸಿದರು.


ಬಿ.ಆರ್.ಗವಾಯಿ

ಮಂಗಳವಾರ ಅರ್ಜಿಯೊಂದರ ವಿಚಾರಣೆ ನಡೆಸುತ್ತಿದ್ದ ವೇಳೆ ಸಿಜೆಐ ಗವಾಯಿ ಅವರು ಕೆಲವು ದಿನಗಳ ಹಿಂದೆ ನಡೆದಿದ್ದ ಘಟನೆಯೊಂದನ್ನು ನೆನಪಿಸಿಕೊಂಡರು.

‘ಪ್ರಕರಣವೊಂದಕ್ಕೆ ಸಂಬಂಧಿಸಿ ವಿಚಾರಣೆಯ ವೇಳೆ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿಗೆ ಏನೋ ಹೇಳುವುದಿತ್ತು. ನಾನು ಅವರನ್ನು ತಡೆದೆ. ಇಲ್ಲದೇ ಇದ್ದಿದ್ದರೆ, ಅವರ ಹೇಳಿಕೆಯನ್ನು ತಪ್ಪು ಅರ್ಥ ಬರುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿತ್ತು’ ಎಂದರು.

‘ನಿಮ್ಮ ಅಭಿಪ್ರಾಯವನ್ನು ನನ್ನ ಕಿವಿಯಲ್ಲಿ ಮಾತ್ರವೇ ಹೇಳಿ ಎಂದು ನಾನು ಅವರಲ್ಲಿ ವಿನಂತಿಸಿಕೊಂಡಿದ್ದೆ’ ಎಂದರು.

ಸೋಮವಾರವಷ್ಟೇ ಸಿಜೆಐ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಅವರು ಶೂ ಎಸೆಯುವ ಯತ್ನ ನಡೆಸಿದ್ದರು. ಭಗ್ನಗೊಂಡಿದ್ದ ವಿಷ್ಣು ಮೂರ್ತಿಯನ್ನು ಮರುಸ್ಥಾಪಿಸುವ ಕುರಿತ ಅರ್ಜಿಯ ವಿಚಾರಣೆ ವೇಳೆ ಸಿಜೆಐ ಗವಾಯಿ ಅವರು ಆಡಿದ್ದ ಮಾತುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿತ್ತು. ಇದಕ್ಕೆ ವಿರೋಧವೂ ವ್ಯಕ್ತವಾಗಿತ್ತು. ‘ಗವಾಯಿ ಅವರ ಹೇಳಿಕೆಯು ನನಗೆ ಅಸಮಾಧಾನ ತರಿಸಿತ್ತು’ ಎಂದು ರಾಕೇಶ್ ಹೇಳಿದ್ದರು.

> **ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗದ ಘನತೆ, ಸ್ವಾತಂತ್ರ್ಯ ಬಹಳ ಮುಖ್ಯ. ಇಂಥ ವ್ಯವಸ್ಥೆ ಮೇಲೆ ಕೈ ಎತ್ತುವುದು ಎಂದರೆ, ಅದು ಸಂವಿಧಾನದ ವಿರುದ್ಧ ನಡೆದಂತೆ**
> **ಹೇಮಂತ್ ಸೊರೇನ್,** ಜಾರ್ಖಂಡ್ ಮುಖ್ಯಮಂತ್ರಿ

> **ವಿಕಸಿತ ಭಾರತ ಹೇಗಿರಲಿದೆ ಎನ್ನುವುದಕ್ಕೆ ಸಿಜೆಐ ಮೇಲೆ ಶೂ ಎಸೆಯಲು ಯತ್ನಿಸಿದ್ದೇ ಸ್ಪಷ್ಟ ಚಿತ್ರಣ ನೀಡುತ್ತದೆ. ತನಗೆ ಏನೂ ಆಗುವುದಿಲ್ಲ ಎನ್ನುವ ಅತೀವ ಭರವಸೆ ಇದ್ದೇ ವಕೀಲ ಇಂಥ ಕೃತ್ಯ ಎಸಗಿದ್ದಾರೆ**
> **ಮೆಹಬೂಬಾ ಮುಫ್ತಿ,** ಪಿಡಿಪಿ ಮುಖ್ಯಸ್ಥೆ

‘ಕ್ರಿಮಿನಲ್ ನ್ಯಾಯಾಂಗ ನಿಂದನೆ ದಾಖಲಿಸಲು ಅನುಮತಿ ನೀಡಿ’

‘ನಿಮ್ಮ (ಸಿಜೆಐ ಗವಾಯಿ) ಎದೆ ಸೀಳಬೇಕು ಎನ್ನುವ ಬಯಕೆ ಇದ್ದರೆ ನನಗೆ ಹೇಳಿ’ ಎಂದು ಸೆ.12ರಂದು ಧಾರ್ಮಿಕ ಭಾಷಣಕಾರ ಅನಿರುದ್ಧಾಚಾರ್ಯ (ಅನಿರುದ್ಧ ರಾಮ್ ತಿವಾರಿ) ಹೇಳಿದ್ದರು. ಅಜೀತ್ ಭಾರತಿ ಎಂಬ ಯೂಟ್ಯೂಬರ್ ಸಿಜೆಐ ಗವಾಯಿ ಅವರ ವಿರುದ್ಧ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ’ ಎಂದು ‘ದಿ ಮಿಷನ್ ಅಂಬೇಡ್ಕರ್’ ಸಂಸ್ಥೆಯ ಸ್ಥಾಪಕ ಸೂರಜ್ ಕುಮಾರ್ ಬುದ್ಧ ಆರೋಪಿಸಿದ್ದಾರೆ.

ಈ ಇಬ್ಬರ ಹೇಳಿಕೆಯನ್ನು ಉಲ್ಲೇಖಿಸಿ, ಇವರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ಕೋರಿ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸೂರಜ್ ಕುಮಾರ್ ಬುದ್ಧ ಅವರು ಪತ್ರ ಬರೆದಿದ್ದಾರೆ.

‘ಇಂಥ ಹೇಳಿಕೆಗಳು ಸಿಜೆಐ ಗವಾಯಿ ಅವರು ವಿರುದ್ಧ ಹಿಂಸೆಗೆ ಪ್ರಚೋದನೆ ನೀಡಿವೆ. ಇದು ಬಹಳ ಅಪಾಯಕಾರಿಯಾದುದು. ಈ ಇಬ್ಬರ ಹೇಳಿಕೆಗಳು ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹರಿದಾಡಿವೆ’ ಎಂದು ಪತ್ರದಲ್ಲಿ ಹೇಳಲಾಗಿದೆ.

‘ಸಿಜೆಐ ಅವರತ್ತ ಶೂ ಎಸೆಯಲು ಯತ್ನಿಸಿದ ವರ್ತನೆಯು ಸುಪ್ರೀಂ ಕೋರ್ಟ್‌ನ ಇತಿಹಾಸದಲ್ಲಿಯೇ ಎಂದೂ ನಡೆದಿರಲಿಲ್ಲ. ಇಂಥ ವ್ಯಕ್ತಿಯನ್ನು ಕಾನೂನಿನಡಿ ತರಬೇಕು. ಇಲ್ಲವಾದಲ್ಲಿ ಪ್ರಜಾಪ್ರಭುತ್ವದ ಮೂಲಾಧಾರವಾದ ನ್ಯಾಯಾಂಗದ ಸ್ವಾತಂತ್ರ್ಯಕ್ಕೇ ಗಂಡಾಂತರ ಒದಗುತ್ತದೆ’ ಎಂದು ಪತ್ರದಲ್ಲಿ ಹೇಳಲಾಗಿದೆ.

ಶೂ ಎಸೆಯಲು ಯತ್ನ ಪ್ರಕರಣ: ಎಲ್ಲೆಡೆ ಆಕ್ರೋಶ

- ‘ಜೀವನ ಸವೆಸಿ ಸಿಜೆಐನಂಥ ಸಾಂವಿಧಾನಿಕವಾದ ದೊಡ್ಡ ಹುದ್ದೆಯನ್ನೇರಿದ ಬಳಿಕವೂ ದಲಿತನೊಬ್ಬನನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ’ ಎಂದು ಬಿಹಾರದ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಕುಮಾರ್ ರಾಮ್ ಅಭಿಪ್ರಾಯಪಟ್ಟರು
- ಮುಂಬೈನಲ್ಲಿ ಎನ್‌ಸಿಪಿ (ಶರದ್ ಪವಾರ್ ಬಣ) ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಪ್ರತಿಭಟನೆ ನಡೆಸಿವೆ
- ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ಜಗನ್ ಮೋಹನ್ ರೆಡ್ಡಿ ಘಟನೆಯನ್ನು ಖಂಡಿಸಿದ್ದಾರೆ. ತಮಿಳುನಾಡಿನ ಎಐಎಡಿಎಂಕೆ ಪಕ್ಷ ಕೂಡ ಘಟನೆಯನ್ನು ಖಂಡಿಸಿದೆ

ಸಿಜೆಐ ಮೇಲೆ ಶೂ ಎಸೆಯಲು ಯತ್ನ: ವ್ಯಾಪಕ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್.ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿರುವುದನ್ನು ವಿವಿಧ ಸಂಘಟನೆಗಳು ಹಾಗೂ ಸಾಹಿತಿಗಳು ತೀವ್ರವಾಗಿ ಖಂಡಿಸಿದ್ದಾರೆ.

‘ಮುಖ್ಯ ನ್ಯಾಯಮೂರ್ತಿಯವರು ಯಾವುದೇ ಧರ್ಮ ಅಥವಾ ಜಾತಿಗೆ ಸೇರಿದವರಂತೆ ವರ್ತಿಸಿಲ್ಲ. ಸಾಂವಿಧಾನಿಕ ಮೌಲ್ಯಗಳಿಗೆ ಚ್ಯುತಿ ಬಾರದಂತೆ ಕೆಲಸ ನಿರ್ವಹಿಸುತ್ತಿದ್ದಾರೆ. ಹಾಗಾಗಿ ವಕೀಲನ ವಿರುದ್ಧ ಕಾನೂನು ಕ್ರಮ ಕೈಗೊಂಡು, ಸರಿಯಾದ ಶಿಕ್ಷೆ ವಿಧಿಸಬೇಕು’ ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ರಾಜ್ಯ ಆದಿಜಾಂಬವ ಸಂಘ ಆಗ್ರಹಿಸಿದೆ.

‘ನ್ಯಾಯಾಂಗ ವ್ಯವಸ್ಥೆಯ ಮೇಲೆ ನಡೆದ ಹೀನಾಯವಾದ ದಾಳಿ. ದಲಿತ ಸಮುದಾಯಕ್ಕೆ ಸೇರಿದ ಗವಾಯಿ ಅವರು ಸಂವಿಧಾನದ ತತ್ವಗಳ ಆಧಾರದ ಮೇಲೆ ಕಾರ್ಯನಿರ್ವಹಿ-ಸುತ್ತಿದ್ದಾರೆ. ಇವರ ಮೇಲೆ ಸನಾತನ ಮನಸ್ಥಿತಿಯ ವಕೀಲ ತೋರಿಸಿರುವ ಅಸಹನೆ ಹಿಂದೂ ಧರ್ಮದ ಒಳಗಿನ ಅಸ್ಪೃಶ್ಯತೆ, ಜಾತೀಯತೆಯ ತಾರತಮ್ಯ ಸ್ವಾತಂತ್ರ್ಯ ನಂತರವೂ ಗಟ್ಟಿಯಾಗಿ ಉಳಿದುಕೊಂಡಿದೆ ಎನ್ನುವುದನ್ನು ತೋರಿಸುತ್ತದೆ’ ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ಇಂದೂಧರ ಹೊನ್ನಾಪುರ, ಮಾವಳ್ಳಿ ಶಂಕರ್, ವಿ.ನಾಗರಾಜ್, ಗುರುಪ್ರಸಾದ್ ಕೆರಗೋಡು ಹೇಳಿದ್ದಾರೆ.

‘ವಕೀಲನನ್ನು ಭಾರತೀಯ ವಕೀಲರ ಮಂಡಳಿಯಿಂದ ಅಮಾನತುಗೊಳಿ-ಸಿರುವುದು ಸಾಲದು, ಮಂಡಳಿಯ ಸದಸ್ಯತ್ವ ರದ್ದುಗೊಳಿಸಿ, ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ವಿಭಾಗೀಯ ಸಂಘಟನಾ ಸಂಚಾಲಕ ಉಮಾಶಂಕರ್ ಪುನುಗುಮಾರನ-ಹಳ್ಳಿ, ಜಿಲ್ಲಾ ಸಂಘಟನಾ ಸಂಚಾಲಕ ತಗಚಗುಪ್ಪೆ ಹನುಮಂತರಾಜು, ಕಾರ್ಯಕಾರಿ ಸಂಚಾಲಕ ಜೀವನಹಳ್ಳಿ ವೆಂಕಟೇಶ್ ಒತ್ತಾಯಿಸಿದ್ದಾರೆ.

‘ಪ್ರಜಾಪ್ರಭುತ್ವ ವ್ಯಸ್ಥೆಯಲ್ಲಿ ನಂಬಿಕೆ ಇಟ್ಟಿರುವ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಸಂವಿಧಾನ ಮತ್ತು ಬಿ.ಆರ್. ಅಂಬೇಡ್ಕರ್ ಅವರಿಗೆ ಮಾಡಿದ ಘೋರ ಅಪಮಾನವಾಗಿದೆ. ವಕೀಲ ರಾಕೇಶ್ ವಿರುದ್ಧ 1989ರ ಪರಿಶಿಷ್ಟ ಜಾತಿ, ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಬಂಧಿಸಬೇಕು’ ಎಂದು ರಾಜ್ಯ ಆದಿಜಾಂಬವ ಸಂಘದ ಕಾರ್ಯಾಧ್ಯಕ್ಷ ಜಂಬೂದ್ವೀಪ ಸಿದ್ದರಾಜು ಒತ್ತಾಯಿಸಿದ್ದಾರೆ.

ಶಿಕ್ಷೆಯಾಗಲಿ: ಬರಗೂರು

‘ಹಿರಿಯ ವಕೀಲರೊಬ್ಬರು ಮುಖ್ಯ ನ್ಯಾಯಮೂರ್ತಿಯವರ ಮೇಲೆ ಶೂ ಎಸೆದ ಪ್ರಕರಣವು ವೈಯಕ್ತಿಕ ಅಸಹನೆ ಮಾತ್ರವಾಗಿರದೆ, ದೇಶದಲ್ಲಿ ಆವರಿಸಿಕೊಳ್ಳುತ್ತಿರುವ ಅಮಾನವೀಯ ಧಾರ್ಮಿಕ ಮೂಲಭೂತವಾದದ ಒಂದು ಸಂಕೇತವಾಗಿದ್ದು, ತಪ್ಪಿತಸ್ಥರ ವಿರುದ್ಧ ಶಿಕ್ಷೆಯಾಗಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರತಿಪಾದಿಸಿದ್ದಾರೆ.

‘ಸೌಹಾರ್ದ ಮತ್ತು ಸಮಾನತೆಗಳ ಪರಂಪರೆಯುಳ್ಳ ಭಾರತದಲ್ಲಿ ಇಂತಹ ದ್ವೇಷ ಮತ್ತು ಅಸಹಿಷ್ಣುತೆಯ ಕೃತ್ಯಗಳು ನಡೆಯುವುದು ಧಾರ್ಮಿಕ, ನೈತಿಕ, ಕಾನೂನಾತ್ಮಕವೂ ಅಲ್ಲ. ಇಂತಹ ಕೃತ್ಯಗಳನ್ನು ನಿರ್ದಿಷ್ಟ ಧರ್ಮ, ಪಕ್ಷ, ಪಂಥಗಳನ್ನು ಮೀರಿ ಮಾನವೀಯವಾದವರೆಲ್ಲರೂ ಖಂಡಿಸಬೇಕು. ಈ ಕೃತ್ಯ ನಡೆದಾಗ ವಿಚಲಿತರಾಗದೆ ಕಾರ್ಯಕಲಾಪಗಳನ್ನು ಮುಂದುವರಿಸಿ ಮುತ್ಸದ್ದಿತನ ತೋರಿದ ಗವಾಯಿ ಅವರ ನಡೆ ಅಭಿನಂದನೀಯವಾದುದು ಎಂದಿದ್ದಾರೆ.

‘ಶೂ ಎಸೆಯಲು ಯತ್ನಿಸಿದವನಿಗೆ ಶಿಕ್ಷೆಯಾಗಲಿ’

ಬೆಂಗಳೂರು: ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯುವ ಕೃತ್ಯ ಖಂಡನೀಯ. ಇದು ಡಾ.ಬಿ.ಆರ್. ಅಂಬೇಡ್ಕರ್ ಬರೆದ ಸಂವಿಧಾನಕ್ಕೆ ಅಪಚಾರ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಇದು ಪ್ರಜಾಪ್ರಭುತ್ವ ಮತ್ತು ನ್ಯಾಯಾಂಗ ವ್ಯವಸ್ಥೆಗೂ ಆಗಿರುವ ಅಪಚಾರ’ ಎಂದು ಹೇಳಿದರು.

‘ಒಬ್ಬ ವಕೀಲನ ಇಂಥ ಪುಂಡಾಟಿಕೆಯನ್ನು ಪ್ರಧಾನಿಯವರೂ ಸೇರಿ ಎಲ್ಲರೂ ವಿರೋಧಿಸಿದ್ದಾರೆ. ಇದು ದೇಶವೇ ತಲೆ ತಗ್ಗಿಸುವ ಕೃತ್ಯ. ವಕೀಲನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಕ್ಷಮೆಗೆ ಅರ್ಹವಲ್ಲದ ಕೃತ್ಯವಾಗಿದ್ದು, ಕಠಿಣ ಶಿಕ್ಷೆಗೆ ಗುರಿಪಡಿಸಬೇಕು’ ಎಂದು ಆಗ್ರಹಿಸಿದರು.

ಸಂತ್ರಸ್ತ ಕುಟುಂಬದ ಸದಸ್ಯರ ಜತೆ ವಿಜಯ್ ಮಾತುಕತೆ

ಚೆನ್ನೈ (ಪಿಟಿಐ): ಕರೂರು ಕಾಲ್ತುಳಿತ ಪ್ರಕರಣದ ಸಂತ್ರಸ್ತರ ಕುಟುಂಬವನ್ನು ಸಂಪರ್ಕಿಸಲು ನಟ ವಿಜಯ್ ಮುಂದಾಗಿದ್ದಾರೆ. ವಾಟ್ಸ್‌ಆ್ಯಪ್ ವಿಡಿಯೊ ಕಾಲ್ ಮೂಲಕ ಸಂತ್ರಸ್ತರ ಕುಟುಂಬಸ್ಥರ ಜತೆಗೆ ಮಾತುಕತೆ ನಡೆಸಿ, ನೆರವು ನೀಡುವ ಭರವಸೆಯನ್ನೂ ವಿಜಯ್ ನೀಡಿದ್ದಾರೆ.

ಸಂತ್ರಸ್ತರ ಕುಟುಂಬಗಳನ್ನು ವೈಯಕ್ತಿಕವಾಗಿ ಭೇಟಿಯಾಗುವ ಪ್ರಯತ್ನವನ್ನು ವಿಜಯ್ ಮಾಡಿಲ್ಲ ಎಂದು ಹಲವರು ಟೀಕಿಸಿದ ಬೆನ್ನಲ್ಲೇ ಸೋಮವಾರ ಸಂಜೆ ಸಂತ್ರಸ್ತರ ಕುಟುಂಬದೊಂದಿಗೆ ವಿಜಯ್ ಮಾತುಕತೆ ನಡೆಸಿದ್ದಾರೆ.

ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಕೆಲವು ಸದಸ್ಯರು ಸಂತ್ರಸ್ತರ ಮನೆಗಳಿಗೆ ತೆರಳಿ, ಕುಟುಂಬಸ್ಥರಿಗೆ ವಿಡಿಯೊ ಕರೆ ಮೂಲಕ ವಿಜಯ್ ಅವರ ಜತೆಗೆ ಮಾತನಾಡಲು ಅನುವು ಮಾಡಿಕೊಟ್ಟಿದ್ದಾರೆ.

ಉದ್ಯೋಗ ವಾಣಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

ಈಗಿನ ಕಾಲದಲ್ಲಿ ಜನತೆಯ ಕೈ ಸೇರುವ ರಾಷ್ಟ್ರದ ಸಂಪತ್ತೆಂದರೆ ರಾಷ್ಟ್ರೀಯ ಸಾಲವೇ. **ಕಾರ್ಲ್ ಮಾರ್ಕ್ಸ್**

ಸಂಪಾದಕೀಯ

ಹಿರಿಯ ನಾಗರಿಕರ ಯೋಗಕ್ಷೇಮ ಕಳವಳ ಹುಟ್ಟಿಸುವ ಕೊರತೆಗಳು

ಭಾರತದ ಸಿಲಿಕಾನ್ ಸಿಟಿ, ಉದ್ಯಾನ ನಗರಿ, ಹೊಸ ಸಂಶೋಧನೆಗಳ ಕೇಂದ್ರ, ಇತ್ಯಾದಿ ವಿಶೇಷಣಗಳಿಂದ ದೇಶದ ಗಮನಸೆಳೆದಿರುವ ಬೆಂಗಳೂರು ಮಹಾನಗರವನ್ನು ‘ನಿವೃತ್ತ ನಾಗರಿಕರ ಸ್ವರ್ಗ’ ಎಂದೂ ಇತ್ತೀಚಿನವರೆಗೂ ಹೇಳಲಾಗುತ್ತಿತ್ತು. ಆದರೆ, ಅಭಿವೃದ್ಧಿಯ ನಾಗಾಲೋಟದ ಕಾರಣದಿಂದಾಗಿ, ಹಿರಿಯ ನಾಗರಿಕರ ಪಾಲಿಗೆ ನೆಮ್ಮದಿಯ ತಾಣವಾಗಿ ಬೆಂಗಳೂರು ಇದೀಗ ಉಳಿದಿಲ್ಲ. ಅಷ್ಟು ಮಾತ್ರವಲ್ಲ, ಹಿರಿಯ ನಾಗರಿಕರಿಗೆ ಸೂಕ್ತವಾದ ‘ಸಾರ್ವಜನಿಕ ವೈದ್ಯಕೀಯ ಸೇವೆ’ಯೂ ಇಲ್ಲಿ ಲಭ್ಯವಿಲ್ಲ ಎನ್ನುವುದನ್ನು ‘ಅಖಿಲ ಕರ್ನಾಟಕ ವಯೋವೃದ್ಧರ ಒಕ್ಕೂಟ’ದ ಇತ್ತೀಚಿನ ಸಮೀಕ್ಷೆ ಬಹಿರಂಗಪಡಿಸಿದೆ. ಹಿಂದೊಮ್ಮೆ ನಗರದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದ ನಾಗರಿಕರು, ತಮ್ಮ ಜೀವನಸಂಧ್ಯೆಯಲ್ಲಿ ಉತ್ತಮ ಚಿಕಿತ್ಸೆ ಪಡೆಯಲು ಪರದಾಡಬೇಕಾದ ಸ್ಥಿತಿ ಬೆಂಗಳೂರಿನ ವರ್ಚಸ್ಸನ್ನು ಮಸುಕುಗೊಳಿಸುವಂತಹದ್ದು. ತೀರಾ ಪ್ರಾಥಮಿಕ ವೈದ್ಯಕೀಯ ಸವಲತ್ತುಗಳನ್ನು ಪಡೆಯುವುದು ಕೂಡ ವೃದ್ಧರಿಗೆ ಕಷ್ಟಕರ ಎನ್ನುವ ಕಹಿಸತ್ಯವನ್ನು ಸಮೀಕ್ಷೆ ಗುರ್ತಿಸಿದೆ. ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ‘ನಮ್ಮ ಕ್ಲಿನಿಕ್’ಗಳು ಹಿರಿಯರು ಸುಲಭವಾಗಿ ಪತ್ತೆ ಮಾಡಲಾಗದ ಸ್ಥಳಗಳಲ್ಲಿವೆ. ವಯಸ್ಸಾದವರು ಹತ್ತಲು ಸಾಧ್ಯವಾಗದ ಕಡಿದಾದ ಮೆಟ್ಟಿಲುಗಳು ಹಾಗೂ ಉಪಯೋಗಿಸಲಾಗದ ಸ್ಥಿತಿಯಲ್ಲಿರುವ ರ್‍ಯಾಂಪ್‌ಗಳನ್ನು ಹೊಂದಿರುವ ಮಹಡಿಗಳ ಮೇಲೆಯೂ ಕೆಲವು ಆರೋಗ್ಯ ಕೇಂದ್ರಗಳಿವೆ. ಹಿರಿಯ ನಾಗರಿಕರು, ವಿಶೇಷವಾಗಿ ಬಡತನ ರೇಖೆಯ ಕೆಳಗೆ ಇರುವ ಕುಟುಂಬಗಳಿಗೆ ಸೇರಿದವರು ಮತ್ತು ಅಸಂಘಟಿತ ವಲಯಗಳ ನಿವೃತ್ತ ನೌಕರರಿಗೆ ವೈದ್ಯಕೀಯ ಸೇವೆಗಳು ಕೈಗೆಟುಕದಂತೆ ಇರುವುದು ಅನನುಕೂಲ ಮಾತ್ರವಾಗಿರದೆ, ಅನುದಿನದ ಬದುಕಿನಲ್ಲಿ ಅಸ್ತಿತ್ವಕ್ಕಾಗಿ ಎದುರಿಸಬೇಕಾದ ಸಂಕಷ್ಟವೂ ಆಗಿದೆ.



ತಂತ್ರಜ್ಞಾನ ಕ್ಷೇತ್ರದಲ್ಲಿನ ನಿರಂತರ ಬೆಳವಣಿಗೆಯಿಂದ ದೇಶದ ಗಮನಸೆಳೆದಿರುವ ಬೆಂಗಳೂರು ಮಹಾನಗರ, ಹಿರಿಯ ನಾಗರಿಕರ ಯೋಗಕ್ಷೇಮದ ವಿಷಯದಲ್ಲಿ ಹಿಂದೆ ಬಿದ್ದಿದೆ.

‘ನಮ್ಮ ಕ್ಲಿನಿಕ್’ಗಳಿಗೆ ಸಂಬಂಧಿಸಿದಂತೆ ಸಮೀಕ್ಷೆ ಹೊರಗೆಡವಿರುವ ಸಂಗತಿಗಳು ಆತಂಕಕಾರಿಯಾಗಿವೆ. ಕೆಲವು ಕ್ಲಿನಿಕ್‌ಗಳು, ರಕ್ತದೊತ್ತಡ ಮತ್ತು ಮಧುಮೇಹದಂತಹ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಉಚಿತ ಔಷಧಿಗಳನ್ನು ನೀಡುತ್ತವೆಯಾದರೂ, ಅಲ್ಲಿನ ದಾಸ್ತಾನು 15 ದಿನಗಳಿಗಷ್ಟೇ ಸೀಮಿತವಾಗಿರುವ ಉದಾಹರಣೆಗಳೇ ಹೆಚ್ಚು. ತಿಂಗಳಿಗೆ ಅಗತ್ಯವಾದಷ್ಟು ಔಷಧ ಪೂರೈಕೆಯ ಮನವಿಗಳು ಸಾಮಾನ್ಯವಾಗಿ ತಿರಸ್ಕೃತಗೊಳ್ಳುವುದರಿಂದಾಗಿ, ಹಿರಿಯ ನಾಗರಿಕರ ಅನಾರೋಗ್ಯ ಉಲ್ಬಣಗೊಳ್ಳುವುದಿದೆ. ಕೆಲವು ಪ್ರದೇಶಗಳಲ್ಲಿನ ಕ್ಲಿನಿಕ್‌ಗಳ ಮೇಲೆ ವಿಪರೀತ ಒತ್ತಡವಿದ್ದರೆ, ಮತ್ತೆ ಕೆಲವೆಡೆ ಕನಿಷ್ಠ ಪ್ರಮಾಣದ ರೋಗಿಗಳೂ ಇಲ್ಲದಿರುವುದು ‘ನಮ್ಮ ಕ್ಲಿನಿಕ್’ಗಳನ್ನು ಸ್ಥಾಪಿಸುವಲ್ಲಿ ಆಗಿರುವ ಯೋಜನೆಯ ಲೋಪವನ್ನು ಸೂಚಿಸುವಂತಿದೆ. ಸರ್ಕಾರದ ಡಿಜಿಟಲೀಕರಣ ವ್ಯವಸ್ಥೆ ಒಳ್ಳೆಯ ಉದ್ದೇಶವನ್ನು ಒಳಗೊಂಡಿದ್ದರೂ, ವೃದ್ಧರ ಪಾಲಿಗೆ ಅದು ಮತ್ತೊಂದು ಕಿರಿಕಿರಿಯೇ ಆಗಿದೆ. ಎಲ್ಲ ಹಿರಿಯ ನಾಗರಿಕರೂ ಸ್ಮಾರ್ಟ್ ಫೋನ್ ಹಾಗೂ ಅಂತರ್ಜಾಲ ಸೌಲಭ್ಯ ಹೊಂದಿರುತ್ತಾರೆಂದು ನಿರೀಕ್ಷಿಸಲಾಗದು. ಕ್ಯುಆರ್ ಕೋಡ್ ಆಧರಿತ ನೋಂದಣಿ ವ್ಯವಸ್ಥೆ, ಕೆಲವೊಮ್ಮೆ ಚಿಕಿತ್ಸೆ ವಿಳಂಬಗೊಳ್ಳಲು ಕಾರಣವಾಗುತ್ತದೆ. ವೈದ್ಯರನ್ನು ಸಂದರ್ಶಿಸಲು ಅಗತ್ಯವಾದ ಟೋಕನ್ ಪಡೆಯುವುದಕ್ಕಾಗಿಯೇ ತೊಂಬತ್ತು ನಿಮಿಷ ಕಾಯಬೇಕಾದ ಸ್ಥಿತಿ ಇರುವುದನ್ನೂ ಸಮೀಕ್ಷೆ ಗುರ್ತಿಸಿದೆ. ವಯಸ್ಸು ಅಥವಾ ದೈಹಿಕ ಅಂಗವೈಕಲ್ಯಕ್ಕೆ ಸಂಬಂಧಿಸಿದಂತೆ ಪ್ರಮಾಣಪತ್ರಗಳನ್ನು ನೀಡಲು ಬಿಪಿಎಲ್ ಕಾರ್ಡ್‌ದಾರರನ್ನು ಲಂಚಕ್ಕೆ ಒತ್ತಾಯಿಸುವ ನಿದರ್ಶನಗಳೂ ಇವೆ. ಇದು ಅನೈತಿಕತೆ ಮಾತ್ರವಲ್ಲ, ಅಮಾನವೀಯ ನಡವಳಿಕೆಯೂ ಹೌದು.

ತಮ್ಮ ಯೌವನದ ದಿನಗಳಲ್ಲಿ ಮಹಾನಗರದ ಬೆಳವಣಿಗೆಗೆ ಕೊಡುಗೆ ನೀಡಿರುವ ಹಿರಿಯ ನಾಗರಿಕರನ್ನು ವ್ಯವಸ್ಥೆ ಗೌರವ ಹಾಗೂ ಕೃತಜ್ಞತೆಯಿಂದ ಕಾಣಬೇಕೇ ಹೊರತು, ನಿರ್ಲಕ್ಷಿಸಬಾರದು. ವಯೋವೃದ್ಧರ ಒಕ್ಕೂಟದ ಸಮೀಕ್ಷೆಯಲ್ಲಿ ಬೆಳಕಿಗೆ ಬಂದಿರುವ ಕೊರತೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ವೈದ್ಯಕೀಯ ಸಿಬ್ಬಂದಿಗೆ ತರಬೇತಿ, ಹೊರ ರೋಗಿಗಳ ವಿಭಾಗ ಸಂಜೆಯೂ ಲಭ್ಯವಿರುವುದು, ಮೂಲ ಸೌಕರ್ಯಗಳ ಲಭ್ಯತೆ ಸೇರಿದಂತೆ ಹಿರಿಯ ನಾಗರಿಕರಿಗೆ ಅಗತ್ಯವಾದ ಎಲ್ಲ ವೈದ್ಯಕೀಯ ಸವಲತ್ತುಗಳನ್ನು ದೊರಕಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಇಳಿ ವಯಸ್ಸಿನಲ್ಲಿ ಎದುರಾಗುವ ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆ ಮತ್ತು ಆರೈಕೆಗೆ ಸಂಬಂಧಿಸಿದಂತೆ, ‘ವಯೋಮಾನಸ ಸಂಜೀವಿನಿ ಗೃಹ ಯೋಜನೆ’ಯನ್ನು ‘ನಿಮ್ಹಾನ್ಸ್’ ಆರಂಭಿಸಿದೆ. ಈ ಸ್ವಾಗತಾರ್ಹ ಪ್ರಯೋಗ ದೈಹಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆಯೂ ರೂಪುಗೊಳ್ಳಬೇಕಾದ ಅಗತ್ಯವಿದೆ. ಡಿಜಿಟಲ್ ಕ್ಷೇತ್ರದ ಯಶಸ್ಸು ಅಥವಾ ಗಗನಚುಂಬಿ ಕಟ್ಟಡಗಳಷ್ಟೇ ಮಹಾನಗರವೊಂದರ ಬೆಳವಣಿಗೆಯ ಸಂಕೇತ ಆಗಲಾರವು. ಹಿರಿಯರು ಹಾಗೂ ದುರ್ಬಲರನ್ನು ವ್ಯವಸ್ಥೆ ಹೇಗೆ ನಡೆಸಿಕೊಳ್ಳುತ್ತದೆ ಎನ್ನುವುದೂ ಅಭಿವೃದ್ಧಿಯ ಪ್ರಮುಖ ಮಾನದಂಡ ಆಗಿರುತ್ತದೆ. ಹಿರಿಯ ನಾಗರಿಕರನ್ನು ನಿರ್ಲಕ್ಷಿಸುವ ಸಮಾಜ ನೈತಿಕತೆಯ ಕೇಂದ್ರದಿಂದ ದೂರ ಆಗುತ್ತಿರುತ್ತದೆ. ತನ್ನ ತಳಹದಿ ಭದ್ರಪಡಿಸಿದವರ ಬಗ್ಗೆ ಬೆಂಗಳೂರು ಮಹಾನಗರ ಕೃತಘ್ನವಾಗಬಾರದು. ಹಿರಿಯ ನಾಗರಿಕರನ್ನು ಗೌರವ, ಅನುಭೂತಿಯಿಂದ ನಡೆಸಿಕೊಳ್ಳುವುದರ ಜೊತೆಗೆ, ಅವರ ಸಂಧ್ಯಾಕಾಲ ನೆಮ್ಮದಿ ಹಾಗೂ ಘನತೆಯಿಂದ ಕೂಡಿರುವಂತೆ ನೋಡಿಕೊಳ್ಳಬೇಕಾದುದು ಮಹಾನಗರ ನಿರ್ವಹಿಸಲೇಬೇಕಾದ ಕರ್ತವ್ಯವಾಗಿದೆ.

ಎಥೆನಾಲ್ ಮಿಶ್ರಣ: ಇಂಧನ ಕ್ರಾಂತಿ?



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ವಾಹನಗಳಿಗೆ ಬಳಸುವ ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಸಂಯುಕ್ತವನ್ನು ಸೇರಿಸುತ್ತಿರುವುದರ ಕುರಿತು ಚರ್ಚೆಗಳು ನಡೆಯುತ್ತಿವೆ. ಪೆಟ್ರೋಲ್‌ನಿಂದ ಓಡುವ ಎಲ್ಲಾ ವಾಹನಗಳು ಶೇ 20ರಷ್ಟು ಎಥೆನಾಲ್‌ಯುಕ್ತ ಇಂಧನ ಬಳಸಬೇಕು ಎಂಬ ಕೇಂದ್ರ ಸರ್ಕಾರದ ನಿಯಮವನ್ನು ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಂಡಿದೆ. ಆದರೆ, ಎಥೆನಾಲ್ ಸಂಯುಕ್ತ ಮಿಶ್ರಿತ ಪೆಟ್ರೋಲ್‌ನಿಂದ ತಮ್ಮ ವಾಹನಗಳ ಇಂಧನ ಕ್ಷಮತೆ ಕುಸಿದಿದೆ ಎಂದು ಜನ ದೂರುತ್ತಿದ್ದಾರೆ.

ಪೆಟ್ರೋಲ್‌ನಲ್ಲಿ ಶೇ 20ರಷ್ಟು ಎಥೆನಾಲ್ ಸಂಯುಕ್ತವನ್ನು ಸೇರಿಸುವುದರಿಂದ ಬಳಕೆದಾರರಿಗೆ ಸದ್ಯಕ್ಕೆ ಅನನುಕೂಲ ಆಗುತ್ತಿದ್ದರೂ, ಅದರಿಂದ ಅನುಕೂಲಗಳೂ ಇವೆ. ಇಲ್ಲಿಯವರೆಗೆ ವಾಹನಗಳಲ್ಲಿ ತುಂಬಿಸುತ್ತಿದ್ದ ಪೆಟ್ರೋಲ್‌ನಲ್ಲಿ ಶೇ 10ರಷ್ಟು ಎಥೆನಾಲ್ ಇರುತ್ತಿತ್ತು. ಈಗ ಅದರ ಪ್ರಮಾಣ ದುಪ್ಪಟ್ಟಾಗಿದೆ. ಇದರಿಂದ ದೇಶದ ಆರ್ಥಿಕತೆ ಮೇಲಿನ ಹೊರೆ ತಕ್ಕಮಟ್ಟಿಗೆ ಕಡಿಮೆ ಆಗುತ್ತದೆ ಮತ್ತು ವಾತಾವರಣಕ್ಕೆ ಸೇರುವ ಇಂಗಾಲದ ಡೈಆಕ್ಸೈಡ್ ಪ್ರಮಾಣವೂ ತಗ್ಗುತ್ತದೆ. ಅಂದರೆ, ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಹೆಚ್ಚಿನ ಎಥೆನಾಲ್‌ಯುಕ್ತ ಪೆಟ್ರೋಲ್ ಮಹತ್ವದ ಪಾತ್ರ ವಹಿಸುತ್ತದೆ. ಈ ಅನುಕೂಲಕ್ಕೆ ಹೋಲಿಸಿದರೆ, ಪ್ರಸ್ತುತ ಬಳಕೆದಾರರು ಎದುರಿಸುತ್ತಿರುವ ತೊಂದರೆಗಳು ಅನಿವಾರ್ಯವಾಗಿ ಸಹಿಸಿಕೊಳ್ಳಬೇಕಾದವು ಎನ್ನಿಸುತ್ತದೆ. ಅಲ್ಲದೆ, ಎಥೆನಾಲ್‌ಗೆ ಪೂರಕವಾದ ತಂತ್ರಜ್ಞಾನವನ್ನು ವಾಹನಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ಸದ್ಯದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

‘ರಾಷ್ಟ್ರೀಯ ಜೈವಿಕ ಇಂಧನ ನೀತಿ–2018’ರ ಪ್ರಕಾರ, ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಸೇರಿಸುವ ಯೋಜನೆ, 2030ರ ವೇಳೆಗೆ ಜಾರಿಗೆ ಬರಬೇಕಿತ್ತು. ಇದಕ್ಕಾಗಿ ರೋಡ್ ಮ್ಯಾಪ್ ತಯಾರಿಸಿದ ಕೇಂದ್ರ ಸರ್ಕಾರದ ತಜ್ಞ ಸಮಿತಿಯು 2021ರಲ್ಲಿ ವರದಿ ನೀಡಿ, 2022ಕ್ಕೆ ‘ಇ–10’ ಮತ್ತು 2023–25ರ ಅವಧಿಯಲ್ಲಿ ‘ಇ–20’ ಮಿಶ್ರಿತ ಇಂಧನ ಬಳಸಲು ಶಿಫಾರಸು ಮಾಡಿತ್ತು. ಇದಕ್ಕೆ ಪೂರಕವಾಗಿ, ಮಾರುಕಟ್ಟೆಗೆ ಬರುವ ಹೊಸ ವಾಹನಗಳು ಶೇ 20 ಎಥೆನಾಲ್ ಬಳಸಿಕೊಂಡು ಓಡುವ ಕ್ಷಮತೆ ಪಡೆದಿರಬೇಕು ಎಂದೂ ಹೇಳಿತ್ತು. 2070ರ ಶೂನ್ಯ ಇಂಗಾಲ ಉತ್ಸರ್ಜನೆ ಗುರಿ ತಲುಪಲು ಇದು ಅನಿವಾರ್ಯ ಎಂದು ಸಮಿತಿ ನಿರ್ಧರಿಸಿತ್ತು

ಎಥೆನಾಲ್ ಒಂದು ಬಗೆಯ ಆಲ್ಕೋಹಾಲ್. ಪ್ರಮುಖವಾಗಿ ಕಬ್ಬು, ಮೆಕ್ಕೆಜೋಳ ಮತ್ತು ಅಕ್ಕಿಯಂತಹ ಬೆಳೆಗಳಿಂದ ತಯಾರಿಸಲಾಗುವ ಜೈವಿಕ ಇಂಧನ. ರಸಾಯನ ವಿಜ್ಞಾನದಲ್ಲಿ ಇದನ್ನು ಈಥೈಲ್ ಆಲ್ಕೋಹಾಲ್ ಎನ್ನುತ್ತೇವೆ. ಕಾರು ಮತ್ತು ಬೈಕುಗಳಿಗೆ ತುಂಬಿಸುವ ಪೆಟ್ರೋಲ್‌ಗೆ ಇದನ್ನು ಸೇರಿಸುವುದರಿಂದ, ಇಂಧನ ಕ್ಷಮತೆ ಕಡಿಮೆ ಆಗಿರುವುದು ನಿಜ. 2023ಕ್ಕೂ ಮುಂಚೆ ತಯಾರಾದ ವಾಹನಗಳು ಎಥೆನಾಲ್‌ಯುಕ್ತ ಇಂಧನ ಬಳಕೆಗೆ ಯೋಗ್ಯವಲ್ಲ ಎಂಬುದೂ ಸಮಸ್ಯೆಯಾಗಿ ಪರಿಣಮಿಸಿದೆ.

ಎಥೆನಾಲ್ ಮಿಶ್ರಿತ ಪೆಟ್ರೋಲ್ ಕಡಿಮೆ ದಹನ ಶಕ್ತಿಯನ್ನು ಹೊಂದಿರುವುದರಿಂದ, ಮೈಲೇಜ್‌ನಲ್ಲಿ ಕುಸಿತವಾಗುತ್ತದೆ ಎಂದು ಭಾರತೀಯ ಆಟೋಮೊಬೈಲ್ ತಯಾರಕರ ಸೊಸೈಟಿ ಹೇಳಿದೆ. ಎಥೆನಾಲ್ ಬಳಕೆಗೆ ಯೋಗ್ಯವಿರುವ ನಾಲ್ಕು ಚಕ್ರ ವಾಹನಗಳ ಇಂಧನ ಕ್ಷಮತೆ ಶೇ 6ರಿಂದ 8ರಷ್ಟು ಮತ್ತು ದ್ವಿಚಕ್ರ ವಾಹನಗಳ ಮೈಲೇಜ್ ಶೇ 3ರಿಂದ 4ರಷ್ಟು ಕಡಿಮೆಯಾಗಿದೆ. ಈ ವಾಹನಗಳು ಶೇ 5ರಿಂದ 10ರಷ್ಟು ಎಥೆನಾಲ್ ಬಳಕೆಗೆ ಸೂಕ್ತವಾಗಿದ್ದವು ಎನ್ನಲಾಗಿದೆ. ಇದ್ದಕ್ಕಿದ್ದಂತೆ ಶೇ 20ರಷ್ಟು ಎಥೆನಾಲ್‌ಯುಕ್ತ ಇಂಧನ ಕಡ್ಡಾಯದ ಸರ್ಕಾರದ ಕ್ರಮದಿಂದ ಕೋಟ್ಯಂತರ ವಾಹನ ಸವಾರರು ಆತಂಕದಲ್ಲಿದ್ದಾರೆ.

ಎಥೆನಾಲ್ ಬಳಕೆಯಿಂದ ಶೇ 65ರಷ್ಟು ಇಂಗಾಲದ ಡೈಆಕ್ಸೈಡ್ ಉತ್ಸರ್ಜನೆ ಕಡಿಮೆ ಆಗುತ್ತದೆ ಎಂದು ನೀತಿ ಆಯೋಗ ಹೇಳುತ್ತದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಪ್ರಕಾರ, ಶೇ 20 ಎಥೆನಾಲ್ ಬಳಕೆಯಿಂದಾಗಿ ವಾರ್ಷಿಕ ಸುಮಾರು 10 ದಶಲಕ್ಷ ಟನ್‌ಗಳಷ್ಟು ಶಾಖವರ್ಧಕ ಅನಿಲಗಳ ಹೊರಸೂಸುವಿಕೆ ಕಡಿಮೆ ಮಾಡಬಹುದು. ನಿವ್ವಳ ಶೂನ್ಯ ಹೊರಸೂಸುವಿಕೆ (ನೆಟ್ ಜೀರೊ ಎಮಿಷನ್) ಗುರಿಯನ್ನು ಇಟ್ಟುಕೊಂಡಿರುವ ನಾವು, ಎಥೆನಾಲ್ ಬಳಕೆಗೆ ಮುಂದಾಗಿರುವುದು ಹಲವರ ಮೆಚ್ಚುಗೆಗೆ ಪಾತ್ರವಾಗಿದೆ

> ಪೆಟ್ರೋಲ್‌ನಲ್ಲಿ ಶೇ 20ರಷ್ಟು ಎಥೆನಾಲ್ ಬಳಕೆಯಿಂದ, ದೇಶದ ಆರ್ಥಿಕತೆಗೆ ಹಾಗೂ ಪರಿಸರಕ್ಕೆ ದೊಡ್ಡ ಲಾಭವಾಗುವ ನಿರೀಕ್ಷೆಯಿದೆ. ಹೆಚ್ಚಿನ ಪ್ರಮಾಣದ ಎಥೆನಾಲ್ ಬಳಕೆ ಸಾಂಪ್ರದಾಯಿಕ ಇಂಧನಗಳ ಮೇಲಿನ ಒತ್ತಡ ಕಡಿಮೆ ಮಾಡುವುದರ ಜೊತೆಗೆ, ಇಂಗಾಲದ ಹೊರಹೊಮ್ಮುವಿಕೆ ಪ್ರಮಾಣಕ್ಕೂ ಕಡಿವಾಣ ಹಾಕಬಲ್ಲದು.

ಭಾರತವು ತನ್ನ ಕಚ್ಚಾ ತೈಲ ಅಗತ್ಯಗಳಿಗಾಗಿ ಶೇ 85ಕ್ಕೂ ಹೆಚ್ಚು ಪ್ರಮಾಣದಲ್ಲಿ ಆಮದಿನ ಮೇಲೆ ಅವಲಂಬಿತವಾಗಿದೆ. ಇದರಿಂದ ದೇಶದ ವಿದೇಶಿ ವಿನಿಮಯ ಮೀಸಲು ತಗ್ಗುತ್ತದೆ ಮತ್ತು ರೂಪಾಯಿ ಮೌಲ್ಯ ಕುಸಿಯುತ್ತದೆ. ಎಥೆನಾಲ್ ಮಿಶ್ರಣವು ತೈಲ ಆಮದನ್ನು ಕಡಿಮೆ ಮಾಡಲು ನೇರವಾಗಿ ಸಹಾಯ ಮಾಡುತ್ತದೆ. ಪ್ರತಿ ವರ್ಷ ಕೋಟ್ಯಂತರ ರೂಪಾಯಿಗಳ ಆಮದು ವೆಚ್ಚ ಕಡಿಮೆಯಾಗಿ, ದೇಶದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿಗಳ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ ಮತ್ತು ಇಂಧನ ಭದ್ರತೆ ಹೆಚ್ಚಾಗುತ್ತದೆ. ಇದು ಪರಿಸರವನ್ನು ರಕ್ಷಿಸುವುದರ ಜೊತೆಗೆ, ರೈತರಿಗೆ ಆರ್ಥಿಕ ಶಕ್ತಿಯನ್ನು ನೀಡುವ ಶಕ್ತಿ ಪಡೆದಿದೆ. ‘ಇ–20’ ಗುರಿ ಸಾಧನೆಯಿಂದ 2024ರಿಂದೀಚೆಗೆ ಎಥೆನಾಲ್ ಕಾರ್ಯಕ್ರಮದಿಂದ ದೇಶಕ್ಕೆ ಸುಮಾರು ₹1.44 ಲಕ್ಷ ಕೋಟಿಗೂ ಹೆಚ್ಚು ವಿದೇಶಿ ವಿನಿಮಯ ಉಳಿದಿದೆ.

ತೈಲ ಆಮದಿನ ವೆಚ್ಚವು ದೇಶದ ಒಟ್ಟು ರಫ್ತು ಆದಾಯಕ್ಕಿಂತ ಹೆಚ್ಚಾದಾಗ ಚಾಲ್ತಿ ಖಾತೆ ಕೊರತೆ (ಸಿಎಡಿ) ಗಣನೀಯವಾಗಿ ಹೆಚ್ಚಾಗುತ್ತದೆ. ಕಚ್ಚಾ ತೈಲ ಬೆಲೆ ಏರಿಕೆಯಾದಾಗ, ಸಾರಿಗೆ ವೆಚ್ಚ ಹೆಚ್ಚಾಗಿ– ಆಹಾರ, ಸರಕು ಸಾಗಣೆ ಮತ್ತು ಸೇವೆಗಳ ಬೆಲೆಗಳು ಏರಿಕೆಗೊಂಡು, ದೇಶದಲ್ಲಿ ಹಣದುಬ್ಬರ ಹೆಚ್ಚಾಗುತ್ತದೆ. ಈ ಆರ್ಥಿಕ ಹೊರೆಯಿಂದ ಪಾರಾಗಲು ಮತ್ತು ಇಂಧನ ಭದ್ರತೆಯನ್ನು ಸಾಧಿಸಲು ಎಥೆನಾಲ್ ಮಿಶ್ರಣ ಆಪತ್ಬಾಂಧವನಂತೆ ಕಾಣಿಸುತ್ತಿದೆ.

ಎಥೆನಾಲ್ ಮಿಶ್ರಣದಿಂದ ಹಳೆಯ ವಾಹನಗಳ ಎಂಜಿನ್‌ಗಳು ಮತ್ತು ಭಾಗಗಳು ಹಾನಿಗೊಳಗಾಗುತ್ತವೆ. ರಬ್ಬರ್, ಪ್ಲಾಸ್ಟಿಕ್ ಮತ್ತು ಕೆಲವು ಲೋಹದ ಘಟಕಗಳನ್ನು ಎಥೆನಾಲ್ ವೇಗವಾಗಿ ಸವೆಸುತ್ತದೆ. ‘ಇ–20’ ಇಂಧನಕ್ಕೆ ಹೊಂದಿಕೊಳ್ಳುವಂತೆ ವಾಹನ ತಯಾರಕರು ಹೊಸ ಎಂಜಿನ್‌ಗಳನ್ನು ವಿನ್ಯಾಸಗೊಳಿಸುವುದು ಸದ್ಯದ ತುರ್ತುಗಳಲ್ಲೊಂದು. ಸುಧಾರಿತ ಎಂಜಿನ್ ತಂತ್ರಜ್ಞಾನ (ಫ್ಲೆಕ್ಸ್–ಫ್ಯೂಯೆಲ್ ಎಂಜಿನ್‌ಗಳು) ಅಳವಡಿಕೆಯಿಂದ ಈ ಸಮಸ್ಯೆಯನ್ನು ನಿವಾರಿಸಬಹುದು. ಅಮೆರಿಕ, ಬ್ರೆಜಿಲ್ ಮತ್ತು ಕೆನಡಾಗಳಲ್ಲಿ ‘ಇ–20’ರಿಂದ ‘ಇ–100’ವರೆಗಿನ ಎಥೆನಾಲ್ ಬಳಸಿ ಓಡುವ ವಾಹನಗಳಿವೆ. ಟಿವಿಎಸ್ ಕಂಪನಿಯು ಪುಣೆಯ ತನ್ನ ಘಟಕದಲ್ಲಿ ‘ಇ–80’ರಿಂದ ‘ಇ–100’ ಬಳಸಿ ಓಡುವ ‘ಅಪಾಚೆ’ ಹೆಸರಿನ ದ್ವಿಚಕ್ರ ವಾಹನ ತಯಾರಿಸುವಲ್ಲಿ ಯಶಸ್ವಿಯಾಗಿದೆ.

ಎಥೆನಾಲ್ ಉತ್ಪಾದನೆಗೆ ಧಾನ್ಯಗಳನ್ನು ಬಳಸುವುದರಿಂದ ಆಹಾರ ಭದ್ರತೆಗೆ ಧಕ್ಕೆ ಬರುತ್ತದೆ ಮತ್ತು ಆಹಾರ ಬೆಳೆಗಳಿಗೆ ಮೀಸಲಾದ ಜಮೀನು ಒತ್ತುವರಿಯಾಗುತ್ತದೆ ಎಂಬ ಅಭಿಪ್ರಾಯವಿದೆ. ಕಬ್ಬು ಮತ್ತು ಮೆಕ್ಕೆಜೋಳದಂತಹ ಬೆಳೆಗಳ ಅಗತ್ಯ ಹೆಚ್ಚಾದಾಗ, ಅವುಗಳ ಕೃಷಿಗೆ ಹೆಚ್ಚಿನ ಪ್ರಮಾಣದ ನೀರು ಬೇಕಾಗುತ್ತದೆಂಬ ಆತಂಕವೂ ಇದೆ. ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯ ದತ್ತಾಂಶವು ಈ ಹೇಳಿಕೆಯನ್ನು ನಿರಾಕರಿಸುತ್ತದೆ. ಧಾನ್ಯ ಆಧಾರಿತ ಎಥೆನಾಲ್ ಉತ್ಪಾದನೆಯಲ್ಲಿ ಹೆಚ್ಚುವರಿ ಮತ್ತು ಮಾನವ ಬಳಕೆಗೆ ಅನರ್ಹವಾದ, ಹಾನಿಗೊಳಗಾದ ಆಹಾರೇತರ ಧಾನ್ಯಗಳನ್ನು ಬಳಸಲಾಗುತ್ತದೆ. ಇದರಿಂದ ಆಹಾರ ತ್ಯಾಜ್ಯ ಕಡಿಮೆಯಾಗುತ್ತದೆ ಮತ್ತು ಆಹಾರ ಲಭ್ಯತೆಗೆ ಧಕ್ಕೆಯಾಗುವುದಿಲ್ಲ. ಆಹಾರ ಧಾನ್ಯಗಳನ್ನು ಇಂಧನ ತಯಾರಿಕೆಗೆ ಬಳಸಿಯೂ ಭಾರತ ಧಾನ್ಯಗಳ ನಿವ್ವಳ ರಫ್ತುದಾರನಾಗಿದ್ದು, ಅಕ್ಕಿಯ ರಫ್ತಿನ ಪ್ರಮಾಣವು ಒಟ್ಟು ಉತ್ಪಾದನೆಯ ಶೇ 12ರಷ್ಟಿದೆ. ಕಳೆದೆರಡು ವರ್ಷಗಳಲ್ಲಿ ಭಾರತದ ಒಟ್ಟು ಕೃಷಿ ಪ್ರದೇಶವು 18 ದಶಲಕ್ಷ ಹೆಕ್ಟೇರ್‌ನಷ್ಟು ಹೆಚ್ಚಾಗಿದೆ.

ಪ್ರಸ್ತುತ ಧಾನ್ಯ ಆಧಾರಿತ ಎಥೆನಾಲ್ ಉತ್ಪಾದನೆ ಶೇ 51ರಷ್ಟಿದೆ. ದೇಶದ 90,000 ಪೆಟ್ರೋಲ್ ಬಂಕ್‌ಗಳಲ್ಲಿ ‘ಇ–20’ ಇಂಧನ ಲಭ್ಯವಿದೆ. ಎಥೆನಾಲ್ ಉತ್ಪಾದನೆಗೆ ಕಬ್ಬಿನ ಮೇಲಿನ ಅವಲಂಬನೆ ಕಡಿಮೆಯಾಗಿ, ಉತ್ಪಾದನಾ ವೆಚ್ಚವು ಕಡಿಮೆಯಾಗಿದೆ. ಆದರೆ, ಪೆಟ್ರೋಲ್ ದರ ಮಾತ್ರ 10 ಪೈಸೆಯೂ ಕಡಿಮೆಯಾಗಿಲ್ಲ.

ಕಬ್ಬು, ಜೋಳದಂತಹ ಬೆಳೆಗಳನ್ನು ಎಥೆನಾಲ್ ಉತ್ಪಾದನೆಗೆ ಬಳಸುವುದರಿಂದ, ರೈತರಿಗೆ ತಮ್ಮ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಸಿಗುತ್ತದೆ. ಇದು ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿ, ಗ್ರಾಮೀಣ ಆರ್ಥಿಕತೆಗೆ ಚೈತನ್ಯ ತುಂಬಿ, ಕೃಷಿಕರ ಕಲ್ಯಾಣಕ್ಕೆ ಮತ್ತು ಆದಾಯ ಹೆಚ್ಚಳಕ್ಕೆ ಕೊಡುಗೆ ನೀಡುತ್ತದೆ. ಭಾರತದ ವಾರ್ಷಿಕ ಧಾನ್ಯ ಉತ್ಪಾದನೆಯು ಸರಿಸುಮಾರು 3,000 ಲಕ್ಷ ಟನ್‌ಗಳಷ್ಟಿದ್ದರೆ, ದೇಶೀಯ ಬಳಕೆ ಸುಮಾರು 2,000 ಲಕ್ಷ ಟನ್‌ಗಳಷ್ಟಿದೆ. ಈ ಹೆಚ್ಚುವರಿಯು, ಬಳಕೆ ಮತ್ತು ಎಥೆನಾಲ್ ಉತ್ಪಾದನೆ ಎರಡಕ್ಕೂ ಸಾಕಾಗುತ್ತದೆ.

ಪೆಟ್ರೋಲ್‌ಗೆ ಶೇ 20 ಎಥೆನಾಲ್ ಮಿಶ್ರಣ ಮಾಡುವ ಸರ್ಕಾರದ ನಿರ್ಧಾರವು ದೂರದೃಷ್ಟಿಯುಳ್ಳ ಕ್ರಮವಾಗಿದ್ದು, ಪಳೆಯುಳಿಕೆ ಇಂಧನಗಳ ಮೇಲಿನ ಭಾರತದ ಅವಲಂಬನೆಯನ್ನು ಕಡಿಮೆ ಮಾಡುವತ್ತ ಇಟ್ಟಿರುವ ಪ್ರಮುಖ ಹೆಜ್ಜೆಯಾಗಿದೆ. ಈ ಬದಲಾವಣೆ ಯಶಸ್ವಿ ಆಗಬೇಕಾದರೆ, ಮೈಲೇಜ್ ಕಡಿತ ಮತ್ತು ಹಳೆಯ ವಾಹನಗಳ ‘ಇ–20’ ಹೊಂದಾಣಿಕೆಯ ಸವಾಲುಗಳನ್ನು ವಿಳಂಬವಿಲ್ಲದೆ ಪರಿಹರಿಸಬೇಕು. ಹಾಗೆಯೇ, ಆಹಾರ ಮತ್ತು ನೀರಿನ ಸಂಪನ್ಮೂಲಗಳ ಮೇಲೆ ವ್ಯತಿರಿಕ್ತ ಪರಿಣಾಮ ಆಗದಂತೆ ಎಥೆನಾಲ್ ಉತ್ಪಾದನಾ ನೀತಿಗಳನ್ನು ಸರ್ಕಾರ ರೂಪಿಸಬೇಕು. ಒಟ್ಟಿನಲ್ಲಿ, ದೂರಗಾಮಿ ಪರಿಣಾಮಗಳನ್ನುಳ್ಳ ಈ ಇಂಧನ ಕ್ರಾಂತಿಯು ಭಾರತಕ್ಕೆ ಬಹುದೊಡ್ಡ ಲಾಭ ತರಬಲ್ಲದು. ಆದರೆ, ಪೆಟ್ರೋಲ್‌ನಲ್ಲಿ ಹೆಚ್ಚಿನ ಎಥೆನಾಲ್ ಬಳಕೆಗೆ ಸಂಬಂಧಿಸಿದ ನೀತಿಯಲ್ಲಿ ಸರ್ಕಾರ ಸಮತೋಲನ ಕಾಪಾಡಿಕೊಳ್ಳುವುದು ಹಾಗೂ ಬಳಕೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅಗತ್ಯ.



ವಾಚಕರ ವಾಣಿ

ನಿರುದ್ಯೋಗ ತಾಂಡವ: ಸರ್ಕಾರಕ್ಕೆ ನಿದ್ರೆ?

ಭಾರತದಲ್ಲಿ ನಿರುದ್ಯೋಗದ ಪ್ರಮಾಣ ಶೇ 7.6 ತಲುಪಿದೆ. ಪ್ರತಿ ವರ್ಷ ಒಂದೂವರೆ ಕೋಟಿ ಯುವಜನ ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸುತ್ತಾರೆ. ಆದರೆ, ಕೇವಲ 70 ಲಕ್ಷ ಉದ್ಯೋಗಗಳು ಮಾತ್ರ ಸೃಷ್ಟಿಯಾಗುತ್ತಿವೆ. ಇಷ್ಟೊಂದು ತೀವ್ರ ಸಮಸ್ಯೆ ಇರುವ ಸಂದರ್ಭದಲ್ಲಿ ಸರ್ಕಾರ ಏನು ಮಾಡುತ್ತಿದೆ? ಸ್ಕಿಲ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ, ಮೇಕ್ ಇನ್ ಇಂಡಿಯಾ ಯೋಜನೆಗಳ ಫಲಿತಾಂಶವಾದರೂ ಏನು?

ಯುವಶಕ್ತಿ ದೇಶದ ಭವಿಷ್ಯ. ಸರ್ಕಾರದ ವಿಳಂಬ ಹಾಗೂ ಪರಿಣಾಮವಿಲ್ಲದ ಯೋಜನೆಗಳು ಯುವಜನರ ಕನಸುಗಳನ್ನು ಕಮರಿಸುತ್ತಿವೆ. ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ತಕ್ಷಣವೇ ನೈಜ ಉದ್ಯೋಗಾವಕಾಶಗಳ ಸೃಷ್ಟಿಗೆ ಸರ್ಕಾರ ಕ್ರಮ ತೆಗೆದುಕೊಳ್ಳಲಿ.

ಕಾವ್ಯ ಕೆ., ಕರಿರಾಮನಹಳ್ಳಿ

ಪರಿಸರ ಕಾಳಜಿ ಅರಣ್ಯರೋದನ ಆಗದಿರಲಿ

ಅಳಿವಿನ ಅಂಚಿನಲ್ಲಿರುವ ರಣಹದ್ದು ಕುರಿತಂತೆ ಅಖಿಲೇಶ್ ಚಿಪ್ಪಳಿ ಅವರ ಪ್ರಶ್ನೆ (ಪ್ರ.ಜಾ., ಅ. 7) ಸಹಜವಾಗಿಯೇ ನಮ್ಮ ಕಾಲಘಟ್ಟದ ಹಳವಂಡವಾಗಿದೆ. ಹಳ್ಳಿಗಳೆಲ್ಲ ನಗರಗಳತ್ತ ಮುಖ ಮಾಡಿರುವ ಹೊತ್ತಿನಲ್ಲಿ, ಸಮತೋಲನ ಸಾಧಿಸಲು ಇದ್ದ ಜೀವಜಗತ್ತಿನ ನೈಸರ್ಗಿಕ ಕೊಂಡಿಗಳು ಒಂದೊಂದಾಗಿ ಕಳಚುತ್ತಿರುವ ಸಂದರ್ಭದಲ್ಲಿ, ಪರಿಸರವಾದಿಗಳ ಕಾಳಜಿ ಅರಣ್ಯರೋದನ ಆಗಬಾರದು. ಹಾಗಾಗದಂತೆ ನೋಡಿಕೊಳ್ಳಬೇಕಿರುವುದು ನಮ್ಮ ಮುಂದಿರುವ ದೊಡ್ಡ ಸವಾಲು.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಔಷಧ ಸುರಕ್ಷತೆಯ ಕಡೆಗಣನೆ ಬೇಡ

ಮಧ್ಯಪ್ರದೇಶದ ಛಿಂದ್ವಾರಾ ಮತ್ತು ರಾಜಸ್ಥಾನದಲ್ಲಿ ಕಲುಷಿತ ಕೆಮ್ಮಿನ ಸಿರಪ್‌ಗಳನ್ನು ಸೇವಿಸಿ ಹಲವು ಮಕ್ಕಳು ಸಾವಿಗೀಡಾದ ಸುದ್ದಿ ಆಘಾತಕಾರಿ. ಭಾರತವು ‘ಜಗತ್ತಿನ ಔಷಧಾಲಯ’ ಎಂದು ಹೇಳುತ್ತೇವೆ. ಆದರೆ, ಕಳಪೆ ಗುಣಮಟ್ಟದ ಔಷಧಗಳು ದೇಶದೊಳಗೇ ಮಾರಾಟವಾಗುತ್ತಿವೆ ಮತ್ತು ಮಕ್ಕಳ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿವೆ. ಇದು, ನಮ್ಮ ಔಷಧ ನಿಯಂತ್ರಣ ವ್ಯವಸ್ಥೆಯ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಈ ಘಟನೆ ದೇಶದ ಎಲ್ಲ ಪೋಷಕರಲ್ಲಿ ಭಯ ಮತ್ತು ಆತಂಕವನ್ನು ಮೂಡಿಸಿದೆ. ಸರ್ಕಾರ ಮತ್ತು ಆರೋಗ್ಯ ಇಲಾಖೆಗಳು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದು ಅನಿವಾರ್ಯ.

ಅಜಯ್ ರವಿರತ್ನ, ತುಮಕೂರು

‘ನಮ್ಮ ಮೆಟ್ರೊ’ – ಹೆಸರಷ್ಟೇ ಅಲ್ಲ, ಪರಂಪರೆ!

ಬೆಂಗಳೂರು ಮೆಟ್ರೊಕ್ಕೆ ನೀಡಲಾಗಿರುವ ‘ನಮ್ಮ ಮೆಟ್ರೊ’ ಎಂಬ ಹೆಸರು ಒಂದು ಸಾರಿಗೆ ವ್ಯವಸ್ಥೆಯ ಹೆಸರಷ್ಟೇ ಅಲ್ಲ, ಕನ್ನಡದ ಸಾಂಸ್ಕೃತಿಕ ಪರಂಪರೆಯ ಪ್ರತೀಕ. ‘ನಮ್ಮ’ ಎಂಬ ಪದ, ಒಂದು ಸಾಮೂಹಿಕ ಅಸ್ತಿತ್ವ. ಈ ಪದವು ಸ್ವಾಮ್ಯತೆಯ ಅನುಭವ ಮಾತ್ರವಲ್ಲ; ಒಗ್ಗೂಡಿಸುವ ಶಕ್ತಿಯನ್ನು ಹೊಂದಿರುವ ಪದ. ಇದು ಸಮೂಹವನ್ನು ಸಂಕೇತಿಸುತ್ತದೆ.

ಈಗಾಗಲೇ ಹಲವಾರು ಮೆಟ್ರೊ ನಿಲ್ದಾಣಗಳಿಗೆ ಮಹಾನ್ ವ್ಯಕ್ತಿಗಳ ಹೆಸರನ್ನು ಇಡುವ ಮೂಲಕ ‘ನಮ್ಮ ಮೆಟ್ರೊ’ ಅನನ್ಯತೆಯನ್ನು ಪಡೆದಿದೆ. ಪ್ರತಿದಿನವೂ ಸಾವಿರಾರು ಮಂದಿ ಪ್ರಯಾಣಿಕರು ಈ ಮೆಟ್ರೊದಲ್ಲಿ ಹಣ ಪಾವತಿಸಿ ಪ್ರಯಾಣಿಸುತ್ತಿದ್ದಾರೆ. ಇದು ಸಾರ್ವಜನಿಕರ ಸ್ವತ್ತು ಎಂಬ ಅನುಭವವನ್ನು ಅವರು ಪ್ರತಿ ಕ್ಷಣದಲ್ಲೂ ಅನುಭವಿಸುತ್ತಿದ್ದಾರೆ. ಜಗತ್ತಿನ ಇನ್ನೆಲ್ಲೆಡೆ ಸಾರಿಗೆ ವ್ಯವಸ್ಥೆಗಳಿಗೆ ಸಂಸ್ಥೆಗಳ ಅಥವಾ ವ್ಯಕ್ತಿಗಳ ಹೆಸರಿರಬಹುದು; ಆದರೆ ಇಲ್ಲಿ ಮಾತ್ರ ‘ನಮ್ಮ’ ಎಂಬುದು ಹೆಸರಲ್ಲ, ಆದರ್ಶವಾಗಿದೆ.

ಇತ್ತೀಚೆಗೆ ಮೆಟ್ರೊಗೆ ಬಸವಣ್ಣನವರ ಹೆಸರು ಇಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ತಿಳಿಸಿದ್ದಾರೆ. ಬಸವಣ್ಣನವರು ನಿಸ್ಸಂದೇಹವಾಗಿ ನಮ್ಮ ಹೆಮ್ಮೆ, ನಮ್ಮ ಮಾರ್ಗದರ್ಶಕರು. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ – ಕುವೆಂಪು, ವಿಶ್ವೇಶ್ವರಯ್ಯ, ಅಂಬೇಡ್ಕರ್ ಅವರಂತೆ ಬಸವಣ್ಣನವರೂ ‘ನಮ್ಮ’ ಎಂಬ ಅರ್ಥದೊಳಗೆ ಸೇರುತ್ತಾರೆ. ಅವರು ನಮ್ಮ ಸಂಸ್ಕೃತಿ, ನಮ್ಮ ಅಸ್ತಿತ್ವದ ಭಾಗ.

ಆದುದರಿಂದ, ಸರ್ಕಾರ ‘ನಮ್ಮ ಮೆಟ್ರೊ’ ಎಂಬ ಹೆಸರನ್ನೇ ಉಳಿಸಬೇಕು. ‘ನಮ್ಮ ಮೆಟ್ರೊ’ ಸದಾ ನಮ್ಮದಾಗಿರಲಿ.

ಡಿ. ರಾಮಾನಾಯಕ್, ಬೆಂಗಳೂರು

ಪ್ರಾರ್ಥನೆ

ಹಳೇ ಪ್ರಾರ್ಥನೆ:
ಸರ್ವೇ ಜನಾಃ
ಸುಖಿನೋ ಭವಂತು.
ಹೊಸ ರೋದನೆ:
Surveyಜನ
ಸುಖಿNo ಭಗವಂತೂ !
ಆರ್. ನಾಗರಾಜ್, ಗೊರೂರು

ವಿಐಪಿ ಸಂಸ್ಕೃತಿಗೆ ತಿಲಾಂಜಲಿ ಸ್ವಾಗತಾರ್ಹ

ಹಾಸನದಲ್ಲಿ ಈ ಬಾರಿಯ ಹಾಸನಾಂಬ ದೇವಿ ದರ್ಶನದ ಸಂದರ್ಭದಲ್ಲಿ ವಿಐಪಿ ಸಂಸ್ಕೃತಿಗೆ ಅವಕಾಶವಿಲ್ಲ ಎಂದು ಸಚಿವ ಕೃಷ್ಣಭೈರೇಗೌಡ ಹೇಳಿದ್ದಾರೆ. ಶಾಸಕರು, ನಟ-ನಟಿಯರು, ನ್ಯಾಯಾಧೀಶರು, ಮುಂತಾದ ಗಣ್ಯರನ್ನು ಸರ್ಕಾರಿ ವಾಹನದಲ್ಲೇ ಕರೆತಂದು ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದಿರುವುದು ಸ್ವಾಗತಾರ್ಹ. ಇದರಿಂದ, ನೂಕುನುಗ್ಗಲು ತಪ್ಪಿ ಕಾಲ್ತುಳಿತದಂತಹ ಅಹಿತಕರ ಘಟನೆಯ ಸಾಧ್ಯತೆ ಇಲ್ಲವಾಗಲಿದೆ. ಯಾವುದೇ ಅಹಿತಕರ ಘಟನೆ ಸಂಭವಿಸದೆ, ಹಾಸನಾಂಬ ದೇವಿಯ ದರ್ಶನ ಸುಸೂತ್ರವಾಗಿ ನಡೆಯವಂತಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಾಡದ ಹೂ

ಕೃತಜ್ಞತಾಭಾವ ಎಲ್ಲರದಾಗಲಿ



ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಮೀಕ್ಷಕರು ಬಂದಿದ್ದರು. ವಿದ್ಯೆ, ಕೆಲಸ, ನಿವೃತ್ತಿ ವೇತನ – ಸರ್ಕಾರವೇ ಕೊಟ್ಟಿದ್ದು. ಅದರ ಮೂಲಕ ಮನೆ, ಆಭರಣ ಖರೀದಿಸಿದ್ದು. ಬ್ಯಾಂಕ್‌ನಲ್ಲಿ ಖಾತೆ ಇದೆ. ಬೆಳಕು, ಶಕ್ತಿ ಕೂಡ ಸರ್ಕಾರವೇ ನೀಡುತ್ತಿರುವುದು. ಫಲಾನುಭವಿ ನಾನು. ಕೃತಜ್ಞತೆ ಸಲ್ಲಿಸಿದೆ. ಆದರೆ, ಎಷ್ಟು ಜನರಿಗೆ ಈ ಅವಕಾಶ ಇದೆ? ಎಲ್ಲರಿಗೂ ದೊರಕಲಿ.

ಸವಿತಾ ನಾಗಭೂಷಣ, ಕವಯಿತ್ರಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳ ಮೇಲಿನ ಶೂ ದಾಳಿಯು ಪ್ರತಿಯೊಬ್ಬ ಭಾರತೀಯರನ್ನೂ ಕೆರಳಿಸಿದೆ ಎಂದಿದ್ದಾರೆ ಪ್ರಧಾನಿ. ಇದು, ವ್ಯಕ್ತಿಯೊಬ್ಬರ ಮೇಲೆ ನಡೆಸಿದ ದಾಳಿಯಲ್ಲ, ಮೋದಿಯವರೇ ಪಾಲಿಸಿ ಪೋಷಿಸುತ್ತಿರುವ ವಿಚಾರಧಾರೆಯು ಸಂವಿಧಾನದ ಮೇಲೆ ನಡೆಸಿದ ದಾಳಿ. ಮೋದಿಯವರು ನಿಜಕ್ಕೂ ಕೆರಳುವುದಿದ್ದರೆ ತಾವು ಪ್ರತಿನಿಧಿಸುವ ವಿಚಾರಧಾರೆಯ ವಿರುದ್ಧ ಕೆರಳಬೇಕು.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 8-10-2000

• ಆಯುಧಪೂಜೆ ಪ್ರಯುಕ್ತ, 2000 ಇಸವಿಯ ಅಕ್ಟೋಬರ್ 7ರ ಶನಿವಾರ ಪತ್ರಿಕಾ ಕಾರ್ಯಾಲಯಕ್ಕೆ ಬಿಡುವಿತ್ತು. ಹೀಗಾಗಿ, ಅ. 8ರ ಭಾನುವಾರದ ಸಂಚಿಕೆ ಪ್ರಕಟವಾಗಿರಲಿಲ್ಲ.

75 ವರ್ಷಗಳ ಹಿಂದೆ

ಭಾನುವಾರ, 8-10-1950

• **ಸ್ಮಾರಕಗಳ ನಿರ್ಮಾಣಕ್ಕಿಂತಲೂ ತತ್ವಾನುಷ್ಠಾನವೇ ನೈಜ ಸ್ಮರಣೆ**

ಹೈದರಾಬಾದ್, ಅ.7– ‘ಮಹಾತ್ಮ ಗಾಂಧಿ ಅವರ ತತ್ವಗಳನ್ನು ಉಗ್ರನಿಷ್ಠೆಯಿಂದ ಅನುಸರಿಸುವುದರಿಂದ ಮಾತ್ರವೇ ರಾಷ್ಟ್ರ ನಿರ್ಮಾಪಕನಿಗೆ ತಕ್ಕ ಗೌರವ ಸಲ್ಲಿಸಲು ಸಾಧ್ಯ. ಸ್ಮಾರಕಗಳು ಭಾವಿ ಜನಾಂಗಕ್ಕೆ, ಮಹಾಪುರುಷ ರಾಷ್ಟ್ರಕ್ಕೆ ಸಲ್ಲಿಸಿದ ಮಹಾ ಕಾಣಿಕೆಯನ್ನು ನೆನಪು ಮಾಡಬಲ್ಲವು ಅಷ್ಟೆ’ ಎಂಬುದಾಗಿ ಸರದಾರ್ ವಲ್ಲಭಭಾಯ್ ಪಟೇಲರು ಇಂದು ಗಾಂಧಿಭವನದ ಶಂಕುಸ್ಥಾಪನೆ ಮಾಡುತ್ತ ನುಡಿದರು.

• **ವಿಮಾನ ಕಾರ್ಖಾನೆಯ ಮುಷ್ಕರದ ಮುಕ್ತಾಯ**

ಬೆಂಗಳೂರು, ಅ. 7– ಇಂದು ಸಂಜೆ ನರಹರಿರಾಯರ ಗುಡ್ಡದಲ್ಲಿ ನಡೆದ ವಿಮಾನ ಕಾರ್ಖಾನೆ ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆಯಲ್ಲಿ ಕಾರ್ಖಾನೆಯ ಕೆಲಸಗಾರರು ಕೆಲಸಕ್ಕೆ ವಾಪಸಾಗಬೇಕೆಂಬ ನಿರ್ಣಯ ಬಹುಮತದಿಂದ ಅಂಗೀಕೃತವಾಯಿತು.

ಚುರುಮುರಿ

ಸಮೀಕ್ಷೆ ಪರೀಕ್ಷೆ



• ಮಣ್ಣೆ ರಾಜು

‘ನಾಯಿಯನ್ನು ಕಟ್ಟಿಹಾಕಿ ಮೇಡಂ, ಸಮೀಕ್ಷೆಗೆ ಬಂದಿದ್ದೇವೆ...’ ಧ್ವನಿ ಕೇಳಿ ಹೊರಬಂದ ಸುಮಿ, ‘ಬನ್ನಿ, ನಮ್ಮ ನಾಯಿ ಬೊಗೊಳೊಲ್ಲ, ಕಚ್ಚೊಲ್ಲ, ಬೀದಿ ನಾಯಿ ಬೊಗಳಿದರೂ ಹೆದರಿ ಮನೆಯೊಳಗೆ ಬಂದುಬಿಡುತ್ತದೆ. ತುಂಬಾ ಸಾಧು’ ಎಂದಳು.

‘ನಾಯಿ ಇದೆ ಎಚ್ಚರಿಕೆ ಬೋರ್ಡಿಗಾಗಿ ನಾಯಿ ಸಾಕಿದ್ದೇವೆ ಅಷ್ಟೇ’ ಎಂದು ಶಂಕ್ರಿ ಬಂದವರಿಗೆ ಕುರ್ಚಿ ಹಾಕಿದ. ಸುಮಿ ಕಾಫಿ ತಂದುಕೊಟ್ಟಳು.

‘ನೀವು ಕುರಿ, ಮೇಕೆ, ಕೋಳಿ ಸಾಕಿದ್ದೀರಾ?’ ಪ್ರಶ್ನೆ ಕೇಳಿದರು. ‘ಅವುಗಳನ್ನು ಸಾಕಿದ್ದರೆ ಆದಾಯ ಬರ್ತಿತ್ತು. ಆದಾಯವಿಲ್ಲದ ನಾಯಿ ಸಾಕಿದ್ದೇವೆ. ರೇಷನ್ ಕಾರ್ಡಿನಲ್ಲಿ ಹೆಸರಿಲ್ಲದಿದ್ದರೂ ನಾಯಿಯ ತಿಂಗಳ ಮೇವಿನ ಖರ್ಚು ನಮಗಿಂಥಾ ಜಾಸ್ತಿಯಾಗುತ್ತೆ’ ಅಂದ ಶಂಕ್ರಿ.

‘ಚಿನ್ನಾಭರಣ ಏನೇನಿವೆ?’

‘ಇ.ಡಿಯವರು ಎನ್‌ಕ್ವಯಿರಿ ಮಾಡಿದಂತೆ ಕೇಳ್ತೀರಲ್ಲಾ ಸಾರ್...’ ಬೇಸರಗೊಂಡ ಸುಮಿ, ‘ಒರಿಜಿನಲ್ ಒಡವೆಗಳನ್ನೂ ಬ್ಯಾಂಕಿನಲ್ಲಿ ಅಡವಿಟ್ಟು, ನಕಲಿ ಒಡವೆ ಹಾಕಿಕೊಂಡಿದ್ದೀನಿ, ಹಾಗಂತ ನೆರೆಹೊರೆಯವರಿಗೆ ಹೇಳಬೇಡಿ, ಮರ್ಯಾದೆ ಹೋಗುತ್ತೆ’ ಪಿಸುಗುಟ್ಟಿದಳು.

‘ಫ್ರಿಜ್, ವಾಷಿಂಗ್ ಮೆಷಿನ್ ಎಷ್ಟಿವೆ?’

‘ಇವೆ. ಅವುಗಳ ಸಾಲದ ಕಂತು ಬಾಕಿ ಇದೆ’ ಶಂಕ್ರಿಗೆ ಅಳುಕು.

‘ಪತ್ನಿಯ ಉದ್ಯೋಗ?’

‘ಹೌಸ್ ವೈಫ್, ಸಂಬಳವಿಲ್ಲದ ಕೆಲಸ’ ಸುಮಿಗೆ ಬೇಸರ.

‘ಸಮೀಕ್ಷೆಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕಾ ಸಾರ್? ಔಟಾಫ್ ಸಿಲೆಬಸ್ ಪ್ರಶ್ನೆಗಳೂ ಇವೆ’.

‘ನಿಮಗೆ ಗೊತ್ತಿರುವ ಪ್ರಶ್ನೆಗಳಿಗೆ ಉತ್ತರಿಸಿದರೆ ಸಾಕು. ನಿಮ್ಮ ಸ್ಥಿತಿಗತಿ ದಾಖಲಿಸುವ ನಿಮ್ಮ ‘ಸಂಸಾರದ ಸತ್ವಪರೀಕ್ಷೆ’ ಇದು’.

‘ನಿಮ್ಮ ಕುಟುಂಬದ ಸಮೀಕ್ಷೆ ಮುಗಿಯಿತೆ? ನೀವು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ ಡಿಸ್ಟಿಂಕ್ಷನ್ ಪಡೆದಿದ್ದೀರಿ ಅಲ್ವಾ?’ ಶಂಕ್ರಿ ಕೇಳಿದ.

‘ಟಫ್ ಪ್ರಶ್ನೆಗಳಿಗೆ ನಾನೂ ಆನ್ಸರ್ ಮಾಡಲಿಲ್ಲ. 35 ಪರ್ಸೆಂಟ್ ಪ್ರಶ್ನೆಗಳಿಗೆ ಉತ್ತರಿಸಿ ಜಸ್ಟ್‌ಪಾಸ್ ಆಗಿದ್ದೇನೆ...’ ಎಂದು ನಕ್ಕು ಸಮೀಕ್ಷಕರು ಹೊರಟರು.

ಸಂಗತ

ಆ ‘ಗುಂಡಿ’ಗೆ ನಿಮಗಿದೆಯೇ ಸೋಮಿ?

ಸುರಕ್ಷಿತ ರಸ್ತೆ ಬಯಸುವ ಹಕ್ಕು ಬೆಂಗಳೂರಿಗರಿಗೆ ಇಲ್ಲವೇ? ಗುಂಡಿಯಿರುವ ರಸ್ತೆಗಳೇ ಬೆಂಗಳೂರಿಗರಿಗೆ ಸರಿ ಎಂದು ಜನಪ್ರತಿನಿಧಿಗಳು ಭಾವಿಸಿರುವಂತಿದೆ.

• ಪ್ರವೀಣ ಕುಲಕರ್ಣಿ

ಗೆಳೆಯರೊಬ್ಬರು ಜಪಾನ್ ಪ್ರವಾಸಕ್ಕೆ ಹೋದಾಗ ನಡೆದ ಪ್ರಸಂಗ ಇದು. ಟೋಕಿಯೊದಿಂದ ಹತ್ತಿರದಲ್ಲಿದ್ದ ಪ್ರವಾಸಿ ತಾಣವೊಂದನ್ನು ನೋಡಲು ಹೋಗುತ್ತಿದ್ದಾಗ ಅವರ ವಾಹನದ ವೇಗ ಇದ್ದಕ್ಕಿದ್ದಂತೆ ತಗ್ಗಿತು. ಇಣುಕಿ ನೋಡಿದರೆ ಕಾರ್ಮಿಕರ ಪುಟ್ಟ ತಂಡವೊಂದು ರಸ್ತೆಗುಂಡಿಯನ್ನು ಮುಚ್ಚುತ್ತಿತ್ತು. ಸ್ಥಳೀಯ ಆಡಳಿತದ ಸಿಬ್ಬಂದಿ ತಮ್ಮಿಂದ ಏನೋ ಮಹಾಪರಾಧವಾಗಿದೆ ಎಂಬ ಭಾವದಿಂದ ವಾಹನದಲ್ಲಿದ್ದ ಪ್ರತಿಯೊಬ್ಬರ ಬಳಿ ಬಂದು, ‘ಕ್ಷಮಿಸಿ, ರಸ್ತೆ ಗುಂಡಿ ಮುಚ್ಚುತ್ತಿದ್ದೇವೆ. ನಿಮಗೆ ಆಗಿರುವ ಅನನುಕೂಲಕ್ಕೆ ವಿಷಾದಿಸುತ್ತೇವೆ’ ಎಂದು ಹೇಳಿ, ಎಲ್ಲರಿಗೂ ಒಂದೊಂದು ಚಾಕೊಲೇಟ್ ಕೊಟ್ಟರು. ವಾಹನದಲ್ಲಿದ್ದವರು ಪ್ರವಾಸಿ ತಾಣವನ್ನು ನೋಡಿಕೊಂಡು ಬರುವ ಹೊತ್ತಿಗೆ ರಸ್ತೆ ದುರಸ್ತಿಯಾಗಿತ್ತು. ಸಿಬ್ಬಂದಿ ಮಾತ್ರ ಅಲ್ಲಿಯೇ ಇದ್ದರು. ಅವರ ಕೈಯಲ್ಲೊಂದು ಫಲಕ ಇತ್ತು. ‘ರಸ್ತೆ ಗುಂಡಿಯಿಂದ ನಿಮಗಾಗಿದ್ದ ಅನನುಕೂಲದ ಅರಿವು ನಮಗಿದೆ. ದುರಸ್ತಿಗೆ ಸಹಕರಿಸಿದ ನಿಮಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ’ ಎಂಬ ಸಂದೇಶ ಅದರಲ್ಲಿತ್ತು.

ಜಪಾನ್‌ನಲ್ಲಿ ನಡೆದ ಈ ಪ್ರಸಂಗದ ಕುರಿತು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಉರುಫ್ ಬಿಬಿಎಂಪಿ ಅಧಿಕಾರಿಗಳ ಮುಂದೇನಾದರೂ ನಾವು ಹೇಳಿದರೆ, ‘ಜಗತ್ತಿನ ಎಲ್ಲಾ ಚಾಕೊಲೇಟ್ ಫ್ಯಾಕ್ಟರಿಗಳಿಗೂ ನಾವೇ ಗ್ರಾಹಕರಾಗಬೇಕಾಗುತ್ತದೆ. ಧನ್ಯವಾದ ಹೇಳಲು ಸಾವಿರ ಸಾವಿರ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗುತ್ತದೆ’ ಎಂದು ನಕ್ಕುಬಿಟ್ಟಾರು. ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಎದುರು ಈ ಪ್ರಸಂಗ ಎತ್ತಿದರೆ, ‘ಜಪಾನ್‌ನವರಿಗೆ ಬುದ್ಧಿ ಇದೆಯೇನ್ರಿ? ಗುಂಡಿ ಬಿದ್ದಿದ್ದರಲ್ಲಿ ನಮ್ಮ ತಪ್ಪೇನಿದೆ? ಆ ಗುಂಡಿಯಲ್ಲಿ ಬೀಳದಂತೆ ಜಾಗ್ರತೆ ವಹಿಸಬೇಕಾದವರು ಜನ ತಾನೇ? ಚಾಕೊಲೇಟ್ ಕೊಡಲ್ಲ, ಬ್ಲ್ಯಾಕ್‌ಮೇಲ್ ತಂತ್ರ ನಡೆಯಲ್ಲ’ ಎಂದು ಕೋಪ ಮಾಡಿಕೊಂಡಾರು.



ಜಿಬಿಎಯು– ಹಿಂದಿನ ಬಿಬಿಎಂಪಿ– ಪ್ರಜೆಗಳ ತಲೆಯ ಮೇಲೆ ಕುಳಿತು ತೆರಿಗೆ ವಸೂಲಿ ಮಾಡುತ್ತದೆ. ತೆರಿಗೆ ತುಂಬಲು ತಡ ಮಾಡಿದವರಿಂದ ಬಡ್ಡಿಯನ್ನೂ ಪೀಕುವಂತೆ ಮಾಡಿ, ದಂಡವನ್ನು ಕೂಡ ಕಟ್ಟಿಸಿಕೊಳ್ಳುತ್ತದೆ. ಜನರಿಂದ ಅಷ್ಟೊಂದು ಹೊಣೆಗಾರಿಕೆ ಬಯಸುವ ಆಡಳಿತ ತನ್ನ ಹೊಣೆ ಮರೆತರೆ ಹೇಗೆ? ಸರಾಗ ಸಂಚಾರಕ್ಕೆ ಸುವ್ಯವಸ್ಥಿತ ರಸ್ತೆ, ದೈನಂದಿನ ಅಗತ್ಯಕ್ಕೆ ಬೇಕಾದಷ್ಟು ಶುದ್ಧ ನೀರಿನ ಪೂರೈಕೆ, ಬಳಸಿದ ನೀರು ಹಾಗೂ ತ್ಯಾಜ್ಯದ ಸಮರ್ಪಕ ವಿಲೇವಾರಿಗೆ ವ್ಯವಸ್ಥೆ – ಇಷ್ಟನ್ನೇ ಜನ ಸ್ಥಳೀಯ ಆಡಳಿತದಿಂದ ಬಯಸುವುದು. ದುರದೃಷ್ಟವಶಾತ್ ನಮ್ಮ ಯಾವ ನಗರ, ಪಟ್ಟಣ, ಗ್ರಾಮದ ಸ್ಥಳೀಯ ಆಡಳಿತದ ವ್ಯಾಪ್ತಿಯಲ್ಲೂ ಈ ಕನಿಷ್ಠ ಬೇಡಿಕೆ ಈಡೇರಿಸಲು ಸಾಧ್ಯವಾಗಿಲ್ಲ.

ರಸ್ತೆ ಗುಂಡಿಗಳಿಂದ, ಸಂಚಾರಕ್ಕೆ ಅಲ್ಲಿ ಎದುರಾಗುವ ಅಡೆತಡೆಗಳಿಂದ ಲಕ್ಷಾಂತರ ಮಾನವ ಗಂಟೆಗಳು ರಸ್ತೆಯಲ್ಲಿಯೇ ಪೋಲಾಗುತ್ತವೆ ಎಂಬುದನ್ನು ಟೋಕಿಯೊ ಮಾತ್ರವಲ್ಲ, ಏಷ್ಯಾದ ಹಲವು ನಗರಗಳು ಅರ್ಥ ಮಾಡಿಕೊಂಡಿವೆ. ಸಿಂಗಪುರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಸಂಚಾರಿ ಘಟಕಗಳು ನಗರದ ತುಂಬಾ ಗಸ್ತು ತಿರುಗುತ್ತಲೇ ಇರುತ್ತವೆ. ವಿಯೆಟ್ನಾಂನ ಹೋ ಚಿ ಮಿನ್ ಸಿಟಿಯಲ್ಲಿ ಎಲ್ಲಿ ಓಡಾಡಿದರೂ ಗುಂಡಿಗಳು ಕಾಣುವುದಿಲ್ಲ. ‘ಇಲ್ಲಿ ರಸ್ತೆ ನಿರ್ವಹಣೆ ಹೇಗೆ’ ಎಂದು ಸ್ಥಳೀಯರನ್ನು ಕೇಳಿದರೆ, ‘ಎಲ್ಲಿಯಾದರೂ ಗುಂಡಿಗಳು ಗೋಚರಿಸಿದರೆ ಆ ರಾತ್ರಿಯೇ ಮುಚ್ಚಿಬಿಡುತ್ತಾರೆ’ ಎಂಬ ಉತ್ತರ ಸಿಗುತ್ತದೆ. ಆ ನಗರದ ರಸ್ತೆ ಬಳಕೆಯ ಆದ್ಯತೆ ಕೂಡ ಮೆಚ್ಚುಗೆ ಸೂಸುವಂತಿದೆ. ಪಾದಚಾರಿಗಳಿಗೆ ಅಲ್ಲಿ ಆದ್ಯತೆ. ನಂತರ ಸೈಕಲ್ ಸವಾರರು, ದ್ವಿಚಕ್ರ ವಾಹನಗಳ ಸವಾರರು, ಕಾರುಗಳು ಹಾಗೂ ದೊಡ್ಡ ವಾಹನಗಳಿಗೆ ಅನುಕ್ರಮವಾಗಿ ಮಹತ್ವ ನೀಡಲಾಗುತ್ತದೆ. ಚೀನಾದ ಸೆಂಜೆನ್‌ನಲ್ಲೂ ರಸ್ತೆಗಳ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗುತ್ತದೆ. ಇಚ್ಛಾಶಕ್ತಿ ಇದ್ದರೆ ಸಂಚಾರ ವ್ಯವಸ್ಥೆ ಸುಧಾರಣೆಗೆ ಬೇಕಾದಷ್ಟು ದಾರಿಗಳು, ಮಾದರಿಗಳು ನಮ್ಮ ಕಣ್ಣಮುಂದಿವೆ.

ರಸ್ತೆ ಇತಿಹಾಸದ ವಹಿ ನಿರ್ವಹಣೆ ಮಾಡಿದರೆ ಎಲ್ಲ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂಬ ಯೋಚನೆಯಿಂದ ಬಿಬಿಎಂಪಿ ಆಡಳಿತದ ಅವಧಿಯಲ್ಲಿ ಅದಕ್ಕಾಗಿ ಯತ್ನಗಳು ನಡೆದವು. ರಸ್ತೆಯನ್ನು ಯಾವಾಗ ದುರಸ್ತಿ ಮಾಡಲಾಗಿದೆ, ಗುತ್ತಿಗೆದಾರರ ಹೊಣೆ ಎಷ್ಟು ಸಮಯದವರೆಗೆ ಇದೆ ಎಂಬೆಲ್ಲಾ ವಿವರ ಅದರಲ್ಲಿ ಸಿಗುವಂತಹ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಒಟ್ಟಿಗೆ ಸೇರಿ ಈ ಯೋಜನೆ ಹಳ್ಳ ಹಿಡಿಯುವಂತೆ ಮಾಡಿದರು. ಹೀಗಾಗಿ ರಸ್ತೆ ನಿರ್ವಹಣೆಯ ಒಳ್ಳೆಯ ಮಾದರಿಯೊಂದು ಶೈಶವಾವಸ್ಥೆಯಲ್ಲೇ ಕಣ್ಣುಮುಚ್ಚಿತು. ಈಗ ಎಲ್ಲಿ ನೋಡಿದರೂ ಗುಂಡಿಗಳೇ! ಸಾರ್ವಜನಿಕರ ಒತ್ತಡ ಹೆಚ್ಚಾದಾಗ ಜಿಬಿಎಯಿಂದ ಕೆಲವೊಂದು ಗುಂಡಿಗಳನ್ನೇನೋ ಮುಚ್ಚಲಾಯಿತು. ಗುಂಡಿಗಳಿಗೆ ಹಾಕಿದ ಜಲ್ಲಿಕಲ್ಲು ಎಲ್ಲಾ ಕಡೆಗೆ ಚೆಲ್ಲಾಪಿಲ್ಲಿಯಾಗಿ ಗುಂಡಿಗಳು ಇದ್ದ ಸ್ಥಿತಿಗಿಂತಲೂ ಮುಚ್ಚಿದ ಸನ್ನಿವೇಶ ಮತ್ತೂ ಭಯಾನಕವಾಯಿತು. ಈ ಅವ್ಯವಸ್ಥೆ ಜನರ ಜೀವದೊಂದಿಗೆ ಚೆಲ್ಲಾಟವಲ್ಲದೆ ಮತ್ತೇನು?

ಜಪಾನ್‌ನ ಫುಕುವೊಕಾದಲ್ಲಿ ಭೂಕಂಪನದಿಂದ ಕುಸಿದು 30 ಮೀಟರ್‌ನಷ್ಟು ದೊಡ್ಡ ಕಂದಕವಾಗಿ ಮಾರ್ಪಟ್ಟಿದ್ದ ರಸ್ತೆಯನ್ನು ಅಲ್ಲಿನ ಸರ್ಕಾರ ಆರೇ ದಿನಗಳಲ್ಲಿ ಮರುನಿರ್ಮಿಸಿ, ಸುಸ್ಥಿತಿಗೆ ತಂದಿತ್ತು. ನಾಗರಿಕರ ಕುರಿತು ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಅಲ್ಲಿನ ಆಡಳಿತ ಹೇಗೆ ಕೆಲಸ ಮಾಡುತ್ತಿದೆ ಎಂಬುದರ ದ್ಯೋತಕ ಇದು. ಇಂತಹ ಉತ್ತರದಾಯಿ ಆಡಳಿತವನ್ನು ಬೆಂಗಳೂರಿಗರು ಬಯಸುವುದು ತಪ್ಪೇ, ‘ಜಿಬಿಎ’ ನಿರ್ಮಾತೃಗಳೇ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಸರ್ ಕ್ರೀಕ್ 'ಜೌಗು ನೆಲ'ದ ಜಗಳ

ಭಾರತ ಮತ್ತು ಪಾಕಿಸ್ತಾನದ ನಡುವಿನ ಮತ್ತೊಂದು ಗಡಿ ವಿವಾದ ಮುನ್ನೆಲೆಗೆ ಬಂದಿದೆ. ಗುಜರಾತ್‌ನ ಕಛ್ ಮತ್ತು ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ನಡುವೆ ಇರುವ ಸರ್ ಕ್ರೀಕ್ ಎನ್ನುವ ಜೌಗು ಪ್ರದೇಶವನ್ನು ತನ್ನದು ಎಂದು ಹಿಂದಿನಿಂದಲೂ ಪ್ರತಿಪಾದಿಸುತ್ತಿರುವ ಪಾಕಿಸ್ತಾನವು, ಅಲ್ಲಿ ಇತ್ತೀಚೆಗೆ ಸೇನಾ ಚಟುವಟಿಕೆಯನ್ನು ಹೆಚ್ಚಿಸಿದೆ. ಭಾರತವು ಈ ಬಗ್ಗೆ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದೆ. 96 ಕಿ.ಮೀ.ಉದ್ದದ ಅಳಿವೆ ಪ್ರದೇಶದ ಬಗ್ಗೆ ಪಾಕಿಸ್ತಾನ ಹಟ ಸಾಧಿಸುತ್ತಿರುವುದರ ಹಿಂದೆ ರಕ್ಷಣೆ ಮತ್ತು ಆರ್ಥಿಕತೆಯ ಕಾರಣಗಳಿವೆ ಎನ್ನಲಾಗುತ್ತಿದೆ

ಪ್ರಜಾವಾಣಿ ವಾರ್ತೆ

ಭಾರತ–ಪಾಕಿಸ್ತಾನದ ಸಂಘರ್ಷ ಎಂದರೆ, ಅದು ಕಾಶ್ಮೀರ ಕುರಿತದ್ದೇ ಆಗಿರುತ್ತದೆ ಎನ್ನುವ ಭಾವನೆ ಇದೆ. ಆದರೆ, ಅದಕ್ಕಿಂತಲೂ ಹಳೆಯದಾದ, ಪ್ರಮುಖ ವಿವಾದವೊಂದು ಈಗ ಮುನ್ನೆಲೆಗೆ ಬಂದಿದೆ. ಅದು 'ಸರ್ ಕ್ರೀಕ್' ವಿವಾದ.

ಸರ್ ಕ್ರೀಕ್, ಭಾರತದ ಕಛ್ ಮತ್ತು ಪಾಕಿಸ್ತಾನದ ಸಿಂಧ್ ನಡುವೆ ಇರುವ 96 ಕಿ.ಮೀ. ಉದ್ದದ ಒಂದು ಜೌಗು ಪ್ರದೇಶ. ಕ್ರೀಕ್ ಎಂದರೆ, ಕೊರಕಲು ಅಥವಾ ಅಳಿವೆ. ನದಿ ನೀರು ಅರಬ್ಬಿ ಸಮುದ್ರ ಸೇರುವ ಸ್ಥಳ ಅದು. ಯಾವುದೇ ಜನವಸತಿ ಇಲ್ಲದ, ಕೆಸರು, ನೀರು ತುಂಬಿದ ಕೊರಕಲು 'ಸರ್ ಕ್ರೀಕ್' ಎಂದೇ ಪ್ರಸಿದ್ಧವಾಗಿದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಪಶ್ಚಿಮ ತುದಿಯಲ್ಲಿರುವ ಗಡಿ ಅದಾಗಿದೆ. ಸರ್ ಕ್ರೀಕ್ ಯಾರಿಗೆ ಸೇರಿದ್ದು ಎನ್ನುವುದು ಎರಡು ದೇಶಗಳ ನಡುವಿನ ವಿವಾದಕ್ಕೆ ಕಾರಣವಾಗಿದೆ.

ಕಛ್ ಮತ್ತು ಸಿಂಧ್ ಪ್ರಾಂತ್ಯಗಳ ನಡುವಿನ ಈ ವಿವಾದಕ್ಕೆ ಶತಮಾನದ ಇತಿಹಾಸವಿದೆ. ಸ್ವಾತಂತ್ರ್ಯಪೂರ್ವದಲ್ಲಿ ಎರಡು ಪ್ರಾಂತ್ಯಗಳ ನಡುವಿನ ವಿವಾದ ಆಗಿದ್ದದ್ದು, ದೇಶ ವಿಭಜನೆಯ ನಂತರ ಎರಡು ದೇಶಗಳ ನಡುವಿನ ವಿವಾದವಾಗಿ ಮಾರ್ಪಟ್ಟಿತು. ವಿಭಜನೆಗೆ ಮುಂಚಿನ ದಾಖಲೆಗಳಲ್ಲಿ ಅಳಿವೆಯು ಸಿಂಧ್ ಪ್ರಾಂತ್ಯದಲ್ಲಿದೆ ಎಂದು ಉಲ್ಲೇಖಿತವಾಗಿದ್ದು, 'ಸಿಂಧ್ ಪಾಕಿಸ್ತಾನಕ್ಕೆ ಸೇರಿದ್ದರಿಂದ ಸರ್ ಕ್ರೀಕ್ ನಮ್ಮದು' ಎನ್ನುವುದು ಪಾಕಿಸ್ತಾನದ ವಾದ. ಭಾರತವು ಪಾಕಿಸ್ತಾನದ ವಾದವನ್ನು ಸಂಪೂರ್ಣವಾಗಿ ನಿರಾಕರಿಸುತ್ತಲೇ ಬಂದಿದೆ.

ಇಲ್ಲಿ ಎರಡೂ ದೇಶಗಳ ಗಡಿ ಯಾವುದು ಎನ್ನುವುದು ನಿರ್ಧರಿಸಲು ಇದುವರೆಗೂ ಸಾಧ್ಯವಾಗಿಲ್ಲ. ಇದು ಉಭಯ ದೇಶಗಳ ಸಮುದ್ರ ಪ್ರದೇಶ ಗುರುತಿಸುವ ವಿಚಾರದಲ್ಲಿಯೂ ನಿರ್ಣಾಯಕವಾಗಲಿದೆ. ಹೀಗಾಗಿಯೇ ಎರಡೂ ದೇಶಗಳು ಸರ್ ಕ್ರೀಕ್ ಮೇಲೆ ಹಿಡಿತ ಸಾಧಿಸಲು ಪಟ್ಟುಹಿಡಿದಿವೆ.


ಇತ್ತೀಚೆಗೆ ಸರ್ ಕ್ರೀಕ್ ವಲಯಕ್ಕೆ ಭೇಟಿ ನೀಡಿದ್ದ ರಕ್ಷಣಾ ಸಚಿವ ರಾಜನಾಥ್‌ಸಿಂಗ್, ಪಾಕಿಸ್ತಾನವು ಸರ್ ಕ್ರೀಕ್ ಪ್ರದೇಶದಲ್ಲಿ ಸೇನಾ ಮೂಲಸೌಕರ್ಯ ವೃದ್ಧಿಗೆ ಪ್ರಯತ್ನಿಸುತ್ತಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನವು ಇಂಥ ಪ್ರಯತ್ನ ಮುಂದುವರಿಸಿದರೆ, ಭಾರತವು ಅದಕ್ಕೆ ತಕ್ಕ ಉತ್ತರ ನೀಡಲಿದ್ದು, ಅದು 'ಇತಿಹಾಸ ಮತ್ತು ಭೂಪ್ರದೇಶವನ್ನು ಬದಲಿಸುವಂತೆ' ಇರುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.



ಸರ್ ಕ್ರೀಕ್ ಅಳಿವೆ ಪ್ರದೇಶದಲ್ಲಿ ಗಡಿ ಭದ್ರತಾ ಪಡೆ ಸಿಬ್ಬಂದಿಯ ನಿತ್ಯದ ಗಸ್ತು — ಚಿತ್ರ: ಬಿಎಸ್‌ಎಫ್ ಗುಜರಾತ್ 'ಎಕ್ಸ್' ಖಾತೆ

ಶತಮಾನದ ವಿವಾದ

ಸರ್ ಕ್ರೀಕ್ ಗಡಿ ವಿವಾದಕ್ಕೆ ಶತಮಾನದ ಇತಿಹಾಸವಿದೆ. 1947ರಲ್ಲಿ ದೇಶ ವಿಭಜನೆ ಆಗುವುದಕ್ಕೂ ಮೊದಲು, ಕಛ್ ಪ್ರದೇಶ ಮತ್ತು ಸಿಂಧ್ ಪ್ರಾಂತ್ಯವನ್ನು ಆಳುತ್ತಿದ್ದ ರಾಜರ ನಡುವೆ ಈ ಅಳಿವೆಯ ಮಾಲೀಕತ್ವದ ಬಗ್ಗೆ ತಕರಾರು ಇತ್ತು. 1908ರಿಂದಲೂ ಈ ವಿವಾದ ಇರುವುದು ಇತಿಹಾಸದಲ್ಲಿ ದಾಖಲಾಗಿದೆ. 1965ರ ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧದ ನಂತರ ಈ ವಿವಾದ ತೀವ್ರಗೊಂಡಿತ್ತು. ಸರ್ ಕ್ರೀಕ್‌ನಲ್ಲಿ ಗಡಿ ಗುರುತಿಸುವ ಸಂಬಂಧ ಇಲ್ಲಿಯವರೆಗೆ ಉಭಯ ದೇಶಗಳ ನಡುವೆ 10ಕ್ಕೂ ಹೆಚ್ಚು ಸುತ್ತಿನ ಮಾತುಕತೆಗಳು ನಡೆದಿವೆ. ಯಾವುದೂ ಫಲಪ್ರದವಾಗಿಲ್ಲ.



ಸರ್ ಕ್ರೀಕ್ ಇರುವುದೆಲ್ಲಿ?

ಗುಜರಾತ್‌ನ ಕಛ್ ಜಿಲ್ಲೆ ಮತ್ತು ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ನಡುವೆ ಸರ್ ಕ್ರೀಕ್ ಇದೆ. ಇದರ ಪೂರ್ವಕ್ಕೆ ರಣ್ ಕಛ್ ಇದ್ದರೆ, ಪಶ್ಚಿಮಕ್ಕೆ ಸಿಂಧ್ ಇದೆ. ಇದರ ಹಿಂದಿನ ಹೆಸರು 'ಬಾಣ ಗಂಗಾ'. ಬ್ರಿಟಿಷ್ ಆಡಳಿತವು ತನ್ನ ಅಧಿಕಾರಿಯೊಬ್ಬರ ಹೆಸರನ್ನು ಸೇರಿಸಿ ಇದಕ್ಕೆ 'ಸರ್ ಕ್ರೀಕ್' ಎಂದು ಹೆಸರಿಟ್ಟಿತ್ತು. ಈ ಪ್ರದೇಶದಲ್ಲಿ ಜನವಸತಿ ಇಲ್ಲ. ಇದು ಮೀನುಗಾರಿಕೆಗೆ ಹೇಳಿ ಮಾಡಿಸಿದಂತಹ ಜಾಗ. ಹಾಗಾಗಿ, ಭಾರತ ಮತ್ತು ಪಾಕಿಸ್ತಾನದ ಮೀನುಗಾರರು ಇಲ್ಲಿ ಕಾಣಸಿಗುತ್ತಾರೆ. ಗಡಿ ಉಲ್ಲಂಘಿಸಿ ಪ್ರವೇಶ ಮಾಡಿದ ಕಾರಣಕ್ಕೆ ಎರಡೂ ರಾಷ್ಟ್ರಗಳಿಂದ ಬಂಧನಕ್ಕೆ ಒಳಗಾಗುತ್ತಾರೆ. ಅವರನ್ನು ಬಿಟ್ಟರೆ ಗಡಿ ಕಾವಲು ಕಾಯುವ ಉಭಯ ದೇಶಗಳ ಸೇನಾ ಸಿಬ್ಬಂದಿಯ ಸಂಚಾರ ಮಾತ್ರ ಇಲ್ಲಿ ಕಾಣಬಹುದು.

ಈ ವಿವಾದದ ಬಗ್ಗೆ ಸಮಗ್ರ ದ್ವಿಪಕ್ಷೀಯ ಚರ್ಚೆ ನಡೆಸಲು 2015ರಲ್ಲಿ ಉಭಯ ದೇಶಗಳು ಸಮ್ಮತಿಸಿದ್ದವು. ಆದರೆ, 2016ರಲ್ಲಿ ನಡೆದ ಪಠಾಣ್‌ಕೋಟ್ ದಾಳಿ ಮತ್ತು ಆ ನಂತರದ ಬೆಳವಣಿಗೆಗಳು ಮಾತುಕತೆ ಮುಂದುವರಿಸಲು ಅವಕಾಶ ನೀಡಲಿಲ್ಲ.

ವಾದ –ಪ್ರತಿವಾದವೇನು?

- ಭಾರತವು 1925ರಲ್ಲಿ ಸಿದ್ಧಪಡಿಸಲಾದ ನಕ್ಷೆಯ ಆಧಾರದಲ್ಲಿ ಅಳಿವೆ ಪ್ರದೇಶದ ಮಧ್ಯ ಭಾಗವು ಗಡಿಯಾಗಿದ್ದು, ಅಂತರರಾಷ್ಟ್ರೀಯ ಕಾನೂನಿನ ತ್ಯಾಲ್‌ವೆಗ್ ನಿಯಮದ ಅನ್ವಯ ಅರ್ಧ ತನಗೆ ಸೇರಿದ್ದು ಎಂದು ಪ್ರತಿಪಾದಿಸುತ್ತಾ ಬಂದಿದೆ
- ಪಾಕ್ ಇದನ್ನು ಒಪ್ಪುತ್ತಿಲ್ಲ. ಜೌಗು ಪ್ರದೇಶವಾಗಿರುವ ಸರ್ ಕ್ರೀಕ್ ದೋಣಿ–ಹಡಗುಗಳ ಸಂಚಾರಕ್ಕೆ ಯೋಗ್ಯವಾಗಿಲ್ಲ. ಹಾಗಾಗಿ, ಇಲ್ಲಿ ಈ ಸಿದ್ಧಾಂತವನ್ನು ಅನ್ವಯಿಸಲು ಸಾಧ್ಯವಿಲ್ಲ ಎಂದು ಅದು ಹೇಳುತ್ತಿದೆ. ಆದರೆ, ಸಮುದ್ರದ ಉಬ್ಬರವಿದ್ದ ಸಂದರ್ಭದಲ್ಲಿ ಹಡಗುಗಳು ಇಲ್ಲಿ ಸಂಚರಿಸಬಹುದು ಎಂದು ಭಾರತ ವಾದಿಸುತ್ತಿದೆ

ದೇಶದ ಭದ್ರತೆಗೆ ಆತಂಕ

ಸೇನಾ ಕಾರ್ಯತಂತ್ರ, ದೇಶದ ಭದ್ರತೆ ಮತ್ತು ಆರ್ಥಿಕತೆಯ ಕಾರಣಕ್ಕೆ ಈ ಪ್ರದೇಶ ಮಹತ್ವ ಪಡೆದಿದೆ. ಅಲ್ಲಿಂದ ಕರಾಚಿ ಬಂದರಿಗೆ ನೇರವಾದ ಸಂಪರ್ಕ ಇದೆ. ಕರಾಚಿ ಬಂದರು ಪಾಕಿಸ್ತಾನದ ಮುಖ್ಯ ವಾಣಿಜ್ಯ ಚಟುವಟಿಕೆಯ ಸ್ಥಳವಾಗಿದ್ದು, ಸಂಘರ್ಷದ ಸಮಯದಲ್ಲಿ ಭಾರತದ ಅದರ ಮೇಲೆ ಕಣ್ಣಿಟ್ಟಿರುತ್ತದೆ. ಹೀಗಾಗಿ ಸರ್ ಕ್ರೀಕ್ ಭಾರತಕ್ಕೆ ಮುಖ್ಯವಾಗಿದೆ. ಪಾಕಿಸ್ತಾನಕ್ಕೆ ಕಾಶ್ಮೀರ, ಪಂಜಾಬ್, ರಾಜಸ್ಥಾನ ಗಡಿ ಪ್ರದೇಶಗಳಂತೆ ಇದು ಕೂಡ ಭಾರತದ ವಿರುದ್ಧ ಸೇನಾ ಚಟುವಟಿಕೆ ನಡೆಸಲು ಉತ್ತಮ ಸ್ಥಳವಾಗಿದೆ.

ಕಛ್‌ನ ರಣ್‌ನಲ್ಲಿ ಭಾರತದ ಎರಡು ಪ್ರಮುಖ ಬಂದರುಗಳಿವೆ (ಮುಂದ್ರಾ ಮತ್ತು ಕಾಂಡ್ಲಾ) ಮತ್ತು ಪಾಕಿಸ್ತಾನಕ್ಕೆ ಸೇರಿದ ರಣ್ ಪ್ರದೇಶದಲ್ಲಿ ಚೀನಾ ಗಣಿಗಾರಿಕೆ ಮತ್ತು ವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಚೀನಾ ಮತ್ತು ಪಾಕಿಸ್ತಾನ ಆ ಯೋಜನೆಗಳನ್ನೇ ಸೇನಾ ನೆಲೆಗಳನ್ನಾಗಿ ಪರಿವರ್ತಿಸಬಹುದು ಎನ್ನುವುದು ಭಾರತದ ಆತಂಕವಾಗಿದೆ. ಮೇ 8 ಮತ್ತು 9ರ ಸಂಘರ್ಷದ ವೇಳೆ ಪಾಕಿಸ್ತಾನವು 36 ಸ್ಥಳಗಳಿಂದ ಭಾರತದ ಮೇಲೆ 400 ಡ್ರೋನ್‌ಗಳ ಮೂಲಕ ದಾಳಿ ನಡೆಸಲು ಪ್ರಯತ್ನಿಸಿತ್ತು. ಆ ಸ್ಥಳಗಳಲ್ಲಿ ಸರ್ ಕ್ರೀಕ್ ಕೂಡ ಒಂದಾಗಿತ್ತು. ಜತೆಗೆ, ಇಲ್ಲಿಂದ ಉಗ್ರರು ಗುಜರಾತ್‌ನೊಳಗೆ ನುಸುಳಲು ಹಲವು ಬಾರಿ ಪ್ರಯತ್ನ ನಡೆಸಿದ್ದು, ಭಾರತೀಯ ಸೇನೆಯು ಅದನ್ನು ವಿಫಲಗೊಳಿಸಿತ್ತು.

ಜಾಮ್‌ನಗರದ ರಿಲಯನ್ಸ್‌ನ ತೈಲ ಸಂಸ್ಕರಣ ಘಟಕದ ಮೇಲೆ ದಾಳಿ ನಡೆಸುವುದಾಗಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಮುನೀರ್ ಇತ್ತೀಚೆಗೆ ಬೆದರಿಕೆ ಹಾಕಿದ್ದರು. ಜಾಮ್‌ನಗರವು ಸರ್ ಕ್ರೀಕ್‌ಗೆ ಹತ್ತಿರದಲ್ಲಿದೆ.

ಆಧಾರ: ಪಿಟಿಐ, ಬ್ರಿಟನ್‌ನ ದರ್ಹಂ ವಿವಿಯ ಅಧ್ಯಯನ ವರದಿ, ಸಂಸತ್‌ನಲ್ಲಿ ಸಚಿವರ ಹೇಳಿಕೆ

ಆರ್ಥಿಕ ಅನುಕೂಲ

ಈ ಅಳಿವೆಯಲ್ಲಿ ಅಪಾರ ಪ್ರಮಾಣದ ತೈಲ ಮತ್ತು ಅನಿಲ ನಿಕ್ಷೇಪ ಇದೆ ಎನ್ನಲಾಗುತ್ತಿದೆ. ಗಡಿ ಗುರುತಿಸದೇ ಇರುವುದರಿಂದ ಎರಡೂ ದೇಶಗಳು ತೈಲ ನಿಕ್ಷೇಪದ ಹುಡುಕಾಟ ನಡೆಸಲು ಸಾಧ್ಯವಾಗಿಲ್ಲ. ಪಾಕಿಸ್ತಾನವು ತನ್ನ ನೆಲದಲ್ಲಿ ತೈಲ ನಿಕ್ಷೇಪಗಳನ್ನು ಪತ್ತೆ ಹಚ್ಚುವ ಸಂಬಂಧ ಅಮೆರಿಕದೊಂದಿಗೆ ಇತ್ತೀಚೆಗೆ ಒಪ್ಪಂದ ಮಾಡಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಏಷ್ಯಾದ ಅತಿ ದೊಡ್ಡ ಮೀನುಗಾರಿಕಾ ನೆಲೆಗಳಲ್ಲಿ ಇದು ಕೂಡ ಒಂದಾಗಿದ್ದು, ಸಾವಿರಾರು ಕುಟುಂಬಗಳಿಗೆ ಜೀವನೋಪಾಯ ಕಲ್ಪಿಸಿದೆ. ಗಡಿ ವಿವಾದದಿಂದಾಗಿ ಎರಡೂ ದೇಶಗಳ ಮೀನುಗಾರರು ಆಗಿಂದಾಗ್ಗೆ ಬಂಧನಕ್ಕೆ ಒಳಗಾಗುವುದು ನಡೆಯುತ್ತಲೇ ಇದೆ.

ಎಲ್ಲಕ್ಕಿಂತ ಮುಖ್ಯವಾಗಿ, ಸರ್ ಕ್ರೀಕ್, ಅರಬ್ಬಿ ಸಮುದ್ರದಲ್ಲಿನ ಸಂಪನ್ಮೂಲಗಳನ್ನು ಆಧರಿಸಿದ ಎರಡೂ ದೇಶಗಳ ವಿಶಿಷ್ಟ ಆರ್ಥಿಕ ವಲಯಗಳ ಮೇಲೆ (ಇಇಜೆಡ್) ಪರಿಣಾಮ ಬೀರಲಿದೆ.

ವಿವಾದದ ಹಾದಿ

- ಬ್ರಿಟಿಷರ ಆಳ್ವಿಕೆಯಲ್ಲಿ ಈ ಪ್ರದೇಶ ಬಾಂಬೆ ಪ್ರೆಸಿಡೆನ್ಸಿ ವ್ಯಾಪ್ತಿಗೆ ಸೇರಿತ್ತು. 1947ರ ವಿಭಜನೆಯ ನಂತರ ಸಿಂಧ್ ಪ್ರಾಂತ್ಯ ಪಾಕಿಸ್ತಾನದ ಭಾಗವಾದರೆ, ಕಛ್ ಭಾರತದಲ್ಲೇ ಉಳಿದುಕೊಂಡಿದೆ
- ಅಳಿವೆ ಪ್ರದೇಶದ ದಡದಲ್ಲಿ ಬಿದ್ದಿದ್ದ ಉರುವಲು ರಾಶಿ ಯಾರಿಗೆ ಸೇರಿದ್ದು ಎಂಬ ವಿಷಯದಲ್ಲಿ 1908ರಲ್ಲಿ ಸಿಂಧ್ ಮತ್ತು ಕಛ್ ಪ್ರದೇಶದ ಆಡಳಿತಗಾರರ ನಡುವೆ ವಾಗ್ವಾದ ನಡೆದಿತ್ತು
- ಈ ಬಿಕ್ಕಟ್ಟನ್ನು 1914ರಲ್ಲಿ ಬಾಂಬೆ ಪ್ರೆಸಿಡೆನ್ಸಿಯ ಆಡಳಿತವು ಇತ್ಯರ್ಥಪಡಿಸಿತ್ತು. ಬ್ರಿಟಿಷ್ ಆಡಳಿತ ತೆಗೆದುಕೊಂಡಿದ್ದ ನಿರ್ಣಯಕ್ಕೆ ಎರಡೂ ಕಡೆಯ ಆಡಳಿತಗಾರರು ಸಹಿ ಹಾಕಿದ್ದರು. ಈ ನಿರ್ಣಯದ 9ನೇ ಪ್ಯಾರಾವು ಅಳಿವೆ ಪ್ರದೇಶದ ಪೂರ್ವ ದಂಡೆಯನ್ನು ಗಡಿ ಎಂದು ಗುರುತಿಸಿದೆ. ಅದರ ಪ್ರಕಾರ, ಇಡೀ ಅಳಿವೆ ಪ್ರದೇಶ ಪಾಕಿಸ್ತಾನಕ್ಕೆ ಸೇರುತ್ತದೆ. 10ನೇ ಪ್ಯಾರಾವು ಅಂತರರಾಷ್ಟ್ರೀಯ ಕಾನೂನಿನ ತ್ಯಾಲ್‌ವೆಗ್ ನಿಯಮವನ್ನು ಅನ್ವಯಿಸಿದೆ. 'ಯಾವುದೇ ಎರಡು ರಾಜ್ಯ/ದೇಶಗಳ ಭೂ ಪ್ರದೇಶವನ್ನು ಹಡಗುಗಳ ಸಂಚಾರಕ್ಕೆ ಯೋಗ್ಯವಾದ ನದಿ ಅಥವಾ ಕಾಲುವೆಯು ವಿಭಜಿಸಿದರೆ ಆ ನದಿ/ಕಾಲುವೆಯ ಆಳವಾದ ಪ್ರದೇಶವನ್ನು ಗಡಿ ಎಂದು ಪರಿಗಣಿಸಬೇಕು' ಎಂದು ಈ ನಿಯಮ ಹೇಳುತ್ತದೆ. 9 ಮತ್ತು 10ನೇ ಪ್ಯಾರಾ ವೈರುಧ್ಯದಿಂದ ಕೂಡಿವೆ
- 1965ರ ಯುದ್ಧದ ನಂತರ ಗುಜರಾತ್‌ನ ಕಛ್‌ನ ಅರ್ಧದಷ್ಟು ಭೂಭಾಗ ತನ್ನದೆಂದು ಪಾಕ್ ಹೇಳಿಕೊಂಡಿತು. ಇದನ್ನು ವಿರೋಧಿಸಿದ ಭಾರತ ಕಛ್ ಪೂರ್ಣವಾಗಿ ತನಗೇ ಸೇರಿದ್ದು ಎಂದು ಪ್ರತಿಪಾದಿಸಿತು. ಈ ವಿಚಾರವು ಅಂತರರಾಷ್ಟ್ರೀಯ ಮಧ್ಯಸ್ಥಿಕೆ ನ್ಯಾಯಮಂಡಳಿ ಮೆಟ್ಟಿಲೇರಿತು. 1968ರ ಫೆಬ್ರುವರಿ 19ರಂದು ನ್ಯಾಯಮಂಡಳಿ ನೀಡಿದ್ದ ಆದೇಶದಲ್ಲಿ ಭಾರತದ ವಾದವನ್ನು ಎತ್ತಿಹಿಡಿದಿತ್ತು. ಕಛ್‌ನ ಶೇ 90ರಷ್ಟು ಭೂಭಾಗ ಭಾರತಕ್ಕೆ ಸೇರಿದ್ದು ಎಂದು ಆದೇಶ ನೀಡಿದ್ದ ನ್ಯಾಯಮಂಡಳಿ, ಶೇ 10ರಷ್ಟು ಪ್ರದೇಶವನ್ನು ಪಾಕಿಸ್ತಾನಕ್ಕೆ ಸೇರಿದ್ದು ಎಂದು ಹೇಳಿತ್ತು. ಆದರೆ, ಸರ್ ಕ್ರೀಕ್‌ನಲ್ಲಿ ಗಡಿ ಗುರುತಿಸುವ ಬಗ್ಗೆ ಅದು ಏನೂ ಹೇಳಿರಲಿಲ್ಲ
- ಈ ವಿವಾದ ಪರಿಹರಿಸುವ ದಿಸೆಯಲ್ಲಿ 1989ರ ಜೂನ್ 2ರಂದು ಇಸ್ಲಾಮಾಬಾದ್‌ನಲ್ಲಿ ಮೊದಲ ದ್ವಿಪಕ್ಷೀಯ ಮಾತುಕತೆ ನಡೆದಿತ್ತು. ನಂತರ 1990, 1991, 1992, 1994, 1996, 1997, 1998ರಲ್ಲಿ ಗಡಿ ಗುರುತಿಸುವಿಕೆ ಬಗ್ಗೆ ಎರಡೂ ರಾಷ್ಟ್ರಗಳು ಮಾತುಕತೆ ನಡೆಸಿದ್ದವು. 1998 ಮಾತುಕತೆ ವೇಳೆ ಗಡಿ ವಿವಾದವನ್ನು ದ್ವಿಪಕ್ಷೀಯವಾಗಿಯೇ ಬಗೆಹರಿಸಬೇಕು ಎಂದು ಭಾರತವು ಪ್ರತಿಪಾದಿಸಿತ್ತು
- ಗಡಿ ಗುರುತಿಸಲು 2007ರ ವರ್ಷಾರಂಭದಲ್ಲಿ ಎರಡೂ ರಾಷ್ಟ್ರಗಳು ಜಂಟಿ ಸಮೀಕ್ಷೆ ನಡೆಸಿದ್ದವು. ಮೇ ತಿಂಗಳಲ್ಲಿ ಇಸ್ಲಾಮಾಬಾದ್‌ನಲ್ಲಿ ದ್ವಿಪಕ್ಷೀಯ ಮಾತುಕತೆ ನಡೆದಿತ್ತು
- ಸರ್ ಕ್ರೀಕ್‌ನ ವಿಷಯವಾಗಿ ಕೊನೆಯ ದ್ವಿಪಕ್ಷೀಯ ಮಾತುಕತೆ ನಡೆದಿದ್ದು 2012ರಲ್ಲಿ. ಆದರೆ, ಅಂತಿಮ ತೀರ್ಮಾನ ಸಾಧ್ಯವಾಗಿರಲಿಲ್ಲ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಉತ್ತರ ಪ್ರದೇಶದಲ್ಲಿ ಕೆಲವು ದಿನಗಳ ಹಿಂದೆ ಐ ಲವ್ ಮುಹಮ್ಮದ್ ಎನ್ನುವ ಪೋಸ್ಟರ್ ವಿಚಾರದಲ್ಲಿ ಹಿಂಸಾಚಾರ ನಡೆದಿತ್ತು. ಇದೇ ಹಿನ್ನೆಲೆಯಲ್ಲಿಯೇ, ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ ಮತ್ತು ಅವರ ಸಹೋದರಿ ಪ್ರಿಯಾಂಕಾ ಗಾಂಧಿ ಅವರು ಕೂಡ 'ಐ ಲವ್ ಮುಹಮ್ಮದ್' ಎಂದು ಬರೆದಿರುವ ಪೋಸ್ಟರ್ ಪ್ರದರ್ಶಿಸುತ್ತಿರುವ ಚಿತ್ರವು ಫೇಸ್‌ಬುಕ್ ಸೇರಿದಂತೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ನಿಜವಲ್ಲ.



ಚಿತ್ರವನ್ನು ಗೂಗಲ್ ಲೆನ್ಸ್‌ನಲ್ಲಿ ಪರಿಶೀಲಿಸಿದಾಗ, ಇದೇ ಚಿತ್ರವನ್ನು ಹಲವರು ಹಂಚಿಕೊಂಡಿರುವುದು ಕಂಡಿತು. ಮೊದಲನೆಯದಾಗಿ, ಪ್ರಿಯಾಂಕಾ ಆಗಲಿ, ರಾಹುಲ್ ಆಗಲಿ ಈ 'ಐ ಲವ್ ಮುಹಮ್ಮದ್' ಪೋಸ್ಟರ್ ವಿವಾದದ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ. ಮುಂದಿನ ಹಂತ, ಇದು ನಿಜವಾದ ಚಿತ್ರವೋ ಅಥವಾ ಕೃತಕ ಬುದ್ಧಿಮತ್ತೆಯಿಂದ (ಎಐ) ರೂಪಿಸಿದ ಚಿತ್ರವೋ ಎನ್ನುವುದನ್ನು ಪರಿಶೀಲಿಸುವುದು. ಚಿತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿ ಹಲವಾರು ವ್ಯತ್ಯಾಸಗಳಿರುವುದು ಕಂಡುಬಂತು. ಉದಾಹರಣೆಗೆ, ರಾಹುಲ್ ಮತ್ತು ಪ್ರಿಯಾಂಕಾ ಅವರ ಕೈಗಳ ನಡುವೆ ಮತ್ತೊಂದು ಕೈ ಪೋಸ್ಟರ್ ಅನ್ನು ಹಿಡಿದಿರುವುದು ಕಾಣುತ್ತದೆ. ಅವರ ಹಿಂದಿರುವ ಮುಖಗಳಲ್ಲಿಯೂ ಕೆಲವು ವ್ಯತ್ಯಾಸಗಳಿವೆ. ಹೈವ್ ಮಾಡರೇಷನ್ ಮತ್ತು ವಾಸ್ ಇಟ್ ಎಐ ಎನ್ನುವ ಎಐ ಪತ್ತೆ ಸಾಧನಗಳಿಂದ ಪರಿಶೀಲಿಸಿದಾಗ, ಚಿತ್ರವು ಎಐನಿಂದ ರೂಪಿಸಿರುವುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಕಾಲು ದಾರಿ ಮತ್ತು ಕಾಲ

ನುಡಿ ಬೆಳಗು



ವಾಸುದೇವ ನಾಡಿಗ್

ಈ ಹಿಂದೆ ಕಿರುದಾರಿ ಇದ್ದಾಗ ಆಮೆಗಳು ಹೇಗೋ ಆ ಬದಿಯಿಂದ ಈ ಬದಿಗೆ, ಈ ಬದಿಯಿಂದ ಆ ಬದಿಗೆ ಬಂದು ಬಿಡುತ್ತಿದ್ದವು. ಮಳೆಗಾಲದಲ್ಲಂತೂ ತಾಪತ್ರಯವೇ ಇಲ್ಲ. ಗುಡ್ಡದಿಂದ ಹರಿದು ಬರುವ ನೀರು ಅನಾಮತ್ತಾಗಿ ತೇಲಿಸಿ ಆಚೆ ಬಿಡುತ್ತಿದ್ದವು. ವಾಹನಗಳು ಧಾವಿಸಬಾರದಷ್ಟೆ. ದಡ್ ಅಂತ ಬರುವ ವಾಹನಗಳು ಅನೇಕ ಆಮೆಗಳ ಚಿಪ್ಪನ್ನೇ ಬಗೆದು ಹೋಗಿವೆ. ಆದರೆ ಅಪರೂಪ ಅಷ್ಟೇ. ಏಕೆಂದರೆ ಅದು ಕಿರುದಾರಿ. ಕಡಿದಾದ ದಾರಿ. ಎತ್ತಿನ ಗಾಡಿ ಮತ್ತು ಸೈಕಲ್ಲುಗಳಷ್ಟೇ ಹಾದುಹೋಗುತ್ತಿದ್ದವು. ಈ ಅಪಾಯಗಳು ಇರಲಿಲ್ಲ. ಸೈಕಲ್ಲಿನವರು ಹುಷಾರಾಗೇ ಹೋಗುತ್ತಿದ್ದರು. ಎತ್ತಿನ ಗಾಡಿಗಳ ಚಕ್ರದ ಶಬ್ದ ಇಡಿ ಊರಿಗೇ ಕೇಳಿಸುತ್ತಿತ್ತು. ಹಾಗಾಗಿ, ಆಮೆಗಳು ತಮ್ಮ ವೇಗವನ್ನು ಕಡಮೆ ಮಾಡಿಯೋ ಹೆಚ್ಚು ಮಾಡಿಯೋ ಪಾರಾಗುತ್ತಿದ್ದವು.

ಈಗ ಹಾಗಲ್ಲ. ದೈತ್ಯಾಕಾರದ ಹೆದ್ದಾರಿ ಚಾಚಿಕೊಂಡಿದೆ. ದಾಟುವ ಕನಸನ್ನೂ ಆಮೆಗಳು ಕಾಣುವಂತಿಲ್ಲ ಮತ್ತು ಗುಡ್ಡಗಳಿಂದ ನೀರು ಹರಿವುದೆಲ್ಲ ಕನಸೇ. ಹಾದಿ ಚಿಕ್ಕದಾಗಿದ್ದಾಗ ಸಾಲಾಗಿ ಆಮೆಗಳು ರಸ್ತೆಯನ್ನು ದಾಟಿದರೂ ಮನುಷ್ಯರಿಗೆ ಅಚ್ಚರಿ ಹುಟ್ಟುತ್ತಿರಲಿಲ್ಲ. ತಮ್ಮ ಪಾಡಿಗೆ ತಾವು ಊರು ಸೇರುತ್ತಿದ್ದರು. ಆಮೆಗಳು ಕೂಡಾ. ಸರಿದು ಹೋಗಿಬಿಡುತ್ತಿದ್ದವು, ಅಲ್ಲೆಲ್ಲೋ ಈ ಬದಿಯ ಕಾಡಿನಲ್ಲಿ ಕರೆಯುವ ತೊರೆ ನದಿಗಳ ಕಡೆಗೆ.

ಕಾಲ ಅದೆಷ್ಟು ಅಮಾನವೀಯ ಅನಿಸುತ್ತದೆ. ಹೆದ್ದಾರಿ ಬಂದಮೇಲೆ ನಿಸರ್ಗ ಸಹಜ ಲಯಗಳೇ ಇಲ್ಲವಾಗಿವೆ. ಹಕ್ಕಿಗಳ ಕೂಗು, ನೆಲದಲ್ಲಿ ರಂಗೋಲಿ ಬರೆವ ಬಿದ್ದ ಎಲೆಹೂಗಳು ಬೇಲಿ ಕಂಪು ಎಲ್ಲ ಮಾಯವಾಗಿವೆ. ಎಲ್ಲವನ್ನೂ ಚಿತ್ರದಲ್ಲಿ ನೋಡುತ್ತ ರೀಲ್ಸ್‌ಗಳಲ್ಲಿ ಹುಡುಕುತ್ತ ಕೂತ ಮನುಷ್ಯರು. ರಸ್ತೆ ದಾಟುವ ಸಾಹಸಕ್ಕೆ ಈಗ ಆಮೆಗಳು ಇಳಿಯುತ್ತಿಲ್ಲ. ಕಾಲದ ಜೊತೆಗೆ ಬದಲಾಗಿವೆ. ಎಲ್ಲೋ ಮರೆಯಾಗಿ ಉಳಿದರೆ ಸಾಕು ಎಂಬ ನಿರ್ಧಾರಕ್ಕೆ ಬಂದ ಹಾಗಿದೆ.

ಆಧುನಿಕತೆಗೆ ಮಾರುಹೋದ ಮತ್ತು ಮಾರಿಕೊಂಡ ಮನುಷ್ಯರು ಹಿಂದೆ ಕಿರು ಕಡಿದಾದ ದಾರಿ ಇದ್ದ ಮತ್ತು ಈಗ ಹೆದ್ದಾರಿಯಾಗಿ ಬದಲಾದ ಜಾಗದಲ್ಲಿ ಕಾರಿನಲ್ಲಿ ಹೋಗುವಾಗ ಅಕಸ್ಮಾತ್ತಾಗಿ ಆಮೆಯೊಂದು ದಾಟಿ ಹೋಗುತ್ತಿರುವುದನ್ನು ಕಂಡು ಪುಳಕಿತರಾಗುತ್ತಾರೆ. ಹೊಸ ಜೀವನ ಕ್ರಮದಲ್ಲಿ ಈಗ ಉಳಿದಿರುವುದು ಇಂತಹ ಅಕಸ್ಮಾತ್ತಾಗಿ ಕಾಣುವ ವಿಸ್ಮಯಗಳು ಮಾತ್ರ. ದೊಡ್ಡ ಬಲೆಯ ವರ್ತುಲವನ್ನು ನಿರ್ಮಿಸಿ ಚಿಟ್ಟೆಗಳನ್ನು ಹಿಡಿದು ತಂದು ಬಿಟ್ಟು, ಅವುಗಳ ಸಂತತಿಯನ್ನು ಹೆಚ್ಚಿಸುವ ಯೋಜನೆ ಮನುಷ್ಯನದ್ದು. ನಿಸರ್ಗದ ಯಾವುದೇ ಧಾತು ಕೂಡಾ ಈ ದಿನ ಪುಳಕಕ್ಕೆ ಕಾರಣವಾಗಿದೆ. ನಾಗರಿಕತೆ ಎಂಬುದು ಉಳಿಸಿಹೋಗುವುದು ಈ ಸಂಗತಿ ಮಾತ್ರ. ಆ ಕಡೆ ಆಮೆಯೂ ಸಲೀಸಾಗಿ ದಾಟಲಾರದು ಈ ಕಡೆ ಮನುಷ್ಯನೂ ಆಧುನಿಕತೆಯನ್ನು ಕೈಬಿಡಲಾರನು. ಯಾವುದಾದರೊಂದು ಹೊಂದಾಣಿಕೆ ಮತ್ತು ಒಪ್ಪಂದಗಳು ಬಾಳನ್ನು ತೂಗಿಸಿದರೆ ಸಾಕು ಎನಿಸುತ್ತದೆ.

ನಿಧಾನವಾಗಿ ಮತ್ತು ನಿರಾಳವಾಗಿ ರಸ್ತೆ ದಾಟುವ ಆಮೆಗಳು ನಮ್ಮ ಧಾವಂತಗಳನ್ನು ಎಚ್ಚರಿಸಬೇಕು. ❖

ಗುಂಡಣ್ಣ




ಪದಬಂಧ 6187

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ಕಾಡಿನ ಹೂವು (4)
8.ತಂದೆ ತಾಯಿ ಇರುವ ಊರು (4)
10.ಜಗಲಿಯಲ್ಲೇ ಕಾಣಿಸಿದ ಪ್ರಪಂಚ! (2)
11.ಹಾರಾಡುವಾಗ ಕೇಳಿಸಿದ ಗಾನ! (2)
12.ಮಧುರವಾದ ಧ್ವನಿ (4)
14.ಮಾನವುಳ್ಳ ಒಡೆಯ (4)

ಮೇಲಿಂದ ಕೆಳಕ್ಕೆ
1.ಯಾವುದೇ ಉಪಯೋಗವಿಲ್ಲದ್ದು (5)
2.ಗುರುತುಳ್ಳ ವ್ಯಕ್ತಿ (4)
3.ದಾನವನಲ್ಲಿ ಹೊಸತು ಹುಡುಕಿ! (2)
4.ಜಾನುವಾರು ಇಲ್ಲಿದೆ (2)
6.ನವಿಲನ್ನು ನೋಡಿದಾಗ ಈ ಪುಳಕ! (3)
7.ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶ (4)
9.ನಡುವೆ ಜೀ ಎನ್ನುತ್ತಿರುವ ಮಂತ್ರಿ (3)
10.ನೀರಿಗೆ ಆಶ್ರಯವಾದ ಕೊಳ ಸರೋವರ ಇತ್ಯಾದಿ (4)
11.ವಿಷವನ್ನು ಮರೆ ಮಾಚಿ ಹೇಳುವ ಮಾತು (5)
12.ಅಳೆಯುವ ಸಾಧನವಿಲ್ಲಿ ಉಲ್ಟಾ ಆಗಿದೆ (3)
13.ಕಾಡು ಪ್ರಾಣಿ ಇಲ್ಲಿದೆ (4)
15.ಜಡೆಗಟ್ಟಿದ ಕೂದಲು (2)
16.ಅಭಿನಯಿಸುವವನು ಇಲ್ಲಿದ್ದಾನೆ (2)



6186ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾಧಕ 3.ಪದರ 5.ಪತಿ 6.ವರ್ತಕ 7.ನೆಪ 9.ಯುವತಿ 10.ಯಳವೀ 11.ಕೆರ 13.ಹಣಿಗೆ 15.ಮಾನ 16.ಕಟಾವು 17.ಉಬ್ಧಕ

ಮೇಲಿಂದ ಕೆಳಕ್ಕೆ:
1.ಬಾಣಂತಿ 2.ಕಕವ 3.ಪದಕ 4.ರವಾನೆ 5.ಪಳೆಯುಳಿಕೆ 8.ಪದವೀದಾನ 12.ರಜಕ 13.ಹಗೇವು 14.ಗೆದ್ದಲು 15.ಮಾಸಿಕ

ಸುಡೊಕು 6571

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	1	6					5	9
			5		6	3		2
3	8						6	
	2							4
			2	4	7			6
	7					5		
7		9			8		4	
4				3			8	
	6		4		2	7		3

6570 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಅಕ್ಟೋಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ದ್ವಿತೀಯ ಗಂ. 26-23 **ನಕ್ಷತ್ರ:** ಅಶ್ವಿನಿ ಗಂ. 22-45 **ಯೋಗ:** ಹರ್ಷಣ ಗಂ. 25-33 ಕರಣ: ತೈತಿಲ ಗಂ. 16-09, **ಯೋಗ:** ಧ್ರುವ ಗಂ. 9-31 ಕನ್ಯಾ ಮಾಸದ 21 ನೇ ದಿನ. **ಮಳೆ ನಕ್ಷತ್ರ :** ಹಸ್ತಾ 4 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30 **ಸೂರ್ಯೋದಯ :** 06-24 **ಸೂರ್ಯಾಸ್ತ :** 06-12, **ಮುಸ್ಲಿಂ ದಿನಾಂಕ :** 15 ರಬಿಯುಸ್ಸಾನಿ, **ಅದೃಷ್ಟ ಸಂಖ್ಯೆ :** 11, 4

ಮೇಷ: ಒಳ್ಳೆಯತನದಿಂದಾಗಿ ನೀವು ನುಂಗಿಕೊಂಡ ಸಿಟ್ಟು ತಪ್ಪು ಮಾಡಿದವರ ನಿರ್ಲಕ್ಷ್ಯಕ್ಕೆ ಕಾರಣವಾಗುತ್ತದೆ. ವೃತ್ತಿರಂಗದಲ್ಲಿ ಅದೃಷ್ಟದ ಬಾಗಿಲು ತೆರೆಯುವುದು. ವಿದ್ಯಾರ್ಥಿನಿಯರಿಗೆ ವಿಶೇಷ ಪ್ರಗತಿ ಪ್ರಾಪ್ತಿಯಾಗಬಹುದು.

ವೃಷಭ: ಯಾವುದೇ ಪರಿಸ್ಥಿತಿಯಲ್ಲಿಯೂ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡದಿರುವ ತೀರ್ಮಾನ ಮಾಡದಿರಿ. ತಂದೆ ಅಥವಾ ಹಿರಿಯ ಸಹೋದರರಲ್ಲಿ ಸಂಯಮದ ನಡವಳಿಕೆ ಅಗತ್ಯ.

ಮಿಥುನ: ಜೀವನದಲ್ಲಿ ಹೊಸ ರೀತಿಯ ಚಲನೆ ಇಲ್ಲದೆ ಬಂದ ಬೇಸರವು ದಿನಚರಿಯ ಬದಲಾವಣೆಯಿಂದ ನಿವಾರಣೆಯಾಗಬಹುದು. ಕಾರ್ಯರಂಗದಲ್ಲಿ ಅನುಭವಸ್ಥರ ಸಹಯೋಗದಿಂದ ಉನ್ನತಿ ನೋಡಬಹುದು.

ಕರ್ಕಾಟಕ: ಒಂದೇ ಸಮಯದಲ್ಲಿ ಎಲ್ಲ ಕಡೆ ಗಮನ ಹರಿಸುವ ನಿಮ್ಮತನವನ್ನು ನೀವು ಕಲೆ ಎಂದು ಭಾವಿಸಿದ್ದರೂ ಇತರರು ಚಂಚಲತೆ ಎಂದು ದೂಷಿಸುವ ಸಾಧ್ಯತೆ ಇದೆ. ಇರುವ ವಸ್ತುಗಳಲ್ಲಿ ಸಂತೃಪ್ತಿಯನ್ನು ತಂದುಕೊಳ್ಳಿ.

ಸಿಂಹ: ಇಷ್ಟು ದಿನ ಇದ್ದಂಥ ಕೆಲವು ಜವಾಬ್ದಾರಿಗಳ ಭಾರ ಕಡಿಮೆ ಆದುದರಿಂದ ನಿರಾಳದ ಜೀವನವನ್ನು ನಡೆಸುವಿರಿ. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ. ಸಣ್ಣ ಪ್ರಮಾಣದ ಪ್ರಯಾಣ ಮಾಡುವಿರಿ.

ಕನ್ಯಾ: ಸ್ನೇಹಿತನ ಕೆಲವು ಅನಿರೀಕ್ಷಿತ ನಡೆಗಳನ್ನು ಗುರುತಿಸಿ ಆತನ ಮಾನಸಿಕ ಖಿನ್ನತೆಯನ್ನು ಬೆಳಕಿಗೆ ತರುವಂಥ ಕೆಲಸವನ್ನು ಮಾಡುವ ಸಾಧ್ಯತೆ ಇದೆ. ಜನಮಾನಸದಲ್ಲಿ ಅಚ್ಚಾಗಿರುವ ಕಾರ್ಯಗಳನ್ನು ನಿಲ್ಲಿಸಲು ಹೋಗಬೇಡಿ.

ತುಲಾ: ಜನರ ಅಭಿಪ್ರಾಯವನ್ನು ಸಂಗ್ರಹಿಸಲು ಹೋಗಿ ಅದರಿಂದ ಅಪಮಾನಕ್ಕೊಳಗಾಗುವ ಸಾಧ್ಯತೆ ಇದೆ. ಬಂಧುಗಳ ಸಲಹೆ-ಸಹಕಾರ ನೂತನ ಕಾರ್ಯಗಳಿಗೆ ಉತ್ತಮ ಫಲ ಕೊಡುವುದು. ಬಿಳಿ ಬಣ್ಣ ಶುಭವನ್ನು ತರಲಿದೆ.


ವೃಶ್ಚಿಕ: ಪಾರಮಾರ್ಥಿಕವಾಗಿ ಸಾಧನೆಗಳೆಷ್ಟೇ ಇದ್ದರೂ ಸಮಾಜದಲ್ಲಿ ಬದುಕುವಾಗ ಲೌಕಿಕ ಜ್ಞಾನದ ಅಗತ್ಯ ಇದ್ದೇ ಇರಬೇಕೆಂಬುವುದನ್ನು ಸ್ಮರಿಸಿ. ಶಿಕ್ಷಕ ವೃತ್ತಿ ಆರಂಭಿಸುವ ಬಗ್ಗೆ ಆಲೋಚಿಸಿ. ಆಮಿಷಗಳಿಗೆ ಮರುಳಾಗದಿರಿ.

ಧನು: ಬುದ್ಧಿವಂತಿಕೆಯನ್ನು ಉಪಯೋಗಿಸಿ ಗ್ರಾಹಕರಲ್ಲಿ ವ್ಯವಹರಿಸಿದರೆ ಲಾಭದ ದಿನವಾಗುತ್ತದೆ. ಮಗನು ಅನಿವಾರ್ಯ ಕಾರಣಗಳಿಂದ ಪರ ಊರಿಗೆ ತೆರಳುವುದು ದುಃಖಕರ ಸಂಗತಿಯಾಗಬಹುದು.

ಮಕರ: ಕಾರ್ಯಕ್ಷೇತ್ರದಲ್ಲಿ ಕೋಪವು ಮನೆಯ ಮಡದಿ ಹಾಗೂ ಮಗನ ಮೇಲೆ ಪ್ರಯೋಗವಾಗುವುದು ಬೇಡ. ತಂದೆಯವರ ವ್ಯವಹಾರದ ವಿಷಯಗಳನ್ನು ತಿಳಿದುಕೊಂಡು ಮುಂದುವರಿಯುವಿರಿ. ವಿಶ್ರಾಂತಿ ಪಡೆಯಿರಿ.

ಕುಂಭ: ಉತ್ತಮ ಕೆಲಸ ನಿರ್ವಹಣೆಯಿಂದ ಬಡ್ತಿಯ ವಿಚಾರ ಸುಳಿದಾಡಿ ಸಹೋದ್ಯೋಗಿಗಳ ಈರ್ಷ್ಯೆಗೆ ಕಾರಣವಾಗುತ್ತದೆ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆ ಅನುಭವಕ್ಕೆ ಬಂದಲ್ಲಿ ತಡಮಾಡದೆ ವೈದ್ಯರನ್ನು ಭೇಟಿ ಮಾಡಿ.

ಮೀನ: ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮವಾಗಿ ಕಾಣುತ್ತದೆ. ಅಕ್ಕ-ಪಕ್ಕದವರಲ್ಲಿ ಸ್ನೇಹಪರ ಸ್ವಭಾವ ತೋರುವುದರಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,077
ಇಂದಿನ ಅಂತ್ಯ:	25,108
ದಿನದ ಕನಿಷ್ಠ:	25,076
▲	30

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹255-622
ದ್ವಿತಳಿ (ಬಿ.ವಿ)	₹440-800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ಮುದ್ರೆ-ಮನೆ ಕಾಫಿ (50 ಕೆ.ಜಿಗೆ)	
ಎಪಿ	₹30,000
ಎಸಿ	₹15,400
ಆರ್‌ಪಿ	₹20,250
ಆರ್‌ಸಿ	₹11,350

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1350 (1350)
ಸೋಯಾ (ರಿಫೈನ್ಡ್)	₹1280(1280)
ಸೂರ್ಯಕಾಂತಿ (ರಿಫೈನ್ಡ್)	₹1435(1440)
ಪಾಮೋಲಿನ್	₹1275 (1275)

ಟಾಟಾ ಟ್ರಸ್ಟ್ಸ್‌ನಲ್ಲಿ ಒಳಜಗಳ

ಟಾಟಾ ಮತ್ತು ಮಿಸ್ತ್ರಿ ನೇತೃತ್ವದಲ್ಲಿ ಎರಡು ಗುಂಪುಗಳಾಗಿರುವ ಟಾಟಾ ಟ್ರಸ್ಟ್ಸ್

ನವದೆಹಲಿ (ಪಿಟಿಐ): ದೇಶದ ಅತ್ಯಂತ ಮೌಲ್ಯಯುತವಾದ ಉದ್ಯಮ ಸಮೂಹದ ಮೇಲೆ ನಿಯಂತ್ರಣ ಹೊಂದಿರುವ ಟಾಟಾ ಟ್ರಸ್ಟ್ಸ್ ಟ್ರಸ್ಟಿಗಳ ನಡುವೆ ಸಂಘರ್ಷ ಶುರುವಾಗಿದೆ. ಆಡಳಿತಕ್ಕೆ ಸಂಬಂಧಿಸಿದ ವಿಚಾರಗಳು, ಆಡಳಿತ ಮಂಡಳಿಯ ನೇಮಕಾತಿಗಳು ಇದಕ್ಕೆ ಕಾರಣ ಎಂದು ಮೂಲಗಳು ಹೇಳಿವೆ.

ಟಾಟಾ ಸಮೂಹದ ಕಂಪನಿಗಳ ಮಾಲೀಕತ್ವ ಹೊಂದಿರುವ ಟಾಟಾ ಸನ್ಸ್‌ನಲ್ಲಿ ಟಾಟಾ ಟ್ರಸ್ಟ್ಸ್ ಶೇಕಡ 66ರಷ್ಟು ಪಾಲು ಹೊಂದಿದೆ.

ಟಾಟಾ ಟ್ರಸ್ಟ್ಸ್‌ನಲ್ಲಿ ಎರಡು ಗುಂಪುಗಳಾಗಿವೆ, ಒಂದು ಗುಂಪು ಟ್ರಸ್ಟ್ಸ್‌ನ ಅಧ್ಯಕ್ಷ ನೋಯಲ್ ಟಾಟಾ ಅವರೊಂದಿಗೆ ಗುರುತಿಸಿಕೊಂಡಿದೆ. ನಾಲ್ಕು ಮಂದಿ ಟ್ರಸ್ಟಿಗಳ ಇನ್ನೊಂದು ಗುಂಪು ಮೆಹ್ಲಿ ಮಿಸ್ತ್ರಿ ಅವರೊಂದಿಗೆ ಗುರುತಿಸಿಕೊಂಡಿದೆ ಎಂದು ಮೂಲಗಳು ಹೇಳಿವೆ.

ಮಿಸ್ತ್ರಿ ಅವರು ಶಾಪೂರ್ಜಿ ಪಲ್ಲೊಂಜಿ ಕುಟುಂಬದ ಜೊತೆ ನಂಟು ಹೊಂದಿದ್ದಾರೆ, ಈ ಕುಟುಂಬವು ಟಾಟಾ ಸನ್ಸ್‌ನಲ್ಲಿ ಶೇ 18.37ರಷ್ಟು ಷೇರುಪಾಲು ಹೊಂದಿದೆ. ಪ್ರಮುಖ ವಿಚಾರಗಳಲ್ಲಿ ತಮಗೆ ಮಾಹಿತಿ ಒದಗಿಸುತ್ತಿಲ್ಲ ಎಂದು ಮಿಸ್ತ್ರಿ ಅವರು ಭಾವಿಸಿದ್ದಾರೆ ಎನ್ನಲಾಗಿದೆ.

ಬಿಕ್ಕಟ್ಟು ಶುರುವಾಗಲು ಮೂಲ ಕಾರಣ ಟಾಟಾ ಸನ್ಸ್‌ನ ಆಡಳಿತ ಮಂಡಳಿಯ ಸ್ಥಾನ ಎಂದು ಮೂಲವೊಂದು ತಿಳಿಸಿದೆ. ಟಾಟಾ ಸಮೂಹದ ಸರಿಸುಮಾರು 400 ಕಂಪನಿಗಳ ಮೇಲೆ ಟಾಟಾ ಸನ್ಸ್ ನಿಯಂತ್ರಣ ಹೊಂದಿದೆ. ಈ 400 ಕಂಪನಿಗಳಲ್ಲಿ 30 ಕಂಪನಿಗಳು ಷೇರುಪೇಟೆಯಲ್ಲಿ ನೋಂದಾಯಿತವಾಗಿವೆ.



ಟಾಟಾ ಟ್ರಸ್ಟ್ಸ್‌ನ ಆರು ಮಂದಿ ಟ್ರಸ್ಟಿಗಳ ಸಭೆಯೊಂದರಲ್ಲಿ ಬಿಕ್ಕಟ್ಟು ಶುರುವಾಯಿತು. ಟಾಟಾ ಟ್ರಸ್ಟ್ಸ್ ಎಂಬುದು ದಾನ ಕಾರ್ಯದಲ್ಲಿ ತೊಡಗಿರುವ ಹಲವು ಟ್ರಸ್ಟ್‌ಗಳ ಒಕ್ಕೂಟದಂತಿದೆ. ಸೆಪ್ಟೆಂಬರ್ 11ರಂದು ನಡೆದ ಈ ಸಭೆಯು ಟಾಟಾ ಸನ್ಸ್ ಆಡಳಿತ ಮಂಡಳಿಗೆ ವಿಜಯ್ ಸಿಂಗ್ ಅವರನ್ನು ನಿರ್ದೇಶಕರನ್ನಾಗಿ ಮರುನೇಮಕ ಮಾಡುವುದನ್ನು ಪರಿಗಣಿಸುವ ಕಾರ್ಯಸೂಚಿಯನ್ನು ಹೊಂದಿತ್ತು. ಟಾಟಾ ಟ್ರಸ್ಟ್ಸ್‌ನಲ್ಲಿ ಏಳು ಮಂದಿ ಟ್ರಸ್ಟಿಗಳು ಇದ್ದಾರೆ. ಸಿಂಗ್ ಅವರೂ ಒಬ್ಬ ಟ್ರಸ್ಟಿ.

ಸಿಂಗ್ ಅವರ ಮರುನೇಮಕದ ಪ್ರಸ್ತಾವವನ್ನು ಟ್ರಸ್ಟ್ಸ್‌ನ ಅಧ್ಯಕ್ಷ ನೋಯಲ್ ಟಾಟಾ ಮತ್ತು ವೇಣು ಶ್ರೀನಿವಾಸನ್ (ಟಿವಿಎಸ್ ಸಮೂಹದ ಗೌರವಾಧ್ಯಕ್ಷ) ಅವರು ಸಭೆಯಲ್ಲಿ ಮಂಡಿಸಿದರು. ಆದರೆ ಇದಕ್ಕೆ ಮೆಹ್ಲಿ ಮಿಸ್ತ್ರಿ, ಪ್ರಮಿತ್ ಝವೇರಿ, ಜೆಹಾಂಗಿರ್ ಎಚ್‌ಸಿ ಜೆಹಾಂಗಿರ್ ಮತ್ತು ಡೇರಿಯಸ್ ಖಂಬಾಟ ವಿರೋಧ ವ್ಯಕ್ತಪಡಿಸಿದರು. ಹೀಗಿ ಪ್ರಸ್ತಾವ ತಿರಸ್ಕೃತಗೊಂಡಿತು.

ಇದಾದ ನಂತರ ನಾಲ್ಕು ಮಂದಿ ಟ್ರಸ್ಟಿಗಳು ಮೆಹ್ಲಿ ಮಿಸ್ತ್ರಿ ಅವರನ್ನು ಟಾಟಾ ಸನ್ಸ್ ಆಡಳಿತ ಮಂಡಳಿಗೆ ನೇಮಕ ಮಾಡುವ ಪ್ರಸ್ತಾವ ಮಂಡಿಸಿದರು. ಆದರೆ ಇದಕ್ಕೆ ನೋಯಲ್ ಟಾಟಾ ಮತ್ತು ವೇಣು ಶ್ರೀನಿವಾಸನ್ ವಿರೋಧ ದಾಖಲಿಸಿದರು. ನಂತರದಲ್ಲಿ ಸಿಂಗ್ ಅವರು ಟಾಟಾ ಸನ್ಸ್ ಆಡಳಿತ ಮಂಡಳಿಗೆ ರಾಜೀನಾಮೆ ನೀಡಿದರು.

ಟಾಟಾ ಟ್ರಸ್ಟ್ಸ್‌ನ ಇನ್ನೊಂದು ಸಭೆಯು ಇದೇ 10ರಂದು ನಡೆಯಲಿದೆ. ಅದರ ಕಾರ್ಯಸೂಚಿ ಗೊತ್ತಾಗಿಲ್ಲ. ಈ ಕುರಿತು ಪ್ರತಿಕ್ರಿಯಿಸಲು ಟಾಟಾ ಟ್ರಸ್ಟ್ಸ್, ಟಾಟಾ ಸನ್ಸ್ ನಿರಾಕರಿಸಿವೆ. ವೇಣು ಶ್ರೀನಿವಾಸನ್, ಮೆಹ್ಲಿ ಮಿಸ್ತ್ರಿ ಅವರಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಕೇಂದ್ರ ಸರ್ಕಾರದ ಮಧ್ಯಪ್ರವೇಶ?

ಟಾಟಾ ಟ್ರಸ್ಟ್ಸ್‌ನಲ್ಲಿನ ಒಳಜಗಳವು ಉದ್ಯಮ ಸಮೂಹದ ಕೆಲಸಗಳ ಮೇಲೆ ಪರಿಣಾಮ ಉಂಟುಮಾಡುವ ಭೀತಿ ಎದುರಾಗಿರುವ ಕಾರಣದಿಂದಾಗಿ ಕೇಂದ್ರ ಸರ್ಕಾರದ ಮಧ್ಯಪ್ರವೇಶವು ಅನಿವಾರ್ಯವಾಗಿದೆ ಎಂದು ಮೂಲಗಳು ಹೇಳಿವೆ.

'ಟಾಟಾ ಸಮೂಹವು ದೇಶದ ಅರ್ಥ ವ್ಯವಸ್ಥೆಯ ಪಾಲಿಗೆ ಎಷ್ಟೊಂದು ಮಹತ್ವದ್ದು ಎಂಬುದನ್ನು ಪರಿಗಣಿಸಿದಾಗ, ಒಬ್ಬ ವ್ಯಕ್ತಿಗೆ ಅದರ ಮೇಲೆ ನಿಯಂತ್ರಣ ಸಾಧಿಸಲು ಅವಕಾಶ ನೀಡಬಹುದೇ ಎಂಬುದು ಸರ್ಕಾರದ ಮುಂದಿರುವ ಮುಖ್ಯ ಪ್ರಶ್ನೆಯಾಗಿದೆ' ಎಂದು ಮೂಲವೊಂದು ಹೇಳಿದೆ.

ಟಾಟಾ ಸನ್ಸ್ ಕಂಪನಿಯನ್ನು ಸೆಪ್ಟೆಂಬರ್ 30ಕ್ಕೆ ಮೊದಲು ಷೇರುಪೇಟೆಯಲ್ಲಿ ನೋಂದಾಯಿಸಬೇಕು ಎಂದು ಆರ್‌ಬಿಐ ಗಡುವು ವಿಧಿಸಿತ್ತು. ಆದರೆ, ಇದರಿಂದ ವಿನಾಯಿತಿ ನೀಡುವಂತೆ ಕೋರಿ ಟಾಟಾ ಸನ್ಸ್ ಅರ್ಜಿ ಸಲ್ಲಿಸಿದ್ದು, ಅದು ಆರ್‌ಬಿಐ ಪರಿಶೀಲನೆಯಲ್ಲಿದೆ.

ಮೆಹ್ಲಿ ಮಿಸ್ತ್ರಿ ನೇತೃತ್ವದಲ್ಲಿ ನಾಲ್ಕು ಮಂದಿ ಟ್ರಸ್ಟಿಗಳು, ಟಾಟಾ ಟ್ರಸ್ಟ್ಸ್‌ನಲ್ಲಿ ನೋಯಲ್ ಟಾಟಾ ಅವರ ನಾಯಕತ್ವದ ಮಹತ್ವವನ್ನು ಕುಗ್ಗಿಸಲು ಯತ್ನಿಸುತ್ತಿದ್ದಾರೆ ಎಂದು ಸಮೂಹದಲ್ಲಿ ಕೆಲವರು ಭಾವಿಸಿದ್ದಾರೆ.

ನೋಯಲ್ ಟಾಟಾ, ಎನ್. ಚಂದ್ರಶೇಖರನ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮಂಗಳವಾರ ಭೇಟಿ ಮಾಡಿದ್ದಾರೆ. ವೇಣು ಶ್ರೀನಿವಾಸನ್, ಡೇರಿಯಸ್ ಖಂಬಾಟ ಅವರೂ ಈ ಭೇಟಿ ವೇಳೆ ಜೊತೆಗಿದ್ದರು.

ನವರಾತ್ರಿ: ವಾಹನ ಮಾರಾಟಕ್ಕೆ ಹೊಸ ಕಳೆ

ನವದೆಹಲಿ (ಪಿಟಿಐ): ನವರಾತ್ರಿ ಹಬ್ಬದ ಸಂದರ್ಭದಲ್ಲಿ ಜಿಎಸ್‌ಟಿ ಪರಿಷ್ಕರಣೆ ಪರಿಣಾಮವಾಗಿ ಪ್ರಯಾಣಿಕ ವಾಹನಗಳ ಮಾರಾಟ ಪ್ರಮಾಣವು ಶೇಕಡ 35ರಷ್ಟು ಏರಿದೆ. ಹಬ್ಬದ ಹೊತ್ತಿನಲ್ಲಿ ಮಾರಾಟ ಜೋರಾಗಿ ನಡೆದಿದ್ದರಿಂದಾಗಿ, ಸೆಪ್ಟೆಂಬರ್ ಮಾರಾಟ ಪ್ರಮಾಣವೂ ಹೆಚ್ಚಳ ಕಂಡಿದೆ.

ಸೆಪ್ಟೆಂಬರ್‌ನ ಮೊದಲ 21 ದಿನ ವಾಹನ ಮಾರಾಟ ಹೆಚ್ಚಿರಲಿಲ್ಲ. ಸೆಪ್ಟೆಂಬರ್ 22ರಿಂದ ಪರಿಷ್ಕೃತ ಜಿಎಸ್‌ಟಿ ದರ ಜಾರಿಗೆ ಬಂತು. ಆ ದಿನದಿಂದ ವಾಹನ ಮಾರಾಟ ಹೆಚ್ಚಾಯಿತು ಎಂದು ಆಟೊಮೊಬೈಲ್ ಡೀಲರ್‌ಗಳ ಸಂಘಗಳ ಒಕ್ಕೂಟ (ಎಫ್‌ಎಡಿಎ) ಹೇಳಿದೆ. ನವರಾತ್ರಿಯ ವೇಳೆಯಲ್ಲಿ ಈ ಬಾರಿ ಒಟ್ಟು 2.17 ಲಕ್ಷ ಪ್ರಯಾಣಿಕ ವಾಹನಗಳ ಮಾರಾಟ ಆಗಿದೆ. ಹಿಂದಿನ ವರ್ಷದ ನವರಾತ್ರಿ ಹಬ್ಬದಲ್ಲಿ ಮಾರಾಟ ಸಂಖ್ಯೆ 1.61 ಲಕ್ಷ ಆಗಿತ್ತು.

'ದೇಶದ ಆಟೊಮೊಬೈಲ್ ಉದ್ಯಮದ ಪಾಲಿಗೆ ಈ ವರ್ಷದ ಸೆಪ್ಟೆಂಬರ್ ತಿಂಗಳು ಅಸಾಧಾರಣವಾಗಿತ್ತು. ಮೊದಲ ಮೂರು ವಾರಗಳಲ್ಲಿ ಬೇಡಿಕೆಯು ಹೆಚ್ಚು ಇರಲಿಲ್ಲ. ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬರುವುದನ್ನು ಗ್ರಾಹಕರು ಕಾಯುತ್ತಿದ್ದರು. ನವರಾತ್ರಿ ಆರಂಭದ ದಿನದಿಂದಲೇ ಜಿಎಸ್‌ಟಿ ಪರಿಷ್ಕೃತ ದರ ಜಾರಿಗೆ ಬಂದ ಪರಿಣಾಮವಾಗಿ, ತಿಂಗಳ ಕೊನೆಯ ವಾರದಲ್ಲಿ ಸ್ಥಿತಿ ಸಂಪೂರ್ಣ ಬದಲಾಯಿತು' ಎಂದು ಎಫ್‌ಎಡಿಎ ಉಪಾಧ್ಯಕ್ಷ ಸಾಯಿ ಗಿರಿಧರ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಭಾರತದ ಜಿಡಿಪಿ ಬೆಳವಣಿಗೆ ಅಂದಾಜು ಪರಿಷ್ಕರಣೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆ ಅಂದಾಜನ್ನು ವಿಶ್ವಬ್ಯಾಂಕ್ ಪರಿಷ್ಕರಿಸಿದ್ದು, ಬೆಳವಣಿಗೆ ಪ್ರಮಾಣವು ಶೇ 6.5ರಷ್ಟು ಇರಲಿದೆ ಎಂದು ಹೇಳಿದೆ. ಈ ಮೊದಲಿನ ಅಂದಾಜಿನಲ್ಲಿ ವಿಶ್ವಬ್ಯಾಂಕ್, ಬೆಳವಣಿಗೆ ಪ್ರಮಾಣವು ಶೇ 6.3ರಷ್ಟು ಆಗಬಹುದು ಎಂದು ಹೇಳಿತ್ತು.

ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆಯನ್ನು ಭಾರತವು ದಾಖಲಿಸುವ ನಿರೀಕ್ಷೆ ಇದೆ ಎಂದು ಕೂಡ ಅದು ಹೇಳಿದೆ. ಬೇಡಿಕೆಯಲ್ಲಿನ ಹೆಚ್ಚಳವು ದೇಶದ ಆರ್ಥಿಕ ಬೆಳವಣಿಗೆಗೆ ಒತ್ತಾಸೆಯಾಗಿ ನಿಲ್ಲಲಿದೆ.



ಭಾರತದ ಸರಕುಗಳಿಗೆ ಅಮೆರಿಕವು ಶೇ 50ರಷ್ಟು ಸುಂಕವನ್ನು ವಿಧಿಸಿರುವ ಪರಿಣಾಮವು ಮುಂದಿನ ವರ್ಷದಲ್ಲಿ ಕಾಣಿಸಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ. ಹೀಗಾಗಿ, 2026–27ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣದ ಅಂದಾಜನ್ನು ತಗ್ಗಿಸಲಾಗಿದ್ದು, ಅದು ಶೇ 6.3ರಷ್ಟು ಇರಲಿದೆ ಎಂದು ಹೇಳಿದೆ.

ಕೃಷಿ ಉತ್ಪಾದನೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಕೂಲಿ ಮೊತ್ತವು ನಿರೀಕ್ಷೆಗಿಂತ ಹೆಚ್ಚಾಗಿದೆ. ಜಿಎಸ್‌ಟಿ ದರವನ್ನು ತಗ್ಗಿಸುವ ಮೂಲಕ ಸರ್ಕಾರ ತಂದಿರುವ ಸುಧಾರಣೆಗಳು ಆರ್ಥಿಕ ಚಟುವಟಿಕೆಗಳಿಗೆ ನೆರವಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

ಇಂಪೀರಿಯಲ್ ಬ್ಲ್ಯೂ ವಿಸ್ಕಿ ಖರೀದಿಗೆ ಸಿಸಿಐ ಒಪ್ಪಿಗೆ

ನವದೆಹಲಿ (ಪಿಟಿಐ): ಫ್ರಾನ್ಸ್‌ನ ಪರ್ನೊ ರಿಕಾರ್ಡ್ ಮಾಲೀಕತ್ವದ 'ಇಂಪೀರಿಯಲ್ ಬ್ಲ್ಯೂ' ವಿಸ್ಕಿಯನ್ನು ಖರೀದಿಸಲು ಭಾರತದ ಮದ್ಯ ತಯಾರಿಕಾ ಕಂಪನಿ ತಿಲಕ್‌ನಗರ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಮಂಗಳವಾರ ಒಪ್ಪಿಗೆ ನೀಡಿದೆ.

ಪರ್ನೊ ರಿಕಾರ್ಡ್ ಕಂಪನಿಗೆ ₹4,150 ಕೋಟಿ ಪಾವತಿಸಿ, ಇಂಪೀರಿಯಲ್ ಬ್ಲ್ಯೂ ವಿಸ್ಕಿಯ ವಹಿವಾಟನ್ನು ತಿಲಕ್‌ನಗರ್ ಇಂಡಸ್ಟ್ರೀಸ್ ಕಂಪನಿಯು ಖರೀದಿ ಮಾಡಲಿದೆ. ಈ ಖರೀದಿಯ ಬಗ್ಗೆ ತಿಲಕ್‌ನಗರ್ ಇಂಡಸ್ಟ್ರೀಸ್ ಕಂಪನಿಯು ಜುಲೈನಲ್ಲಿ ಮಾಹಿತಿ ನೀಡಿತ್ತು.

ಈ ಖರೀದಿಯಿಂದಾಗಿ ತಿಲಕ್‌ನಗರ್ ಕಂಪನಿಯು ದೇಶದಲ್ಲಿ ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ವಿಸ್ಕಿ ಮಾರುಕಟ್ಟೆಯಲ್ಲಿ ಪ್ರಮುಖ ಕಂಪನಿಗಳ ಪೈಕಿ ಒಂದಾಗಲಿದೆ. ತಿಲಕ್‌ನಗರ್ ಕಂಪನಿಯು ಮ್ಯಾನ್ಷನ್ ಹೌಸ್ ಬ್ರ್ಯಾಂಡಿ, ಕೊರಿಯರ್ ನೆಪೋಲಿಯನ್ ಬ್ರ್ಯಾಂಡಿ, ಮ್ಯಾನ್ಷನ್ ಹೌಸ್ ಗೋಲ್ಡ್ ವಿಸ್ಕಿ, ಬ್ಲ್ಯೂ ಲಗೂನ್ ಜಿನ್ ಬ್ರ್ಯಾಂಡ್‌ಗಳ ಮಾಲೀಕತ್ವ ಹೊಂದಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಯಶೀಲಾ ರಾವ್, ಶಿವಮೊಗ್ಗ

• **ಪ್ರಶ್ನೆ: ನಾನು ನಿವೃತ್ತ ಶಾಲಾ ಶಿಕ್ಷಕಿ, ತಿಂಗಳಿಗೆ ₹25,000 ಪಿಂಚಣಿ ಪಡೆಯುತ್ತಿದ್ದೇನೆ. ನಾವು ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಮನೆ ಖರ್ಚು ಸೇರಿದಂತೆ ನಮ್ಮ ಮಾಸಿಕ ವೆಚ್ಚ ಸುಮಾರು ₹20,000. ನನ್ನ ಉಳಿತಾಯ ಮತ್ತು ಹೂಡಿಕೆ ಸೇರಿ ಸುಮಾರು ₹25 ಲಕ್ಷವಿದೆ. ಅದು ಬ್ಯಾಂಕ್‌ನ ನಿಶ್ಚಿತ ಠೇವಣಿಯಲ್ಲಿ ಇದೆ. ನಮಗೆ ಸ್ವಂತ ಮನೆ ಇದೆ. ಇದನ್ನು ಕಟ್ಟಿಸಿ ಸುಮಾರು 25 ವರ್ಷಗಳಾಗಿದ್ದು ಆ ಕಾಲದಲ್ಲಿ ಸುಮಾರು ₹15 ಲಕ್ಷ ವೆಚ್ಚವಾಗಿದೆ. ನಿವೇಶನದ ಅಳತೆ 2,000 ಚದರ ಅಡಿ ಇದೆ. ನನ್ನ ವಯಸ್ಸು 61 ವರ್ಷ. ಜೀವನ ನಿರ್ವಹಣೆ ಖರ್ಚುಗಳು ಮತ್ತು ಆರೋಗ್ಯ ವೆಚ್ಚಗಳು ಕ್ರಮೇಣ ಹೆಚ್ಚುತ್ತಿರುವುದನ್ನು ಪರಿಗಣಿಸಿದಾಗ, ಈ ಹೂಡಿಕೆಯಿಂದ ಬರುವ ಬಡ್ಡಿ ಮತ್ತು ನಮ್ಮ ಹೂಡಿಕೆಗಳು ನನ್ನ ಹಾಗೂ ಪತಿಯವರ ಮುಂದಿನ ಜೀವನಕ್ಕೆ ಸಾಕಾಗುತ್ತದೆಯೇ ಎಂಬ ಆತಂಕ ಇದೆ. ನಮಗೆ ಮಕ್ಕಳಿಲ್ಲ, ನಮ್ಮ ಭದ್ರತೆ ಸಂಪೂರ್ಣವಾಗಿ ಈ ಪಿಂಚಣಿ ಮತ್ತು ಉಳಿತಾಯದ ಮೇಲೆಯೇ ಅವಲಂಬಿತವಾಗಿದೆ.**

ಉತ್ತರ: ನಿಮ್ಮ ವಾರ್ಷಿಕ ಪಿಂಚಣಿ ಮೊತ್ತ ₹3 ಲಕ್ಷ ಹಾಗೂ ಸಂಚಿತ ಹೂಡಿಕೆ ಮೊತ್ತ ₹25 ಲಕ್ಷ. ಈ ಮೊತ್ತದ ಮೇಲೆ ನಿರೀಕ್ಷಿತ ಬಡ್ಡಿ ಶೇ 8ರಂತೆ ವರ್ಷಕ್ಕೆ ₹2 ಲಕ್ಷದಷ್ಟು ಹೆಚ್ಚುವರಿ ಆದಾಯ ನಿಮಗಿದೆ. ಹೀಗಾಗಿ ನಿಮ್ಮ ಒಟ್ಟು ಅಂದಾಜು ವಾರ್ಷಿಕ ಆದಾಯ ₹5 ಲಕ್ಷ. ಅಂದರೆ ತಿಂಗಳಿಗೆ ಸುಮಾರು ₹42 ಸಾವಿರ ಸರಾಸರಿ ಆದಾಯ.

ನೀವು ಉಲ್ಲೇಖಿಸಿರುವಂತೆ, ನಿಮ್ಮ ತಿಂಗಳ ವೆಚ್ಚ ಸುಮಾರು ₹20,000. ಅಂದರೆ, ವಾರ್ಷಿಕವಾಗಿ ಇದು ₹2.40 ಲಕ್ಷ. ಆದಾಯದ ಸುಮಾರು ಅರ್ಧದಷ್ಟು ಮೊತ್ತ ನಿಮ್ಮ ಖರ್ಚುಗಳಿಗೆ ಮೀಸಲಿಡ ಬೇಕಾಗುತ್ತದೆ. ನಿಮ್ಮ ಹೂಡಿಕೆಯು ನಿಶ್ಚಿತ ಬಡ್ಡಿ ಆದಾಯ ನೀಡುವುದರಿಂದ ಇದರಿಂದ ಹೆಚ್ಚಿನ ಗಳಿಕೆ ಅಸಾಧ್ಯ. ಸಾಮಾನ್ಯವಾಗಿ ವರ್ಷಕ್ಕೆ ಶೇ 6ರಷ್ಟು ಹಣದುಬ್ಬರದ ಅಂದಾಜು ಮಾಡಬೇಕಾಗುತ್ತದೆ. ಹೀಗಾಗಿ ಇದೇ ವೆಚ್ಚ ಮುಂದಿನ 5 ವರ್ಷದಲ್ಲಿ ಸುಮಾರು ₹27 ಸಾವಿರ ಹಾಗೂ ಮುಂದಿನ 10 ವರ್ಷಗಳಲ್ಲಿ ₹36 ಸಾವಿರ ಆಗಬಹುದು. ಹೀಗಾಗಿ ಈ ವೆಚ್ಚ ವೃದ್ಧಿಯನ್ನು ಸರಿದೂಗಿಸುವುದು ಹಣದುಬ್ಬರದ ಪ್ರಮಾಣಕ್ಕಿಂತ ಹೆಚ್ಚಿನ ಆದಾಯ ನೀಡುವ ದೀರ್ಘಾವಧಿ ಹೂಡಿಕೆಗಳಿಂದ ಸಾಧ್ಯ.

ನೀವು ಈಗಾಗಲೇ ನಿವೃತ್ತರಾಗಿದ್ದು ಸಾಂಪ್ರದಾಯಿಕ ಹೂಡಿಕೆಯಾದ ಬ್ಯಾಂಕ್ ಹಾಗೂ ಅಂಚೆ ಇಲಾಖೆಯ ಹೂಡಿಕೆಗಳನ್ನು ಬಿಟ್ಟು ಇತರ ಕ್ಷೇತ್ರಗಳಲ್ಲೂ ಹೂಡಿಕೆ ಬಗ್ಗೆ ಪರಿಗಣಿಸಬೇಕಾಗಬಹುದು. ಮ್ಯೂಚುವಲ್ ಫಂಡ್‌ಗಳಲ್ಲಿ ನಿಮಗೆ ಅನುಭವ ಇಲ್ಲದಿದ್ದರೆ, ಆ ಬಗ್ಗೆ ವಿಶ್ವಸನೀಯ ವ್ಯಕ್ತಿಗಳಿಂದ ಮಾಹಿತಿ ಪಡೆದು ಹಂತ ಹಂತವಾಗಿ ನಿಮ್ಮ ಹೂಡಿಕೆಯನ್ನು ಉತ್ತಮವಾದ ಈಕ್ವಿಟಿ ಫಂಡ್‌ಗಳಿಗೆ ವರ್ಗಾಯಿಸಿ. ಇದು ಸುಮಾರು 5 ವರ್ಷಗಳ ದೀರ್ಘ ಕಾಲದಲ್ಲಿ ವಾರ್ಷಿಕವಾಗಿ ಶೇಕಡಾ 10ಕ್ಕಿಂತ ಅಧಿಕ ಸರಾಸರಿ ಆದಾಯ ನೀಡೀತು. ಈ ಹಂತದಲ್ಲಿ ಮಾರುಕಟ್ಟೆ ಆಧಾರಿತವಾಗಿ ಹೂಡಿಕೆ ಮೌಲ್ಯ ಹೆಚ್ಚಿದಂತೆ ನೀವು ಬಂದ ಲಾಭದಲ್ಲಿ ಪ್ರತಿ ತಿಂಗಳೂ ನಿರ್ದಿಷ್ಟ ಮೊತ್ತ ಹಿಂಪಡೆಯಬಹುದು, ಇದು ನಿಮ್ಮ ಹೆಚ್ಚುವರಿ ವೆಚ್ಚ ನಿಭಾಯಿಸುವಲ್ಲಿ ನೆರವಾಗುತ್ತದೆ. ಅನಿವಾರ್ಯ ಸಂದರ್ಭದಲ್ಲಿ ಸಂಪೂರ್ಣ ಮೊತ್ತವನ್ನು ಹಿಂಪಡೆಯುವ ಅವಕಾಶ ಇದ್ದೇ ಇದೆ.

ಇದಲ್ಲದೆ, ವಿಶ್ವಸನೀಯ ಬಂಧುಗಳಿದ್ದರೆ, ನಿಮ್ಮನ್ನು ನೋಡಿಕೊಳ್ಳುವ ಜವಾಬ್ದಾರಿಯ ಜೊತೆಗೆ ಕಾನೂನಾತ್ಮಕವಾಗಿ ಆಸ್ತಿಯ ಉಯಿಲು ಬರೆಸುವ ಪ್ರಕ್ರಿಯೆ ಕೂಡಾ ನಿಮಗೆ ನೆರವಾಗಬಹುದು. ಇದಕ್ಕೆ ಪ್ರತ್ಯೇಕವಾಗಿ ಕಾನೂನು ಸಲಹೆ ಪಡೆದುಕೊಳ್ಳಿ. ❖

ಸತೀಶ್, ಊರು ತಿಳಿಸಿಲ್ಲ

• **ಪ್ರಶ್ನೆ: ನನ್ನ ಮಗನ ವಯಸ್ಸು 23 ವರ್ಷ. ಅವನು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ತಿಂಗಳಿಗೆ ₹1,70,000 ವೇತನ ಪಡೆಯುತ್ತಿದ್ದಾನೆ. ಅವನ ಪ್ರಸ್ತುತ ಮಾಸಿಕ ಹೂಡಿಕೆಗಳು ಈ ಕೆಳಗಿನಂತಿವೆ – ಆವರ್ತಕ ಠೇವಣಿಗೆ ₹25,000, ಸ್ಮಾಲ್ ಕ್ಯಾಪ್ ಹೂಡಿಕೆ ₹20,000, ನಿಫ್ಟಿ ಇಂಡೆಕ್ಸ್ ಫಂಡ್‌ಗೆ ₹30,000 ಮತ್ತು ಫ್ಲೆಕ್ಸಿ ಕ್ಯಾಪ್ ಫಂಡ್‌ಗೆ ₹20,000. ಹೀಗೆ ಒಟ್ಟಾರೆ ಒಂದು ಲಕ್ಷ ರೂಪಾಯಿಯಷ್ಟನ್ನು ಪ್ರತಿ ತಿಂಗಳು ಹೂಡಿಕೆ ಮಾಡುತ್ತಿದ್ದಾನೆ. ಅವನ ಮಾಸಿಕ ಖರ್ಚು ₹35,000ದಿಂದ ₹40,000ದಷ್ಟು ಇದೆ. ಮುಂದಿನ 2–3 ವರ್ಷಗಳಲ್ಲಿ ಬೆಂಗಳೂರಿನ ಸುತ್ತಮುತ್ತ ಆಸ್ತಿ (ಮನೆ/ಫ್ಲ್ಯಾಟ್) ಖರೀದಿಸುವ ಯೋಜನೆ ಇದೆ. ಅವನ ಪ್ರಸ್ತುತ ಆದಾಯ, ಖರ್ಚು ಮತ್ತು ಹೂಡಿಕೆ ಸ್ಥಿತಿಯನ್ನು ಪರಿಗಣಿಸಿ, ಈ ಗುರಿಯನ್ನು ಪರಿಣಾಮಕಾರಿಯಾಗಿ ಸಾಧಿಸಲು ಹಣಕಾಸು ಯೋಜನೆ ಹಾಗೂ ಹೂಡಿಕೆ ಹೇಗೆ ಮಾಡಬಹುದು ಎಂಬ ಮಾಹಿತಿ ನೀಡಿ.**

ಉತ್ತರ: ನಿಮ್ಮ ಮಗನಿಗೆ ಸಣ್ಣ ವಯಸ್ಸಿನಲ್ಲೇ ಸ್ಥಿರ ಆದಾಯ ಇದೆ. ಅವನಲ್ಲಿ ಶಿಸ್ತಿನ ಹೂಡಿಕೆ ಧೋರಣೆ ಬೆಳೆಸಿರುವುದು ಶ್ಲಾಘನೀಯ. ತಿಂಗಳ ₹1.7 ಲಕ್ಷ ಆದಾಯದಲ್ಲಿ ₹1 ಲಕ್ಷದಷ್ಟನ್ನು ಹೂಡಿಕೆ ಮಾಡುತ್ತಿರುವುದು ದೀರ್ಘಾವಧಿಯಲ್ಲಿ ಸಂಪತ್ತಿನ ಸೃಷ್ಟಿಗೆ ಉತ್ತಮ ಅಡಿಪಾಯ. ಆದರೆ ಮುಂದಿನ 2–3 ವರ್ಷಗಳಲ್ಲಿ ಆಸ್ತಿ ಖರೀದಿ ಗುರಿ ಹೊಂದಿರುವುದರಿಂದ ಹೂಡಿಕೆ ತಂತ್ರದಲ್ಲಿ ಸ್ವಲ್ಪ ಬದಲಾವಣೆ ಅಗತ್ಯ. ಪ್ರಸ್ತುತ ಶೇ 75ರಷ್ಟು ಮೊತ್ತ ಈಕ್ವಿಟಿ ವಿಭಾಗದಲ್ಲಿದೆ. ಇದು ಆರ್ಥಿಕ ಅಪಾಯ ತಡೆಯುವ ದೃಷ್ಟಿಯಿಂದ ಹಿತಕರವಲ್ಲ. ಇದನ್ನು ಶೇ 50ಕ್ಕೆ ತಗ್ಗಿಸಿ, ಉಳಿದ ಮೊತ್ತವನ್ನು ನಿಗದಿತ ಆದಾಯ ನೀಡುವ ಹೂಡಿಕೆಗಳಲ್ಲಿ ತೊಡಗಿಸಿ.

ಇದಲ್ಲದೆ ನಿಮ್ಮ ಹೂಡಿಕೆ ಬಜೆಟ್ ಏನೆಂಬುದನ್ನು ನಿರ್ಧರಿಸಿ. ಉದಾಹರಣೆಗೆ ₹1.25 ಕೋಟಿ ನಿಮ್ಮ ಒಟ್ಟು ಹೂಡಿಕೆ ಆಗಲಿದೆ ಎಂದಿದ್ದರೆ, ಈಗಿನ ಹೂಡಿಕೆಯಿಂದ ಒಗ್ಗೂಡಿರುವ ₹25-30 ಲಕ್ಷ ಮೊತ್ತವನ್ನು ಡೌನ್ ಪೇಮೆಂಟ್‌ಗೆ ಬಳಸಿಕೊಂಡು ಉಳಿದ ಮೊತ್ತವನ್ನು ಸಾಲ ಪಡೆದು ಹೊಂದಿಸಿಕೊಳ್ಳಬಹುದು. 20 ವರ್ಷದ ಸಾಲಕ್ಕೆ ಶೇ 8.5ರ ದರದಲ್ಲಿ ₹90 ಸಾವಿರದೊಳಗೆ ಇಎಂಐ ಇರುತ್ತದೆ. ಆದಾಯ ಹೆಚ್ಚಿದಂತೆ ಸಾಲವನ್ನು ತ್ವರಿತವಾಗಿ ಮರುಪಾವತಿಸಿ, ಹೂಡಿಕೆಯ ಪ್ರಮಾಣವನ್ನು ಮತ್ತೆ ಹೆಚ್ಚಿಸಿ.

ಒಂದು ವೇಳೆ ನೀವು ಈಗ ಇರುವಂತೆ ಆರ್ಥಿಕ ಅಪಾಯ ಅರಿತು ಹೆಚ್ಚಿನ ಮೊತ್ತವನ್ನು ಈಕ್ವಿಟಿ ವಿಭಾಗಕ್ಕೆ ನಿಯೋಜಿಸಲು ಬದ್ಧರಾಗಿದ್ದರೆ, ಮೂರರಿಂದ ಐದು ವರ್ಷ ಕಾಲ ನಿಮ್ಮ ಹೂಡಿಕೆ ಮುಂದುವರಿಸಲು ಮಾನಸಿಕವಾಗಿ ಈಗಲೇ ಸನ್ನದ್ಧರಾಗಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಶಾಂತಿ ಸ್ಥಾಪನೆಗೆ ಸುಂಕ ಬಳಕೆ: ಟ್ರಂಪ್

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): 'ಯುದ್ಧವನ್ನು ನಿಲ್ಲಿಸಲು 'ಸುಂಕ' ಹೇರುವ ಕ್ರಮವನ್ನು ಬಹಳ ಪರಿಣಾಮಕಾರಿಯಾಗಿ ಬಳಸಿದ್ದೇನೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. 'ಭಾರತ–ಪಾಕಿಸ್ತಾನ ಯುದ್ಧ ಕೊನೆಗೊಳಿಸಲು ಇದೇ ತಂತ್ರವನ್ನು ಬಳಸಿದ್ದೇನೆ' ಎಂದು ಪುನರುಚ್ಚರಿಸಿದ್ದಾರೆ.


'ಅಮೆರಿಕದ ಪಾಲಿಗೆ ಸುಂಕ ಎಂಬುದು ಬಹಳ ಮುಖ್ಯವಾದುದು. ಸುಂಕದ ಕಾರಣದಿಂದಾಗಿ ನಾವು ಇಂದು ಶಾಂತಿ ಸ್ಥಾಪನೆ ಮಾಡುವವರಾಗಿದ್ದೇವೆ. ವಿವಿಧ ದೇಶಗಳ ಮೇಲೆ ಸುಂಕ ಹೇರುವುದರಿಂದ ನೂರಾರು ಶತಕೋಟಿ ಡಾಲರ್‌ಗಳ ಗಳಿಕೆಯ ಜತೆಯಲ್ಲೇ ಶಾಂತಿ ಕಾಪಾಡುವವನ ಪಾತ್ರವನ್ನು ನಿಭಾಯಿಸಲೂ ಸಾಧ್ಯವಾಗುತ್ತಿದೆ' ಎಂದು ಓವಲ್ ಕಚೇರಿಯಲ್ಲಿ ಸೋಮವಾರ ತಿಳಿಸಿದ್ದಾರೆ.

ಅಮೆರಿಕವು 'ಸುಂಕ'ವನ್ನು ಅಸ್ತ್ರವಾಗಿ ಬಳಸದಿದ್ದರೆ ನಾಲ್ಕು ಯುದ್ಧಗಳು ಇನ್ನಷ್ಟು ಉಲ್ಬಣಗೊಳ್ಳುತ್ತಿದ್ದವು ಎಂದು ಅವರು ಹೇಳಿದ್ದಾರೆ.

'ನಾನು ಯುದ್ಧಗಳನ್ನು ನಿಲ್ಲಿಸಲು ಸುಂಕವನ್ನು ಅಸ್ತ್ರವಾಗಿ ಬಳಸುತ್ತಿದ್ದೇನೆ. ನೀವು ಭಾರತ – ಪಾಕಿಸ್ತಾನ ಯುದ್ಧವನ್ನು ನೋಡಿದ್ದೀರಿ. ಅವರು ಪರಸ್ಪರರ ಮೇಲೆ ಮುಗಿಬೀಳಲು ಸಿದ್ಧರಾಗಿದ್ದರು. ಏಳು ವಿಮಾನಗಳನ್ನು ಹೊಡೆದುರುಳಿಸಲಾಗಿತ್ತು. ಅಣ್ವಸ್ತ್ರ ಹೊಂದಿರುವ ಎರಡು ರಾಷ್ಟ್ರಗಳು ಯುದ್ಧವನ್ನು ಮುಂದುವರಿಸಲು ಬಯಸಿದ್ದವು' ಎಂದಿದ್ದಾರೆ.

'ನಾನು ಎರಡೂ ರಾಷ್ಟ್ರಗಳಿಗೆ ಏನಂದೆ ಎಂಬುದನ್ನು ನಿಖರವಾಗಿ ಹೇಳಲು ಬಯಸುವುದಿಲ್ಲ. ಆದರೆ ನನ್ನ ಸಲಹೆ ತುಂಬಾ ಪರಿಣಾಮಕಾರಿಯಾಯಿತು. ಎರಡೂ ದೇಶಗಳು ಯುದ್ಧ ನಿಲ್ಲಿಸಿದವು. ವ್ಯಾಪಾರ ಮತ್ತು ಸುಂಕವನ್ನು ಮುಂದಿಟ್ಟುಕೊಂಡು ನನಗೆ ಯುದ್ಧ ನಿಲ್ಲಿಸಲು ಸಾಧ್ಯವಾಯಿತು' ಎಂದು ಹೇಳಿದ್ದಾರೆ.

'ನನ್ನ ಎರಡನೇ ಅವಧಿಯ ಆಡಳಿತದಲ್ಲಿ ಇದುವರೆಗೆ ಏಳು ಯುದ್ಧಗಳನ್ನು ನಿಲ್ಲಿಸಿದ್ದೇನೆ' ಎಂಬ ಹೇಳಿಕೆಯನ್ನು ಟ್ರಂಪ್ ಹಲವು ಸಲ ಪುನರುಚ್ಚರಿಸಿದ್ದಾರೆ.



ಪ್ರಶಸ್ತಿ ಪುರಸ್ಕೃತರಾದ ಜಾನ್ ಎಂ.ಮಾರ್ಟಿನಿಸ್; ಮೈಕಲ್ ಎಚ್. ಡೆವೊರೆಟ್ ಮತ್ತು ಜಾನ್ ಕ್ಲಾರ್ಕ್

ಮೂವರಿಗೆ ಭೌತವಿಜ್ಞಾನ ನೊಬೆಲ್

ಸ್ಟಾಕ್‌ಹೋಮ್ (ಎಪಿ): 'ಕ್ವಾಂಟಮ್ ಮೆಕ್ಯಾನಿಕಲ್ ಟನಲಿಂಗ್' ಸಂಬಂಧಿತ ಮಹತ್ವದ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು 2025ನೇ ಸಾಲಿನ ಭೌತವಿಜ್ಞಾನ ಕ್ಷೇತ್ರದ ಪ್ರತಿಷ್ಠಿತ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಸ್ವೀಡಿಶ್ ಅಕಾಡೆಮಿ ಘೋಷಿಸಿದೆ.

ಬ್ರಿಟನ್‌ನ ಜಾನ್ ಕ್ಲಾರ್ಕ್, ಫ್ರಾನ್ಸ್‌ನ ಮೈಕಲ್ ಎಚ್. ಡೆವೊರೆಟ್ ಮತ್ತು ಅಮೆರಿಕದ ಜಾನ್ ಎಂ. ಮಾರ್ಟಿನಿಸ್ ನೊಬೆಲ್ ಪುರಸ್ಕಾರವನ್ನು ಹಂಚಿಕೊಂಡಿದ್ದಾರೆ. ಈ ಮೂವರೂ ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನ ಉಪನ್ಯಾಸಕರಾಗಿದ್ದಾರೆ.

ಆಲ್ಫ್ರೆಡ್ ನೊಬೆಲ್ ಅವರ ಪುಣ್ಯತಿಥಿ ಅಂಗವಾಗಿ ಡಿ.10ರಂದು ನಡೆಯುವ ಕಾರ್ಯಕ್ರಮದಲ್ಲಿ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರಧಾನ ನಡೆಯಲಿದೆ. ಪುರಸ್ಕಾರವು 1.2 ದಶಲಕ್ಷ ಡಾಲರ್ (ಅಂದಾಜು ₹10.65 ಕೋಟಿ) ನಗದು ಪುರಸ್ಕಾರವನ್ನು ಒಳಗೊಂಡಿದೆ.

1901ರಿಂದ 2024ರವರೆಗೆ ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರಕ್ಕೆ 226 ವಿಜ್ಞಾನಿಗಳು ಪಾತ್ರರಾಗಿದ್ದಾರೆ. ಕೃತಕ ಬುದ್ಧಿಮತ್ತೆ ಕ್ಷೇತ್ರದ ಸಂಶೋಧನೆಗಳಿಗಾಗಿ ಕಳೆದ ಬಾರಿ ಜಾನ್ ಹಾಪ್‌ಫೀಲ್ಡ್ ಮತ್ತು ಜಾಫ್ರಿ ಹಿಂಟನ್ ಅವರಿಗೆ ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರ ಲಭಿಸಿತ್ತು.

ಮೇರಿ ಬ್ರಂಕೋ, ಫ್ರೆಡ್ ರಾಮ್ಸ್‌ಡೆಲ್ ಹಾಗೂ ಜಪಾನ್‌ನ ಶಿಮೊನ್ ಸಕಾಗುಚಿ ಅವರಿಗೆ ಪ್ರಸಕ್ತ ಸಾಲಿನ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಸೋಮವಾರ ಘೋಷಣೆಯಾಗಿತ್ತು.

ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಪಾಕಿಸ್ತಾನಕ್ಕೆ ಭಾರತ ಚಾಟಿ

'ತನ್ನವರ ಮೇಲೇ ಬಾಂಬ್ ಹಾಕಿದ ದೇಶ'

ವಿಶ್ವ ಸಂಸ್ಥೆ (ಪಿಟಿಐ): 'ಪಾಕಿಸ್ತಾನವು ತನ್ನ ಜನರ ಮೇಲೆಯೇ ಬಾಂಬ್ ಸ್ಫೋಟಿಸುತ್ತದೆ ಮತ್ತು ತನ್ನ ಜನರನ್ನೇ ವ್ಯವಸ್ಥಿತವಾಗಿ ನರಮೇಧ ಮಾಡುತ್ತದೆ' ಎಂದು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತವು ಸೋಮವಾರ ಬಲವಾದ ಪ್ರತ್ಯುತ್ತರವನ್ನು ನೀಡಿದೆ.

'ಮಹಿಳೆ, ಶಾಂತಿ ಮತ್ತು ಭದ್ರತೆ' ವಿಷಯದ ಕುರಿತ ಚರ್ಚೆಯಲ್ಲಿ ಭಾರತವು ಪಾಕಿಸ್ತಾನದ ವಿರುದ್ಧ ಪ್ರಬಲ ವಾಗ್ದಾಳಿ ನಡೆಸಿದೆ. ಈ ಚರ್ಚೆಯ ಅಧ್ಯಕ್ಷತೆಯನ್ನು ರಷ್ಯಾ ವಹಿಸಿಕೊಂಡಿತ್ತು. ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಚರ್ಚೆಯಲ್ಲಿ ಮಾತನಾಡಿದರು.

ಇದೇ ವಿಷಯದ ಕುರಿತು ವಿಷಯ ಮಂಡಿಸಿದ್ದ ಪಾಕಿಸ್ತಾನವು ಜಮ್ಮು ಮತ್ತು ಕಾಶ್ಮೀರದ ವಿಚಾರವನ್ನು ಪ್ರಸ್ತಾಪಿಸಿತ್ತು. 'ಮಹಿಳೆ, ಶಾಂತಿ ಮತ್ತು ಭದ್ರತೆ ವಿಷಯದ ಕಾರ್ಯಸೂಚಿಯಲ್ಲಿ ಕಾಶ್ಮೀರಿ ಮಹಿಳೆಯರನ್ನು ಭಾರತವು ಹೊರಗಿಟ್ಟಿದೆ. ಈ ನಡೆಯು ಆ ದೇಶದ ನ್ಯಾಯಪರತೆ ಎಷ್ಟರ ಮಟ್ಟಿಗೆ ಇದೆ ಎನ್ನುವುದು ತೋರಿಸುತ್ತದೆ' ಎಂದಿತ್ತು.

'ಪೂರ್ವ ಪಾಕಿಸ್ತಾನದಲ್ಲಿ (ಇಂದಿನ ಬಾಂಗ್ಲಾದೇಶ) 1971ರ ಮಾರ್ಚ್ 25ರಂದು ಪಾಕಿಸ್ತಾನದ ಸೇನೆಯು ಕ್ರೂರವಾದ ದಾಳಿ ನಡೆಸಿತ್ತು. ದೊಡ್ಡ ಸಂಖ್ಯೆಯಲ್ಲಿ ಜನರನ್ನು ಕೊಲ್ಲಲಾಗಿತ್ತು. ಇದಕ್ಕೆ 'ಆಪರೇಷನ್ ಸರ್ಚ್‌ಲೈಟ್' ಎಂದು ಹೆಸರಿಡಲಾಗಿತ್ತು. ಈ ಆಪರೇಷನ್ ಮೂಲಕ ತನ್ನದೇ ಸೇನೆಯಿಂದ 4 ಲಕ್ಷ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿಸಿದ ದೇಶವೊಂದು ತಪ್ಪು ಮಾಹಿತಿಗಳಿಂದ, ತನ್ನ ಅತಿಶಯೋಕ್ತಿಯ ಮಾತುಗಳಿಂದ ಜಗತ್ತನ್ನು ತಪ್ಪು ದಾರಿಗೆ ಎಳೆಯುತ್ತಿದೆ' ಎಂದು ಭಾರತ ಹೇಳಿತು.

'ಚೀನಾದ ಶಸ್ತ್ರಾಸ್ತ್ರಗಳು ಉತ್ತಮ ಕೆಲಸ ಮಾಡಿವೆ'

ಇಸ್ಲಾಮಾಬಾದ್ (ಪಿಟಿಐ): 'ಭಾರತದ ಮೇಲೆ ನಡೆಸಿದ ನಾಲ್ಕು ದಿನಗಳ ಸೇನಾ ಸಂಘರ್ಷದ ವೇಳೆ ಚೀನಾದ ಶಸ್ತ್ರಾಸ್ತ್ರಗಳು ಅತ್ಯದ್ಭುತ ಕೆಲಸ ಮಾಡಿವೆ' ಎಂದು ಪಾಕಿಸ್ತಾನ ಸೇನೆಯ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹಮದ್ ಶರೀಫ್ ಹೇಳಿದ್ದಾರೆ.

ಶರೀಫ್ ಅವರನ್ನು ಬ್ಲೂಮ್‌ಬರ್ಗ್ ಪತ್ರಿಕೆ ಸಂದರ್ಶಿಸಿತ್ತು. ಸಂದರ್ಶನದ ವರದಿಯನ್ನು ಪಾಕಿಸ್ತಾನದ 'ದಿ ಡಾನ್' ಪತ್ರಿಕೆ ಸೋಮವಾರ ಪ್ರಕಟಿಸಿದೆ. 'ನಾವು ಎಲ್ಲ ರೀತಿಯ ತಂತ್ರಜ್ಞಾನಗಳಿಗೆ ತೆರೆದುಕೊಂಡಿದ್ದೇವೆ. ಇತ್ತೀಚೆಗೆ ಚೀನಾದ ಶಸ್ತ್ರಾಸ್ತ್ರ ಅತ್ಯುತ್ತಮವಾಗಿ ಕೆಲಸ ಮಾಡಿದ್ದವು' ಎಂದಿದ್ದಾರೆ.

'ಸಂಘರ್ಷದ ವೇಳೆ ಪಾಕಿಸ್ತಾನದ 12 ಸೇನಾ ವಿಮಾನಗಳು ನಾಶವಾಗಿವೆ' ಎಂಬ ಭಾರತದ ವಾದವನ್ನು ಶರೀಫ್ ನಿರಾಕರಿಸಿದರು. 'ಅಂಕಿ ಅಂಶದ ವಿಚಾರದಲ್ಲಿ ಆಟವಾಡಲು ನಾವು ಯಾವಾಗಲೂ ಯತ್ನಿಸಿಲ್ಲ' ಎಂದಿದ್ದಾರೆ. 'ಸಂಘರ್ಷದಲ್ಲಿ ಚೀನಾದ ಜೆ–10ಸಿ ಜೆಟ್‌ಗಳನ್ನು ಬಳಸಿ ಕೊಳ್ಳಲಾಗಿತ್ತು' ಎಂದು ಪಾಕಿಸ್ತಾನದ ಉಪ ಪ್ರಧಾನಿ ಇಶಾಕ್ ಡಾರ್ ಹೇಳಿದ್ದರು.



ಭಾರತದ ಭೂಪ್ರದೇಶವಾದ ಜಮ್ಮು ಮತ್ತು ಕಾಶ್ಮೀರವನ್ನು ತನ್ನದು ಎಂದು ಪ್ರತಿಪಾದಿಸುತ್ತಿರುವ ಪಾಕಿಸ್ತಾನವು ಆ ಪ್ರದೇಶದ ವಿರುದ್ಧ ಉನ್ಮತ್ತವಾದ ಪುಂಖಾನುಪುಂಖ ಮಾತುಗಳನ್ನು ಆಡುತ್ತಿರುವುದು ನಮ್ಮ ದುರದೃಷ್ಟ

ಪರ್ವತನೇನಿ ಹರೀಶ್, ವಿಶ್ವಸಂಸ್ಥೆಯಲ್ಲಿ ಭಾರತ ಕಾಯಂ ಪ್ರತಿನಿಧಿ

ತಲೈವಾಸ್‌ಗೆ ಮಣಿದ ಪೈರೇಟ್ಸ್

ಆತಿಥೇಯ ತಂಡದ ಗೆಲುವಿನಲ್ಲಿ ಮಿಂಚಿದ ಅರ್ಜುನ್ • ಪಟ್ನಾಗೆ ಎಂಟನೇ ಸೋಲು

ಚೆನ್ನೈ (ಪಿಟಿಐ): ಅರ್ಜುನ್ ದೇಶ್ವಾಲ್ (26 ಅಂಕ) ಅವರ ಅಮೋಘ ರೇಡಿಂಗ್ ಬಲದಿಂದ ಆತಿಥೇಯ ತಮಿಳು ತಲೈವಾಸ್ ತಂಡವು ಮಂಗಳವಾರ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ವಿರುದ್ಧ 19 ಅಂಕಗಳ ಸುಲಭ ಜಯ ಸಾಧಿಸಿತು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಗರಿಷ್ಠ ಸ್ಕೋರಿಂಗ್ ಕಂಡ ಪಂದ್ಯದಲ್ಲಿ ತಲೈವಾಸ್ ತಂಡವು 56–37ರಿಂದ ಪಾರಮ್ಯ ಮೆರೆಯಿತು. ಅರ್ಜುನ್ ಅವರು 21 ಟಚ್ ಪಾಯಿಂಟ್ಸ್ ಮತ್ತು 5 ಬೋನಸ್ ಅಂಕ ಬಾಚಿದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯೂ ಆಗಿದೆ.

ತಲೈವಾಸ್ ತಂಡಕ್ಕೆ ಇದು 13 ಪಂದ್ಯಗಳಲ್ಲಿ ಆರನೇ ಗೆಲುವಾಗಿದೆ. ಒಟ್ಟು 12 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ಪಟ್ನಾ ತಂಡಕ್ಕೆ 11 ಪಂದ್ಯಗಳಲ್ಲಿ ಇದು ಎಂಟನೇ ಸೋಲು. ಆರು ಅಂಕಗಳೊಂದಿಗೆ ಕೊನೆಯ ಮತ್ತು 12ನೇ ಸ್ಥಾನದಲ್ಲಿದೆ.

ಆರಂಭದಿಂದಲೇ ಚುರುಕಿನ ಆಟ ಪ್ರದರ್ಶಿಸಿದ ಆತಿಥೇಯ ತಂಡದ ಆಟಗಾರರು ಮೊದಲಾರ್ಧದಲ್ಲಿ 30–19 ಮುನ್ನಡೆ ಪಡೆದರು. ದ್ವಿತೀಯಾರ್ಧದಲ್ಲೂ ಹಿಡಿತ ಮುಂದುವರಿಸಿ, ಮುನ್ನಡೆಯನ್ನು ಮತ್ತಷ್ಟು ಹಿಗ್ಗಿಸಿದರು. ಎದುರಾಳಿ ತಂಡವನ್ನು ಮೂರು ಬಾರಿ ಆಲೌಟ್ ಬಲೆಗೆ ಕೆಡವಿದರು.

ತಲೈವಾಸ್ ತಂಡದ ರೇಡರ್ ನರೇಂದರ್ ಖಂಡೋಲ (6), ಡಿಫೆಂಡರ್‌ಗಳಾದ ಆಶಿಶ್ ಮತ್ತು ನಿತೀಶ್ ಕುಮಾರ್ (ತಲಾ 5) ‘ಹೈ ಫೈ’ ಸಾಧನೆ ಮಾಡಿದರು. ಪಟ್ನಾ ಪರ ರೇಡರ್‌ಗಳಾದ ಅಯನ್ ಲೋಚಬ್ (16) ಮತ್ತು ಅಂಕಿತ್ ಕುಮಾರ್ ರಾಣಾ (14) ಉತ್ತಮ ಹೋರಾಟ ತೋರಿದರು. ತಂಡ ಗಳಿಸಿದ 37 ಅಂಕಗಳಲ್ಲಿ 30 ಅನ್ನು ಇವರಿಬ್ಬರೇ ಬುಟ್ಟಿಗೆ ಹಾಕಿಕೊಂಡರು. ಅವರಿಗೆ ಉಳಿದ ಆಟಗಾರರಿಂದ ನಿರೀಕ್ಷಿತ ಬೆಂಬಲ ಸಿಗಲಿಲ್ಲ.


ದಬಂಗ್‌ಗೆ 11ನೇ ಗೆಲುವು: ಅಮೋಘ ಲಯದಲ್ಲಿರುವ ಡಬಂಗ್ ಡೆಲ್ಲಿ ತಂಡವು ದಿನದ ಎರಡನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್ ತಂಡವನ್ನು ಟೈಬ್ರೇಕರ್‌ನಲ್ಲಿ 9–3ರಿಂದ ಮಣಿಸಿತು. ಇದರೊಂದಿಗೆ ಈ ಆವೃತ್ತಿಯಲ್ಲಿ 12 ಪಂದ್ಯಗಳಲ್ಲಿ 11ನೇ ಜಯ ದಾಖಲಿಸಿತು.

ನಿಗದಿತ ಅವಧಿಯ ಪಂದ್ಯವು 33–33ರಿಂದ ಸಮಬಲಗೊಂಡಿತ್ತು.

ಇಂದಿನ ಪಂದ್ಯಗಳು

ತೆಲುಗು ಟೈಟನ್ಸ್–ಹರಿಯಾಣ ಸ್ಟೀಲರ್ಸ್ (ರಾತ್ರಿ 8)

ಪುಣೇರಿ ಪಲ್ಟನ್–ಯು ಮುಂಬಾ (ರಾತ್ರಿ 9)



ತಮಿಳು ತಲೈವಾಸ್ ತಂಡದ ಅರ್ಜುನ್ ದೇಶ್ವಾಲ್ ರೇಡಿಂಗ್ ವೈಖರಿ

ಅಮೆರಿಕದ ಸೇಂಟ್ ಲೂಯಿಯಲ್ಲಿ ‘ಲೆಜೆಂಡ್ಸ್ ಚೆಸ್’ ಇಂದಿನಿಂದ

30 ವರ್ಷ ಬಳಿಕ ಆನಂದ್–ಗ್ಯಾರಿ ಸೆಣಸಾಟ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ಸುಮಾರು 30 ವರ್ಷಗಳ ಹಿಂದೆ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದ ಮಾಜಿ ಚಾಂಪಿಯನ್ನರಾದ ವಿಶ್ವನಾಥನ್ ಆನಂದ್ ಮತ್ತು ಗ್ಯಾರಿ ಕ್ಯಾಸ್ಪರೋವ್ ಇದೀಗ ಮತ್ತೊಂದು ಸೆಣಸಾಟಕ್ಕೆ ಸಜ್ಜಾಗಿದ್ದಾರೆ. ಬುಧವಾರ ಇಲ್ಲಿ ಆರಂಭವಾಗಲಿರುವ ಲೆಜೆಂಡ್ಸ್ ಟೂರ್ನಿಯಲ್ಲಿ ಈ ದಿಗ್ಗಜರು ಎದುರಾಗಲಿದ್ದಾರೆ.

12 ಆಟಗಳನ್ನು ಹೊಂದಿರುವ ‘ಚೆಸ್ 960’ ಪಂದ್ಯವು ಸುಮಾರು ₹1.28 ಕೋಟಿ ಬಹುಮಾನ ಹೊಂದಿದ್ದು, ಸೇಂಟ್ ಲೂಯಿ ಚೆಸ್ ಕ್ಲಬ್‌ನಲ್ಲಿ ನಡೆಯಲಿದೆ.

‘ಚೆಸ್ 960’ ಮಾದರಿಯಲ್ಲಿ ಆಟಗಳು ನಡೆಯಲಿವೆ. ಇದರಲ್ಲಿ ಬೋರ್ಡ್‌ನ ಕೊನೆಯ ಸಾಲಿನ ಪಡೆಗಳು (ರೂಕ್–ನೈಟ್–ಬಿಷಪ್– ಕ್ವೀನ್–ಕಿಂಗ್) ಸಾಂಪ್ರದಾಯಿಕ ಮಾದರಿಯಂತೆ ನಿರ್ದಿಷ್ಟ ಚೌಕಗಳಲ್ಲಿ ಇರುವುದಿಲ್ಲ. ಆದರೆ ಈ ಪಡೆಗಳು (ಬಿಳಿ ಮತ್ತು ಕಪ್ಪು ಕಾಯಿಗಳು) ಕೊನೆಯ ಸಾಲಿನ ಒಂದೇ ನೇರದಲ್ಲಿರುತ್ತವೆ. ಕಾಲಾಳುಗಳು ಮಾತ್ರ ಯಥಾ ಸ್ಥಾನದಲ್ಲಿರುತ್ತವೆ. ಹೀಗಾಗಿ, ಆಟಗಾರರು ಇಲ್ಲಿ ಸಿದ್ಧಾಂತಗಳನ್ನು ನೆನಪಿನಲ್ಲಿಟ್ಟು ಆಡಲು ಸಾಧ್ಯವಿಲ್ಲ.



ಗ್ಯಾರಿ ಕ್ಯಾಸ್ಪರೋವ್ (ಎಡ), ವಿಶ್ವನಾಥನ್ ಆನಂದ್

ಭಾರತದ ಚೆಸ್ ತಾರೆ ಆನಂದ್ ಮತ್ತು ರಷ್ಯಾದ ಶ್ರೇಷ್ಠ ಆಟಗಾರ ಕ್ಯಾಸ್ಪರೋವ್ 1995ರಲ್ಲಿ ವಿಶ್ವ ವಾಣಿಜ್ಯ ಕೇಂದ್ರದ 107ನೇ ಮಹಡಿಯಲ್ಲಿ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್ ಆಡಿದ್ದರು. ಕ್ಯಾಸ್ಪರೋವ್ ಅಂದಿನ ಸೆಣಸಾಟವನ್ನು 10.5–7.5 ರಿಂದ ಜಯಿಸಿದ್ದರು. 2004ರಲ್ಲಿ ಆಟದಿಂದ ನಿವೃತ್ತರಾದ ನಂತರ ಕ್ಯಾಸ್ಪರೋವ್ ಅವರು ಬ್ಲಿಟ್ಜ್ ಮಾದರಿಯ ಪ್ರದರ್ಶನ ಪಂದ್ಯಗಳಲ್ಲಿ ಮಾತ್ರ ಆಡುತ್ತಿದ್ದಾರೆ. ಆನಂದ್ ಅಧಿಕೃತವಾಗಿ ನಿವೃತ್ತರಾಗಿಲ್ಲ. ಅಪರೂಪಕ್ಕೆ ಆಯ್ದ ಟೂರ್ನಿಗಳಲ್ಲಿ ಆಡುತ್ತಿದ್ದಾರೆ.

ಈ ಬಾರಿ ಇಬ್ಬರು ತಾರೆಯರು ‘ಫ್ರೀಸ್ಟೈಲ್ ಚೆಸ್’ ಅನ್ನು ರ‍್ಯಾಪಿಡ್ ಮತ್ತು ಬ್ಲಿಟ್ಜ್ ಮಾದರಿಯಲ್ಲಿ ಆಡಲಿದ್ದಾರೆ. ಆ ಆಸಕ್ತಿಕರ ಮಾದರಿಯಲ್ಲಿ ಪ್ರತಿದಿನ ನಾಲ್ಕು ಪಂದ್ಯಗಳಿರುತ್ತವೆ. ಇವರಿಬ್ಬರು ಮೂರು ದಿನವೂ ಎರಡು ರ‍್ಯಾಪಿಡ್ ಮತ್ತು ಎರಡು ಬ್ಲಿಟ್ಜ್ ಪಂದ್ಯಗಳನ್ನು ಆಡಲಿದ್ದಾರೆ. ಮೊತ್ತ ದಿನಗಳೆದಂತೆ ದುಪ್ಪಟ್ಟಾಗುತ್ತಾ ಹೋಗುತ್ತದೆ. ಮೊದಲ ದಿನ ನಾಲ್ಕು ಅಂಕ ಮಾತ್ರ ಇರಲಿದೆ. ಎರಡನೇ ದಿನ ಇದು ದುಪ್ಪಟ್ಟು (ಒಂದು ಗೆಲುವಿಗೆ ಎರಡರಂತೆ ಒಟ್ಟು ಎಂಟು ಅಂಕ) ಆಗಲಿದೆ ಮತ್ತು ಮೂರನೇ ದಿನ ಪ್ರತಿಯೊಂದು ಗೆಲುವಿಗೆ ತಲಾ ಮೂರು ಅಂಕ ನೀಡಲಾಗುತ್ತದೆ.

ವಿಜೇತ ಆಟಗಾರ ₹62 ಲಕ್ಷ ಮತ್ತು ಸೋತ ಆಟಗಾರ ₹44 ಲಕ್ಷ ಪಡೆಯಲಿದ್ದಾರೆ. 12 ಗೇಮ್‌ಗಳ ನಂತರ ಪಂದ್ಯ ಟೈ ಆದಲ್ಲಿ ಬಹುಮಾನ ಹಣವನ್ನು 50:50 ಮಾದರಿಯಲ್ಲಿ ಹಂಚಲಾಗುತ್ತದೆ. ಅಂದರೆ ಇಬ್ಬರೂ ತಲಾ ₹53ಲಕ್ಷ ಜೇಬಿಗಿಳಿಸಲಿದ್ದಾರೆ. ಇದರ ಜೊತೆಗೆ ಬೋನಸ್ ಹಣ (₹21 ಲಕ್ಷ) ಸಹ ಇದೆ.

ಆಸ್ಟ್ರೇಲಿಯಾ ತಂಡಕ್ಕೆ ಮರಳಿದ ಸ್ಟಾರ್ಕ್



ಮೆಲ್ಬರ್ನ್ (ಪಿಟಿಐ): ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅವರು ಪ್ರವಾಸಿ ಭಾರತ ತಂಡದ ವಿರುದ್ಧ ಇದೇ 19ರಂದು ಆರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಆಡುವ ಆಸ್ಟ್ರೇಲಿಯಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಬೆನ್ನು ನೋವಿನಿಂದ ಚೇತರಿಸುತ್ತಿರುವ ಪ್ಯಾಟ್ ಕಮಿನ್ಸ್ ಅನುಪಸ್ಥಿತಿಯಲ್ಲಿ ಮಿಚೆಲ್ ಮಾರ್ಷ್ ನಾಯಕರಾಗಿ ಮುಂದುವರಿದಿದ್ದಾರೆ.

ವೆಸ್ಟ್ ಇಂಡೀಸ್ ಪ್ರವಾಸದಿಂದ ಮರಳಿದ ಬಳಿಕ ಸ್ಟಾರ್ಕ್ ಅವರು ದಕ್ಷಿಣ ಆಫ್ರಿಕಾ ವಿರುದ್ಧ ತವರಿನಲ್ಲಿ ನಡೆದ ಏಕದಿನ ಸರಣಿಯಲ್ಲೂ ಆಡಿರಲಿಲ್ಲ. 35 ವರ್ಷ ವಯಸ್ಸಿನ ಬೌಲರ್, ಸೆಪ್ಟೆಂಬರ್‌ನಲ್ಲಿ ಟಿ20 ಮಾದರಿಗೆ ವಿದಾಯವನ್ನೂ ಹೇಳಿದ್ದಾರೆ. ಆ್ಯಷಸ್ ಸರಣಿಗೆ ಲಭ್ಯರಾಗುವಂತೆ ಅವರ ಕಾರ್ಯಭಾರದ ಒತ್ತಡವನ್ನು ಎಚ್ಚರಿಕೆಯಿಂದ ನಿಭಾಯಿಸಲಾಗುತ್ತಿದೆ.

2024ರ ನವೆಂಬರ್‌ನಲ್ಲಿ ಪಾಕಿಸ್ತಾನ ವಿರುದ್ಧ ಕೊನೆಯ ಸಲ ಏಕದಿನ ಪಂದ್ಯ ಆಡಿದ್ದರು. ಸ್ಟಾರ್ಕ್ ಜೊತೆಗೆ ಬ್ಯಾಟರ್ ಮ್ಯಾಥ್ಯೂ ರೆನ್‌ಶಾ, ಮ್ಯಾಥ್ಯೂ ಶಾರ್ಟ್ ಮತ್ತು ಮಿಚ್ ಓವೆನ್ಸ್ ಅವರೂ ತಂಡದಲ್ಲಿದ್ದಾರೆ. ರೆನ್‌ಶಾ ಪದಾರ್ಪಣೆಗೆ ಕಾಯುತ್ತಿದ್ದಾರೆ. ಆಸ್ಟ್ರೇಲಿಯಾ ಈ ಹಿಂದಿನ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ಎದುರು 1–2 ರಲ್ಲಿ ಸೋತಿತ್ತು.

ಏಕದಿನ ಸರಣಿಯ ನಂತರ ಐದು ಪಂದ್ಯಗಳ ಟಿ20 ಸರಣಿಯೂ ಇದ್ದು, ಮೊದಲ ಎರಡು ಪಂದ್ಯಗಳಿಗೆ ತಂಡವನ್ನು ಹೆಸರಿಸಲಾಗಿದೆ.

ನ್ಯೂಜಿಲೆಂಡ್ ವಿರುದ್ಧ ಸರಣಿಯ ವೇಳೆ ಮಣಿಕಟ್ಟಿನ ಗಾಯ ಅನುಭವಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಅವರೂ ತಂಡಕ್ಕೆ ಆಯ್ಕೆಯಾಗಿಲ್ಲ.

15 ಆಟಗಾರರ ಏಕದಿನ ತಂಡ: ಮಿಚೆಲ್ ಮಾರ್ಷ್ (ನಾಯಕ), ಕ್ಸೇವಿಯರ್ ಬಾರ್ಟ್ಲೆಟ್, ಅಲೆಕ್ಸ್ ಕ್ಯಾರಿ, ಕೂಪರ್ ಕಾನೊಲಿ, ಬೆನ್ ದ್ವಾರ್ಷಿಯಸ್, ನಥಾನ್ ಎಲಿಸ್, ಕ್ಯಾಮರಾನ್ ಗ್ರೀನ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮಿಚೆಲ್ ಓವೆನ್, ಮ್ಯಾಥ್ಯೂ ರೆನ್‌ಶಾ, ಮ್ಯಾಥ್ಯೂ ಶಾರ್ಟ್, ಮಿಚೆಲ್ ಸ್ಟಾರ್ಕ್ ಮತ್ತು ಆ್ಯಡಂ ಜಂಪಾ.

ಟಿ20 ತಂಡ (2 ಪಂದ್ಯಗಳಿಗೆ): ಮಿಚ್ ಮಾರ್ಷ್ (ನಾಯಕ), ಸೀನ್ ಅಬಾಟ್, ಕ್ಸೇವಿಯರ್ ಬಾರ್ಟ್ಲೆಟ್, ಟಿಮ್ ಡೇವಿಡ್, ಬೆನ್ ದ್ವಾರ್ಷಿಯಸ್, ನಥಾನ್ ಎಲಿಸ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮ್ಯಾಥ್ಯೂ ಕುನ್ಹೆಮನ್, ಮಿಚೆಲ್ ಓವೆನ್, ಮ್ಯಾಥ್ಯೂ ಶಾರ್ಟ್, ಮಾರ್ಕಸ್ ಸ್ಟೊಯಿನಿಸ್ ಮತ್ತು ಆ್ಯಡಂ ಜಂಪಾ.

ಐಸಿಸಿ ತಿಂಗಳ ಆಟಗಾರ: ರೇಸ್‌ನಲ್ಲಿ ಅಭಿಷೇಕ್, ಕುಲದೀಪ್ ಯಾದವ್


ಅಭಿಷೇಕ್


ಕುಲದೀಪ್

ದುಬೈ (ಪಿಟಿಐ): ಸ್ಫೋಟಕ ಆಟವಾಡುವ ಎಡಗೈ ಬ್ಯಾಟರ್ ಅಭಿಷೇಕ್ ಶರ್ಮಾ ಮತ್ತು ಸ್ಪಿನ್ ಮೋಡಿಗಾರ ಕುಲದೀಪ್ ಯಾದವ್ ಅವರು ಐಸಿಸಿಯ ಸೆಪ್ಟೆಂಬರ್ ತಿಂಗಳ ಆಟಗಾರ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ಮಹಿಳಾ ವಿಭಾಗದಲ್ಲಿ ಸ್ಮೃತಿ ಮಂದಾನ ಅವರು ಐಸಿಸಿ ತಿಂಗಳ ಆಟಗಾರ್ತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.

ಟಿ20 ಪರಿಣಿತ ಅಭಿಷೇಕ್ ಇತ್ತೀಚೆಗೆ ಭಾರತ ತಂಡವು ಏಷ್ಯಾ ಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಏಳು ಇನಿಂಗ್ಸ್‌ನಲ್ಲಿ 314 ರನ್ ಹೊಡೆದಿದ್ದರು. 200ರ ಭರ್ಜರಿ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದ್ದರು. ಪುರುಷರ ಟಿ20 ಇತಿಹಾಸದಲ್ಲೇ ಅವರು ಅತ್ಯಧಿಕ ಬ್ಯಾಟಿಂಗ್ ರೇಟಿಂಗ್ (931 ಪಾಯಿಂಟ್ಸ್) ಗಳಿಸಿದ ದಾಖಲೆಯೂ ಅವರ ಹೆಸರಿನಲ್ಲಿದೆ.

ಕುಲದೀಪ್ ಅವರು ಏಷ್ಯಾ ಕಪ್‌ನಲ್ಲಿ 6.27 ಎಕಾನಮಿಯಲ್ಲಿ 17 ವಿಕೆಟ್‌ಗಳೊಡನೆ ಗರಿಷ್ಠ ವಿಕೆಟ್ ಗಳಿಕೆದಾರ ಎನಿಸಿದ್ದರು. ಯುಎಇ ವಿರುದ್ಧ 7 ರನ್ನಿಗೆ 4 ವಿಕೆಟ್ ಪಡೆದ ಅವರು ಪಾಕ್ ವಿರುದ್ಧ 30 ರನ್ನಿಗೆ 4 ವಿಕೆಟ್ ಗಳಿಸಿದ್ದರು.

ಜಿಂಬಾಬ್ವೆಯ ಬ್ರಿಯಾನ್ ಬೆನೆಟ್ ಅವರು ನಾಮನಿರ್ದೇಶನಗೊಂಡ ಮೂರನೇ ಆಟಗಾರ.

ವಾಟರ್ ಪೋಲೊ: ಭಾರತಕ್ಕೆ ನಿರಾಸೆ

ಅಹಮದಾಬಾದ್ (ಪಿಟಿಐ): ಭಾರತದ ವಾಟರ್ ಪೋಲೊ ತಂಡಗಳು ಇಲ್ಲಿ ನಡೆಯುತ್ತಿರುವ 11ನೇ ಏಷ್ಯನ್ ಅಕ್ವಾಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರವೂ ನಿರಾಸೆ ಮೂಡಿಸಿದವು.

ಭಾರತ ಪುರುಷರ ತಂಡವು 11-35ರಿಂದ ಜಪಾನ್ ವಿರುದ್ಧ ಸೋತಿತು. ಇದರೊಂದಿಗೆ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯುವ ಅವಕಾಶವೂ ಕಮರಿತು. ಮಹಿಳಾ ತಂಡ ಉಜ್ಬೇಕಿಸ್ತಾನ ವಿರುದ್ಧ 4-23ರಿಂದ ಸೋಲನುಭವಿಸಿತು.

ಕಜಾಕಸ್ತಾನ ಪಾರಮ್ಯ: ಕಲಾತ್ಮಕ ಈಜು ವಿಭಾಗದಲ್ಲಿ ಕಜಾಕಸ್ತಾನ ಪಾರಮ್ಯ ಮೆರೆಯಿತು. ಆರು ಚಿನ್ನ, ಎರಡು ಬೆಳ್ಳಿ ಮತ್ತು ಎರಡು ಕಂಚಿನ ಪದಕ ಗೆದ್ದು ಅಗ್ರಸ್ಥಾನ ಪಡೆಯಿತು. ಥಾಯ್ಲೆಂಡ್ ಆರು ಪದಕಗಳೊಂದಿಗೆ (2 ಚಿನ್ನ, 2 ಬೆಳ್ಳಿ, 2 ಕಂಚು) ಎರಡನೇ ಸ್ಥಾನ ಗಳಿಸಿತು. ಉಜ್ಬೇಕಿಸ್ತಾನ (2 ಚಿನ್ನ, 1 ಬೆಳ್ಳಿ, 4 ಕಂಚು) ಮೂರನೇ ಸ್ಥಾನ ಪಡೆಯಿತು.

ಕ್ರಿಕೆಟ್ ಪ್ರೀತಿ ಹೊಂದಿ: ವಿಂಡೀಸ್ ಆಟಗಾರರಿಗೆ ದಿಗ್ಗಜ ಲಾರಾ ಕರೆ



ಮುಂಬೈ (ಪಿಟಿಐ): ಹಣಕಾಸಿನ ಸಮಸ್ಯೆ, ಮೂಲಸೌಕರ್ಯಗಳ ಕೊರತೆ, ಪ್ರತಿಭೆಗಳ ಅಲಭ್ಯತೆ... ಇವೇನೇ ಇರಲಿ, ವೆಸ್ಟ್ ಇಂಡೀಸ್ ಆಟಗಾರರಿಗೆ ಕ್ರಿಕೆಟ್ ಬಗ್ಗೆ ಹೃದಯದಲ್ಲಿ ನಿಜವಾದ ಪ್ರೀತಿ ಉಳಿದಿದ್ದರೆ, ಆ ತಂಡವು ಈಗ ಎದುರಿಸುವ ಬಿಕ್ಕಟ್ಟಿನಿಂದ ಹೊರಬರುವ ಮಾರ್ಗ ಕಂಡುಕೊಳ್ಳಲಿದೆ ಎಂದು ದಿಗ್ಗಜ ಆಟಗಾರ ಬ್ರಯಾನ್ ಲಾರಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಶ್ವದೆಲ್ಲೆಡೆ ಫ್ರ್ಯಾಂಚೈಸಿ ಕ್ರಿಕೆಟ್‌ನಲ್ಲಿ ದ್ವೀಪ ರಾಷ್ಟ್ರದ ಕ್ರಿಕೆಟಿಗರು ಮಿಂಚುತ್ತಿದ್ದರೂ, ದೀರ್ಘ ಮಾದರಿಯ ಆಟಕ್ಕೆ ಬಂದಾಗ ಅಗತ್ಯವಿರುವ ಸಂಯಮ, ಸಹನೆ ಪ್ರದರ್ಶಿಸುತ್ತಿಲ್ಲ.

‘ನಾನು ರೋಸ್ಟನ್ ಚೇಸ್ ಮತ್ತು ಇತರ ಆಟಗಾರರನ್ನು ಕಳಕಳಿಯಿಂದ ಕೇಳುವೆ– ನಿಮ್ಮ ಹೃದಯದಲ್ಲಿ ಕ್ರಿಕೆಟ್‌ಗೆ ಸ್ಥಾನ ಇದೆಯೇ? ದೇಶಕ್ಕಾಗಿ ಆಡಲು ನೀವು ಪ್ರಾಮಾಣಿಕವಾಗಿ ಬಯಸುತ್ತಿರುವಿರಾ? ನಿಮ್ಮಲ್ಲಿ ಆ ಪ್ರೀತಿ, ಕಾಳಜಿಯಿದ್ದರೆ ನೀವು ಖಂಡಿತಕ್ಕೂ ದುರವಸ್ಥೆಯಿಂದ ಹೊರಬರುವ ದಾರಿ ಕಂಡುಕೊಳ್ಳುವಿರಿ’ ಎಂದು ಲಾರಾ ಹೇಳಿದರು.

ಭಾರತ ಯುವ ತಂಡ ಮುನ್ನಡೆ

ಮೆಕಾಯ್ (ಆಸ್ಟ್ರೇಲಿಯಾ) (ಪಿಟಿಐ): ಪಟೇಲ್‌ದ್ವಯರಾದ ಹೆನಿಲ್–ಖಿಲಾನ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ 19 ವರ್ಷದೊಳಗಿನವರ ತಂಡವು ಎರಡನೇ ಯೂತ್ ‘ಟೆಸ್ಟ್’ ಪಂದ್ಯದಲ್ಲಿ ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡದ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ 9 ರನ್ ಮುನ್ನಡೆ ಪಡೆದಿವೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಆತಿಥೇಯ ತಂಡವು ಬಲಗೈ ವೇಗಿ ಹೆನಿಲ್ (21ಕ್ಕೆ3) ಹಾಗೂ ಎಡಗೈ ಸ್ಪಿನ್ನರ್ ಖಿಲಾನ್ (23ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಎದುರು 43.3 ಓವರ್‌ಗಳಲ್ಲಿ 135 ರನ್‌ಗಳಿಗೆ ಕುಸಿಯಿತು. ಬಳಿಕ ಭಾರತ ತಂಡವೂ ಒಂದು ಹಂತದಲ್ಲಿ 82 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಆಗ, ಖಿಲಾನ್ (26, 60ಎ) ಹಾಗೂ ಹೆನಿಲ್ (ಔಟಾಗದೇ 23, 69ಎ) ಏಳನೇ ವಿಕೆಟ್‌ಗೆ 48 ರನ್ ಜೊತೆಯಾಟವಾಡಿ ಚೇತರಿಕೆ ನೀಡಿದರು. ಹೆನಿಲ್ ಅವರೊಂದಿಗೆ ದೀಪೇಶ್ ದೇವೇಂದ್ರನ್ (ಔಟಾಗದೇ 6) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡ: 43.3 ಓವರ್‌ಗಳಲ್ಲಿ 135 (ಅಲೆಕ್ಸ್ ಲೀ ಯಂಗ್ 66, ಹೆನಿಲ್ ಪಟೇಲ್ 21ಕ್ಕೆ3, ಖಿಲಾನ್ ಪಟೇಲ್ 23ಕ್ಕೆ3, ಉದ್ಧವ್ ಮೋಹನ್ 23ಕ್ಕೆ2) ಭಾರತ 19 ವರ್ಷದೊಳಗಿನವರ ತಂಡ: 40 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 144 (ಖಿಲಾನ್ ಪಟೇಲ್ 26, ವೇದಾಂತ್ ತ್ರಿವೇದಿ 25, ಹೆನಿಲ್ ಪಟೇಲ್ 22, ಕ್ಯಾಸಿ ಬಾರ್ಟನ್ 39ಕ್ಕೆ3, ವಿಲ್ ಬೈರಮ್ 33ಕ್ಕೆ2)

23ರಿಂದ ರಾಜ್ಯಮಟ್ಟದ ಕುಸ್ತಿ ಟೂರ್ನಿ

ಸಿಂದಗಿ (ವಿಜಯಪುರ ಜಿಲ್ಲೆ): ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯು ಪದವಿಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕುಸ್ತಿ ಟೂರ್ನಿಯನ್ನು ಸಿಂದಗಿಯ ಎಚ್.ಜಿ.ಪದವಿಪೂರ್ವ ಕಾಲೇಜು ಮೈದಾನದಲ್ಲಿ ಅಕ್ಟೋಬರ್ 23 ರಿಂದ 25ರವರೆಗೆ ಆಯೋಜಿಸಿದೆ.

ರಾಜ್ಯದ ವಿವಿಧ ಕಾಲೇಜುಗಳಿಂದ 900 ಕುಸ್ತಿಪಟುಗಳು ಟೂರ್ನಿಯಲ್ಲಿ ಪಾಲ್ಗೊಳ್ಳುವರು ಎಂದು ವಿಜಯಪುರ ಜಿಲ್ಲಾ ಶಾಲಾ ಶಿಕ್ಷಣ (ಪದವಿಪೂರ್ವ) ಇಲಾಖೆ ಶಾಖಾಧಿಕಾರಿ ಪ್ರಕಾಶ ಗೊಂಗಡಿ ತಿಳಿಸಿದ್ದಾರೆ.

ಚೆಸ್: ನಾಲ್ವರು ಆಟಗಾರರ ಮುನ್ನಡೆ

ಮೈಸೂರು: ನಿವಾನ್ ರಾಘವೇಂದ್ರ ಸೇರಿ ನಾಲ್ವರು ಇಲ್ಲಿ ನಡೆದಿರುವ ‘ರೋಟರಿ ಬೃಂದಾವನ 16 ವರ್ಷದೊಳಗಿನವರ ಮುಕ್ತ ರೇಟಿಂಗ್ ಚೆಸ್ ಟೂರ್ನಿ’ಯಲ್ಲಿ ನಾಲ್ಕನೇ ಸುತ್ತಿನ ಅಂತ್ಯಕ್ಕೆ ಅಗ್ರಸ್ಥಾನದಲ್ಲಿ ಮುನ್ನಡೆದಿದ್ದಾರೆ.

ನಿವಾನ್, ಸಾತ್ವಿಕ್ ವಿಶ್ವನಾಥ್, ಆರುಷ್ ಭಟ್ ಹಾಗೂ ಯು.ಡಿ. ಆಕಾಂಕ್ಷ್ ಅಜೇಯ ಗೆಲುವಿನೊಂದಿಗೆ 4 ಅಂಕ ಸಂಪಾದಿಸಿದರು. ನಾಲ್ಕನೇ ಸುತ್ತಿನ ಹಣಾಹಣಿಯಲ್ಲಿ ನಿವಾನ್ ಬಿ.ಪಿ. ಉತ್ಸವ್‌ರನ್ನು ಮಣಿಸಿದರು. ಆರುಷ್ ಅವರು ಪ್ರಣವ್ ಶೇಟ್ ವಿರುದ್ಧ, ಆಕಾಂಕ್ಷ್ ಅವರು ಬೆಂಗಳೂರಿನ ಯಶಸ್ ಗೌಡ ಎದುರು ಹಾಗೂ ಸಾತ್ವಿಕ್ ಅವರು ಪಿ. ಅಭಿನವರನ್ನು ಮಣಿಸಿ ಮುನ್ನಡೆ ಕಾಯ್ದುಕೊಂಡರು.

ಅಜಯ್‌ಬಾಬು ಅಭಿಯಾನಕ್ಕೆ ತೆರೆ

ಫೋರ್ಡೆ (ನಾರ್ವೆ) (ಪಿಟಿಐ): ಭಾರತದ ವೇಟ್‌ಲಿಫ್ಟರ್‌ಗಳು ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ನಿರಾಸೆ ಮೂಡಿಸಿದರು. ಕಾಮನ್‌ವೆಲ್ತ್ ಚಾಂಪಿಯನ್ ಅಜಯ್‌ಬಾಬು ವಲ್ಲೂರಿ ಪುರುಷರ 79 ಕೆ.ಜಿ ವಿಭಾಗದಲ್ಲಿ 16ನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿದರು.

20 ವರ್ಷ ವಯಸ್ಸಿನ ಅಜಯ್‌ಬಾಬು ಒಟ್ಟು 323 ಕೆಜಿ (146 ಕೆ.ಜಿ ಸ್ನ್ಯಾಚ್ + 177 ಕೆ.ಜಿ ಕ್ಲೀನ್ ಮತ್ತು ಜರ್ಕ್) ಭಾರ ಎತ್ತಿ 39 ಸ್ಪರ್ಧಿಗಳ ಪೈಕಿ 16ನೇ ಸ್ಥಾನ ಪಡೆದರು. ಅವರು ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನ ಚಿನ್ನದ ಹಾದಿಯಲ್ಲಿ 335 ಕೆ.ಜಿ (152 ಕೆ.ಜಿ + 183 ಕೆ.ಜಿ) ಭಾರ ಎತ್ತಿದ್ದರು.

ಬ್ಯಾಡ್ಮಿಂಟನ್: ಭಾರತಕ್ಕೆ ಎರಡನೇ ಜಯ




ಗುವಾಹಟಿ (ಪಿಟಿಐ): ಆತಿಥೇಯ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡನೇ ಜಯ ದಾಖಲಿಸಿತು.

ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಮಂಗಳವಾರ ನಡೆದ 'ಎಚ್' ಗುಂಪಿನ ಪಂದ್ಯದಲ್ಲಿ ಭಾರತ ತಂಡವು 45-27, 45-21ರಿಂದ (2–0) ಶ್ರೀಲಂಕಾವನ್ನು ಮಣಿಸಿ, ಮಿಶ್ರ ತಂಡ ವಿಭಾಗದಲ್ಲಿ ನಾಕೌಟ್‌ಗೆ ಹತ್ತಿರವಾಯಿತು.

ಎರಡನೇ ಶ್ರೇಯಾಂಕದ ಭಾರತ ತಂಡವು ಸೋಮವಾರ ನೇಪಾಳವನ್ನು ಮಣಿಸಿತ್ತು. ಶ್ರೀಲಂಕಾ ತಂಡವು ತನ್ನ ಮೊದಲ ಪಂದ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ ತಂಡವನ್ನು ಸೋಲಿಸಿತ್ತು.

ಇತರ ಫಲಿತಾಂಶ: ಚೀನಾ 2–0ಯಿಂದ ಇಂಗ್ಲೆಂಡ್ ವಿರುದ್ಧ; ಜಪಾನ್ 2–0ಯಿಂದ ಐರ್ಲೆಂಡ್ ವಿರುದ್ಧ; ಥಾಯ್ಲೆಂಡ್ 2–0ಯಿಂದ ಪೋರ್ಚುಗಲ್ ವಿರುದ್ಧ; ಫ್ರಾನ್ಸ್ 2–0ಯಿಂದ ಈಜಿಪ್ಟ್ ವಿರುದ್ಧ; ಅಮೆರಿಕ 2–0ಯಿಂದ ನಾರ್ವೆ ವಿರುದ್ಧ; ಟರ್ಕಿ 2–0ಯಿಂದ ಘಾನಾ ವಿರುದ್ಧ; ಡೆನ್ಮಾರ್ಕ್ 2–0ಯಿಂದ ಬ್ರೆಜಿಲ್ ವಿರುದ್ಧ; ಫಿಲಿಪೀನ್ಸ್ 2–1ಯಿಂದ ಹಾಂಗ್‌ಕಾಂಗ್ ವಿರುದ್ಧ ಗೆಲುವು ಸಾಧಿಸಿದವು.

ಕುಸ್ತಿಪಟು ಅಮನ್ ಸೆಹ್ರಾವತ್ ಅಮಾನತು




ನವದೆಹಲಿ (ಪಿಟಿಐ): ನಿಗದಿಗಿಂತ ಹೆಚ್ಚು ತೂಕ ಹೊಂದಿದ್ದ ಕಾರಣ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಅನರ್ಹ ಗೊಂಡಿದ್ದ ಅಮನ್ ಸೆಹ್ರಾವತ್ ಅವರನ್ನು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಕುಸ್ತಿ ಸಂಬಂಧಿತ ಚಟುವಟಿಕೆಗಳಿಂದ ಒಂದು ವರ್ಷದವರೆಗೆ ಅಮಾನತು ಮಾಡಿದೆ.

ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ 22 ವರ್ಷದ ಅಮನ್ ಅವರು ಪುರುಷರ ಫ್ರೀಸ್ಟೈಲ್ 57 ಕೆಜಿ ವಿಭಾಗದಲ್ಲಿ ಭಾರತದ ಪ್ರಮುಖ ಪದಕ ಭರವಸೆಯಾಗಿದ್ದರು. ಆದರೆ, ಸ್ಪರ್ಧೆಯ ದಿನದಂದು ಮಿತಿಗಿಂತ 1.7 ಕೆಜಿ ಹೆಚ್ಚು ತೂಕ ಹೊಂದಿದ್ದ ಕಾರಣ ಅವರಿಗೆ ಸ್ಪರ್ಧಿಸಲು ಅವಕಾಶ ಸಿಗಲಿಲ್ಲ.

'ಶೋಕಾಸ್ ನೋಟಿಸ್ ನೀಡಿದ ದಿನಾಂಕದಿಂದ ಜಾರಿಗೆ ಬರುವಂತೆ ಒಂದು ವರ್ಷಗಳ ಅವಧಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಸ್ತಿಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗಳಿಂದ ಅಮನ್ ಅವರನ್ನು ಅಮಾನತು ಮಾಡಲಾಗಿದೆ' ಎಂದು ಫೆಡರೇಷನ್ ತಿಳಿಸಿದೆ.

ಅಮನ್ ಎಸಗಿರುವ ಲೋಪಕ್ಕೆ ವಿವರಣೆ ಕೋರಿ ಸೆ.23ರಂದು ಶೋಕಾಸ್ ನೋಟಿಸ್ ನೀಡಲಾಗಿತ್ತು. ಸೆ.29ರಂದು ಅವರು ಉತ್ತರ ನೀಡಿದ್ದಾರೆ. ಆದರೆ, ಅದು 'ತೃಪ್ತಿಕರವಾಗಿಲ್ಲ' ಎಂದು ಫೆಡರೇಷನ್‌ನ ಶಿಸ್ತು ಸಮಿತಿ ಹೇಳಿದೆ.



ನವಿ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಉದ್ಘಾಟನೆ

ನೈಟ್ ಆಟಕ್ಕೆ ಒಲಿದ ಜಯ

ಬಾಂಗ್ಲಾದೇಶ ತಂಡದ ಸ್ಫೂರ್ತಿಯುತ ಹೋರಾಟ ಮೆಟ್ಟಿನಿಂತ ಇಂಗ್ಲೆಂಡ್

ಗುವಾಹಟಿ (ಪಿಟಿಐ): ಅನುಭವಿ ಆಟಗಾರ್ತಿ ಹೀದರ್ ನೈಟ್ (ಔಟಾಗದೇ 79) ಅವರ ಅಮೂಲ್ಯ ಅರ್ಧ ಶತಕದ ನೆರವಿನಿಂದ ಇಂಗ್ಲೆಂಡ್ ತಂಡವು ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಮಂಗಳವಾರ ಬಾಂಗ್ಲಾದೇಶ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು.

ಬರಸಾಪಾರಾ ಕ್ರೀಡಾಂಗಣದಲ್ಲಿ 178 ರನ್‌ಗಳಿಗೆ ಉರುಳಿದರೂ, ಬಾಂಗ್ಲಾದೇಶದ ಬೌಲಿಂಗ್ ಪಡೆ ಇಂಗ್ಲೆಂಡ್‌ಗೆ ಗೆಲ್ಲುವ ಮೊದಲು ಬಿಸಿಮುಟ್ಟಿಸಿತು.

ಲೆಗ್ ಸ್ಪಿನ್ನರ್ ಫಾಹಿಮಾ ಖಾತುನ್ (10-2-16-3) ಮತ್ತು ವೇಗಿ ಮರುಫಾ ಅಖ್ತರ್ (5-0-28-2) ಅವರ ಬೌಲಿಂಗ್ ಎದುರು ಇಂಗ್ಲೆಂಡ್ ಒಂದು ಹಂತದಲ್ಲಿ 23 ಓವರುಗಳಲ್ಲಿ 5 ವಿಕೆಟ್‌ಗೆ 78 ಮತ್ತು 30 ಓವರುಗಳ ಬಳಿಕ 6 ವಿಕೆಟ್‌ಗೆ 103 ರನ್ ಗಳಿಸಿ ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ಮಾಜಿ ನಾಯಕಿ ಹೀದರ್ ನೈಟ್ ಸವಾಲನ್ನು ಸ್ವೀಕರಿಸಿ ಒಂದೆಡೆ ಬೇರೂರಿದರು. ಅವರಿಗೆ ಉಪ ನಾಯಕಿ ಚಾರ್ಲಿ ಡೀನ್ ಬೆಂಬಲ ನೀಡಿದರು. ಆಕರ್ಷಕ ಹೊಡೆತಗಳ ಮೂಲಕ ಒತ್ತಡ ನಿವಾರಿಸಿದರು.

ನೈಟ್ ಅವರ 111 ಎಸೆತಗಳ ಇನಿಂಗ್ಸ್‌ನಲ್ಲಿ ಒಂದು ಸಿಕ್ಸರ್, 8 ಬೌಂಡರಿಗಳಿದ್ದವು. ಮುರಿಯದ ಏಳನೇ ವಿಕೆಟ್‌ಗೆ ಚಾರ್ಲಿ ಡೀನ್ (ಔಟಾಗದೇ 27, 56ಎ) ಜೊತೆ 79 ರನ್ ಸೇರಿಸಿದ ಅವರು 23 ಎಸೆತಗಳಿರುವಂತೆ ತಂಡವನ್ನು ಗುರಿ ತಲುಪಿಸಿದರು. ಇಂಗ್ಲೆಂಡ್ 46.1ಓವರುಗಳಲ್ಲಿ 6 ವಿಕೆಟ್‌ಗೆ 182 ರನ್ ಬಾರಿಸಿತು.

ಇದಕ್ಕೆ ಮೊದಲು ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ (24ಕ್ಕೆ3) ಅವರ ಅಮೋಘ ಬೌಲಿಂಗ್ ನೆರವಿನಿಂದ ಇಂಗ್ಲೆಂಡ್ ಸ್ಪಿನ್ನರ್‌ಗಳು ವೃತ್ತಿಪರ ಆಟದ ಪ್ರದರ್ಶನ ನೀಡಿದರು.

ಒಂದೆಡೆ ವಿಕೆಟ್‌ಗಳು ಬೀಳುತ್ತಿದ್ದರೂ ಬಾಂಗ್ಲಾದೇಶ ತಂಡದ ಶೋಭನಾ ಮೊಸ್ತಾರಿ 108 ಎಸೆತಗಳಲ್ಲಿ 60 ರನ್ ಬಾರಿಸಿದರು. ಕೊನೆಯಲ್ಲಿ ರಬಿಯಾ ಖಾನ್ ಅವರು ಬಿರುಸಿನ ಆಟವಾಡಿ 27 ಎಸೆತಗಳಲ್ಲಿ 43 ರನ್ ಬಾರಿಸಿದ್ದರಿಂದ ತಂಡದ ಮೊತ್ತ 170 ರನ್‌ಗಳ ಗಡಿದಾಟಿತು.

ಎಕ್ಲೆಸ್ಟೋನ್ ಅವರಿಗೆ ಆಫ್ ಸ್ಪಿನ್ನರ್‌ಗಳಾದ ಚಾರ್ಲಿ ಡೀನ್ (28ಕ್ಕೆ2) ಮತ್ತು ಅಲೈಸ್ ಕ್ಯಾಪ್ಸಿ (31ಕ್ಕೆ2) ಉತ್ತಮ ಬೆಂಬಲ ನೀಡಿದರು.

ಸ್ಕೋರುಗಳು: ಬಾಂಗ್ಲಾದೇಶ: 49.4 ಓವರುಗಳಲ್ಲಿ 178 (ಶರ್ಮಿನ್ ಅಖ್ತರ್ 30, ಶೋಭನಾ ಮೊಸ್ತರಿ 60, ರಬಿಯಾ ಖಾನ್ ಔಟಾಗದೇ 43; ಲಿನ್ಸಿ ಸ್ಮಿತ್ 33ಕ್ಕೆ2, ಸೋಫಿ ಎಕ್ಲೆಸ್ಟೋನ್ 24ಕ್ಕೆ3, ಚಾರ್ಲಿ ಡೀನ್ 28ಕ್ಕೆ2, ಅಲೈಸ್ ಕ್ಯಾಪ್ಸಿ 31ಕ್ಕೆ2). **ಇಂಗ್ಲೆಂಡ್:** 46.1 ಓವರುಗಳಲ್ಲಿ 6 ವಿಕೆಟ್‌ಗೆ 182 (ಹೀದರ್ ನೈಟ್ ಔಟಾಗದೇ 79, ನಾಟ್ ಶಿವರ್ ಬ್ರಂಟ್ 32, ಚಾರ್ಲಿ ಡೀನ್ ಔಟಾಗದೇ 27; ಮರೂಫಾ ಅಖ್ತರ್ 28ಕ್ಕೆ2, ಫಾಹಿಮಾ ಖಾತುನ್ 16ಕ್ಕೆ3). **ಪಂದ್ಯದ ಆಟಗಾರ್ತಿ:** ಹೀದರ್ ನೈಟ್.


ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಇಂದಿನ ಪಂದ್ಯ
ಆಸ್ಟ್ರೇಲಿಯಾ Vs ಪಾಕಿಸ್ತಾನ — ಮಧ್ಯಾಹ್ನ 3
ಲೈವ್: ಸ್ಟಾರ್ ಸ್ಪೋರ್ಟ್ಸ್


ಗೆಲುವಿನ ಸಂಭ್ರಮದಲ್ಲಿ ಹೀದರ್ ನೈಟ್ (ಬಲ) ಹಾಗೂ ಚಾರ್ಲಿ ಡೀನ್
ಪಿಟಿಐ ಚಿತ್ರ

ಅಗ್ರಸ್ಥಾನದಲ್ಲಿ ಮುಂದುವರಿದ ಮಂದಾನ



ದುಬೈ (ಪಿಟಿಐ): ಭಾರತದ ತಾರಾ ಕ್ರಿಕೆಟ್ ಆಟಗಾರ್ತಿ ಸ್ಮೃತಿ ಮಂದಾನ (791 ಪಾಯಿಂಟ್ಸ್) ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಕಳಪೆ ಪ್ರದರ್ಶನ ನೀಡಿದ್ದ ಮಂದಾನ ಅವರು 27 ರೇಟಿಂಗ್ಸ್ ಪಾಯಿಂಟ್ಸ್‌ಗಳನ್ನು ಕಳೆದುಕೊಂಡಿದ್ದಾರೆ. ಇಂಗ್ಲೆಂಡ್‌ನ ನಾಟ್ ಶಿವರ್–ಬ್ರಂಟ್ (731) ಎರಡನೇ ಸ್ಥಾನದಲ್ಲಿದ್ದಾರೆ.

ನ್ಯೂಜಿಲೆಂಡ್ ಎದುರು ಶತಕ ಸಿಡಿಸಿದ ತಾಝ್ಮಿನ್ ಬ್ರಿಟ್ಸ್ (706) ಎರಡು ಸ್ಥಾನ ಬಡ್ತಿಯೊಂದಿಗೆ ನಾಲ್ಕನೇ ಕ್ರಮಾಂಕದಲ್ಲಿದ್ದಾರೆ. ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ (612) ಅವರು 16ನೇ ಸ್ಥಾನಕ್ಕಿಳಿದಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಇಂಗ್ಲೆಂಡ್‌ನ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ (792) ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. 6ನೇ ಸ್ಥಾನದಲ್ಲಿರುವ ದೀಪ್ತಿ ಶರ್ಮಾ (640) ಅವರು ಅಗ್ರ 10ರೊಳಗೆ ಇರುವ ಭಾರತದ ಏಕೈಕ ಆಟಗಾರ್ತಿಯಾಗಿದ್ದಾರೆ.

ಕರ್ನಾಟಕ ತಂಡಕ್ಕೆ ಅನೀಶ್ವರ್ ಸಾರಥ್ಯ

ಬೆಂಗಳೂರು: ಆಲ್‌ರೌಂಡರ್ ಅನೀಶ್ವರ್ ಗೌತಮ್, ಇದೇ 16ರಿಂದ 19ರವರೆಗೆ ನಡೆಯಲಿರುವ ಕರ್ನಲ್ ಸಿ.ಕೆ. ನಾಯ್ಡು ಕ್ರಿಕೆಟ್ ಟೂರ್ನಿಯ ರೈಲ್ವೇಸ್ ವಿರುದ್ಧದ ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.


ಅನೀಶ್ವರ್

ರಣಜಿ ಟ್ರೋಫಿ ತಂಡದಲ್ಲಿ ಸ್ಥಾನ ಪಡೆಯಲು ವಿಫಲರಾದ ಹಾರ್ದಿಕ್ ರಾಜ್ ಅವರು ಈ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಸಂಜಯ್ ಅಶ್ವಿನ್ ಮತ್ತು ಫೈಜಾನ್ ಖಾನ್ ತಂಡದಲ್ಲಿರುವ ವಿಕೆಟ್ ಕೀಪರ್‌ಗಳು. ಸಮಿತ್ ದ್ರಾವಿಡ್ ಅವರೂ ತಂಡದಲ್ಲಿದ್ದಾರೆ.

ನಿಕಿ ನಾಯಕಿ: ಇದೇ 8ರಿಂದ 19ರವರೆಗೆ ಗ್ವಾಲಿಯರ್‌ನಲ್ಲಿ ನಡೆಯಲಿರುವ ಸೀನಿಯರ್ ಮಹಿಳಾ ಟಿ20 ಟ್ರೋಫಿಗೆ ಕೆಎಸ್‌ಸಿಎ 15 ಸದಸ್ಯರ ತಂಡವನ್ನು ಪ್ರಕಟಿಸಿದೆ. ನಿಕಿ ಪ್ರಸಾದ್ ತಂಡವನ್ನು ಮುನ್ನಡೆಸಲಿದ್ದಾರೆ.

ಸಿ.ಕೆ. ನಾಯ್ಡು ತಂಡ: ಅನೀಶ್ವರ್ ಗೌತಮ್ (ನಾಯಕ), ಪ್ರಖರ್ ಚತುರ್ವೇದಿ, ಕಾರ್ತಿಕ್ ಎಸ್.ಯು, ಜಾಸ್ಪರ್ ಇ.ಜೆ, ಹರ್ಷಿಲ್ ಧರ್ಮಾನಿ, ಕೆ.ಪಿ. ಕಾರ್ತಿಕೇಯ, ಸಮಿತ್ ದ್ರಾವಿಡ್, ಧ್ರುವ ಪ್ರಭಾಕರ್, ಸಂಜಯ್ ಅಶ್ವಿನ್ (ವಿಕೆಟ್ ಕೀಪರ್), ಹಾರ್ದಿಕ್ ರಾಜ್, ಯಶೋವರ್ಧನ್ ಪರಂತಾಪ್, ಶಶಿಕುಮಾರ್ ಕೆ, ಮೊನೀಶ್ ರೆಡ್ಡಿ, ಧನುಷ್ ಗೌಡ, ಫೈಜಾನ್ ಖಾನ್ (ವಿಕೆಟ್ ಕೀಪರ್). ಕೋಚ್: ಸೋಮಶೇಖರ್ ಶಿರಗುಪ್ಪಿ.

ಸೀನಿಯರ್ ಮಹಿಳಾ ತಂಡ: ನಿಕಿ ಪ್ರಸಾದ್ (ನಾಯಕಿ), ಶುಭಾ ಸತೀಶ್ (ಉಪನಾಯಕಿ), ವೃಂದಾ ದಿನೇಶ್, ಮಿಥಿಲಾ ವಿನೋದ್, ಶ್ರೇಯಾಂಕಾ ಆರ್. ಪಾಟೀಲ, ಮೋನಿಕಾ ಸಿ. ಪಟೇಲ್, ರಾಜೇಶ್ವರಿ ಗಾಯಕವಾಡ್, ಪ್ರತ್ಯೂಷ ಕುಮಾರ್ (ವಿಕೆಟ್ ಕೀಪರ್), ಬಿ.ಜಿ. ತೇಜಸ್ವಿನಿ, ಸಹನಾ ಎಸ್. ಪವಾರ್, ಸೌಮ್ಯಾ ವರ್ಮಾ (ವಿಕೆಟ್ ಕೀಪರ್), ಪೂಜಾ ಕುಮಾರಿ ಎಂ, ಶಿಶಿರಾ ಎ. ಗೌಡ, ರೋಶಿನಿ ಕಿರಣ್, ಅನನ್ಯ ಹೆಗ್ಡೆ. ಕೋಚ್: ಕರುಣಾ ಜೈನ್